Index for Developing Inclusive Education

ಸಮನ್ವಯ ಶಿಕ್ಷಣದ ಅಭಿವೃದ್ದಿಗೊಂದು ಮಾರ್ಗಸೂಚಿ

ಸಮನ್ವಯ ಶಾಲೆಗಳ ಅಭಿವೃದ್ದಿಗೊಂದು ಮಾರ್ಗಸೂಚಿಅನಿತಾ ಜುಲ್ಕಾ

ವಿಶೇಷ ಅಗತ್ಯವುಳ್ಳ ಗುಂಪಿನ ಶಿಕ್ಷಣ ಇಲಾಖೆ

ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಹಾಗು ತರಬೇತಿ ಮಂಡಳಿ

**ಪರಿವಿಡಿ**

**ಸಲಹಾ ಸಮಿತಿಯ ಸದಸ್ಯರುಗಳ ಪಟ್ಟಿ**

**ಪೀಠಿಕೆ**

**ಸಮನ್ವಯ ಶಿಕ್ಷಣದ ಕುರಿತು ಸಿಎಬಿಇ ಸ್ಥಾಯಿ ಸಮಿತಿಯ ಶಿಫಾರಸುಗಳು**

**ಶೈಕ್ಷಣಿಕ ಆಡಳಿತಗಾರರು**

**ಶಿಕ್ಷಕರು ಹಾಗು ಶಿಕ್ಷಕ ತರಬೇತುದಾರರು**

**ಎಲ್ಲರ ಶಾಲೆ**

**ಉಲ್ಲೇಖಗಳು**

**ಸಲಹಾ ಸಮಿತಿಯ ಸದಸ್ಯರು**

**ಪ್ರೊ.ಎ.ಕೆ. ಶರ್ಮ,**

**ಅಧ್ಯಕ್ಷರು,**

**ಮಾಜಿ ನಿರ್ದೇಶಕರು, ಎನ್‌ಸಿಇಆರ್‌ಟಿ,**

**ಸಿ-3, ಸೆಕ್ಟರ್ 48**

**ನೋಯ್ಡಾ201304**

ಪ್ರೊ. ಸ್ಮೃತಿ ಸ್ವರೂಪ್

ಮಾಜಿ ನಿರ್ದೇಶಕರು, ವಿಶೇಷ ಶಿಕ್ಷಣ ಕೇಂದ್ರ, ಎಸ್‌ಎನ್‌ಡಿಟಿ ಯೂನಿವರ್ಸಿಟಿ,

5, ಜೀವನ್ ಅಕ್ಷಯ್,

ಪ್ಲಾಟ್ 188, ಸೆಕ್ಟರ್ 6

ಚಕೋರ್‌ಪ್, ಕಾಂಡಿವ್ಲಿ (ಪಶ್ಚಿಮ)

ಮುಂಬಯಿ 400 067

ಇಂದುಮತಿ ರಾವ್

ಪ್ರಾಂತೀಯ ಸಲಹೆಗಾರರು,

ಸಿಬಿಆರ್ ನೆಟ್‌ವರ್ಕ್, (ದಕ್ಷಿಣ ಏಷಿಯಾ)

134, I ಬ್ಲಾಕ್, 6ನೇ ಮೈನ್, ಬಿಎಸ್‌ಕೆ, III ಹಂತ

ಬೆಂಗಳೂರು-560085

cbrnet@airtel broadband.in

ಪ್ರೊ. (ಶ್ರೀಮತಿ) ಎನ್. ಪಂಚಪಕೇಶನ್,

ಮಾಜಿ ಮುಖ್ಯಸ್ಥರು

ಸಿಐಇ, ದೆಹಲಿ ವಿಶ್ವವಿದ್ಯಾಲಯ

ಕೆ-110, ಹೌಜ್ ಖಾಸ್,

ನವದೆಹಲಿ 16

ಪ್ರೊ. ಜಾಕೋಬ್ ಥರು

ಮೌಲ್ಯಮಾಪನದ ಮಾಜಿ ಪ್ರೊಫೆಸರ್,

ಸಿಐಇಎಫ್‌ಎಲ್ ಹೈದರಾಬಾದ್

ಆರ್ಇಎಸ್. ನಂ. A 27/2, ಎಎಫ್ಒಸಿಎಚ್ಎಸ್,

1ನೇ ಕ್ರೆಸೆಂಟ್ ರಸ್ತೆ, ಸೈನಿಕಪುರಿ,

ಸಿಕಂದರಾಬಾದ್ 500094 ಆಂಧ್ರ ಪ್ರದೇಶ

ದೂರವಾಣಿ: 040-27112161 ಮೊಬೈಲ್: 9391042313

ಡಾ. ಅನುಪ್ರಿಯಾ ಛಾಢಾ

ಮುಖ್ಯ ಸಮಾಲೋಚಕರು (ಐಇಡಿ)

ಇಡಿ. ಸಿಐಎಲ್

ಇಡಿ. ಸಿಐಎಲ್ ಹೌಸ್,

18 ಎ, ಸೆಕ್ಟರ್ 16 ಎ

ನೋಯ್ಡಾ, ಉ.ಪ್ರ - 201301

ಪ್ರೊ. ಇಮ್ತಿಯಾಜ್ ಅಹಮದ್

ಮಾಜಿ ಪ್ರೊಫೆಸರ್, ಜೆಎನ್ಯು,

ಬಿ-361 ವಸಂತ್ ಕುಂಜ್ ಎನ್‌ಕ್ಲೇವ್

ನವದೆಹಲಿ -110070

ಶ್ರೀಮತಿ ಸಂಗ್‌ಜುಲಿ ವಂಚಾಂಗ್,

ಯೋಜನಾ ಅಧಿಕಾರಿ, ಐಇಡಿ,

ರಾಜ್ಯ ಶೈಕ್ಷಣಿಕ ಸಂಶೋಧನೆ ಹಾಗು ತರಬೇತಿ ಮಂಡಲಿ,

ಛಾಲ್ತ್‌ಲ್ಯಾಂಡ್, ಐಜ್ವಾಲ್, ಮಿಜೋರಾಂ 796012.

ಡಾ. ವರ್ಷ ಘಾಟೂ

**ಮುಖ್ಯಸ್ಥರು, ಶಿಕ್ಷಣ ವಿಭಾಗ**

**ಆಲಿ ಯವರ್ ಜಂಗ್ ನ್ಯಾಷನಲ್ ಇನ್‌ಸ್ಟಿಟ್ಯೂಟ್ ಫಾರ್ ದಿ ಹಿಯರಿಂಗ್ ಹ್ಯಾಂಡಿಕ್ಯಾಪ್ಡ್,**

**ಕೆ.ಸಿ. ಮಾರ್ಗ್, ಬಾಂದ್ರಾ ರಿಕ್ಲಮೇಷನ್, ಬಾಂದ್ರಾ (ಪಶ್ಚಿಮ),**

**ಮುಂಬಯಿ 400050**

**ಸಮೀರಾ ಪಾಣಿಗ್ರಾಹಿ**

**ಸಮಾಲೋಚಕರು, ವಿಶೇಷ ಶಿಕ್ಷಣ,**

**ಎಸ್-289, ಗ್ರೇಟರ್ ಕೈಲಾಶ್, ಪಾರ್ಟ್ 2**

**ನವದೆಹಲಿ 110048**

**ಪ್ರೊ. ಸುಷ್ಮಾ ಶರ್ಮ**

**ಶಿಕ್ಷಣ ಇಲಾಖೆ,**

**ಕುರುಕ್ಷೇತ್ರ ವಿಶ್ವವಿದ್ಯಾಲಯ, ಹರಿಯಾಣ**

**ಪ್ರೊ. ಎಸ್. ಆರ್. ಮಿತ್ತಲ್,**

**ಸೆಂಟ್ರಲ್ ಇನ್‌ಸ್ಟಿಟ್ಯೂಟ್ ಆಫ್ ಎಜುಕೇಷನ್,**

**ಸಿ-30, 29/31 ಫ್ರೋಬೈನ್ ರಸ್ತೆ (ಛಾತ್ರ ಮಾರ್ಗ್)**

**ದೆಹಲಿ ವಿಶ್ವವಿದ್ಯಾಲಯ, ದೆಹಲಿ 110007**

**ಶ್ರೀಮತಿ ಉಷಾ ಚೌಗರ್,**

**ಮಾಜಿ ಶಿಕ್ಷಕರು, ಏರ್ ಫೋರ್ಸ್ ಬಾಲ ಭಾರತಿ ಸ್ಕೂಲ್,**

**ಸಿ.ಡಬ್ಲ್ಯೂ.27, ನೆಲಮಹಡಿ, ಮಾಲಿಬು ಟೌನ್,**

**ಸೋಹ್ನಾ ರಸ್ತೆ, ಗುರ್ಗಾಂವ್ 122001**

**ಹರಿಯಾಣ**

**usha.chaujer@yahoo.com**

**ಡಾ. ರೇಣು ಸಿಂಗ್,**

**ರಾಷ್ಟ್ರೀಯ ವ್ಯವಸ್ಥಾಪಕರು (ಶಿಕ್ಷಣ), ಸೇವ್ ದಿ ಚಿಲ್ಡ್ರನ್,**

**೪ನೇ ಅಂತಸ್ತು, ಫಾರಂ ಭವನ್,**

**14-15, ನೆಹರೂ ಪ್ಲೇಸ್,**

**ನವದೆಹಲಿ - 110019**

**ಫೋನ್: +91 11 42294900**

**ಇಮೇಲ್: s.renu@savethechildren**

**ಡಾ. ಕನನ್ ಸಾಧು,**

**ಪ್ರೊಫೆಸರ್,**

**ಡಿಇಜಿಎಸ್ಎನ್, ಎನ್‌ಸಿಇಆರ್‌ಟಿ**

**ಡಾ. ಭಾರತಿ,**

**ಸಹಾಯಕ ಪ್ರೊಫೆಸರ್,**

**ಡಿಇಜಿಎಸ್ಎನ್, ಎನ್‌ಸಿಇಆರ್‌ಟಿ**

# ಪ್ರವೇಶ

ಸಮನ್ವಯ ಶಿಕ್ಷಣ: ತಾತ್ವಿಕತೆ ಮತ್ತು ನೀತಿ ನಿರೂಪಣೆಯ ಪರಿಣಾಮಗಳು

*ಭಾರತ ದೇಶದ ಸಮಾಜವು ಅನೇಕ ಬಗೆಯ ಪ್ರಾದೇಶಿಕ ಮತ್ತು ಸ್ಥಳೀಯ ಸಂಸ್ಕೃತಿಗಳಿಂದ ರೂಪುಗೊಂಡಿರುವ ಬಹು ಸಂಸ್ಕೃತಿಯ ಒಂದು ಸಮಾಜವಾಗಿದೆ. ಇಲ್ಲಿನ ಜನರ ಧಾರ್ಮಿಕ ನಂಬಿಕೆಗಳು, ಜೀವನ ವಿಧಾನಗಳು ಮತ್ತು ಸಾಮಾಜಿಕ ಸಂಬಂಧಗಳ ಕುರಿತ ಗ್ರಹಿಕೆಗಳು ಪರಸ್ಪರ ಭಿನ್ನವಾಗಿವೆ. ಎಲ್ಲ ಸಮುದಾಯಗಳೂ ಸಹಬಾಳ್ವೆ ನಡೆಸಲು ಮತ್ತು ಪುರೋಗಮನ ಸಾಧಿಸಲು ಸಮಾನವಾದ ಹಕ್ಕುಗಳನ್ನು ಹೊಂದಿದ್ದು, ಶಿಕ್ಷಣ ವ್ಯವಸ್ಥೆಯು ನಮ್ಮ ಸಮಾಜದಲ್ಲಿ ಅಂತರ್ಗತವಾಗಿರುವ ಇಂತಹ ಸಾಂಸ್ಕೃತಿಕ ಬಹುತ್ವಕ್ಕೆ ಸ್ಪಂದಿಸುವ ಅಗತ್ಯವಿದೆ.*

*ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005*

ನಾವೆಲ್ಲ ತಿಳಿದಿರುವಂತೆ ಭಾರತವು 28 ರಾಜ್ಯಗಳು ಮತ್ತು 7 ಕೇಂದ್ರಾಡಳಿತ ಪ್ರದೇಶಗಳನ್ನು ಹೊಂದಿದ್ದು, ಭೌಗೋಳಿಕ ವೈವಿಧ್ಯಮಯತೆಯಿಂದ ಕೂಡಿರುವ ಒಂದು ರಾಷ್ಟ್ರವಾಗಿರುವುದು ಮಾತ್ರವಲ್ಲದೆ, ಧರ್ಮಗಳು, ಜನಾಂಗಗಳು, ಆಹಾರ ಪದ್ಧತಿಗಳು, ಜನಜೀವನದ ಸ್ಥಿತಿಗತಿಗಳು ಮತ್ತು ಭಾಷೆಗಳಲ್ಲಿ ಕೂಡ ಅಪಾರ ವೈವಿಧ್ಯಮಯತೆಯನ್ನು ಹೊಂದಿರುವುದು ಇಲ್ಲಿನ ವಿಶಿಷ್ಟತೆಯಾಗಿದೆ. ಇದು ಸಂಕೀರ್ಣವಾದ ಸಾಂಸ್ಕೃತಿಕ ವೈವಿಧ್ಯವನ್ನು ತನ್ನಲ್ಲಿ ಹೊಂದಿರುವ ಒಂದು ರಾಷ್ಟ್ರವಾಗಿದ್ದು, ಪ್ರಜಾಪ್ರಭುತ್ವದ ಮೌಲ್ಯಗಳು ಮತ್ತು ಎಲ್ಲರ ಯೋಗಕ್ಷೇಮಕ್ಕೆ ಅದು ಬದ್ಧವಾಗಿದೆ. ಸ್ವಾತಂತ್ರ್ಯಾನಂತರ, ಶಿಕ್ಷಣಕ್ಕೆ ಸಂಬಂಧಿಸಿದಂತೆ ದೇಶದಲ್ಲಿ ಸುಮಾರು 2,055 ಲಕ್ಷ ಮಕ್ಕಳಿಗೆ 10 ಲಕ್ಷ ಶಾಲೆಗಳಲ್ಲಿ ಸುಮಾರು 55 ಲಕ್ಷ ಶಿಕ್ಷಕರು ಶಿಕ್ಷಣ ನೀಡುವ ಮೂಲಕ ಸಾಕಷ್ಟು ಪ್ರಗತಿಯನ್ನು ಸಾಧಿಸಲಾಗಿದೆ. ಭಾರತದಲ್ಲಿ 80 ಪ್ರತಿಶತದಷ್ಟು ಜನವಸತಿ ಪ್ರದೇಶಗಳ ಒಂದು ಕಿಲೋಮೀಟರ್ ವ್ಯಾಪ್ತಿಯೊಳಗೆ ಒಂದು ಕಿರಿಯ ಪ್ರಾಥಮಿಕ ಶಾಲೆಯಿದ್ದು, 75 ಪ್ರತಿಶತದಷ್ಟು ಜನ ವಸತಿ ಪ್ರದೇಶಗಳ 3 ಕಿಲೋಮೀಟರ್ ವ್ಯಾಪ್ತಿಯೊಳಗೆ ಒಂದು ಹಿರಿಯ ಪ್ರಾಥಮಿಕ ಶಾಲೆ ಇದೆ. ಈ ಒಂದು ಚಿತ್ರಣವೇ ಅಲ್ಲದೆ, ಭಾರತದಲ್ಲಿ ಸಾಕ್ಷರತೆಗೆ ಸಂಬಂಧಿಸಿದಂತೆ 37 ಪ್ರತಿಶತದಷ್ಟು ಜನರು ಕೌಶಲದ ಕೊರತೆಯನ್ನು ಹೊಂದಿದ್ದಾರೆ. ಸುಮಾರು 53 ಪ್ರತಿಶತದಷ್ಟು ಜನರು ಪ್ರಾಥಮಿಕ ಹಂತದಲ್ಲೇ ಶಾಲೆಯನ್ನು ತೊರೆಯುತ್ತಾರೆ. ನಮ್ಮ ಗ್ರಾಮೀಣ ಶಾಲೆಗಳಲ್ಲಿ 75 ಪ್ರತಿಶತದಷ್ಟು ಕಲಿಕಾ-ಬೋಧನಾ ಪ್ರಕ್ರಿಯೆಯು ಬಹು-ಹಂತ ಮತ್ತು ಬಹು-ವರ್ಗ ಮಾದರಿಯಲ್ಲಿ ನಡೆಯುತ್ತದೆ (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005). 2009ರ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆಯನ್ನು ಜಾರಿಯಲ್ಲಿ ತರುವುದರೊಂದಿಗೆ ಪ್ರತಿ ಮಗುವಿಗೂ ತೃಪ್ತಿಕರವಾದ ಮತ್ತು ಸಮತೆಯಿಂದ ಕೂಡಿದ ಗುಣಮಟ್ಟದ ಪೂರ್ಣಾವಧಿಯ ಪ್ರಾಥಮಿಕ ಶಿಕ್ಷಣದ ಹಕ್ಕನ್ನು ಔಪಚಾರಿಕ ಶಾಲೆಯಲ್ಲಿ ಕೆಲವು ಅಗತ್ಯ ಕ್ರಮಗಳು ಹಾಗೂ ಮಾನದಂಡಗಳ ಮೂಲಕ ಪೂರೈಸುವ ನಿಟ್ಟಿನಲ್ಲಿ ದೇಶವು ಮುನ್ನಡೆ ಸಾಧಿಸಿದೆ. 'ಯಾವುದೇ ಮಗುವಿಗೂ ಪ್ರವೇಶ ನಿರಾಕರಿಸುವಂತಿಲ್ಲ' ಎಂಬ ನೀತಿಯನ್ನು ಶಾಲೆಗಳು ಅನುಸರಿಸುವಂತೆ ಈ ಕಾಯ್ದೆಯು ಒಂದು ಬಗೆಯಲ್ಲಿ ಕಡ್ಡಾಯಗೊಳಿಸುತ್ತದೆ.

ಇದುವರೆಗೆ ಸಾಧಿಸಿರುವ ಪ್ರಗತಿಯ ಹೊರತಾಗಿಯೂ ಎಲ್ಲಾ ಮಕ್ಕಳಿಗೆ ಸಮಾನ ಅವಕಾಶಗಳನ್ನು ಒದಗಿಸುವಲ್ಲಿ ಶಿಕ್ಷಣ ವ್ಯವಸ್ಥೆಯು ವಿಫಲವಾಗಿದೆ. ದುರದೃಷ್ಟವೆಂದರೆ, ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಜಾತಿ, ಭಾಷೆ, ಲಿಂಗ, ಧರ್ಮ ಅಥವಾ ಅಂಗವಿಕಲತೆಯ ಆಧಾರದ ಮೇಲೆ ಅನೇಕ ಮಕ್ಕಳನ್ನು ಹೊರಗಿರಿಸುತ್ತದೆ. ಈ ಕಾರಣದಿಂದಲೇ ಪರಿಶಿಷ್ಟ ಜಾತಿ, ಪರಿಶಿಷ್ಟ

ವರ್ಗ, ಹೆಣ್ಣು ಮಕ್ಕಳು ಮತ್ತು ವಿಕಲಚೇತನರ ನಡುವಿನ ಸಾಕ್ಷರತಾ ಪ್ರಮಾಣವು ಇತರ ಸಾಮಾನ್ಯ ವರ್ಗದ ಜನಸಂಖ್ಯೆಯ ಸಾಕ್ಷರತಾ ಪ್ರಮಾಣಕ್ಕಿಂತ ಕೆಳಮಟ್ಟದಲ್ಲಿದೆ. ಕಲಿಕಾ-ಬೋಧನಾ ಪ್ರಕ್ರಿಯೆಯಲ್ಲಿ ಪ್ರತಿ ವಿದ್ಯಾರ್ಥಿಗೆ ವಿಶಿಷ್ಟವಾಗಿರುವ ಕಲಿಕೆಯ ವೇಗವನ್ನು ವೈಯಕ್ತಿಕ ನೆಲೆಯಲ್ಲಿ ಅಷ್ಟಾಗಿ ಪರಿಗಣಿಸಲಾಗುವುದಿಲ್ಲ. ತರಗತಿಯಲ್ಲಿ ವಿಶೇಷ ಗಮನ ನೀಡುವುದರ ಮೂಲಕ ಹೆಚ್ಚಿನ ನೆರವು ಅಗತ್ಯವಿರುವ ಮಗುವಿಗೆ ಪ್ರಸ್ತುತ ಅಸ್ತಿತ್ವದಲ್ಲಿರುವ ವ್ಯವಸ್ಥೆಯಿಂದ ಪ್ರಯೋಜನವಾಗುವುದಿಲ್ಲ. ದುರಂತವೆಂದರೆ, ಎಲ್ಲಾ ಮಕ್ಕಳನ್ನು ಶಿಕ್ಷಣದಲ್ಲಿ ಸಮನ್ವಯಗೊಳಿಸುವ ದೃಷ್ಟಿಕೋನದಿಂದ ವಾಸ್ತವತೆಯು ಬಹಳ ದೂರದಲ್ಲಿದೆ ಮತ್ತು ಲಕ್ಷಾಂತರ ಸಂಖ್ಯೆಯಲ್ಲಿ ಮಕ್ಕಳು ಅಂಚಿಗೆ ತಳ್ಳಲ್ಪಟ್ಟಿದ್ದಾರೆ ಮತ್ತು ಶಿಕ್ಷಣದ ಹಕ್ಕು ಅವರ ಪಾಲಿಗೆ ನಿರಾಕರಿಸಲ್ಪಟ್ಟಿದೆ.

ಲಾಲ್ ಮತ್ತು ಚೌಧರಿ (1952) ಯವರ ಪ್ರಕಾರ, ಪ್ರಾಚೀನ ಕಾಲದಲ್ಲಿ ಶಿಕ್ಷಣದ ಗುರಿಯನ್ನು ವ್ಯಕ್ತಿಗತವಾಗಿ ಪರಿಗಣಿಸಲಾಗಿತ್ತು. ಶಿಕ್ಷಣ ಪಡೆಯುವುದರ ಮೂಲಕ ದೇವರೊಂದಿಗೆ ಒಂದಾಗುವ ವ್ಯಕ್ತಿಯು ಆತ್ಮಸಾಕ್ಷಾತ್ಕಾರ ಪಡೆಯುವರು ಎಂಬ ಪ್ರತಿಪಾದನೆ ಇದಕ್ಕೆ ಕಾರಣವಾಗಿತ್ತು. ವ್ಯಕ್ತಿವಾದದ ಒಂದು ಮೂಲಭೂತ ತಾತ್ವಿಕ ಪರಿಕಲ್ಪನೆ ಏನೆಂದರೆ:

*ಸಮಾಜವು ವ್ಯಕ್ತಿಯ ಪ್ರಯೋಜನಕ್ಕಾಗಿ ರೂಪುಗೊಂಡಿದೆ ಎಂದು ಆಲೋಚಿಸುವುದಾದರೆ ಇಲ್ಲಿ ವ್ಯಕ್ತಿಯೇ ವಾಸ್ತವ. ಆದ್ದರಿಂದ ಶಿಕ್ಷಣದ ವಿಷಯವು ಸಮಾಜದಲ್ಲಿನ ಚಟುವಟಿಕೆಗಳನ್ನು ಆಧರಿಸಿರುವುದಕ್ಕಿಂತ ಹೆಚ್ಚಾಗಿ ಕಲಿಯುವವರ ಆಸಕ್ತಿಯ ಮೇರೆಗೆ ನಿರ್ಧರಿತವಾಗುತ್ತದೆ. ಆಗ ಶಿಕ್ಷಣದ ವಿಷಯವೇ ಮುಖ್ಯವಾಗುವ ಬದಲಿಗೆ ಅದು ವೈಯಕ್ತಿಕ ಬೆಳವಣಿಗೆಗೆ ಕಾರಣವಾಗುತ್ತದೆಯೇ ಇಲ್ಲವೇ ಎಂಬ ವಿಚಾರ ಮುಖ್ಯವಾಗುತ್ತದೆ. ಆದ್ದರಿಂದ ಶಿಕ್ಷಣ ಕೊಡಬೇಕಾಗಿರುವ ವಿಷಯ ಯಾವುದು ಎಂಬದನ್ನು ಹೆಚ್ಚಿನ ಪ್ರಮಾಣದಲ್ಲಿ ನಿಷ್ಕರ್ಷೆ ಮಾಡಲು ಸಾಧ್ಯವಿಲ್ಲ: ಇದು ವ್ಯಕ್ತಿಯಿಂದ ವ್ಯಕ್ತಿಗೆ ಭಿನ್ನವಾಗಿರಬಹುದು. ಕನಿಷ್ಠ, ಪಠ್ಯಕ್ರಮದಲ್ಲಿ ಸಾಕಷ್ಟು ನಮ್ಯತೆ ಇರಬೇಕು. ಆದ್ದರಿಂದ ಶಾಲಾ ವಿಧಾನಗಳು ವ್ಯಕ್ತಿಯ ಮುಕ್ತ ಬೆಳವಣಿಗೆಗೆ ಸೂಕ್ತವಾದ ವಾತಾವರಣವನ್ನು ಒದಗಿಸಿಕೊಡಬೇಕು (ಲಾಲ್ ಮತ್ತು ಚೌಧರಿ 1952).*

ವ್ಯಕ್ತಿವಾದದ ಈ ಅವಧಿಯ ಆನಂತರದಲ್ಲಿ ಸಮಾಜಶಾಸ್ತ್ರೀಯ ಚಿಂತನೆಯ ಬೆಳವಣಿಗೆಗಳು ವಿದ್ಯಾರ್ಥಿಗಳನ್ನು ಸಮಾಜದಲ್ಲಿ ಯಶಸ್ವಿ ಮತ್ತು ಸಂಪೂರ್ಣ ಜೀವನ ನಡೆಸಲು ಸಿದ್ಧಪಡಿಸುವುದರತ್ತ ಮುನ್ನಡೆಯುವಂತೆ ಮಾಡಿತು. ಶಾಲಾ ಬದುಕಿನ ಭಾಗವಹಿಸುವಿಕೆಯು ಕಲಿಕೆಯ ಅತ್ಯುತ್ತಮ ವಿಧಾನವೆಂದು ಪರಿಗಣಿಸಲ್ಪಟ್ಟಿತು. ವ್ಯಕ್ತಿವಾದ ಮತ್ತು ಸಮಾಜಶಾಸ್ತ್ರೀಯ ಚಿಂತನೆ ಇವೆರಡೂ ಧಾರೆಗಳೂ ಭಾರತದ ಶಿಕ್ಷಣ ವ್ಯವಸ್ಥೆಗೆ ಪ್ರಮುಖ ಕೊಡುಗೆಗಳನ್ನು ನೀಡಿದವು. ವ್ಯಕ್ತಿವಾದೀ ವ್ಯವಸ್ಥೆಯು ವಿದ್ಯಾರ್ಥಿ ಕೇಂದ್ರಿತವಾಗಿರುವುದಕ್ಕೆ ಒತ್ತು ನೀಡಿದರೆ, ಸಮಾಜಶಾಸ್ತ್ರೀಯ ದೃಷ್ಟಿಕೋನವು ಶಿಕ್ಷಣವನ್ನು ವಾಸ್ತವಿಕತೆಗೆ ಹೆಚ್ಚು ಹತ್ತಿರಗೊಳಿಸಿ ಔದ್ಯೋಗಿಕ ಶಿಕ್ಷಣ ಮತ್ತು ಪೌರತ್ವಕ್ಕಾಗಿ ಶಿಕ್ಷಣ ಇವುಗಳ ಮೇಲೆ ತನ್ನ ಗಮನವನ್ನು ಕೇಂದ್ರೀಕರಿಸಿ ನಿಜಜೀವನದಲ್ಲಿ ಯಶಸ್ಸು ಸಾಧಿಸುವುದರ ಕಡೆಗೆ ಒತ್ತು ನೀಡಿತು.

ಇಂದು ಶಿಕ್ಷಣವು ಮಹಾತ್ಮಾ ಗಾಂಧಿಯವರ ದೃಷ್ಟಿಕೋನಗಳಿಂದ ಹೆಚ್ಚು ಪ್ರಭಾವಿತವಾಗಿದೆ. ಯಾವುದೇ ವ್ಯಕ್ತಿಯಲ್ಲಿರುವ ಅತ್ಯುತ್ತಮವಾದುದನ್ನು ಹೊರಸೆಳೆಯುವ ಮತ್ತು ಸಾಮರಸ್ಯದ ನೆಲೆಯಲ್ಲಿ ವ್ಯಕ್ತಿತ್ವಗಳನ್ನು ಬೆಳೆಸುವ ಪರಿಣಾಮಕಾರಿ ಮಾಧ್ಯಮವನ್ನಾಗಿ ಅವರು ಶಿಕ್ಷಣವನ್ನು ಪರಿಗಣಿಸಿದರು. ದೇಶದ ಪ್ರತಿಯೊಬ್ಬ ಪ್ರಜೆಯೂ ಎಲ್ಲ ಬಗೆಯ ಶೋಷಣೆಗಳಿಂದ ಮುಕ್ತವಾದ ಮತ್ತು ಸಂಪೂರ್ಣ ಸಮಾನತೆ ಹಾಗೂ ಸೋದರತೆಯ ವಾತಾವರಣದಲ್ಲಿ ನೆಮ್ಮದಿಯಿಂದ ಬದುಕುವ "ಸ್ವರಾಜ್ಯ"ದ ಕನಸನ್ನು ಅವರು ಕಂಡರು. ಬದುಕಿಗೆ ಅತ್ಯಗತ್ಯವಾದ, ಅದಕ್ಕಿಂತ ಹೆಚ್ಚಾಗಿ ಬದುಕಿನ ಮುಖಾಂತರ ಪಡೆದುಕೊಳ್ಳುವ ಸ್ವಾವಲಂಬಿತ ಶೈಕ್ಷಣಿಕ ವ್ಯವಸ್ಥೆಯಾದ ಮೂಲ ಶಿಕ್ಷಣ ಅಥವಾ 'ನಯೀ ತಾಲೀಮ್' ಎಂಬ ಶೈಕ್ಷಣಿಕ ಯೋಜನೆಯನ್ನು ಅವರು ಹುಟ್ಟುಹಾಕಿದರು. ಅಂತಿಮವಾಗಿ, ಶೋಷಣೆ ಮತ್ತು ಹಿಂಸೆಗಳಿಂದ ಮುಕ್ತವಾದ ಸಾಮಾಜಿಕ ವ್ಯವಸ್ಥೆಯೊಂದನ್ನು ಕಟ್ಟುವುದು ಅದರ ಗುರಿಯಾಗಿತ್ತು.

***ನಿಜವಾದ ಕಷ್ಟವೇನೆಂದರೆ, ಶಿಕ್ಷಣ ಎಂದರೆ ಏನು ಎಂಬುದರ ಕುರಿತಾಗಿ ಜನರಿಗೆ ಒಂದು ಸ್ಪಷ್ಟವಾದ ಕಲ್ಪನೆ ಇಲ್ಲದಿರುವುದು. ಶಿಕ್ಷಣದ ಮೌಲ್ಯವನ್ನು ನಾವು ಜಮೀನು ಅಥವಾ ಷೇರು ವಿನಿಮಯ ಮಾರುಕಟ್ಟೆಯಲ್ಲಿನ ಪಾಲು ಎನ್ನುವ ಮಾದರಿಯಲ್ಲಿ ಮೌಲ್ಯಮಾಪನ ಮಾಡುತ್ತಿರುವುದು. ವಿದ್ಯಾರ್ಥಿಗಳನ್ನು ಹಣ ಸಂಪಾದನೆ ಮಾಡಲು ಶಕ್ತರನ್ನಾಗಿ ಮಾಡುವ ಶಿಕ್ಷಣವನ್ನು ಕೊಡುವುದಷ್ಟೆ ನಮಗೆ ಬೇಕಾಗಿದೆ. ಶಿಕ್ಷಣ ಪಡೆಯುವವರ ನಡತೆಯನ್ನು ಅಭಿವೃದ್ಧಿಪಡಿಸುವುದರ ಕುರಿತು ನಾವು ಚಿಂತನೆ ನಡೆಸುವುದು ಕಡಿಮೆ. ಹೆಣ್ಣುಮಕ್ಕಳು ದುಡಿದು ಸಂಪಾದಿಸುವ ಅವಶ್ಯಕತೆ ಇಲ್ಲದಿರುವಾಗ ಅವರನ್ನು ಶಿಕ್ಷಿತರನ್ನಾಗಿ ಮಾಡುವ ಅವಶ್ಯಕತೆಯೇನು? ಎಂದು ನಾವು ಪ್ರಶ್ನೆ ಮಾಡುತ್ತೇವೆ. ಇಂತಹ ಆಲೋಚನೆಗಳು ಎಲ್ಲಿಯವರೆಗೆ ಬೇರೂರಿಕೊಂಡಿರುತ್ತವೆಯೋ ಅಲ್ಲಿಯವರೆಗೆ ನಾವು ಶಿಕ್ಷಣದ ನಿಜವಾದ ಮೌಲ್ಯವನ್ನು ಅರಿಯಲಾರೆವು.***

**ಎಂ ಕೆ ಗಾಂಧಿ**

ಇಂದು ನಮಗಿರುವ ಪ್ರಮುಖ ಕಾಳಜಿಯೆಂದರೆ, ಎಲ್ಲ ಮಕ್ಕಳು ತಮ್ಮ ವೈವಿಧ್ಯಮಯ ಸಾಮಾಜಿಕ, ಆರ್ಥಿಕ ಹಿನ್ನೆಲೆಗಳು ಮತ್ತು ಶಾರೀರಿಕ, ಮನೋವೈಜ್ಞಾನಿಕ ಮತ್ತು ಬೌದ್ಧಿಕ ಸ್ವರೂಪಗಳ ಭಿನ್ನತೆಗಳನ್ನು ಮೀರಿ ಕಲಿಕೆಯಲ್ಲಿ ತೊಡಗಬೇಕು ಮತ್ತು ಶಾಲೆಗಳಲ್ಲಿ ಯಶಸ್ಸನ್ನು ಪಡೆಯಬೇಕು. ತಾರತಮ್ಯ, ದೈಹಿಕ ಶಿಕ್ಷೆ, ನಿಂದನೆ ಅವಹೇಳನಗಳ ಭೀತಿ ಇರಕೂಡದು. ಎಲ್ಲ ಮಕ್ಕಳೂ ಶೈಕ್ಷಣಿಕ ಪ್ರಕ್ರಿಯೆಗಳಲ್ಲಿ ಸಮಾನವಾಗಿ ಭಾಗವಹಿಸುವ ರೀತಿಯಲ್ಲಿ ಶಾಲೆಗಳು ಕಲಿಕೆಯ ಕಾರ್ಯಗಳು ಮತ್ತು ಕಲಿಕಾ-ಬೋಧನಾ ಚಟುವಟಿಕೆಗಳನ್ನು ಯೋಜಿಸಬೇಕು. ಯಾವ ಮಗುವೂ ಹಿಂಸೆಗೆ ಒಳಗಾಗದೆ ಎಲ್ಲ ಮಕ್ಕಳೂ ಸಂತಸವನ್ನು ಅನುಭವಿಸುವ ಹಿತವಾದ ವಾತಾವರಣವನ್ನು ಶಾಲೆಯು ಸೃಷ್ಟಿಸುವುದು ಬಹಳ ಮುಖ್ಯವಾಗಿದೆ. ಶಾಲಾ ಶಿಕ್ಷಣವು ಮಕ್ಕಳಲ್ಲಿರುವ ಸೂಕ್ಷ್ಮತೆ ಮತ್ತು ಸಂತಸವನ್ನು ನಾಶಪಡಿಸಕೂಡದು, ಹಾಗೆಯೇ ಅದು ಮಕ್ಕಳಲ್ಲಿ ಭಯವನ್ನು ಸೃಷ್ಟಿಮಾಡಬಾರದು ಮತ್ತು

ಬೇಸರ ಉಂಟುಮಾಡುವಂತೆ ಇರಬಾರದು. ಇಂದಿನ ಶಿಕ್ಷಣ ವ್ಯವಸ್ಥೆಯು ಇವೆಲ್ಲ ಸಮಸ್ಯೆಗಳತ್ತ ಗಮನಹರಿಸಿ ಪರಿಹಾರ ಕಂಡುಕೊಳ್ಳಬೇಕು.

ಎಲ್ಲ ಕಲಿಕಾರ್ಥಿಗಳಿಗೂ ಗುಣಮಟ್ಟದ ಶಿಕ್ಷಣ ಕೈಗೆಟುಕಬೇಕು ಎಂದಾದರೆ, ಶಾಲಾ ಶಿಕ್ಷಣವು ಯಾರನ್ನೂ ಹೊರಗಿರಿಸದ ಎಲ್ಲರ ಒಳಗೊಳಿಸುವಿಕೆಯ ಒಂದು ವ್ಯವಸ್ಥೆಯ ಕಡೆಗೆ ಗಮನಾರ್ಹವಾಗಿ ಬದಲಾಗುವ ಅಗತ್ಯವಿದೆ. ಶಿಕ್ಷಣವು ಮೂಲಭೂತ ಹಕ್ಕಾಗಿದ್ದು, ಲಕ್ಷಾಂತರ ಸಂಖ್ಯೆಯ ಕಲಿಕಾರ್ಥಿಗಳು ತಮ್ಮ ವಯಸ್ಸು ಮತ್ತು ಹಿನ್ನೆಲೆಯನ್ನು ಲೆಕ್ಕಿಸದೆ ಶಾಲೆಗಳಿಗೆ ದಾಖಲಾಗಿದ್ದರೂ ಪಾಲೋ ಫ್ರೇರೆ ಹೇಳುವಂತೆ, ಶೈಕ್ಷಣಿಕ ಸನ್ನಿವೇಶದಲ್ಲಿ ಪ್ರಚಲಿತದಲ್ಲಿರುವ 'ಮೌನ ಸಂಸ್ಕೃತಿ'ಯ ಬೆಳಕಿನಲ್ಲಿ ಇದನ್ನು ನೋಡುವುದು ವಿಶೇಷವಾಗಿ ಮುಖ್ಯವಾಗಿದೆ (Culture of Silence, Friere, 1985). ಏಕೆಂದರೆ, ಅವರು ಹೇಳುವಂತೆ, ಅಲ್ಲಿ ಕೆಲವರ ದನಿಗಳು ಮೌನವಾಗಿದ್ದು, ಮತ್ತೆ ಹಲವರ ದನಿಗಳು ಪ್ರಬಲವಾಗಿರುತ್ತವೆ.

## ಸಮನ್ವಯ ಶಿಕ್ಷಣ

*ಸಮನ್ವಯ ಶಿಕ್ಷಣವನ್ನು ಉತ್ತೇಜಿಸುವುದೆಂದರೆ ಅದು ಶಿಕ್ಷಣ ವ್ಯವಸ್ಥೆಯಲ್ಲಿ ಸುಧಾರಣೆಯನ್ನು ತರುವುದೇ ಆಗಿದೆ. ಶಾಲಾ ವ್ಯವಸ್ಥೆಯ ನಿರ್ವಹಣಾ ವೆಚ್ಚಗಳಿಗೆ ಸಂಬಂಧಿಸಿದಂತೆ ಮಾತ್ರವಲ್ಲದೆ ಸಮಾಜದಲ್ಲಿನ ದೀರ್ಘಾವಧಿಯ ವೆಚ್ಚಗಳಿಗೆ ಸಂಬಂಧಿಸಿ ನೋಡುವುದಾದರೂ ಒಂದು ಪ್ರತ್ಯೇಕಿತ ವ್ಯವಸ್ಥೆಗಿಂತಲೂ ಸಮನ್ವಯ ಶಿಕ್ಷಣವು ಹೆಚ್ಚಿನ ರೀತಿಯಲ್ಲಿ ಮಿತವ್ಯಯಕರವಾಗಿದೆ.*

– ರೋಜರ್ ಸ್ಲೀ (UNESCO, 2005).

ಕಲಿಕಾರ್ಥಿಗಳ ನಡುವೆ ಇರುವ ವೈವಿಧ್ಯ ಭಾರತದಲ್ಲಿನ ನಮ್ಮ ತರಗತಿಗಳ ಪ್ರಮುಖ ಲಕ್ಷಣವಾಗಿದೆ. ಇತ್ತೀಚಿನ ವರ್ಷಗಳಲ್ಲಿ, ಮಕ್ಕಳ ಶಿಕ್ಷಣಕ್ಕಾಗಿ ಭಾರತ ಸರ್ಕಾರ ಕೈಗೊಂಡ ಎಲ್ಲ ಉಪಕ್ರಮಗಳಲ್ಲಿ ಸಮನ್ವಯ ಶಿಕ್ಷಣದ ನೀತಿಯು ಒಂದು ಪ್ರಮುಖ ಭಾಗವಾಗಿದ್ದು, ಅದು ಕ್ರಮೇಣವಾಗಿ ಈ ಹಿಂದೆ ರೂಪಿಸಲಾಗಿದ್ದ ಸಮಗ್ರ ಶಿಕ್ಷಣ ಚಳುವಳಿಯ ಬದಲಾಗಿ ನಿರೂಪಿತಗೊಂಡಿದೆ. ಆದರೆ, ಈ ಕ್ಷೇತ್ರದಲ್ಲಿ ಕ್ರಿಯಾಶೀಲರಾಗಿರುವ ಅನೇಕರು ಇವೆರಡು ಪದಗಳನ್ನೂ ಒಂದೇ ಅರ್ಥದಲ್ಲಿ ಪರಿಗಣಿಸುತ್ತಾರೆ. ಅವರ ಪ್ರಕಾರ, "ಸಮನ್ವಯ ಶಿಕ್ಷಣ ಎಂದರೆ *ವಿಕಲಾಂಗರಲ್ಲದ ಮಕ್ಕಳಿಗಾಗಿ* ವಿನ್ಯಾಸಗೊಳಿಸಲಾಗಿರುವ ಸಾಮಾನ್ಯ ತರಗತಿಗಳಲ್ಲಿ *ವಿಕಲಾಂಗ ಮಕ್ಕಳನ್ನು* ಸೇರಿಸುವುದು".

***ಸಮನ್ವಯ ಶಿಕ್ಷಣವೆಂದರೆ ಅದು ಎಲ್ಲರ ಒಳಗೊಳ್ಳುವಿಕೆ,*** ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005

***ಒಳಗೊಳಿಸುವಿಕೆಯು ಕೇವಲ ವಿಕಲಾಂಗರಿಗೆ ಮಾತ್ರ ಸೀಮಿತವಾದುದಲ್ಲ – ಹೊರಗೆ ಇರಿಸದೇ ಇರುವುದು ಎನ್ನುವುದು ಇದರ ಮತ್ತೊಂದು ಅರ್ಥ,*** ರಾಷ್ಟ್ರೀಯ ಪಠ್ಯಕ್ರಮ

ಚೌಕಟ್ಟು, 2005

ಸಮನ್ವಯ ಶಿಕ್ಷಣವು ವಾಸ್ತವದಲ್ಲಿ ಶಿಕ್ಷಣದಲ್ಲಿನ ಎಲ್ಲ ಬಗೆಯ ಹೊರಗಿರಿಸುವ ನೀತಿಗಳಿಗೂ ಅಭ್ಯಾಸಗಳಿಗೂ ಸವಾಲನ್ನು ಒಡ್ಡುತ್ತದೆ. ಇದು ಆಯಾ ಮಕ್ಕಳ ಹಿನ್ನೆಲೆ, ಅವರು ಹೊಂದಿರುವ ಸಾಮರ್ಥ್ಯ-ಅಸಾಮರ್ಥ್ಯಗಳು ಇವುಗಳನ್ನೆಲ್ಲ ಗಣನೆಗೆ ತೆಗೆದುಕೊಳ್ಳದೆ ಆಯಾ ಪ್ರದೇಶಗಳಲ್ಲಿ ಸಾಮಾನ್ಯ ಶಿಕ್ಷಣಕ್ಕಾಗಿ ಎಲ್ಲ ಮಕ್ಕಳಿಗೆ ಇರುವ ಹಕ್ಕುಗಳ ಕುರಿತು ಬೆಳೆಯುತ್ತಿರುವ ಅಂತರರಾಷ್ಟ್ರೀಯ ತಿಳುವಳಿಕೆಯನ್ನು ಆಧರಿಸಿದೆ. ಇದು ಎಲ್ಲ ಮಕ್ಕಳಿಗೂ ಗುಣ ಮಟ್ಟದ ಶಿಕ್ಷಣ ಮತ್ತು ಸಮುದಾಯ ಆಧರಿತ ಶಿಕ್ಷಣ ನೀಡುವುದನ್ನು ತನ್ನ ಗುರಿಯಾಗಿಸಿಕೊಂಡಿದೆ.

***"ಜಗತ್ತಿನ ಮಕ್ಕಳು ಮತ್ತು ಯುವಜನರೆಲ್ಲರು ತಮಗಿರುವ ವ್ಯಕ್ತಿಗತ ಸಾಮರ್ಥ್ಯ ಮತ್ತು ದೌರ್ಬಲ್ಯಗಳ ಸಹಿತವಾಗಿ ಮತ್ತು ಅವರದ್ದೇ ಆದ ಭರವಸೆ ನಿರೀಕ್ಷೆಗಳೊಂದಿಗೆ ಶಿಕ್ಷಣದ ಹಕ್ಕನ್ನು ಹೊಂದಿರುತ್ತಾರೆ. ನಮ್ಮ ಶಿಕ್ಷಣ ವ್ಯವಸ್ಥೆಯಲ್ಲಿ ಕೆಲವು ಬಗೆಯ ಮಕ್ಕಳಿಗೆ ಶಿಕ್ಷಣದ ಹಕ್ಕನ್ನು ಹೊಂದುವ ಅವಕಾಶಗಳಿಲ್ಲ. ಆದ್ದರಿಂದ, ಎಲ್ಲಾ ಮಕ್ಕಳ ಅಗತ್ಯಗಳನ್ನು ಪೂರೈಸಲು ದೇಶದ ಶಾಲಾ ವ್ಯವಸ್ಥೆಯನ್ನು ಅದಕ್ಕಾಗಿ ಸರಿಹೊಂದಿಸಬೇಕಾಗಿದೆ".***
**ಬಿ ಲಿಂಡ್‌ಕ್ವಿಸ್ಟ್, ವಿಶ್ವಸಂಸ್ಥೆಯ ವರದಿಗಾರರು, 1994**

'ಸಮನ್ವಯ ಶಿಕ್ಷಣ' ಎಂಬ ಪದವು ಸಮಗ್ರ ಶಿಕ್ಷಣಕ್ಕಿಂತಲೂ ಒಂದು ಹೆಜ್ಜೆ ಮುಂದಿದ್ದು, ವಿಕಲಾಂಗ ಮಕ್ಕಳಿಗಾಗಿ ಎನ್ನುವುದನ್ನು ಮೀರಿ ಮಕ್ಕಳ ದೈಹಿಕ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ, ಭಾಷಿಕ ಅಥವಾ ಇನ್ನಿತರ ಪರಿಸ್ಥಿತಿಗಳೆಲ್ಲವನ್ನು ಒಳಗೊಂಡಂತೆ ಎಲ್ಲ ಮಕ್ಕಳಿಗೆ ಅವಕಾಶ ಕಲ್ಪಿಸುವ ಶಿಕ್ಷಣ ವ್ಯವಸ್ಥೆಯನ್ನು ಇದು ಸೂಚಿಸುತ್ತದೆ. ಜಗತ್ತಿನಾದ್ಯಂತ ಸಮನ್ವಯ ಶಿಕ್ಷಣದ ಕುರಿತು ಅನೇಕ ವ್ಯಾಖ್ಯಾನಗಳು ವಿಕಸನಗೊಂಡಿವೆ. ಇದು 'ಸಾಮಾನ್ಯ ಶಾಲೆಗಳ ವ್ಯಾಪ್ತಿಯನ್ನು ವಿಸ್ತರಿಸುವುದರಿಂದಾಗಿ ಹೆಚ್ಚಿನ ಪ್ರಮಾಣದಲ್ಲಿ ವೈವಿಧ್ಯಮಯತೆಯಿಂದ ಕೂಡಿದ ಮಕ್ಕಳನ್ನು ಶಾಲೆಗೆ ಸೇರಿಸಬಹುದು' (ಕ್ಲಾರ್ಕ್ ಮತ್ತು ಇತರರು 1995) ಎನ್ನುವಲ್ಲಿಂದ ಮೊದಲುಗೊಂಡು 'ಅಂಗವೈಕಲ್ಯ ಹೊಂದಿರುವ ವಿದ್ಯಾರ್ಥಿಯನ್ನು ಮೌಲ್ಯಯುತ ರೀತಿಯಲ್ಲಿ ಮತ್ತು ಎಲ್ಲ ವಿಷಯಗಳಲ್ಲಿಯೂ ಅವರು ಸಮುದಾಯದ ಎಲ್ಲರಿಗೂ ಬೇಕಾದ ಸದಸ್ಯರು ಎನ್ನುವ ದೃಷ್ಟಿಯಿಂದ ನೋಡುವುದನ್ನು ಖಾತರಿಪಡಿಸುವ ತತ್ವಗಳ ಗುಂಪು' ಎಂಬಲ್ಲಿಯವರೆಗಿನ ವ್ಯಾಪ್ತಿಯನ್ನು ಇವು ಹೊಂದಿರುತ್ತವೆ' (ಉಡಿಸ್ಟ್ಕಿ 1993, ಪುಟ 88). ಕೆಲವು ವ್ಯಾಖ್ಯಾನಗಳು ಮಾನವರ ನಡುವಿನ ಸಂವಾದಾತ್ಮಕತೆಯನ್ನು ಎತ್ತಿಹಿಡಿಯುತ್ತದೆ: ಫಾರೆಸ್ಟ್ ಮತ್ತು ಪಿಯರ್ ಪಾಯಿಂಟ್ (1992) ಭಿನ್ನತೆಯೊಂದಿಗೆ ವ್ಯವಹರಿಸುವುದರ ಮೇಲೆ ಗಮನಹರಿಸಿದರೆ, ರೋಸ್ ಮತ್ತು ಫ್ಲೋರಿಯಾನ್ (1996) ಸಾಂಸ್ಥಿಕ ದೃಷ್ಟಿಕೋನವನ್ನು ಅಳವಡಿಸಿಕೊಂಡು ಸಂಸ್ಥೆಯನ್ನು ಅದಕ್ಕಾಗಿ ಸಿದ್ಧಪಡಿಸಿಕೊಳ್ಳುವ ಮತ್ತು ಶಾಲೆಗಳನ್ನು ಈ ನಿಟ್ಟಿನಲ್ಲಿ ಸುಧಾರಿಸುವ ಮಾರ್ಗವನ್ನು ಅನುಸರಿಸುತ್ತಾರೆ.

ಸಮನ್ವಯ ಶಿಕ್ಷಣವು ಯಾವ ರೀತಿಯಲ್ಲಿ ಕಾರ್ಯಾಚರಿಸಬೇಕು ಎನ್ನುವುದರ ಕುರಿತ ಯಾವುದೇ ವ್ಯಾಖ್ಯಾನ ಭಾರತ ದೇಶದಲ್ಲಿ ಇನ್ನೂ ರೂಪುಗೊಂಡಿಲ್ಲ. ಆದರೂ, "ಸಮನ್ವಯ ಶಿಕ್ಷಣ ಎಂದರೆ, ಕಲಿಕಾರ್ಥಿಗಳೆಲ್ಲರು ಅಂದರೆ, ಅಂಗ ವೈಕಲ್ಯ ಹೊಂದಿರುವ ಅಥವಾ ಹೊಂದಿಲ್ಲದ ಎಳೆಯರೆಲ್ಲರು ಎಲ್ಲರಂತೆಯೇ ಸಾಮಾನ್ಯ ಶೈಕ್ಷಣಿಕ ವ್ಯವಸ್ಥೆಗಳಾದ ಶಾಲಾ ಪೂರ್ವ ಕೇಂದ್ರುಗಳಲ್ಲಿ, ಶಾಲೆಗಳಲ್ಲಿ ಮತ್ತು ಸಮುದಾಯದ ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಸೂಕ್ತವಾದ ಬೆಂಬಲ ಸೇವೆಗಳ ಜಾಲದೊಂದಿಗೆ ಎಲ್ಲರೂ ಒಟ್ಟಿಗೆ ಕಲಿಯಲು ಸಾಧ್ಯ" ಎಂದು ಇದನ್ನು ವಿವರಿಸಬಹುದು. ಸಮನ್ವಯ ಶಿಕ್ಷಣದ ತರಗತಿಗಳು ಅಂಗವಿಕಲ ಅಥವಾ ಪ್ರತಿಭಾನ್ವಿತ ಮಕ್ಕಳು, ಬೀದಿ ಮಕ್ಕಳು ಅಥವಾ ದುಡಿಯುವ ಮಕ್ಕಳು, ಬಹುದೂರದ ಕುಗ್ರಾಮಗಳಿಗೆ ಸೇರಿದ ಅಥವಾ ಅಲೆಮಾರಿ ಜನಾಂಗಗಳ ಮಕ್ಕಳು, ಧಾರ್ಮಿಕ ಅಥವಾ ಭಾಷಿಕ ಅಲ್ಪಸಂಖ್ಯಾತ ವರ್ಗಕ್ಕೆ ಸೇರಿದ ಮಕ್ಕಳು, ಅಥವಾ ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡ ಅಥವಾ ಇತರ ಹಿಂದುಳಿದ ವರ್ಗಗಳ ಮಕ್ಕಳು ಇವರೆಲ್ಲರನ್ನು ತನ್ನಲ್ಲಿ ಒಂದುಗೂಡಿಸಿ ಒಳಗೊಳಿಸಿಕೊಂಡಿರುತ್ತವೆ.

**ಸಮನ್ವಯತೆ**

**ಸಮನ್ವಯತೆ ಎಂದರೆ ಈ ಕೆಳಗಿನವುಗಳು ಅಲ್ಲ -**

- ಆಯ್ದ ಒಬ್ಬಿಬ್ಬರು ವಿದ್ಯಾರ್ಥಿಗಳಿಗಾಗಿ ಅಥವಾ ವಿದ್ಯಾರ್ಥಿಗಳ ಒಂದು ಸಣ್ಣ ಗುಂಪಿಗಾಗಿ ಪಠ್ಯಕ್ರಮದ ಅಳವಡಿಕೆ, ಪ್ರತ್ಯೇಕ ಕೆಲಸಗಳ ವಿಂಗಡಣೆ, ವಿಶೇಷ ಬೆಂಬಲ ಮತ್ತು ಸಹಾಯ ಒದಗಿಸುವಿಕೆ ಇವುಗಳ ಮೂಲಕ ಹೆಚ್ಚಿನ ಗಮನ ಕೊಡುವುದು;
- ವಿಶೇಷ ಶೈಕ್ಷಣಿಕ ಅಗತ್ಯಗಳಿವೆ ಎಂದು ಗುರುತಿಸಲಾದ ಪ್ರತ್ಯೇಕ ವಿದ್ಯಾರ್ಥಿಗಳನ್ನು ಈಗಾಗಲೇ ಅಸ್ತಿತ್ವದಲ್ಲಿರುವ ಶಾಲಾ ಶಿಕ್ಷಣದೊಂದಿಗೆ ಸಂಯೋಜಿಸುವುದು;

**ಸಮನ್ವಯತೆ ಎಂದರೆ -**

- ಅದು ಒಂದು ಪ್ರಕ್ರಿಯೆಯಾಗಿದ್ದು (ಒಂದು ಸ್ಥಿತಿ ಎನ್ನುವುದಕ್ಕಿಂತ ಹೆಚ್ಚಾಗಿ), ಅದರ ಮೂಲಕ ಶಾಲೆಯು ಪ್ರತಿ ವಿದ್ಯಾರ್ಥಿಯೊಂದಿಗೆ ಪ್ರತ್ಯೇಕವಾಗಿ ಸ್ಪಂದಿಸಲು ಪ್ರಯತ್ನಿಸುತ್ತದೆ;
- ಅದು ಒಳಗೊಳಿಸಿಕೊಳ್ಳುವಿಕೆ ಮತ್ತು ಹೊರಗಿರಿಸುವಿಕೆಗಳನ್ನು ಪರಸ್ಪರ ಸಂಬಂಧ ಹೊಂದಿರುವ ಪ್ರಕ್ರಿಯೆಗಳೆಂದು ಪರಿಗಣಿಸುತ್ತದೆ; ಹೆಚ್ಚಾಗಿ ಸಮನ್ವಯತೆಯ ಅಭ್ಯಾಸಗಳನ್ನು ಅಭಿವೃದ್ಧಿಪಡಿಸುವ ಶಾಲೆಗಳು ಇವೆರಡನ್ನೂ ಪರಿಗಣಿಸಬೇಕಾಗಬಹುದು;
- ಪ್ರತಿ ವಿದ್ಯಾರ್ಥಿಯನ್ನು ವೈಯಕ್ತಿಕವಾಗಿ ತಲುಪಲು ಪಠ್ಯಕ್ರಮದಲ್ಲಿರುವ ಅವಕಾಶಗಳನ್ನು ಪುನರ್ನಿರ್ಮಾಣ ಮಾಡುವ ಅವಶ್ಯಕತೆಗೆ ಒತ್ತು ನೀಡುತ್ತದೆ;
- ಶಾಲೆಯ ಸಮಗ್ರ ಪರಿಣಾಮಕತ್ವಕ್ಕೆ ಹೆಚ್ಚಿನ ಒತ್ತು ನೀಡುತ್ತದೆ;
- ಇದು ಎಲ್ಲ ಹಂತಗಳಿಗೆ ಮತ್ತು ಎಲ್ಲ ಬಗೆಯ ಶಾಲೆಗಳಿಗೆ ಪ್ರಸ್ತುತವಾಗಿದೆ, ಬಹುಶ: ವಿಶೇಷ ಶಾಲೆಗಳನ್ನೂ ಒಳಗೊಂಡಂತೆ, ಯಾವುದೇ ಶೈಕ್ಷಣಿಕ ಅವಕಾಶಗಳಲ್ಲಿ ಶಿಕ್ಷಕರಿಗೆ ವೈವಿಧ್ಯಮಯ ಅಗತ್ಯಗಳನ್ನು ಹೊಂದಿರುವ ವಿದ್ಯಾರ್ಥಿಗಳ ಗುಂಪುಗಳು ಎದುರಾಗುತ್ತವೆ ಮತ್ತು ಈ ವೈವಿಧ್ಯಮಯತೆಗೆ ಪ್ರತಿಕ್ರಿಯಿಸುವ ಅಗತ್ಯವಿದೆ

**ಲೈಸ್‌ವಿಸ್ ಲೀ, 2003 (Lise Vislie, 2003)**

ಸಮನ್ವಯ ಶಾಲಾ ವ್ಯವಸ್ಥೆಯು ಎದುರಿಸುತ್ತಿರುವ ವ್ಯಾಪಕ ಸವಾಲುಗಳನ್ನು ನಿಭಾಯಿಸುವಲ್ಲಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) 'ಮಗು ಕೇಂದ್ರಿತ' ಕಲಿಕಾ-ಬೋಧನಾ ವ್ಯವಸ್ಥೆಗೆ ಸ್ಪಷ್ಟವಾಗಿ ಮಹತ್ವ ನೀಡುತ್ತದೆ.  ಸಮನ್ವಯ ಶಿಕ್ಷಣದ ಪ್ರಯೋಜನಗಳನ್ನು ಈ ಕೆಳಗೆ ಕೊಡಲಾಗಿದೆ:

## ಸಮನ್ವಯತೆಯಿಂದಾಗುವ ಪ್ರಯೋಜನಗಳು

***ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ಇದರಿಂದ ಆಗುವ ಅನುಕೂಲಗಳು***

- ಅಂಗವಿಕಲತೆಗಳಿಲ್ಲದ ಸಹಪಾಠಿಗಳ ಜೊತೆಯಲ್ಲಿ ಕಳೆಯುವ ಶಾಲಾ ದಿನಗಳು ಕೊಡುವ ಸಾಮಾಜಿಕ ಸಂವಾದದ ಅವಕಾಶಗಳು ಪ್ರತ್ಯೇಕ ವ್ಯವಸ್ಥೆಯೊಂದರಲ್ಲಿ ದೊರೆಯಲಾರದು, (ಸಾಸ್ಸೋ, ಸಿಂಪ್ಸನ್ ಮತ್ತು ನೋವಾಕ್, 1985 - Sasso, Simpson & Novak, 1985).
- ವಿಶೇಷ ಶೈಕ್ಷಣಿಕ ಅಗತ್ಯತೆಯುಳ್ಳ ಮಕ್ಕಳು (SEN) ತಮ್ಮದೇ ಆದ ನಡವಳಿಕೆಯ ಮಾದರಿಗಳನ್ನು ಹೊಂದಿರುತ್ತಾರೆ. ಅವರು ಇತರ ಸಾಮಾನ್ಯ ವಿದ್ಯಾರ್ಥಿಗಳಲ್ಲಿ ಕಂಡುಬರುವ ಸಾಮಾಜಿಕವಾಗಿ ಸ್ವೀಕಾರಾರ್ಹವಾದ ನಡವಳಿಕೆಗಳನ್ನು ಗಮನಿಸುವುದರಿಂದ ಅವುಗಳನ್ನು ಅನುಕರಿಸಲು ಅವಕಾಶವಾಗುತ್ತದೆ (ಬ್ರೌನ್ ಮತ್ತು ಇತರರು, 1983, 1989 ಎ - Brown et al., 1983, 1989 a)

- ಶಿಕ್ಷಕರು ಬಹಳಷ್ಟು ಸಲ ವಿಶೇಷ ಶೈಕ್ಷಣಿಕ ಅಗತ್ಯಗಳಿರುವ (SEN) ವಿದ್ಯಾರ್ಥಿಗಳಿಗೂ ಕಾರ್ಯಕ್ಷಮತೆಯ ಉನ್ನತ ಮಾನದಂಡಗಳನ್ನೆ ಅಭಿವೃದ್ಧಿಪಡಿಸುತ್ತಾರೆ.
- ಸಮನ್ವಯ ಶಿಕ್ಷಣದ ವ್ಯವಸ್ಥೆಯಲ್ಲಿ ಕಲಿಸುವ ಸಾಮಾನ್ಯ ವಿದ್ಯಾರ್ಥಿಗಳ ಶಿಕ್ಷಕರಾಗಲಿ, ವಿಶೇಷ ವಿದ್ಯಾರ್ಥಿಗಳ ಶಿಕ್ಷಕರಾಗಲಿ, ಅವರು ಎಲ್ಲ ವಿದ್ಯಾರ್ಥಿಗಳಲ್ಲೂ ಸಮಾನವಾದ ನಡವಳಿಕೆಗಳನ್ನೇ ನಿರೀಕ್ಷಿಸುತ್ತಾರೆ.
- ಆಯಾ ವಯೋಮಾನಕ್ಕೆ ಸೂಕ್ತವಾದ ಶೈಕ್ಷಣಿಕ ವಿಷಯಗಳ ಕ್ರಿಯಾತ್ಮಕ ಅಂಶಗಳ ಅವಕಾಶಗಳನ್ನು ವಿಶೇಷ ಶೈಕ್ಷಣಿಕ ಅಗತ್ಯಗಳಿರುವ ವಿದ್ಯಾರ್ಥಿಗಳಿಗೂ ನೀಡಿ ಕಲಿಸಲಾಗುತ್ತದೆ, ಪ್ರತ್ಯೇಕಿಸಲ್ಪಟ್ಟ ವ್ಯವಸ್ಥೆಯಲ್ಲಿ ಇವುಗಳು ಪಠ್ಯಕ್ರಮದ ಭಾಗವಾಗಿರಲು ಸಾಧ್ಯವೇ ಇರುವುದಿಲ್ಲ (ಉದಾಹರಣೆಗೆ: ವಿಜ್ಞಾನ ಮತ್ತು ಸಮಾಜ ವಿಜ್ಞಾನ).
- ವಿಶೇಷ ಶೈಕ್ಷಣಿಕ ಅಗತ್ಯಗಳಿರುವ ವಿದ್ಯಾರ್ಥಿಗಳು ಸಮನ್ವಯ ಶಿಕ್ಷಣದ ಶಾಲೆಯಲ್ಲಿ ಕಲಿಯುವುದರಿಂದ ತಮ್ಮ ಜೀವನಪರ್ಯಂತ ವೈವಿಧ್ಯಮಯವಾದ ಸಮಗ್ರ ವ್ಯವಸ್ಥೆಯಲ್ಲಿ ನಿರಂತರವಾಗಿ ಭಾಗವಹಿಸುವ ಸಾಧ್ಯತೆಗಳನ್ನು ಹೆಚ್ಚಿಸುತ್ತವೆ (ರಾಂಡಕ್ ಮತ್ತು ಆಲ್ಪರ್, 1996 – Ryndak & Alper, 1996).

***ವಿಶೇಷ ಅಗತ್ಯತೆ ಇರದ ಮಕ್ಕಳಿಗೆ ಆಗುವ ಅನುಕೂಲಗಳು***

- ಸಮನ್ವಯ ಶಿಕ್ಷಣ ವ್ಯವಸ್ಥೆಯಲ್ಲಿ ವಿಶೇಷ ಶೈಕ್ಷಣಿಕ ಅಗತ್ಯಗಳಿಲ್ಲದಿರುವ ವಿದ್ಯಾರ್ಥಿಗಳಿಗೆ ತಮ್ಮ ಸಮವಯಸ್ಕ ಸಹವರ್ತಿಗಳು ಅನುಭವಿಸುವ ವಿಶೇಷ ಶೈಕ್ಷಣಿಕ ಅಗತ್ಯತೆಯ ಸಂದರ್ಭವನ್ನು ಅರಿತು ಅವರೊಂದಿಗೆ ಒಡನಾಡಲು ಸಾಕಷ್ಟು ಅವಕಾಶಗಳು ದೊರೆಯುತ್ತವೆ.
- ಕಲಿಕಾ-ಬೋಧನಾ ಚಟುವಟಿಕೆಗಳ ಸಂದರ್ಭಗಳಲ್ಲಿ ಅವರು ಸಹವರ್ತಿ ನೆರವಿಗರಾಗಿ ಕಲಿಸುವವರ ಪಾತ್ರವನ್ನು ನಿರ್ವಹಿಸಬಹುದು (ಸ್ಲೇವಿನ್, 1990).
- ಅಲ್ಪ ಬಿಡುವಿನಲ್ಲಿ ಮತ್ತು ವಿರಾಮದ ವೇಳೆಗಳಲ್ಲಿ ಅವರು ಪರಸ್ಪರ ಕಲೆತು ಆಟಗಳನ್ನು ಆಡಬಹುದು.
- ಊಟದ ಸಮಯದಲ್ಲಿ, ಬಸ್ಸಿನಲ್ಲಿ ಪ್ರಯಾಣ ಮಾಡುವಾಗ, ಮೈದಾನದಲ್ಲಿ ಆಟ ಆಡುವ ವೇಳೆಯಲ್ಲಿ ಅವರು 'ವಿಶೇಷ ಗೆಳೆಯನ/ಗೆಳತಿಯ' (buddy) ಪಾತ್ರವನ್ನು ವಹಿಸಬಹುದು.
- ವಿಶೇಷ ಶೈಕ್ಷಣಿಕ ಅಗತ್ಯಗಳಿಂದ ಹೊರತಾದ ವಿದ್ಯಾರ್ಥಿಗಳು ವ್ಯಕ್ತಿಗತವಾದ ಭಿನ್ನತೆಗಳು ಇರುವುದನ್ನು, ಮಾನವ ಅಸಾಧಾರಣತೆಯನ್ನು ನೋಡುವ ಬಗೆಯನ್ನು ಮತ್ತು ತಾಳ್ಮೆಯನ್ನು ಕಲಿಯುವರು.
- ಅವರು ಶೈಕ್ಷಣಿಕ ಅಗತ್ಯಗಳಿರುವ ವಿದ್ಯಾರ್ಥಿಗಳಲ್ಲಿರುವ ಕೆಲವು ಅಪೂರ್ವ ಧನಾತ್ಮಕ ಗುಣವಿಶೇಷತೆಗಳನ್ನು ಮತ್ತು ಸಾಮರ್ಥ್ಯಗಳನ್ನು ನೋಡಿ ಕಲಿಯುವರು.
- ವಿಶೇಷ ಶೈಕ್ಷಣಿಕ ಅಗತ್ಯಗಳಿಂದ ಹೊರತಾದ ವಿದ್ಯಾರ್ಥಿಗಳು ವಿಶೇಷ ಶಿಕ್ಷಣ, ವಾಕ್ ಚಿಕಿತ್ಸೆ, ದೈಹಿಕ ಚಿಕಿತ್ಸೆ, ಮನರಂಜನಾ ಚಿಕಿತ್ಸೆ ಮತ್ತು ವೃತ್ತಿಪರ ಪುನರ್ವಸತಿಗಳಂತಹ

ಕೆಲವು ಮಾನವೀಯ ಸೇವಾ ವೃತ್ತಿಗಳ ಕುರಿತು ತಿಳಿದುಕೊಳ್ಳಲು ಅವಕಾಶ ಪಡೆಯುವರು.

- ವಿಶೇಷ ಶೈಕ್ಷಣಿಕ ಅಗತ್ಯಗಳಿಂದ ಹೊರತಾದ ವಿದ್ಯಾರ್ಥಿಗಳು ಸಂವಹನವನ್ನು ಕಲಿಯಲು ಮತ್ತು ವ್ಯಾಪಕವಾಗಿ ಬಗೆಬಗೆಯ ವ್ಯಕ್ತಿಗಳೊಂದಿಗೆ ಪರಿಣಾರಿಯಾಗಿ ವ್ಯವಹರಿಸಲು ಸಮನ್ವಯ ಶಿಕ್ಷಣ ವ್ಯವಸ್ಥೆಯು ಅವಕಾಶ ಒದಗಿಸಿಕೊಡುತ್ತದೆ. ವಯಸ್ಕರಾದಾಗ ಅವರು ಬಹುತ್ವ ಸಮಾಜದಲ್ಲಿ ಸಂಪೂರ್ಣವಾಗಿ ಭಾಗವಹಿಸಲು ಅವರನ್ನು ಇದು ತಯಾರು ಮಾಡುತ್ತದೆ (ರಾಂಡಕ್ ಮತ್ತು ಆಲ್ಪರ್, 1996).

*ಮೂಲ: ವಿಶೇಷ ಅಗತ್ಯತೆಯುಳ್ಳ ಮಕ್ಕಳ ಕುರಿತ ರಾಷ್ಟ್ರೀಯ ಫೋಕಸ್* ***ಗುಂಪಿನ*** *ಪೊಸಿಶನ್ ಪೇಪರ್, ಎನ್ ಸಿ ಇ ಆರ್ ಟಿ, 2006 (NCERT).*

ಸಮನ್ವಯತೆಯ ಸಮಾಜವೊಂದರ ನಿರ್ಮಾಣವು ಪೂರ್ವಾಗ್ರಹಗಳು, ಹಣೆಪಟ್ಟಿಗಳು ಮತ್ತು ಸಾಮಾಜಿಕ ಕಳಂಕಗಳನ್ನು ಪರಿಹರಿಸುವ ಹೋರಾಟವನ್ನು ಒಳಗೊಂಡಿರುತ್ತದೆ. ಪಠ್ಯಕ್ರಮಗಳು, ಬೋಧನಾ ವಿಧಾನಗಳು ಮತ್ತು ವಾತಾವರಣ ನಿರ್ಮಾಣಕ್ಕೆ ಸಂಬಂಧಿಸಿದ ನಡವಳಿಕೆಗಳನ್ನು ಅಳವಡಿಸಿಕೊಳ್ಳುವುದರ ಮೂಲಕ ಸಮನ್ವಯತೆಯ ಶಾಲೆಗಳನ್ನು ಅಭಿವೃದ್ಧಿಪಡಿಸುವುದು ಮಾತ್ರವೇ ಇಲ್ಲಿನ ಗುರಿಯಲ್ಲ. ಶೈಕ್ಷಣಿಕ ಹಂತವನ್ನೂ ಮೀರಿ ಶಾಲೆಗಳು ಮತ್ತು ಸಮುದಾಯಗಳ ನಡುವೆ ಪರಸ್ಪರ ಸುಸ್ಥಿರವಾಗಿರುವಂತಹ ಸಂಬಂಧಗಳನ್ನು ಕಟ್ಟುವ ಮೂಲಕ ಎಲ್ಲರನ್ನೂ ಒಳಗೊಳಿಸಿಕೊಳ್ಳುವಂತಹ ಸಮಾಜವೊಂದರ ನಿರ್ಮಾಣ ಇದರ ಉದ್ದೇಶವಾಗಿದೆ.

## ಭಾರತದಲ್ಲಿ ಸಮನ್ವಯ ಶಿಕ್ಷಣದ ಚಾರಿತ್ರಿಕ ಮೈಲಿಗಲ್ಲು

ಪ್ರತ್ಯೇಕತೆ, ಸಮಗ್ರತೆ ಮತ್ತು ಸಮನ್ವಯ ಶಿಕ್ಷಣದ ಶಾಲೆಗಳನ್ನು ಅಭಿವೃದ್ಧಿಪಡಿಸಲು ಇರಬೇಕಾದ ಕಾರ್ಯತಂತ್ರಗಳನ್ನು ಅರ್ಥಮಾಡಿಕೊಳ್ಳಬೇಕಾದರೆ, ಈ ಬದಲಾವಣೆಯ ನೆಲೆಗಳು ಅಡಗಿರುವ ಚಾರಿತ್ರಿಕ ಸಂದರ್ಭಗಳನ್ನು ಅರ್ಥಮಾಡಿಕೊಳ್ಳುವುದು ಮುಖ್ಯ. ಭಾರತದ ಶಿಕ್ಷಣ ನೀತಿಯು ಬ್ರಿಟಿಶ್ ಆಡಳಿತದಲ್ಲಿ ಮತ್ತು ಸ್ವಾತಂತ್ರ್ಯಾನಂತರದಲ್ಲಿ ಹಲವು ಬಗೆಯಲ್ಲಿ ವ್ಯಾಖ್ಯಾನ ಮರುವ್ಯಾಖ್ಯಾನಗಳಿಗೆ ಒಳಪಟ್ಟಿತು. ಕೆಲವು ಮಹತ್ವದ ಅಭಿವೃದ್ಧಿಯ ಮೈಲಿಗಲ್ಲುಗಳು 'ಎಲ್ಲರಿಗೂ ಶಿಕ್ಷಣ' ಎಂಬ ಆಲೋಚನೆಯನ್ನು ಅನೌಪಚಾರಿಕವಾಗಿ ಬೆಂಬಲಿಸಿ ಹರಳುಗಟ್ಟಿಸಿತು.

ಇವುಗಳಲ್ಲಿ ಮೊದಲನೆಯ ಉಪಕ್ರಮವೇ ಸರ್ ಚಾರ್ಲ್ಸ್ ವುಡ್ ಅವರ ಹೆಸರಿನ 'ವೂಡ್ಸ್ ಡಿಸ್ಪ್ಯಾಚ್ (1854). ಇದು ಪ್ರಾಥಮಿಕ ಶಾಲೆಯಿಂದ ವಿಶ್ವವಿದ್ಯಾಲಯದವರೆಗಿನ ಶಿಕ್ಷಣವು ಹೇಗಿರಬೇಕು ಎಂಬುದರ ಕುರಿತು ಸ್ಪಷ್ಟವಾದ ಚಿತ್ರಣ ನೀಡುವ ಯೋಜನೆಯನ್ನು ರೂಪಿಸುವ ಕಾರ್ಯವನ್ನು ಸರ್ಕಾರದ ಮೇಲೆ ಹೇರಿತು. ಸಾರ್ವಜನಿಕ ಶಿಕ್ಷಣದ ವಿಸ್ತರಣೆ ಮತ್ತು ಬಹು ವ್ಯಾಪಕವಾಗಿ ಹೆಚ್ಚಿನ ಜನರಿಗೆ ಉಪಯುಕ್ತ ಮತ್ತು ಪ್ರಾಯೋಗಿಕ ಜ್ಞಾನವನ್ನು ಒದಗಿಸುವ ಉದ್ದೇಶವನ್ನು ಸಾಧಿಸುವುದು ಹೇಗೆ ಎಂಬುದು ಇಲ್ಲಿ ವ್ಯಕ್ತಗೊಂಡಿರುವ ಕಾಳಜಿಗಳಲ್ಲಿ

ಒಂದಾಗಿದೆ. ಈ ಗುರಿಯನ್ನು ಸಾಧಿಸಲು ಅಗತ್ಯವಿರುವ ಖರ್ಚುವೆಚ್ಚಗಳಿಗಾಗಿ ಗಣನೀಯ ಹೆಚ್ಚಳವನ್ನು ಮಂಜೂರು ಮಾಡಲು ಸರ್ಕಾರ ಸಿದ್ಧವಾಗಿತ್ತು.

ಹಂಟರ್ ಕಮಿಷನ್ ಎಂದೂ ಕರೆಯಲ್ಪಡುತ್ತಿದ್ದ *ಭಾರತೀಯ ಶಿಕ್ಷಣ ಆಯೋಗವು (1982-83)* 'ಬೇರೆಲ್ಲ ವಿಷಯಗಳ ಜೊತೆಗೆ ಶಿಕ್ಷಣ ವ್ಯವಸ್ಥೆಯ ಭಾಗವಾಗಲು ಸಾರ್ವಜನಿಕ ಮೂಲ ಶಿಕ್ಷಣಕ್ಕೆ ಹೆಚ್ಚಿನ ಅವಕಾಶಗಳನ್ನು ಕಲ್ಪಿಸುವುದರ ಮೂಲಕ ಅದರ ವಿಸ್ತರಣೆ ಮತ್ತು ಸುಧಾರಣೆಯ ನಿಟ್ಟಿನಲ್ಲಿ ರಾಜ್ಯಗಳ ಶ್ರಮದಾಯಕ ಪ್ರಯತ್ನಗಳಿಗೆ ಸೂಕ್ತ ನಿರ್ದೇಶನ ನೀಡಬೇಕು' ಎಂದು ಶಿಫಾರಸು ಮಾಡಿದೆ. ಜೊತೆಗೆ, ಮುಂದುವರೆದು :

*"ಸರ್ಕಾರಿ ಶಾಲೆಗಳಾಗಿರಲಿ ಅಥವಾ ಅನುದಾನಿತ ಶಾಲೆಗಳಾಗಿರಲಿ ಎಲ್ಲ ಪ್ರಾಥಮಿಕ ಶಾಲೆಗಳು ಸ್ಥಳೀಯ ಅವಶ್ಯಕತೆಗಳನ್ನು ಪೂರೈಸುವ ನಿಟ್ಟಿನಲ್ಲಿ ಸ್ಥಳೀಕರಣಗೊಳ್ಳುವ ಹಾಗೆ ಆಯಾ ವಿಭಾಗದ ವಿಭಾಗೀಯ ನಿರೀಕ್ಷಕರ ವ್ಯಾಪ್ತಿಯಲ್ಲಿ, ಸರ್ಕಾರಿ ಅಥವಾ ಅನುದಾನಿತ ಸಾಮಾನ್ಯ ಶಾಲೆಗಳ ಸೌಲಭ್ಯ ಒದಗಿಸುವುದನ್ನು ನಾವು ಶಿಫಾರಸು ಮಾಡುತ್ತೇವೆ"* ಎಂದು ಹೇಳಿದೆ.

ಸಾಕಷ್ಟು ಪ್ರಮಾಣದ ಸ್ವಾವಲಂಬನೆ ಸಾಧ್ಯವಿರದ ಸಂಸ್ಥೆಗಳಿಗೆ ಹೆಚ್ಚು ಮೊತ್ತದ ನೆರವನ್ನು ಆಯೋಗವು ಶಿಫಾರಸು ಮಾಡಿತು. ಉದಾಹರಣೆಗೆ, ಬಾಲಕಿಯರ ಶಾಲೆಗಳು ಮತ್ತು ಕೆಳ ಜಾತಿಗಳ ಮತ್ತು ಹಿಂದುಳಿದ ಸಮುದಾಯಗಳ ಶಾಲೆಗಳು. ಮಹಾತ್ಮಾ ಗಾಂಧಿಯವರ ಶೈಕ್ಷಣಿಕ ತತ್ವಚಿಂತನೆಗಳನ್ನು ಆಧರಿಸಿದ *1983ರ ಜಕೀರ್ ಹುಸೇನ್ ಸಮಿತಿಯ ವರದಿ* ಎಂದು ಹೆಸರಾದ *ವಾರ್ಧಾ ಯೋಜನೆ*ಯು, ಮೊತ್ತ ಮೊದಲ ಬಾರಿಗೆ, ಶಿಕ್ಷಣ ಮಾಧ್ಯಮವು ಮಾತೃಭಾಷೆಯಲ್ಲಿ ಇರುವುದರೊಂದಿಗೆ ರಾಷ್ಟ್ರದಾದ್ಯಂತ ಮಕ್ಕಳಿಗೆ ಏಳು ವರ್ಷಗಳ ಕಾಲ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ನೀಡಲು ಶಿಫಾರಸು ಮಾಡಿತು. ಇದು ನಂತರದಲ್ಲಿ ಶಿಕ್ಷಣದ ಕೇಂದ್ರ ಸಲಹಾ ಮಂಡಳಿ ರೂಪಿಸಿದ *ಸಾರ್ಜೆಂಟ್ ವರದಿ 1994* ಎಂದು ಜನಪ್ರಿಯಗೊಂಡ ಶೈಕ್ಷಣಿಕ ಯೋಜನೆಯಲ್ಲಿ ಪ್ರಮುಖವಾಗಿ ಕಾಣಿಸಿಕೊಂಡಿತು. ಈ ವರದಿಯೇ ಆರರಿಂದ ಹದಿನಾಲ್ಕು ವರ್ಷದೊಳಗಿನ ಎಲ್ಲಾ ಬಾಲಕರು ಮತ್ತು ಬಾಲಕಿಯರಿಗೆ ಸಾರ್ವತ್ರಿಕ, ಕಡ್ಡಾಯ ಮತ್ತು ಉಚಿತ ಶಿಕ್ಷಣದ ವ್ಯವಸ್ಥೆಯನ್ನು ಪ್ರಸ್ತಾಪಿಸಿತು. ಇದರ ನಂತರ, ಭಾರತದ ಸಂವಿಧಾನದಲ್ಲಿ ಶಿಕ್ಷಣಕ್ಕೆ ಮಹತ್ವದ ಸ್ಥಾನವನ್ನು ನೀಡಲಾಯಿತು (1950). ಸಂವಿಧಾನದ 45ನೇ ಪರಿಚ್ಛೇದವು ಎಲ್ಲಾ ಮಕ್ಕಳಿಗೆ ಅವರಿಗೆ 14 ವರ್ಷ ವಯಸ್ಸು ತುಂಬುವವರೆಗೆ ಉಚಿತ, ಕಡ್ಡಾಯ ಮತ್ತು ಸಾರ್ವತ್ರಿಕ ಶಿಕ್ಷಣವನ್ನು ಪಡೆಯುವಂತೆ ಮಾಡಲು ರಾಜ್ಯವು ಉತ್ತೇಜನ ನೀಡಲು ಶ್ರಮಿಸುವಂತೆ ವಿಧಿಸಿತು.

ಶ್ರೀಮತಿ ದುರ್ಗಾಬಾಯಿ ದೇಶ್‌ಮುಖ್ ಅಧ್ಯಕ್ಷತೆಯ 1957-59ರ ಮಹಿಳಾ ಶಿಕ್ಷಣದ ರಾಷ್ಟ್ರೀಯ ಸಮಿತಿಯು ಮಹಿಳೆಯರ ಶಿಕ್ಷಣಕ್ಕೆ ವಿಶೇಷ ಆದ್ಯತೆ ನೀಡಿ ಶಿಫಾರಸು ಮಾಡಿತು. ಕಡಿಮೆ ಸಮಯದಲ್ಲಿ ಪುರುಷ ಹಾಗೂ ಮಹಿಳೆಯರ ಶಿಕ್ಷಣದ ನಡುವೆ ಇರುವ ಅಂತರವನ್ನು ಇಲ್ಲವಾಗಿಸಲು ಸಾಧ್ಯವಾದಷ್ಟು ದಿಟ್ಟ ಹಾಗೂ ದೃಢ ಪ್ರಯತ್ನಗಳನ್ನು ಕೈಗೊಳ್ಳಲು ಅದು ಸೂಚಿಸಿತು.

ಕೊಠಾರಿ ಆಯೋಗ (1964-66) ವು ಸಂಪೂರ್ಣ ಶೈಕ್ಷಣಿಕ ವ್ಯವಸ್ಥೆಯನ್ನು ಸಮಗ್ರವಾಗಿ ಪರಿಶೀಲಿಸಿ ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಶಾಲಾ ವ್ಯವಸ್ಥೆಯನ್ನು ಶಿಫಾರಸು ಮಾಡಿತು. ಸಾರ್ವಜನಿಕ ಶಿಕ್ಷಣದ ಸಾಮಾನ್ಯ ಶಾಲಾ ವ್ಯವಸ್ಥೆಯ ಗುರಿಯತ್ತ ಸಾಗಲು ಈ ವರದಿ ಶಿಫಾರಸು ಮಾಡಿತು:

- ಇದು ಜಾತಿ, ಜನಾಂಗ, ಸಮುದಾಯ, ಧರ್ಮ, ಆರ್ಥಿಕ ನಿರ್ಬಂಧಗಳು ಅಥವಾ ಸಾಮಾಜಿಕ ಸ್ಥಾನಮಾನವನ್ನು ಲೆಕ್ಕಿಸದೆ ಎಲ್ಲ ಮಕ್ಕಳಿಗೆ ಮುಕ್ತವಾಗಿರುತ್ತದೆ;
- ಉತ್ತಮ ಶಿಕ್ಷಣಕ್ಕೆ ಪ್ರವೇಶ ಪಡೆಯುವುದು ಸಂಪತ್ತು ಅಥವಾ ವರ್ಗದ ಮೇಲೆ ಆಧರಿಸುವುದಲ್ಲ, ಬದಲಿಗೆ ಅದು ಪ್ರತಿಭೆಯ ಮೇಲೆ ಅವಲಂಬಿತವಾಗಿರುತ್ತದೆ;
- ಇದು ಎಲ್ಲಾ ಶಾಲೆಗಳಲ್ಲಿ ಸಾಕಷ್ಟು ಗುಣಮಟ್ಟ ಇರುವಂತೆ ನೋಡಿಕೊಳ್ಳುತ್ತದೆ ಮತ್ತು ಸಾಕಷ್ಟು ಗುಣಮಟ್ಟದ ಸಂಸ್ಥೆಗಳ ಕನಿಷ್ಠ ಸಮಂಜಸ ಅನುಪಾತವನ್ನು ಒದಗಿಸುತ್ತದೆ;
- ಇದರಲ್ಲಿ ಯಾವುದೇ ಬೋಧನಾ ಶುಲ್ಕ ವಿಧಿಸಲಾಗುವುದಿಲ್ಲ; ಮತ್ತು,
- ಸರಾಸರಿ ಪೋಷಕರ ಅಗತ್ಯಗಳನ್ನು ಇದು ಪೂರೈಸುತ್ತದೆ, ಆದ್ದರಿಂದ ಅವರು ಸಾಮಾನ್ಯವಾಗಿ ತಮ್ಮ ಮಕ್ಕಳನ್ನು ವ್ಯವಸ್ಥೆಯಿಂದ ಹೊರಗಿರುವ ದುಬಾರಿ ಶಾಲೆಗೆ ಕಳುಹಿಸಬೇಕೆಂದು ಭಾವಿಸುವುದಿಲ್ಲ.

ಕೊಠಾರಿ ಆಯೋಗವು ನೆರೆಹೊರೆಯ ಶಾಲೆಗಳ ಪರಿಕಲ್ಪನೆಯನ್ನು ಕೂಡ ಶಿಫಾರಸು ಮಾಡಿತು. ಅದು ಒತ್ತಿ ಹೇಳಿದ ಅಂಶವೆಂದರೆ -

*"ಶಾಲೆಗಳಲ್ಲಿ ಕಾಣುವ ಪ್ರಸ್ತುತ ಸಾಮಾಜಿಕ ವಿಭಜನೆಯನ್ನು ಕಿರಿಯ ಪ್ರಾಥಮಿಕ ಹಂತದಲ್ಲಿ ನೆರೆಹೊರೆ ಶಾಲೆಯ ಪರಿಕಲ್ಪನೆಯನ್ನು ಅಳವಡಿಸಿಕೊಳ್ಳುವುದರ ಮೂಲಕ ನಿರ್ಮೂಲನೆ ಮಾಡಬೇಕು. ಅದರ ಅಡಿಯಲ್ಲಿ ನೆರೆಹೊರೆಯ ಎಲ್ಲಾ ಮಕ್ಕಳು ತಮ್ಮ ಜನವಸತಿ ಪ್ರದೇಶದಲ್ಲಿರುವ ಸ್ಥಳೀಯ ಶಾಲೆಯಲ್ಲೇ ಶಾಲಾ ಶಿಕ್ಷಣವನ್ನು ಪಡೆಯಬೇಕಾಗುತ್ತದೆ".*

1968ರಲ್ಲಿ ಜಾರಿಗೆ ಬಂದ ಮೊದಲನೆಯ ರಾಷ್ಟ್ರೀಯ ಶಿಕ್ಷಣ ನೀತಿ (NPE) ಸಂವಿಧಾನದ ಪರಿಚ್ಛೇದ 45ರ ಅಡಿಯಲ್ಲಿ ನಿರ್ದೇಶಕ ತತ್ವವನ್ನು ಈಡೇರಿಸುವ ಪ್ರಯತ್ನಗಳನ್ನು ಮಾಡುವ ಅಗತ್ಯವನ್ನು ಒತ್ತಿ ಹೇಳಿತು. ಜೊತೆಗೆ, ಇದು ಸಾಮಾಜಿಕ ಒಗ್ಗಟ್ಟು ಮತ್ತು ರಾಷ್ಟ್ರೀಯ ಏಕತೆಯನ್ನು ಪ್ರೋತ್ಸಾಹಿಸಲು ಶೈಕ್ಷಣಿಕ ಅವಕಾಶಗಳ ಸಮೀಕರಣಕ್ಕೆ ಒತ್ತು ನೀಡಿತು. ವಿಶೇಷವಾಗಿ ಇದು ಹೆಣ್ಣುಮಕ್ಕಳ ಶಿಕ್ಷಣ ಮತ್ತು ಹಿಂದುಳಿದ ವರ್ಗಗಳು ಹಾಗೂ ಬುಡಕಟ್ಟು ಜನರ ನಡುವಿನ ಶಿಕ್ಷಣ ಮತ್ತು ಅಭಿವೃದ್ಧಿಗೆ ಸಂಬಂಧಿಸಿದಂತೆ ಕಾಳಜಿ ವಹಿಸಿತು. ವಿಕಲಾಂಗ ಮಕ್ಕಳ ಶಿಕ್ಷಣದ ಕುರಿತ ದೂರದೃಷ್ಟಿಯನ್ನು ಹೀಗೆ ನಿರೂಪಿಸಲಾಗಿದೆ:

*"ದೈಹಿಕ ಮತ್ತು ಮಾನಸಿಕ ವಿಕಲತೆಯುಳ್ಳ ಮಕ್ಕಳಿಗೆ ಶೈಕ್ಷಣಿಕ ಸೌಲಭ್ಯಗಳನ್ನು ವಿಸ್ತರಿಸಬೇಕು ಮತ್ತು ವಿಕಲಾಂಗ ಮಕ್ಕಳಿಗೂ ಸಾಮಾನ್ಯ ಶಾಲೆಗಳಲ್ಲಿಯೇ ಓದಲು ಅನುವು ಮಾಡಿಕೊಡುವ ಸಮಗ್ರ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸಲು ಪ್ರಯತ್ನಿಸಬೇಕು".*

ಮಕ್ಕಳಿಗಾಗಿ ರಾಷ್ಟ್ರೀಯ ನೀತಿಯು (1974) ಕೂಡ ಸಮಾಜದ ದುರ್ಬಲ ವರ್ಗಗಳಿಗೆ ಸೇರಿದ ಭಿಕ್ಷೆ ಬೇಡುವ ಮಕ್ಕಳು ಅಥವಾ ಅಪರಾಧಿಗಳೆಂದು ಗುರುತಿಸಲ್ಪಟ್ಟವರಾಗಿ ಸಾಮಾಜಿಕ ಅಂಗವಿಕಲತೆಯಂತಹ ಸನ್ನಿವೇಶಕ್ಕೆ ತಳ್ಳಲ್ಪಟ್ಟ ಮಕ್ಕಳು, ದೈಹಿಕವಾಗಿ ವಿಕಲಚೇತನರು, ಭಾವನಾತ್ಮಕವಾಗಿ ತೊಂದರೆಗೀಡಾದ ಅಥವಾ ಬುದ್ಧಿಮಾಂದ್ಯ ಮಕ್ಕಳು – ಇವರೆಲ್ಲರಿಗಾಗಿ ಅವಕಾಶದ ಸಮಾನತೆಯನ್ನು ಖಾತರಿಪಡಿಸುವ ದೃಷ್ಟಿಕೋನದಿಂದ ಶಿಫಾರಸುಗಳನ್ನು ಮಾಡಿದೆ.

1968ರ ರಾಷ್ಟ್ರೀಯ ಶಿಕ್ಷಣ ನೀತಿಯ ಮೂಲಕ ಪ್ರಸ್ತಾಪಿಸಲಾದ ಎಲ್ಲಾ ಮಕ್ಕಳಿಗೆ ಉತ್ತಮ ಶೈಕ್ಷಣಿಕ ಅವಕಾಶಗಳನ್ನು ಸೃಷ್ಟಿಸುವ ಪ್ರಾರಂಭಿಕ ಪ್ರಯತ್ನಗಳನ್ನು, 1986ರ ರಾಷ್ಟ್ರೀಯ ಶಿಕ್ಷಣ ನೀತಿಯಲ್ಲಿನ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಗೆ ಹೆಚ್ಚಿನ ಮಹತ್ವ ನೀಡುವ ಮೂಲಕ, ಮತ್ತಷ್ಟು ಬಲಪಡಿಸಲಾಯಿತು. ಹೊಸ ನೀತಿಯು ಒಂದು ನಿರ್ದಿಷ್ಟ ಹಂತದವರೆಗೆ ಜಾತಿ, ಧರ್ಮ, ಸ್ಥಳ ಅಥವಾ ಲಿಂಗ ಇವುಗಳನ್ನೆಲ್ಲ ಲೆಕ್ಕಿಸದೆ ಎಲ್ಲಾ ವಿದ್ಯಾರ್ಥಿಗಳಿಗೂ ತುಲನಾತ್ಮಕವಾಗಿ ಒಂದೇ ಗುಣಮಟ್ಟದ ಶಿಕ್ಷಣ ಸಿಗುವಂತಾಗಬೇಕು ಎಂದು ಸೂಚಿಸುತ್ತದೆ. ಇದುವರೆಗೆ ಸಮಾನತೆ ನಿರಾಕರಿಸಲ್ಪಟ್ಟವರ ನಿರ್ದಿಷ್ಟ ಅಗತ್ಯಗಳನ್ನು ಪೂರೈಸಲು ಸಮಾನತೆಗಾಗಿ ಶಿಕ್ಷಣವನ್ನು ಇದು ಶಿಫಾರಸು ಮಾಡಿತು. ಸಮತೆ ಮತ್ತು ಸಾಮಾಜಿಕ ನ್ಯಾಯ ಇವುಗಳು 1986ರ ರಾಷ್ಟ್ರೀಯ ಶಿಕ್ಷಣ ನೀತಿಯನ್ನು ಪರಿಶೀಲಿಸಲು ಸ್ಥಾಪಿಸಲಾದ *ರಾಮಮೂರ್ತಿ ಪರಿಶೀಲನಾ ಸಮಿತಿಯ* (1990) ಪ್ರಮುಖ ಕಾಳಜಿಯಾಗಿತ್ತು. ಶಿಕ್ಷಣದಲ್ಲಿ ಸಮತೆ ಮತ್ತು ಸಾಮಾಜಿಕ ನ್ಯಾಯವನ್ನು ಸಾಧಿಸಲು ಸಾಮಾನ್ಯ ಶಾಲಾ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಕಲ್ಪನೆಯನ್ನು ಇದು ಪುನರಾವರ್ತಿಸಿತು. ಅಸ್ತಿತ್ವದಲ್ಲಿರುವ ಸರ್ಕಾರಿ, ಸ್ಥಳೀಯ ಸಂಸ್ಥೆ ಮತ್ತು ಸರ್ಕಾರಿ-ಅನುದಾನಿತ ಶಾಲೆಗಳನ್ನು ಗುಣಮಟ್ಟದ ಸುಧಾರಣೆಯ ಮೂಲಕ ನಿಜವಾದ ನೆರೆಹೊರೆಯ ಶಾಲೆಗಳನ್ನಾಗಿ ಪರಿವರ್ತಿಸಲು ಪ್ರಸ್ತಾಪಿಸಿತು.

ಸಮಾನ ಶಿಕ್ಷಣದ ಕಲ್ಪನೆಯು ಪ್ರಾಚೀನ ಬರಹಗಳಲ್ಲಿ ಮುಕ್ತವಾಗಿ ಪ್ರಕಟಗೊಂಡಿರದಿದ್ದರೂ, ಪ್ರತಿ ವ್ಯಕ್ತಿಯೂ ಸಮಾಜದ ಪ್ರಮುಖ ಸದಸ್ಯರಾಗಿರುವ ಸಮನ್ವಯತೆಯಿಂದ ಕೂಡಿದ ಸಮಾಜವೊಂದರ ಕಲ್ಪನೆಯನ್ನು ಹೊಂದಿದ ಪ್ರಾಚೀನ ಸಾಹಿತ್ಯದ ಚಿಂತನೆಗಳು ಮತ್ತು ಟ್ಯಾಗೋರ್ ಹಾಗೂ ಗಾಂಧೀಜಿಯವರ ತತ್ವಚಿಂತನೆಗಳು ಸಮಾನ ಶಿಕ್ಷಣದ ಕಲ್ಪನೆಯನ್ನು ಬೆಂಬಲಿಸಿದವು. ಜೊತೆಗೆ, ಪ್ರತಿ ವ್ಯಕ್ತಿ ಪಡೆಯುವ ಶಿಕ್ಷಣವು ಎಲ್ಲರಿಗೂ ಸಮಾನ ಅವಕಾಶಗಳನ್ನು ಒದಗಿಸುವ ಸಮಾಜವೊಂದನ್ನು ಕಟ್ಟುವ ಒಂದು ಮಾಧ್ಯಮವಾಗಿತ್ತು.

ಹಲವು ನೀತಿನಿರೂಪಣೆಗಳು ನೀಡಿದ ಶಿಫಾರಸುಗಳ ಆಧಾರದಲ್ಲಿ ಮತ್ತು ಶಿಕ್ಷಣವನ್ನು ವಿಕೇಂದ್ರೀಕರಣಗೊಳಿಸುವ ಉದ್ದೇಶದಿಂದ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು (UPE – Universalization of Primary Education) ಸಾಧಿಸಲು 1993ರಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಕಾರ್ಯಕ್ರಮ (DPEP-ಡಿಪಿಇಪಿ) ಎಂಬ ರಾಷ್ಟ್ರೀಯ ಉಪಕ್ರಮವನ್ನು ಪ್ರಾರಂಭಿಸಲಾಯಿತು. ಲಿಂಗ ಮತ್ತು ಸಾಮಾಜಿಕ ಗುಂಪುಗಳ ಆಧಾರದಲ್ಲಿ ಶಾಲಾ ದಾಖಲಾತಿ, ಶಾಲೆ ತೊರೆಯುವಿಕೆ ಮತ್ತು ಕಲಿಕಾ ಸಾಧನೆಗಳಲ್ಲಿ ಇರುವ ವ್ಯತ್ಯಾಸವನ್ನು ಕಡಿಮೆ ಮಾಡುವುದು; ಒಟ್ಟಾರೆಯಾಗಿ

ಪ್ರಾಥಮಿಕ ಹಂತದಲ್ಲಿಯೇ ಮಕ್ಕಳು ಶಾಲೆಯನ್ನು ತೊರೆಯುವ ಪ್ರಮಾಣವನ್ನು ಕಡಿಮೆ ಮಾಡುವುದು; ಸರಾಸರಿ ಸಾಧನೆಯ ಮಟ್ಟವನ್ನು ಹೆಚ್ಚಿಸುವುದು ಮತ್ತು ಎಲ್ಲಾ ಮಕ್ಕಳಿಗೆ ಪ್ರಾಥಮಿಕ ಶಾಲೆಗೆ ಅಥವಾ ಅದಕ್ಕೆ ಸಮಾನವಾದ ಇತರ ಅನೌಪಚಾರಿಕ ಶಿಕ್ಷಣಕ್ಕೆ ಪ್ರವೇಶವನ್ನು ಒದಗಿಸುವುದು ಇದರ ಪ್ರಮುಖ ಉದ್ದೇಶಗಳಾಗಿದ್ದವು.

ಸಮುದಾಯ-ಒಡೆತನದ ಶಾಲಾ ವ್ಯವಸ್ಥೆಯ ಮೂಲಕ ಪ್ರಾಥಮಿಕ ಶಿಕ್ಷಣವನ್ನು (ಯುಇಇ-UEE) ಸಾರ್ವತ್ರೀಕರಣಗೊಳಿಸುವ ಪ್ರಯತ್ನದಲ್ಲಿ 2001-2022ರಲ್ಲಿ ಜಿಲ್ಲಾ ಪ್ರಾಥಮಿಕ ಶಿಕ್ಷಣ ಯೋಜನೆಗಳನ್ನು (ಡಿಪಿಇಪಿ-DPEP) ಸರ್ವಶಿಕ್ಷಣ ಅಭಿಯಾನ (ಎಸ್ಎಸ್ಎ-SSA) ಎಂಬ ಒಂದೇ ಕಾರ್ಯಕ್ರಮದ ಅಡಿಯಲ್ಲಿ ತರಲಾಯಿತು. ಇದು ದೇಶದಾದ್ಯಂತ ಗುಣಮಟ್ಟದ ಮೂಲಭೂತ ಶಿಕ್ಷಣದ ಬೇಡಿಕೆಗೆ ದೊರೆತ ಪ್ರತಿಸ್ಪಂದನೆಯಾಗಿದ್ದು, ಮೂಲಭೂತ ಶಿಕ್ಷಣದ ಮೂಲಕ ಸಾಮಾಜಿಕ ನ್ಯಾಯವನ್ನು ಉತ್ತೇಜಿಸುವ ಒಂದು ಅವಕಾಶವಾಯಿತು. ವಾಸ್ತವವಾಗಿ, ಈ ಕಾರ್ಯಕ್ರಮವು ಕಪ್ಪು ಹಲಗೆ ಯೋಜನೆ, ಶಿಕ್ಷಕರ ಪ್ರಶಿಕ್ಷಣ, ಅನೌಪಚಾರಿಕ ಶಿಕ್ಷಣ (ಶಿಕ್ಷಣ ಖಾತರಿ ಶಾಲೆಗಳು, ಪರ್ಯಾಯ ಶಾಲಾ ಸೌಲಭ್ಯಗಳು, ಬಾಲಕಿಯರ ಶಿಕ್ಷಣ ಶಿಬಿರಗಳು, ಮರಳಿ ಬಾ ಶಾಲೆಗೆ, ಇತ್ಯಾದಿ), ಮಹಿಳಾ ಸಮಾಖ್ಯಾ ಕಾರ್ಯಕ್ರಮ, ಪ್ರಾಥಮಿಕ ಶಿಕ್ಷಣಕ್ಕಾಗಿ ಪೌಷ್ಠಿಕಾಂಶ ಬೆಂಬಲದ ರಾಷ್ಟ್ರೀಯ ಕಾರ್ಯಕ್ರಮ, ಬಿಹಾರ-ರಾಜಾಸ್ಥಾನ- ಉತ್ತರ ಪ್ರದೇಶ-ಆಂಧ್ರ ಪ್ರದೇಶ ಈ ನಾಲ್ಕು ರಾಜ್ಯಗಳಲ್ಲಿ ರಾಜ್ಯ ನಿರ್ದಿಷ್ಟ ಪ್ರಾಥಮಿಕ ಶಿಕ್ಷಣ ಯೋಜನೆಗಳು, 18 ರಾಜ್ಯಗಳ 248 ಜಿಲ್ಲೆಗಳಲ್ಲಿ ಡಿಪಿಇಪಿ ಕಾರ್ಯಕ್ರಮ ಮತ್ತು ಲೋಕ್ ಜಂಬಿಶ್ ಯೋಜನೆ[1] – ಇವುಗಳೆಲ್ಲವನ್ನು ತನ್ನ ರೆಕ್ಕೆಗಳಡಿ ವಿಲೀನಗೊಳಿಸಿಕೊಂಡ ಒಂದು ವಿಸ್ತಾರವಾದ ಕಾರ್ಯಕ್ರಮವಾಗಿದೆ.

ಅದರೊಂದಿಗೆ, ಮಾನವ ಅಭಿವೃದ್ಧಿ ಸಚಿವಾಲಯವು ತನ್ನ ಸಚಿವಾಲಯದ ಕೆಳಗೆ ಬರುವ ಎಲ್ಲ ಇಲಾಖೆಗಳು ಅವು ಪ್ರಾರಂಭಿಸಿರುವ ವಿವಿಧ ಉಪಕ್ರಮಗಳ ಮೂಲಕ ಜಾರಿಯಲ್ಲಿ ತರುವಂತೆ ಅಂಗವಿಕಲ ಮಕ್ಕಳು ಮತ್ತು ಯುವಜನರಿಗಾಗಿ 2005ರಲ್ಲಿ ಸಮಗ್ರ ಯೋಜನೆಯೊಂದನ್ನು ರೂಪಿಸಿತು. ಇದೇ ಹಾದಿಯಲ್ಲಿ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (ಎನ್‌ಸಿಇಆರ್‌ಟಿ – NCERT, 2005) ಸಮನ್ವಯ ಶಿಕ್ಷಣದತ್ತ ತನ್ನ ಬದ್ಧತೆಯನ್ನು ಎತ್ತಿ ತೋರಿತು. ಅದು ಹೇಳಿದ ಮಾತು ಈ ಕೆಳಗಿನಂತಿದೆ:

*ಕೊಠಾರಿ ಆಯೋಗ ನಾಲ್ಕು ದಶಕಗಳ ಹಿಂದೆ ಪ್ರತಿಪಾದಿಸಿದ್ದ ಸಾಮಾನ್ಯ ಶಾಲಾ ಶಿಕ್ಷಣದ ಆದರ್ಶವು ಸಂವಿಧಾನದಲ್ಲಿ ಎತ್ತಿಹಿಡಿಯಲಾಗಿರುವ ಮೌಲ್ಯಗಳನ್ನು ಪ್ರತಿಫಲಿಸುವುದರ ಮೂಲಕ ಇಂದಿಗೂ ಮಾನ್ಯವೆಂದು ಪರಿಗಣಿಸಲ್ಪಟ್ಟು ಮುಂದುವರೆದಿದೆ. ಶಾಲೆಗಳು ಸಂತಸ ಮತ್ತು ನಿರಾಳತೆಯನ್ನು ಅನುಭವಿಸುವ ಸಂಸ್ಕೃತಿಯನ್ನು ತಮ್ಮ ವಾತಾವರಣದಲ್ಲಿ ರೂಪಿಸಿದರೆ ಮಾತ್ರ ಪ್ರತಿ ಮಗುವೂ ಈ ಮೌಲ್ಯಗಳನ್ನು ಬೆಳೆಸುವಲ್ಲಿ ಯಶಸ್ವಿಯಾಗುತ್ತವೆ. ಶಿಕ್ಷಣ ಮೂಲಭೂತ ಹಕ್ಕಾಗಿರುವುದರಿಂದ ಈ ಆದರ್ಶ ಈಗ ಇನ್ನೂ ಹೆಚ್ಚು ಪ್ರಸ್ತುತವಾಗಿದ್ದು, ಮೊದಲ ತಲೆಮಾರಿನ ಕಲಿಕಾರ್ಥಿಗಳು ಶಾಲೆಗಳಲ್ಲಿ ಲಕ್ಷಾಂತರ ಸಂಖ್ಯೆಯಲ್ಲಿ ದಾಖಲಾಗಿರುವುದನ್ನು ಇದು ಸೂಚಿಸುತ್ತದೆ. ಅವರನ್ನು ಶಾಲೆಯಲ್ಲಿ ಉಳಿಸಿಕೊಳ್ಳಬೇಕಾದರೆ,*

[1] http://www.math.tifr.res.in/~vvaish/shared/data/sarva-shiksha-abhiyan-talk.pdf

*ಸಾಮರ್ಥ್ಯ, ವ್ಯಕ್ತಿತ್ವ ಅಥವಾ ಮಹತ್ವಾಕಾಂಕ್ಷೆಯ ಯಾವುದೇ ಮಾನದಂಡಗಳಿಗೆ ತಕ್ಕಂತೆ ಕಾರ್ಯಕ್ಷಮತೆ ತೋರಿಸಲು ಸಾಧ್ಯವಾಗದ ಅನೇಕ ಮಕ್ಕಳಿದ್ದಾರೆ ಎಂಬುದನ್ನು ಈ ಹೊಸ ಸನ್ನಿವೇಶದಲ್ಲಿ ಖಾಸಗಿ ವಲಯವೂ ಸೇರಿದಂತೆ ಶಿಕ್ಷಣ ವ್ಯವಸ್ಥೆಯು ಗುರುತಿಸಬೇಕು. ವಿಭಿನ್ನ ಸಾಮಾಜಿಕ-ಆರ್ಥಿಕ ಮತ್ತು ಸಾಂಸ್ಕೃತಿಕ ಹಿನ್ನೆಲೆಯ ಮತ್ತು ವಿವಿಧ ಹಂತದ ಸಾಮರ್ಥ್ಯದ ಹೆಣ್ಣು ಹಾಗೂ ಗಂಡು ಮಕ್ಕಳು ಒಟ್ಟಿಗೆ ಅಧ್ಯಯನ ಮಾಡುವಾಗ ತರಗತಿ ವಾತಾವರಣವು ಸಮೃದ್ಧ ಹಾಗೂ ಸ್ಫೂರ್ತಿದಾಯಕವಾಗುತ್ತದೆ ಎಂಬುದನ್ನು ಶಾಲಾ ಆಡಳಿತಗಾರರು ಮತ್ತು ಶಿಕ್ಷಕರು ಅರಿತುಕೊಳ್ಳಬೇಕು.*

ವಿಶೇಷ ಅಗತ್ಯವಿರುವ ಮಕ್ಕಳು, ಅಂಚಿಗೆ ತಳ್ಳಲ್ಪಟ್ಟಿರುವ ವಿಭಾಗಗಳ ಮಕ್ಕಳು ಮತ್ತು ಶಾಲೆಯ ಒಳ ಹೊರಗೆ ಜೀವನದ ಎಲ್ಲಾ ರಂಗಗಳಲ್ಲೂ ಕಷ್ಟಕರ ಸನ್ನಿವೇಶಗಳಲ್ಲಿ ಬದುಕುತ್ತಿರುವ ಮಕ್ಕಳೆಲ್ಲರೂ ಸೇರಿದಂತೆ ಎಲ್ಲ ಮಕ್ಕಳ ಭಾಗವಹಿಸುವಿಕೆಯ ಪ್ರಾಮುಖ್ಯವನ್ನು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005 ಒತ್ತಿಹೇಳುತ್ತದೆ.

*ವಿದ್ಯಾರ್ಥಿಗಳು ಲಿಂಗ ಅಥವಾ ಜಾತಿ, ಬುಡಕಟ್ಟು ಅಥವಾ ಅಲ್ಪ ಸಂಖ್ಯಾತ ಗುಂಪಿಗೆ ಸೇರಿರುವುದರ ಆಧಾರದಲ್ಲಿ ಅನ್ಯಾಯವಾಗಿ ನಡೆಸಿಕೊಳ್ಳುವುದಕ್ಕೆ ಒಳಗಾಗದಂತೆ ಮತ್ತು ಅವರಿಗೆ ಅವಕಾಶಗಳು ನಿರಾಕರಿಸಲ್ಪಡದಂತೆ ಸಮತೆಯಿಂದ ಕೂಡಿದ ತರಗತಿಯ ವಾತಾವರಣವನ್ನು ಸೃಷ್ಟಿಸುವ ಮಹತ್ವದ ಕುರಿತು ಶಾಲೆಗಳು ಎಚ್ಚರದಿಂದಿರಬೇಕು. ಮತ್ತೊಂದೆಡೆಯಲ್ಲಿ ಶಾಲೆಗಳು ಮಕ್ಕಳನ್ನು 'ಕಲಿಕಾರ್ಥಿಗಳು' ಎಂದು ಗುರುತಿಸಿ ಮತ್ತು ಪ್ರತಿ ಮಗುವಿನ ಸಾಮರ್ಥ್ಯ ಮತ್ತು ಆಸಕ್ತಿಗಳನ್ನು ಹೆಚ್ಚಿಸುವ ವಾತಾವರಣವನ್ನು ಸೃಷ್ಟಿಸುವಲ್ಲಿ ಮುಂದಿದ್ದು, ಶಾಲೆಯ ಸಂಸ್ಕೃತಿಯು ಈ ಎಲ್ಲವುಗಳಲ್ಲಿ ವಿದ್ಯಾರ್ಥಿಗಳನ್ನು ಬೆಂಬಲಿಸುವಂತೆ ಇರಬೇಕು.*

**ಸಮನ್ವಯ ಶಿಕ್ಷಣವೆಂದರೆ ಅದು ಎಲ್ಲ ಮಕ್ಕಳನ್ನೂ ಅಂಗೀಕರಿಸಿಕೊಳ್ಳುವ ಒಂದು ಶಿಕ್ಷಣ ವ್ಯವಸ್ಥೆಯಾಗಿದೆ.**

ಅಂತಿವಾಗಿ, ಸಮನ್ವಯ ಶಿಕ್ಷಣ ಉಪಕ್ರಮವನ್ನು ಮತ್ತಷ್ಟು ಬಲಪಡಿಸಲು, ಉಚಿತ ಮತ್ತು ಕಡ್ಡಾಯ ಶಿಕ್ಷಣ ಕುರಿತ 2009ರ ಮಕ್ಕಳ ಹಕ್ಕುಗಳ ಕಾಯ್ದೆ, ದೈಹಿಕ ಅಸಾಮರ್ಥ್ಯವುಳ್ಳ ಮಕ್ಕಳನ್ನು ಒಳಗೊಂಡಂತೆ ಆರರಿಂದ ಹದಿನಾಲ್ಕು ವರ್ಷ ವಯಸ್ಸಿನ ಎಲ್ಲ ಮಕ್ಕಳಿಗೆ ಉಚಿತ ಮತ್ತು ಕಡ್ಡಾಯ ಶಿಕ್ಷಣವನ್ನು ಒದಗಿಸುತ್ತದೆ.

## ನಿರಂತರ ಮತ್ತು ಸಮಗ್ರ ಮೌಲ್ಯಮಾಪನ

*ನಾವು ಮೌಲ್ಯಮಾಪನ ಮಾಡುವಾಗ ಶಾಲೆಯನ್ನು ಕೇಂದ್ರವಾಗಿರಿಸಿಕೊಂಡು ಅದನ್ನು ಮಾಡುವುದರತ್ತ ಸಾಕಷ್ಟು ಬದಲಾವಣೆ ಮಾಡಿಕೊಳ್ಳುವ ಅವಶ್ಯಕತೆ ಇದೆ ಮಾತ್ರವಲ್ಲ, ಅಂತಹ ಆಂತರಿಕ ಮೌಲ್ಯಮಾಪನಗಳನ್ನು ಹೆಚ್ಚು ನಂಬಿಕೆಗೆ ಅರ್ಹವಾಗಿಸುವ ಮಾರ್ಗಗಳನ್ನು*

*ರೂಪಿಸಿಕೊಳ್ಳಬೇಕಾಗಿದೆ. ಪ್ರತಿ ಶಾಲೆಯು ಮೊದಲನೆಯದಾಗಿ ಸಮಸ್ಯೆಯನ್ನು ಗುರುತಿಸುವ, ಅದಕ್ಕೆ ಪರಿಹಾರ ಕಂಡುಕೊಳ್ಳುವ ಮತ್ತು ಕಲಿಕೆಯನ್ನು ಹೆಚ್ಚಿಸುವ ನಿಟ್ಟಿನಲ್ಲಿ ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಕೈಗೊಳ್ಳಲು ಸಾಧ್ಯವಾಗಿಸುವ ಯೋಜನೆಗಳನ್ನು ಅಭಿವೃದ್ಧಿಪಡಿಸಬೇಕು. ಯೋಜನೆಯು ಸಾಮಾಜಿಕ ಪರಿಸರ ಮತ್ತು ಶಾಲೆಯಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಗಣನೆಗೆ ತೆಗೆದುಕೊಳ್ಳಬೇಕು.*

(ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005, ಪುಟ 115)

ಮಗುವನ್ನು ಸಹಜ ಕಲಿಕಾರ್ಥಿಯಂತೆ ಮತ್ತು ತಾನು ಕಟ್ಟಿಕೊಳ್ಳುವ ಜ್ಞಾನವು ಮಗುವಿನ ಸ್ವಯಂ ಚಟುವಟಿಕೆಗಳ ಫಲದಂತೆ ಪರಿಭಾವಿಸಬೇಕೆಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಶಿಫಾರಸು ಮಾಡಿತು. ಶಿಕ್ಷಣ ವ್ಯವಸ್ಥೆಯು ವಿದ್ಯಾರ್ಥಿಗಳಿಗೆ ಪ್ರಯತ್ನಿಸುವ, ನಿರ್ವಹಿಸುವ, ತಪ್ಪುಗಳನ್ನು ಎಸಗುವ ಮತ್ತು ತನ್ನ ತಪ್ಪುಗಳನ್ನು ತಾನೇ ಸರಿಪಡಿಸಿಕೊಳ್ಳುವ ಅವಕಾಶವನ್ನು ಸೃಷ್ಟಿಸಿಕೊಡತಕ್ಕದ್ದು ಎಂಬ ಚಿಂತನೆಯೊಂದಿಗೆ, ಇದು ರಚನಾತ್ಮಕತೆಯನ್ನೇ ಪ್ರಮುಖ ಆಶಯವನ್ನಾಗಿ ಹೊಂದಿದ ಮಕ್ಕಳು ಹೇಗೆ ಕಲಿಯುತ್ತಾರೆ ಎಂಬುದರ ಒಟ್ಟಾರೆ ಮರುವ್ಯಾಖ್ಯಾನವನ್ನು ಆಧರಿಸಿದೆ. ಇದರಿಂದ ಸಹಜ ಪರಿಣಾಮವಾಗಿ, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಮೌಲ್ಯಮಾಪನ ಮತ್ತು ಮೌಲ್ಯಮಾಪನ ವ್ಯವಸ್ಥೆಯಲ್ಲಿ ಆಮೂಲಾಗ್ರ ಬದಲಾವಣೆಗೆ ಕರೆ ನೀಡಿತು. ಈ ಹಿನ್ನೆಲೆಯಲ್ಲಿ ನಿರಂತರ ಸಮಗ್ರ ಮೌಲ್ಯಮಾಪನದ ಪರಿಕಲ್ಪನೆಯು ಹೊರಹೊಮ್ಮಿತು. ಕಲಿಕೆ ಮತ್ತು ಮೌಲ್ಯಮಾಪನದ ಪ್ರಕ್ರಿಯೆಯ ಮರು ಪರಿಶೀಲನೆಗೆ ದೇಶದಾದ್ಯಂತ ಹಲವು ವ್ಯಕ್ತಿಗಳು ಮತ್ತು ಸಂಸ್ಥೆಗಳು ತಮ್ಮದೇ ಆದ ಪ್ರಯತ್ನಗಳನ್ನು ಮಾಡಿದ್ದರೂ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಅದನ್ನು ವ್ಯಾಪಕ ಹರಹಿನಲ್ಲಿ ನೀತಿ ನಿರೂಪಕರು, ಶಿಕ್ಷಣ ತಜ್ಞರು ಮತ್ತು ಒಟ್ಟು ಸಮುದಾಯದ ಗಮನಕ್ಕೆ ತಂದಿತು. ಅಲ್ಲಿಂದೀಚೆಗೆ, ದೇಶದಾದ್ಯಂತ ರಾಜ್ಯ ಸರ್ಕಾರಗಳು ಈ ಕುರಿತು ಹಲವಾರು ಸುತ್ತಿನ ಮಾತುಕತೆಗಳನ್ನು ನಡೆಸಿವೆ. ನಿರಂತರ ಸಮಗ್ರ ಮೌಲ್ಯಮಾಪನದ ಪರಿಕಲ್ಪನೆಯನ್ನು ಎಳೆ ಎಳೆಯಾಗಿ ಬಿಡಿಸಿ ನೋಡಲು, ಅರ್ಥಮಾಡಿಕೊಳ್ಳಲು ಪ್ರಯತ್ನಿಸಿವೆ ಮತ್ತು ಆಯಾ ಸಂದರ್ಭಗಳಲ್ಲಿ ಕೈಗೊಳ್ಳಲು ಸಾಧ್ಯವಾಗುವ ನಿರಂತರ ಸಮಗ್ರ ಮೌಲ್ಯಮಾಪನದ ವ್ಯವಸ್ಥೆಗಳನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯಲ್ಲಿವೆ.

ಮೌಲ್ಯಮಾಪನವು ಕಲಿಕೆಗೆ ಇರುವ ತೊಂದರೆಗಳನ್ನು ಗುರುತಿಸಿ ಅವುಗಳ ನಿವಾರಣೆಗೆ ದಾರಿ ಮಾಡಿಕೊಡಬೇಕು ಎಂಬ ನಂಬಿಕೆ ಸಾಮಾನ್ಯವಾಗಿ ಪ್ರಾಯೋಗಿಕವಲ್ಲ ಮತ್ತು ಕಲಿಕಾ-ಬೋಧನಾ ಪ್ರಕ್ರಿಯೆಯ ಸರಿಯಾದ ತಿಳುವಳಿಕೆಯ ಮೇಲೆ ಅದು ನೆಲೆಗೊಂಡಿಲ್ಲ. ಪರಿಕಲ್ಪನಾತ್ಮಕ ಬೆಳವಣಿಗೆಗೆ ಸಂಬಂಧಿಸಿದ ಸಮಸ್ಯೆಗಳನ್ನು ಗುರುತಿಸಲು ಸಾಮಾನ್ಯ ಪರೀಕ್ಷೆಗಳ ತನಕ ಕಾಯುವುದು ಸಾಧ್ಯವಲ್ಲ ಮತ್ತು ಅದನ್ನು ನಿರೀಕ್ಷಿಸಲೂ ಕೂಡದು. ಶಿಕ್ಷಕರು ಪಾಠಗಳನ್ನು ಮಾಡುವ ಸಮಯದಲ್ಲಿಯೇ ಮಕ್ಕಳನ್ನು ಆಲೋಚನೆಗೆ ಹಚ್ಚುವ ಪ್ರಶ್ನೆಗಳನ್ನು ಕೇಳುವುದರ ಮೂಲಕ ಅಥವಾ ಅವರಿಗೆ ಸಣ್ಣಸಣ್ಣ ಕಾರ್ಯಯೋಜನೆಗಳನ್ನು ವಹಿಸಿಕೊಡುತ್ತ

ಅವರನ್ನು ಗಮನಿಸುವುದರ ಮೂಲಕ ಅವುಗಳನ್ನು ಅರ್ಥಮಾಡಿಕೊಳ್ಳಲು ಪ್ರಯತ್ನಿಸಬಹುದು (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು 2005, ಪುಟ 73).

ನಿರಂತರ ಮತ್ತು ಸಮಗ್ರ ಮೌಲ್ಯಮಾಪನವನ್ನು ಅರ್ಥಪೂರ್ಣವಾದ ಏಕಮಾತ್ರ ಮೌಲ್ಯಮಾಪನ ವಿಧಾನವೆಂದು ಆಗಾಗ್ಗೆ ಉಲ್ಲೇಖಿಸಲಾಗುತ್ತದೆ. ಇದನ್ನು ವ್ಯವಸ್ಥೆಯಲ್ಲಿ ಪರಿಣಾಮಕಾರಿಯಾಗಿ ಯಾವ ಸಮಯದಲ್ಲಿ ಬಳಸಿಕೊಳ್ಳಬೇಕು ಎನ್ನುವುದರ ಕುರಿತು ಹೆಚ್ಚಿನ ಎಚ್ಚರಿಕೆಯಿಂದ ಯೋಚಿಸಬೇಕಾದ ಅಗತ್ಯವಿದೆ. ಇದು ಅರ್ಥಪೂರ್ಣವಾಗಿ ಕಾರ್ಯಗತಗೊಳ್ಳಬೇಕಾದರೆ ಮತ್ತು ಒಂದು ಮೌಲ್ಯಮಾಪನವಾಗಿ ವಿಶ್ವಾಸಾರ್ಹತೆಯನ್ನು ಹೊಂದಿರಬೇಕಾದರೆ, ಈ ಮೌಲ್ಯಮಾಪನವು ಶಿಕ್ಷಕರ ಸಮಯ ಮತ್ತು ನಿಖರವಾದ ದಾಖಲಾತಿ ನಿರ್ವಹಣಾ ಸಾಮರ್ಥ್ಯವನ್ನು ಅಪೇಕ್ಷಿಸುತ್ತದೆ. ಹಾಗಲ್ಲದೆ, ಇದು ಮಕ್ಕಳ ಮೇಲಿನ ಒತ್ತಡವನ್ನು ಹೆಚ್ಚಿಸುವುದಾದರೆ, ಅವರ ಎಲ್ಲ ಚಟುವಟಿಕೆಗಳನ್ನೂ ಮೌಲ್ಯಮಾಪನದ ಸರಕಿನ ಮಟ್ಟಕ್ಕೆ ಇಳಿಸುವುದಾದರೆ ಅಥವಾ ಶಿಕ್ಷಕರ ಅಧಿಕಾರಕ್ಕೆ ಮಕ್ಕಳು ಸಂಪೂರ್ಣ ಒಳಪಡುವಂತೆ ಮಾಡುವುದಾದರೆ ಆಗ ಶಿಕ್ಷಣದ ಒಟ್ಟಾರೆ ಉದ್ದೇಶವೇ ಸೋತಂತಾಗುತ್ತದೆ. ಇಂತಹ ಮೌಲ್ಯಮಾಪನವೊಂದಕ್ಕೆ ವ್ಯವಸ್ಥೆ ಸಮರ್ಪಕವಾಗಿ ಸಜ್ಜುಗೊಳ್ಳದ ಹೊರತು ಶಿಕ್ಷಕರು ಹೆಚ್ಚು ಸೀಮಿತವಾದ ಮೌಲ್ಯಮಾಪನದಲ್ಲಿ ತೊಡಗಿಸಿಕೊಳ್ಳುವುದು ಉತ್ತಮ. ಆದರೆ, ಮೌಲ್ಯಮಾಪನದಲ್ಲಿ ಹೆಚ್ಚಿನ ವಿಶೇಷ ಅಂಶಗಳನ್ನು ಸೇರಿಸುವ ಮೂಲಕ ಅದನ್ನು ಕಲಿಕೆಯ ಒಂದು ಅರ್ಥಪೂರ್ಣ ದಾಖಲೆಯನ್ನಾಗಿ ಮಾಡಬಹುದಾಗಿದೆ (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005, ಪುಟ 76).

ತಮ್ಮ ಮೌಲ್ಯಮಾಪನ ವಿಧಾನಗಳನ್ನು ನಿರಂತರ ಸಮಗ್ರ ಮೌಲ್ಯಮಾಪನಕ್ಕೆ ಪರಿವರ್ತಿಸಿಕೊಳ್ಳಲು ಶಾಲೆಗಳು ಅಲ್ಲಲ್ಲಿ ಪ್ರಯತ್ನಿಸುತ್ತಿರುವ ಕೆಲವು ವರದಿಗಳಿದ್ದರೂ, ತರಗತಿಯ ಮಟ್ಟದಲ್ಲಿ ಸತತವಾಗಿ ಇವು ಸವಾಲುಗಳನ್ನು ಎದುರಿಸುತ್ತಿರುವುದು ಕಂಡುಬರುತ್ತಿದೆ. ದೇಶದಾದ್ಯಂತ ನಡೆದಿರುವ ಅನ್ವೇಷಣೆಯ ಹಲವು ಪ್ರಯತ್ನಗಳ ಮೇಲೆ ರೂಪುಗೊಂಡ ಈ ಪರಿಕಲ್ಪನಾ ಟಿಪ್ಪಣಿಯು ಬದಲಾವಣೆಯ ಸಾಧ್ಯತೆಗಳನ್ನು ತೋರಿದ ನಿರಂತರ ಸಮಗ್ರ ಮೌಲ್ಯಮಾಪನ ವ್ಯವಸ್ಥೆಯ ಒಂದು ವಿಧಾನವನ್ನು ನಿರೂಪಿಸಲು ಪ್ರಯತ್ನಿಸುತ್ತದೆ (ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005, ಪುಟ 76).

## ಅಂತರರಾಷ್ಟ್ರೀಯ ಮಟ್ಟದ ಬದಲಾವಣೆಗಳು

ಅಂತರರಾಷ್ಟ್ರೀಯ ಮಟ್ಟದಲ್ಲಿ ಸಮನ್ವಯತೆಯ ತತ್ವಚಿಂತನೆಗಳು ಮತ್ತು ಅದರ ಕಾರ್ಯತಂತ್ರಗಳು ಹಲವು ಪ್ರಮುಖ ಅಂತರರಾಷ್ಟ್ರೀಯ ಘೋಷಣೆಗಳಿಂದ ಹುಟ್ಟಿಕೊಂಡವು ಮತ್ತು ಅದು ಭಾರತದಲ್ಲಿನ ಸನ್ನಿವೇಶದ ಮೇಲೆ ಕೂಡ ತನ್ನ ಪ್ರಭಾವ ಬೀರಿತು. ಮಾನವ ಹಕ್ಕುಗಳ ಸಾರ್ವತ್ರಿಕ ಘೋಷಣೆ (1948) ಜಗತ್ತಿನ ಪ್ರತಿಯೊಬ್ಬರಿಗೂ ಶಿಕ್ಷಣದ ಹಕ್ಕನ್ನು ನೀಡಿದೆ. ಪರಿಚ್ಛೇದ 26(1)ರ ಅಡಿಯಲ್ಲಿ ಪ್ರಾಥಮಿಕ ಮತ್ತು ಆರಂಭಿಕ ಹಂತಗಳಲ್ಲಿ ಪ್ರಾಥಮಿಕ ಶಿಕ್ಷಣವು ಉಚಿತ ಮತ್ತು ಕಡ್ಡಾಯವಾಗಿರಬೇಕು ಎಂದು ಹೇಳಲಾಗಿದೆ. ತಮ್ಮ ಮಕ್ಕಳಿಗೆ ತಾವು ಬಯಸಿದ ರೀತಿಯ ಶಿಕ್ಷಣವನ್ನು ಆಯ್ಕೆ ಮಾಡುವ ಸಂಪೂರ್ಣ ಹಕ್ಕನ್ನು ಇದು ಪೋಷಕರಿಗೆ ನೀಡಿದೆ.

ಆದಾಗ್ಯೂ, ವಿಕಲಾಂಗ ವ್ಯಕ್ತಿಗಳ ಹಕ್ಕುಗಳ ಕುರಿತ ವಿಶ್ವ ಸಂಸ್ಥೆಯ ಘೋಷಣೆ (1975) ವಿಕಲಾಂಗ ವ್ಯಕ್ತಿಗಳ ವಿಶೇಷ ಅಗತ್ಯಗಳನ್ನು ಸ್ಪಷ್ಟವಾಗಿ ಗುರುತಿಸುವ ಮತ್ತು ವಿಕಲಾಂಗ ವ್ಯಕ್ತಿಗಳನ್ನು ಸಾಮಾನ್ಯ ಜೀವನಕ್ಕೆ ಒಳಗೊಳಿಸುವುದನ್ನು ಉತ್ತೇಜಿಸುವ ಮೊದಲ ಘೋಷಣೆಯಾಗಿ ಹೊರಹೊಮ್ಮಿತು.

**ಸಾಮಾಜಿಕ ವರ್ತನೆಗಳೇ…ಬಹುಶ: ಭಾಗವಹಿಸುವಿಕೆ ಮತ್ತು ಸಮಾನತೆಗೆ ಬಹು ದೊಡ್ಡ ತಡೆಗೋಡೆಯಾಗಬಹುದು,** ವರ್ಲ್ಡ್ ಪ್ರೋಗ್ರಾಮ್ ಆಫ್ ಆಕ್ಷನ್, 1982

"ಸಾಧ್ಯವಾದಾಗಲೆಲ್ಲಾ ಶಿಕ್ಷಣವು ಸಾಮಾನ್ಯ ಶಾಲಾ ವ್ಯವಸ್ಥೆಯಲ್ಲೇ ನಡೆಯಬೇಕು" ಎಂದು 1982ರಲ್ಲಿ ವರ್ಲ್ಡ್ ಪ್ರೋಗ್ರಾಮ್ ಆಫ್ ಆಕ್ಷನ್ (WPA) ಹೇಳಿದೆ (ವಿಶ್ವ ಸಂಸ್ಥೆ(UN), 1982, ಪುಟ 3). ಈ ಸಲಹೆಯನ್ನು 1990ರಲ್ಲಿ ಮಕ್ಕಳ ಹಕ್ಕುಗಳ ಸಮಾವೇಶದಲ್ಲಿ (CRC – Conventions of the Rights of the Child) ಎಲ್ಲೆಲ್ಲಿ ಎತ್ತಿ ಹಿಡಿಯಲು ಸಾಧ್ಯವೋ ಅಲ್ಲೆಲ್ಲ ಪುನರಾವರ್ತಿಸಲಾಯಿತು. ಪರಿಚ್ಛೇದ 23 ಅಂಗವಿಕಲ ಮಕ್ಕಳಿಗೆ ಪ್ರವೇಶ ಪಡೆಯುವ ಮತ್ತು ಎಲ್ಲರೊಂದಿಗೆ ಒಳಗೊಳ್ಳುವ ಹಕ್ಕಿದೆ ಎಂದು ಮಕ್ಕಳ ಹಕ್ಕುಗಳ ಸಮಾವೇಶದಲ್ಲಿ (CRC – Conventions of the Rights of the Child) ಘೋಷಿಸಿತು. ಆದರೆ ಈ ಹಕ್ಕುಗಳು 'ಸಂಪನ್ಮೂಲಗಳ ಲಭ್ಯತೆಗೆ ಅನುಗುಣವಾಗಿರಬೇಕು ಮತ್ತು ಮಗುವಿನ ಸ್ಥಿತಿಗೆ ಸೂಕ್ತವಾಗಿರಬೇಕು' (ವಿಶ್ವ ಸಂಸ್ಥೆ, 1989 - UN). ಸಾಮಾಜಿಕ ಜೀವನದ ಪ್ರತಿಯೊಂದು ಕ್ಷೇತ್ರದಲ್ಲೂ ವಿಕಲಾಂಗ ವ್ಯಕ್ತಿಗಳ ಸಂಪೂರ್ಣ ಭಾಗವಹಿಸುವಿಕೆಗೆ ಅಗತ್ಯವಾದ ರೀತಿಯಲ್ಲಿ ಪರಿಸರವನ್ನು ಮಾರ್ಪಡಿಸುವುದಕ್ಕೆ ಸಮಾಜವನ್ನು ಹೊಣೆಯನ್ನಾಗಿಸುವ *ಯುಎನ್ ಸ್ಟಾಂಡರ್ಡ್ ರೂಲ್ಸ್ (1993)* ಶಿಕ್ಷಣವನ್ನು ಕುರಿತ ತನ್ನ ನಿಯಮ 6ರಲ್ಲಿ ಅಂಗವೈಕಲ್ಯದ ಮಾದರಿಯು ವೈದ್ಯಕೀಯ ಮಾದರಿಯಿಂದ ಸಾಮಾಜಿಕ ಮಾದರಿಯ ಕಡೆಗೆ ಚಲಿಸುವಂತೆ ಮಾಡಿತು. ಆದರೂ ಈ ನಿಯಮಗಳಲ್ಲಿನ ಗಮನವೆಲ್ಲ ಶಿಕ್ಷಣಕ್ಕೆ ಮಕ್ಕಳು ಪ್ರವೇಶ ಪಡೆಯುವುದು ಮತ್ತು ಸಮಾನತೆಯನ್ನು ಸಾಧಿಸುವುದರ ಕಡೆಗೆ ಇತ್ತು.

1990ರ *ಜಾಮ್ಟಿಯನ್ ವರ್ಲ್ಡ್ ಡಿಕ್ಲರೇಶನ್ ಆನ್ ಎಜ್ಯುಕೇಶನ್ ಫಾರ್ ಆಲ್ (EAF)*ನ ನಂತರ ಬಂದ *ಡಕಾರ್ ವರ್ಲ್ಡ್ ಎಜ್ಯುಕೇಶನ್ ಫೋರಮ್:* 2000 ಜಾಗತಿಕ ಮಟ್ಟದಲ್ಲಿ ಇದುವರೆಗೆ ಕೈಗೊಂಡ ಮೂಲಶಿಕ್ಷಣದ ಅತ್ಯಂತ ಆಳವಾದ ಮೌಲ್ಯಮಾಪನಗಳಲ್ಲಿ ಒಂದಾಗಿದೆ. ಇದೇ ಸಂದರ್ಭದಲ್ಲಿ 2015ರ ವೇಳೆಗೆ ಪ್ರತಿಯೊಂದು ಹೆಣ್ಣು ಮತ್ತು ಗಂಡು ಮಗುವೂ ಪ್ರಾಥಮಿಕ ಶಿಕ್ಷಣಕ್ಕೆ ಪ್ರವೇಶ ಪಡೆಯಬೇಕು ಎಂಬ ಸಾರ್ವತ್ರಿಕ ಪ್ರವೇಶದ ಗುರಿಯನ್ನು ಅಳವಡಿಸಿಕೊಳ್ಳಲಾಯಿತು.

ಪ್ರಮುಖವಾದ ಇವೆರಡೂ ಅಂತರರಾಷ್ಟ್ರೀಯ ಬೆಳವಣಿಗೆಗಳಿಗೆ ಭಾರತ ಸಹಿ ಹಾಕಿದ್ದು, ಎಲ್ಲಾ ಮಕ್ಕಳು ಶಾಲೆಯಲ್ಲಿ ಕಲಿಯಲು ಮತ್ತು ಯಶಸ್ಸನ್ನು ಸಾಧಿಸಲು, ಘನತೆ ಮತ್ತು ಆತ್ಮವಿಶ್ವಾಸವನ್ನು ಅನುಭವಿಸಲು ಅನುವು ಮಾಡಿಕೊಡುವ ಪ್ರಮುಖ ಕಾರ್ಯತಂತ್ರಗಳಲ್ಲಿ ಒಂದು ಎಂದು ಸಮನ್ವಯ ಶಿಕ್ಷಣವನ್ನು ಪರಿಗಣಿಸಲಾಗಿದೆ. ಇದರಲ್ಲಿ ಹೆಣ್ಣುಮಕ್ಕಳು ಮತ್ತು ವಿಕಲಾಂಗ ಮಕ್ಕಳಂತಹ ಅಂಚಿಗೆ ಸರಿಸಲ್ಪಟ್ಟ ದುರ್ಬಲ ಗುಂಪುಗಳು ಸೇರಿದ್ದವು.

*ಡಕಾರ್ ಫ್ರೇಮ್‌ವರ್ಕ್ ಫಾರ್ ಆಕ್ಷನ್* ಇದನ್ನು ಹೀಗೆ ಸ್ಪಷ್ಟಪಡಿಸಿದೆ: "ವಿಶೇಷ ಅಗತ್ಯವುಳ್ಳ ಮಕ್ಕಳು, ಅನನುಕೂಲಕರ ಸನ್ನಿವೇಶದಲ್ಲಿ ಬದುಕುತ್ತಿರುವ ಜನಾಂಗೀಯ ಅಲ್ಪಸಂಖ್ಯಾತ ವರ್ಗ ಮತ್ತು ವಲಸೆ ಜನಸಮೂಹಕ್ಕೆ ಸೇರಿದ ಮಕ್ಕಳು, ಬಹುದೂರದ ಕುಗ್ರಾಮಗಳು, ನಗರದ ಕೊಳೆಗೇರಿಗಳಿಗೆ ಸೇರಿದ ಮಕ್ಕಳು, ಮತ್ತಿತರ ಶಿಕ್ಷಣದಿಂದ ದೂರ ಇರಿಸಲ್ಪಟ್ಟ ಮಕ್ಕಳು ಇವರೆಲ್ಲರೂ 2015ರ ವೇಳೆಗೆ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣವನ್ನು (UPE-Universalisation of Primary Education) ಸಾಧಿಸುವ ಕಾರ್ಯತಂತ್ರದಲ್ಲಿ ಸಮಗ್ರ ಶಿಕ್ಷಣದ ಅವಿಭಾಜ್ಯ ಅಂಗಗಳಾಗಿರಬೇಕು".

ಇದರ ಪ್ರಮುಖ ಅಂಶಗಳು ಮತ್ತು ತತ್ವಗಳು - ಕಲಿಕೆಗೆ ಸಾರ್ವತ್ರಿಕ ಪ್ರವೇಶ, ಸಮತೆಯ ಮೇಲೆ ಹೆಚ್ಚಿನ ಗಮನ, ಕಲಿಕೆಯ ಫಲಿತಾಂಶಗಳ ಕಡೆಗೆ ಒತ್ತು, ಮೂಲ ಶಿಕ್ಷಣದ ವಿಧಾನಗಳು ಮತ್ತು ವ್ಯಾಪ್ತಿಯನ್ನು ವಿಸ್ತರಿಸುವುದು, ಕಲಿಕೆಯನ್ನು ಬೆಂಬಲಿಸುವ ಸೂಕ್ತ ಪರಿಸರವನ್ನು ಮತ್ತಷ್ಟು ಅಭಿವೃದ್ಧಿಪಡಿಸುವುದು, ಮತ್ತು ಪಾಲುದಾರಿಕೆಗಳನ್ನು ಬಲಪಡಿಸುವುದು – ಇವುಗಳನ್ನು ಒಳಗೊಂಡಿದ್ದವು.

*ಸದಸ್ಯ ರಾಷ್ಟ್ರಗಳು ವಿಕಲಾಂಗ ವ್ಯಕ್ತಿಗಳಿಗೆ ಸಮಾನ ಶೈಕ್ಷಣಿಕ ಅವಕಾಶಗಳ ತತ್ವವನ್ನು ಸಮಗ್ರವಾದ ಶೈಕ್ಷಣಿಕ ವ್ಯವಸ್ಥೆಗಳಲ್ಲಿ ಗುರುತಿಸಬೇಕು. ವಿಕಲಾಂಗ ವ್ಯಕ್ತಿಗಳ ಶಿಕ್ಷಣವು ಶೈಕ್ಷಣಿಕ*

*ವ್ಯವಸ್ಥೆಯ ಅವಿಭಾಜ್ಯ ಅಂಗ ಎಂಬುದನ್ನು ರಾಜ್ಯಗಳು ಖಾತರಿಪಡಿಸಿಕೊಳ್ಳಬೇಕು. ವಿಕಲಾಂಗ ವ್ಯಕ್ತಿಗಳ ಅಗತ್ಯಗಳನ್ನು ಪೂರೈಸಲು ವಿನ್ಯಾಸಗೊಳಿಸಲಾಗಿರುವ ಸಾಕಷ್ಟು ಶಾಲಾ ಪ್ರವೇಶದ ಮತ್ತು ಬೆಂಬಲ ಸೇವೆಗಳ ಅವಕಾಶಗಳನ್ನು ಅವರಿಗೆ ಒದಗಿಸಿಕೊಡಬೇಕು. ಶಿಕ್ಷಣವು ಕಡ್ಡಾಯವಾಗಿರುವ ರಾಜ್ಯಗಳಲ್ಲಿ, ಅತ್ಯಂತ ತೀವ್ರ ತೆರನಾದವುಗಳನ್ನು ಒಳಗೊಂಡಂತೆ ಎಲ್ಲ ಬಗೆಯ ಮತ್ತು ಎಲ್ಲ ಹಂತದ ವಿಕಲತೆಯನ್ನು ಹೊಂದಿರುವ ಹೆಣ್ಣು ಮತ್ತು ಗಂಡು ಮಕ್ಕಳಿಗೆ ಶಿಕ್ಷಣವನ್ನು ಒದಗಿಸಿಕೊಡುವ ವ್ಯವಸ್ಥೆ ಮಾಡಬೇಕು. ಸಮಗ್ರ ಶಿಕ್ಷಣ ಮತ್ತು ಸಮುದಾಯ ಆಧಾರಿತ ಕಾರ್ಯಕ್ರಮಗಳನ್ನು ಮಿತವ್ಯಯ ಮತ್ತು ಹೆಚ್ಚು ಪರಿಣಾಮಕಾರಿಯಾದ ಶಿಕ್ಷಣ ಮತ್ತು ತರಬೇತಿಯ ಪೂರಕ ವಿಧಾನಗಳನ್ನಾಗಿ ಪರಿಗಣಿಸಬೇಕು. ಇಷ್ಟೆಲ್ಲದರ ಬಳಿಕವೂ ಸಾಮಾನ್ಯ ಶಾಲಾ ವ್ಯವಸ್ಥೆಯು ಎಲ್ಲ ವಿಕಲಾಂಗ ವ್ಯಕ್ತಿಗಳ ಅಗತ್ಯಗಳನ್ನು ಪೂರೈಸದಿದ್ದ ಸಂದರ್ಭದಲ್ಲಿ ವಿಶೇಷ ಶಿಕ್ಷಣವನ್ನು ಪರಿಗಣಿಸಬಹುದು. ಸಾಮಾನ್ಯ ಶಾಲಾ ವ್ಯವಸ್ಥೆಯಲ್ಲೇ ಶಿಕ್ಷಣಕ್ಕಾಗಿ ವಿದ್ಯಾರ್ಥಿಗಳನ್ನು ಸಿದ್ಧಪಡಿಸುವ ಗುರಿಯನ್ನು ಹೊಂದಿರಬೇಕು. ಅಂತಹ ಶಿಕ್ಷಣದ ಗುಣಮಟ್ಟ ಸಾಮಾನ್ಯ ಶಿಕ್ಷಣದ ರೀತಿಯಲ್ಲಿಯೇ ಅವೇ ಮಾನದಂಡಗಳು ಮತ್ತು ಮಹತ್ವಾಕಾಂಕ್ಷೆಗಳನ್ನು ಪ್ರತಿಬಿಂಬಿಸುವಂತಿರಬೇಕು ಮತ್ತು ಅದರೊಂದಿಗೆ ನಿಕಟ ಸಂಬಂಧವನ್ನು ಹೊಂದಿರಬೇಕು.*

***ವಿಕಲಾಂಗ ವ್ಯಕ್ತಿಗಳಿಗಾಗಿ ಅವಕಾಶಗಳ ಸಮೀಕರಣ ಕುರಿತ ವಿಶ್ವಸಂಸ್ಥೆಯ ಪ್ರಮಾಣಿತ ನಿಯಮಗಳು***

***(UN Standard Rules on the Equalization of Opportunities or Persons with Disabilities)***

***ಎಲ್ಲರಿಗೂ ಶಿಕ್ಷಣ ಎಂಬ ಜಾಮ್ಟಿಯನ್ ವಿಶ್ವ ಘೋಷಣೆ (1990)***

***Jomtien World Declaration on Education for All (1990)***

***ಜಾಮ್ಟಿ**ಯನ್ ವಿಶ್ವ ಘೋಷಣೆಯಲ್ಲಿ ಅಂಗೀಕೃತವಾದ ತತ್ವಚಿಂತನೆಯು ಈ ಕೆಳಗಿನ ಹೇಳಿಕೆಗಳನ್ನು ಒಳಗೊಂಡಿದೆ:*

- *ಮಕ್ಕಳು, ಯುವಜನರು ಮತ್ತು ವಯಸ್ಕರು ಸೇರಿದಂತೆ ಪ್ರತಿಯೊಬ್ಬರೂ ಅವರ ಮೂಲಭೂತ ಕಲಿಕೆಯ ಅಗತ್ಯಗಳನ್ನು ಪೂರೈಸಿಕೊಳ್ಳಲು ವಿನ್ಯಾಸಗೊಳಿಸಲಾದ ಶೈಕ್ಷಣಿಕ ಅವಕಾಶಗಳಿಂದ ಪ್ರಯೋಜನ ಪಡೆಯಲು ಸಾಧ್ಯವಾಗಬೇಕು.*

*ಅಂಗವಿಕಲರ ಕಲಿಕೆಯ ಅಗತ್ಯಗಳು ವಿಶೇಷ ಗಮನವನ್ನು ಬೇಡುತ್ತವೆ. ಶಿಕ್ಷಣ ವ್ಯವಸ್ಥೆಯ ಅವಿಭಾಜ್ಯ ಅಂಗವಾಗಿ ಪ್ರತಿ ವರ್ಗದ ಅಂಗವಿಕಲರಿಗೆ ಸಮಾನ*

- *ಶಿಕ್ಷಣವನ್ನು ಒದಗಿಸಲು ಕ್ರಮಗಳನ್ನು ಕೈಗೊಳ್ಳಬೇಕಾಗಿದೆ.*

ಎಲ್ಲರಿಗೂ ಶಿಕ್ಷಣ (1990) ಎಂಬ ಶಿಕ್ಷಣದ ಕುರಿತ *ಜಾಮ್ಟಿಯನ್ ವಿಶ್ವ ಘೋಷಣೆಯ* ಸಂದೇಶಗಳಿಂದ ಹುಟ್ಟಿಕೊಂಡ *ಸಾಲಾಮಾಂಕಾ ಹೇಳಿಕೆ ಮತ್ತು ಕ್ರಿಯಾ ಚೌಕಟ್ಟು* (the

Salamanca Statement and the Framework of Action) *ವಿಶೇಷ ಅಗತ್ಯವುಳ್ಳವರ ಶಿಕ್ಷಣದ ವಿಶ್ವ ಸಮ್ಮೇಳನ* (World Conference on Special Needs) ಅಂಗೀಕರಿಸಿತು. ಇದನ್ನು ಸ್ಪೇನ್ ಸರ್ಕಾರ ಮತ್ತು ಯುನೆಸ್ಕೋ (UNESCO) ಜಂಟಿಯಾಗಿ ಸ್ಪೇನ್‌ನ ಸಾಲಾಮಾಂಕಾದಲ್ಲಿ ಆಯೋಜಿಸಿತು.

ಈ ಸಮ್ಮೇಳನದಲ್ಲಿ 92 ಸರ್ಕಾರದ ಪ್ರತಿನಿಧಿಗಳು ಮತ್ತು 25 ಅಂತರರಾಷ್ಟ್ರೀಯ ಸಂಸ್ಥೆಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ಎಲ್ಲರಿಗೂ ಶಿಕ್ಷಣ ಎಂಬ ಬದ್ಧತೆಯೊಂದಿಗೆ ಇಲ್ಲಿನ ಹೇಳಿಕೆ ಪ್ರಾರಂಭವಾಗುತ್ತದೆ. ಸಮ್ಮೇಳನದಲ್ಲಿ ಮತ್ತೆ ಮತ್ತೆ ಕೇಳಿಬಂದ ಪ್ರಮುಖ ವಿಧಾನವೆಂದರೆ ಸಮನ್ವಯ ಶಿಕ್ಷಣ. ಅದು ಹೀಗಿದೆ:

*"ಸಮನ್ವಯತೆಯ ದೃಷ್ಟಿಕೋನವನ್ನು ಹೊಂದಿರುವ ಸಾಮಾನ್ಯ ಶಾಲೆಗಳು ತಾರತಮ್ಯದ ವರ್ತನೆಗಳನ್ನು ಎದುರಿಸುವಲ್ಲಿ, ಎಲ್ಲರನ್ನೂ ತನ್ನ ತೆಕ್ಕೆಗೆ ತೆಗೆದುಕೊಳ್ಳುವಂತಹ ಸಮುದಾಯಗಳನ್ನು ರೂಪಿಸುವಲ್ಲಿ, ಸಮನ್ವಯತೆಯ ಸಮಾಜವೊಂದನ್ನು ಕಟ್ಟುವಲ್ಲಿ ಪರಿಣಾಮಕಾರಿ ಸಾಧನಗಳಾಗಿರುತ್ತವೆ. ಅದಕ್ಕಿಂತಲೂ ಹೆಚ್ಚಾಗಿ ಅವುಗಳು ಹೆಚ್ಚಿನ ಮಕ್ಕಳಿಗೆ ಪರಿಣಾಮಕಾರಿ ಶಿಕ್ಷಣವನ್ನು ಒದಗಿಸುತ್ತವೆ, ದಕ್ಷತೆಯನ್ನು ಹೆಚ್ಚಿಸುತ್ತವೆ ಮತ್ತು ಇಡೀ ಶಿಕ್ಷಣ ವ್ಯವಸ್ಥೆಯಲ್ಲಿ ಅಂತಿಮವಾಗಿ ಮಿತವ್ಯಯದೊಂದಿಗೆ ಹೆಚ್ಚಿನ ಪರಿಣಾಮಕಾರಿತ್ವವನ್ನು ತರುವ ಪರಿಣಾಮಕಾರಿ ಸಾಧನಗಳಾಗಿರುತ್ತವೆ".*

***ಸಾಲಾಮಾಂಕಾ ಸಮ್ಮೇಳನವು ಎಲ್ಲಾ ಸರ್ಕಾರಗಳಿಗೆ ಹೀಗೆ ಕರೆ ನೀಡಿತು:***

- *ಶೈಕ್ಷಣಿಕ ಸೇವೆಗಳನ್ನು ಸುಧಾರಿಸಲು 'ಉನ್ನತ ನೀತಿ ನಿರೂಪಣೆಗೆ ಮತ್ತು ಹಣಕಾಸು ಮೀಸಲಿರಿಸುವಿಕೆಗೆ ಆದ್ಯತೆ' ನೀಡಿ, ಇದರಿಂದ ಎಲ್ಲ ಮಕ್ಕಳು ಯಾವುದೇ ವ್ಯತ್ಯಾಸಗಳಿಲ್ಲದೆ ಅಥವಾ ತೊಂದರೆಗಳನ್ನು ಲೆಕ್ಕಿಸದೆ ಶಿಕ್ಷಣದ ಅವಕಾಶ ಪಡೆಯಬಹುದು.*
- *ಸಮನ್ವಯ ಶಿಕ್ಷಣದ ತತ್ವವನ್ನು ಕಾನೂನು ಅಥವಾ ನೀತಿ ನಿರೂಪಣೆಗಳ ವಿಷಯವನ್ನಾಗಿ ಅಳವಡಿಸಿಕೊಳ್ಳಿ ಮತ್ತು ಪ್ರತ್ಯೇಕ ವ್ಯವಸ್ಥೆ ಮಾಡಲು ಬಲವಾದ ಕಾರಣಗಳಿಲ್ಲದಿರುವಾಗ ಎಲ್ಲ ಮಕ್ಕಳನ್ನೂ ಸಾಮಾನ್ಯ ಶಾಲೆಗಳಿಗೇ ದಾಖಲಿಸಿ.*
- *ಪ್ರಾಯೋಗಿಕ ಯೋಜನೆಗಳನ್ನು ಅಭಿವೃದ್ಧಿಪಡಿಸಿ ಮತ್ತು ಸಮನ್ವಯ ಶಾಲೆಗಳನ್ನು ಹೊಂದಿರುವ ದೇಶಗಳೊಂದಿಗೆ ವಿಚಾರ ವಿನಿಮಯ ಮಾಡಿಕೊಳ್ಳಿ.*
- *ಅಂಗವಿಕಲರ ಸಂಸ್ಥೆಗಳು ಪೋಷಕರು ಮತ್ತು ಸಮುದಾಯ ಆಧಾರಿತ ಸಂಸ್ಥೆಗಳ ಜೊತೆಗೂಡಿ ಯೋಜನೆ ತಯಾರಿ ಮತ್ತು ನಿರ್ಧಾರ ಕೈಗೊಳ್ಳುವಲ್ಲಿ ತೊಡಗಿಸಿಕೊಳ್ಳುವುದನ್ನು ಖಾತರಿಪಡಿಸಿಕೊಳ್ಳಿ.*
- *ಶಾಲಾಪೂರ್ವ ಶಿಕ್ಷಣ ಕಾರ್ಯತಂತ್ರಗಳು ಮತ್ತು ಸಮನ್ವಯ ಶಿಕ್ಷಣದಲ್ಲಿ ವೃತ್ತಿಪರ ಅಂಶಗಳಿಗೆ ಹೆಚ್ಚಿನ ಪ್ರಯತ್ನ ಹಾಕಿ.*

*ಶಿಕ್ಷಕರ ಆರಂಭಿಕ ಪ್ರಶಿಕ್ಷಣ ಮತ್ತು ಸೇವಾನಿರತ ಶಿಕ್ಷಕರ ಪ್ರಶಿಕ್ಷಣ ಇವೆರಡರಲ್ಲೂ ಸಮನ್ವಯ ಶಿಕ್ಷಣದ ಅವಕಾಶಗಳ ಕುರಿತು ಅಳವಡಿಸುವುದನ್ನು ಖಾತರಿಪಡಿಸಿಕೊಳ್ಳಿ.*

ಇದಾದ ನಂತರ, ***ಸಹಸ್ರಮಾನದ ಘೋಷಣೆ*** *(Millennium Declaration)* ಯನ್ನು 189 ರಾಷ್ಟ್ರಗಳು ಅಳವಡಿಸಿಕೊಂಡವು. ಸೆಪ್ಟೆಂಬರ್ 2000 ರಲ್ಲಿ ***ವಿಶ್ವ ಸಂಸ್ಥೆಯ ಸಹಸ್ರಮಾನದ ಶೃಂಗಸಭೆಯ*** (UN Millennium Summit) ಸಂದರ್ಭದಲ್ಲಿ 147 ರಾಜ್ಯಗಳು ಮತ್ತು ಸರ್ಕಾರಗಳ ಮುಖ್ಯಸ್ಥರು ಇದಕ್ಕೆ ಸಹಿ ಹಾಕಿದರು. ಹೊಸ ಜಾಗತಿಕ ಪಾಲುದಾರಿಕೆಯು ಬಡತನದ ತೀವ್ರತೆಯನ್ನು ತಗ್ಗಿಸಲು ಮತ್ತು 2015ರ ಒಳಗಾಗಿ ಸಾಧಿಸಲು ಸಾಧ್ಯವಾಗುವಂತಹ ಅವಧಿ ನಿಗದಿತ ಗುರಿಗಳ ಸರಣಿಯನ್ನು ಜೋಡಿಸುವುದರತ್ತ ತನ್ನ ಗಮನವನ್ನು ಕೇಂದ್ರೀಕರಿಸಿತು. *ಸಹಸ್ರಮಾನದ ಅಭಿವೃದ್ಧಿ ಗುರಿಗಳಲ್ಲಿ* (MDGs) ಎಂಟು ಗುರಿಗಳನ್ನು ಸಾಧಿಸಲು ನಿಗಡಿಪಡಿಸಿಕೊಳ್ಳಲಾಗಿತ್ತು.

ಮೇಲ್ವಿಚಾರಣಾ ಸೂಚಕಗಳ ವಿಶ್ಲೇಷಣೆಯ ಪ್ರಕಾರ ಪ್ರಾಥಮಿಕ ಶಿಕ್ಷಣದ ಸಾರ್ವತ್ರೀಕರಣದ ನಿಟ್ಟಿನಲ್ಲಿ ಪ್ರಗತಿ ಸಾಧಿಸಲಾಗಿದ್ದರೂ, ಭಾರತವು ಒಂದು ದೇಶವಾಗಿ ಈ ಗುರಿಗಳನ್ನು ಸಾಧಿಸುವಲ್ಲಿ ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದಲ್ಲಿ ಮಾತ್ರವಲ್ಲದೆ, ಪ್ರಾಥಮಿಕ ಶಾಲೆಗಳಲ್ಲಿ ಹೆಣ್ಣುಮಕ್ಕಳ ಸಮಾನ ದಾಖಲಾತಿ ಮತ್ತು ಯುವಕ-ಯುವತಿಯರ ಸಾಕ್ಷರತೆಯ ಪ್ರಮಾಣದ ವಿಷಯಕ್ಕೆ ಸಂಬಂಧಿಸಿದಂತೆ ಹಿಂದೆ ಬಿದ್ದಿರುವುದು ದುರಂತ.

ಸಹಸ್ರಮಾನದ ಅಭಿವೃದ್ಧಿ ಗುರಿಗಳು (MDG)
ಗುರಿ 1 : ತೀವ್ರವಾದ ಬಡತನ ಮತ್ತು ಹಸಿವಿನ ನಿರ್ಮೂಲನೆ
ಗುರಿ 2: ಸಾರ್ವತ್ರಿಕ ಪ್ರಾಥಮಿಕ ಶಿಕ್ಷಣದ ಸಾಧನೆ: 2015ರ ಹೊತ್ತಿಗೆ ಎಲ್ಲೆಡೆ ಹೆಣ್ಣು ಮತ್ತು ಗಂಡು ಮಕ್ಕಳು ಸೇರಿದಂತೆ ಎಲ್ಲ ಮಕ್ಕಳು ಸಮಾನವಾಗಿ ಪ್ರಾಥಮಿಕ ಹಂತದ ಶಿಕ್ಷಣವನ್ನು ಸಂಪೂರ್ಣಗೊಳಿಸುವುದು
ಗುರಿ 3: ಲಿಂಗ ಸಮಾನತೆಗೆ ಉತ್ತೇಜನ ಮತ್ತು ಮಹಿಳಾ ಸಬಲೀಕರಣ: ಪ್ರಾಥಮಿಕ ಶಾಲೆಗಳಲ್ಲಿ ಬಾಲಕಿಯರ ಸಮಾನ ದಾಖಲಾತಿ, ಪ್ರೌಢ ಶಾಲೆಗಳಲ್ಲಿ ಬಾಲಕಿಯರ ಸಮಾನ ದಾಖಲಾತಿ, ಯುವತಿ ಮತ್ತು ಯುವಕರ ಸಾಕ್ಷರತಾ ಪ್ರಮಾಣದಲ್ಲಿ ಸಮಾನತೆ
ಗುರಿ 4: ಶಿಶು ಮರಣವನ್ನು ಕಡಿಮೆಗೊಳಿಸುವುದು
ಗುರಿ 5: ತಾಯಂದಿರ ಆರೋಗ್ಯದಲ್ಲಿ ಸುಧಾರಣೆ ತರುವುದು
ಗುರಿ 6: ಹೆಚ್ ಐ ವಿ/ಏಡ್ಸ್, ಮಲೇರಿಯಾ ಮತ್ತು ಇತರ ರೋಗಗಳ ವಿರುದ್ಧ ಹೋರಾಟ
ಗುರಿ 7: ಸುಸ್ಥಿರ ಪರಿಸರವನ್ನು ಖಾತರಿಪಡಿಸುವುದು
ಗುರಿ 8: ಅಭಿವೃದ್ಧಿಗಾಗಿ ಜಾಗತಿಕ ಪಾಲುದಾರಿಕೆಯನ್ನು ಅಭಿವೃದ್ಧಿಪಡಿಸುವುದು

ನಂತರ, *ಬಿವಾಕೊ ಸಹಸ್ರಮಾನದ ಕ್ರಿಯೆಗಾಗಿ ಚೌಕಟ್ಟು, 2002* (Biwako Millennium Framework for Action, 2002) ಇದರ ಮೇಲೆ ಆಧಾರಗೊಂಡಿರುವ *ಸಮನ್ವಯತೆಗಾಗಿ ಭಾರತೀಯ ಸಮಗ್ರ ಕ್ರಿಯಾ ಯೋಜನೆ* (Indian Comprehensive Plan of Action for Inclusion) ಯು ಏಷಿಯಾ ಮತ್ತು ಪ್ಯಾಸಿಫಿಕ್ ಪ್ರದೇಶದಲ್ಲಿನ ವಿಕಲಾಂಗ ವ್ಯಕ್ತಿಗಳಿಗಾಗಿ ಸಮನ್ವಯತೆ, ತಡೆಮುಕ್ತ ಮತ್ತು ಹಕ್ಕು ಆಧಾರಿತ ಸಮಾಜವನ್ನು ಖಾತರಿಪಡಿಸುವುದಕ್ಕಾಗಿ ಸಮಸ್ಯೆಗಳನ್ನು

ಗುರುತಿಸಿ, ಕ್ರಿಯಾಯೋಜನೆಗಳನ್ನು ತಯಾರಿಸಿ ಕಾರ್ಯತಂತ್ರಗಳನ್ನು ವಿವರಿಸಿದೆ. ಕ್ರಿಯಾಯೋಜನೆಯಲ್ಲಿ ವಿವರಿಸಿರುವ ಗುರಿಗಳನ್ನು ಸಾಧಿಸಲು ಏಳು ಆದ್ಯತೆಯ ಕ್ಷೇತ್ರಗಳನ್ನು ಗುರುಸಿಸಲಾಗಿದ್ದು, ಅವುಗಳು ಈ ಕೆಳಗಿನಂತಿವೆ:

1. ವಿಕಲಾಂಗ ವ್ಯಕ್ತಿಗಳ ಸ್ವ-ಸಹಾಯ ಸಂಸ್ಥೆಗಳು
2. ವಿಕಲಾಂಗ ಮಹಿಳೆಯರು
3. ಆರಂಭಿಕ ಮಧ್ಯಪ್ರವೇಶಿಕೆಗಳು ಮತ್ತು ಶಿಕ್ಷಣ
4. ಸ್ವಯಂ-ಉದ್ಯೋಗ ಸೇರಿದಂತೆ ತರಬೇತಿ ಮತ್ತು ಉದ್ಯೋಗ
5. ನಿರ್ಮಿತ ಪರಿಸರ, ಕಟ್ಟಡಗಳು ಮತ್ತು ಸಾರ್ವಜನಿಕ ಸಾರಿಗೆಗೆ ಪ್ರವೇಶ
6. ಮಾಹಿತಿ ಸಂವಹನ ಮತ್ತು ತಂತ್ರಜ್ಞಾನ (ICT) ಸೇರಿದಂತೆ ಮಾಹಿತಿ ಮತ್ತು ಸಂವಹನಕ್ಕೆ ಪ್ರವೇಶ
7. ಸಾಮಾಜಿಕ ಭದ್ರತೆ ಮತ್ತು ಜೀವನೋಪಾಯ ಕಾರ್ಯಕ್ರಮಗಳ ಮೂಲಕ ಬಡತನ ನಿರ್ಮೂಲನೆ

2007ರಲ್ಲಿ ಭಾರತದಲ್ಲಿ ಅಂಗೀಕರಿಸಲಾದ *ಅಂಗವಿಕಲರ ಹಕ್ಕುಗಳ ಒಡಂಬಡಿಕೆಯು (Convention on the Rights of Persons with Disabilities)* ವಿಕಲಾಂಗ ವ್ಯಕ್ತಿಗಳಿಗೆ ಎಲ್ಲ ಮಾನವ ಹಕ್ಕುಗಳ ಪೂರ್ಣ ಮತ್ತು ಸಮಾನ ಅವಕಾಶವನ್ನು ಉತ್ತೇಜಿಸಲು, ರಕ್ಷಿಸಲು ಮತ್ತು ಖಾತರಿಪಡಿಸಿಕೊಳ್ಳಲು ಒಂದು ಸಾಧನವಾಗಿದೆ. ಒಡಂಬಡಿಕೆಯಪರಿಚ್ಛೇದ 24ರ ಅಡಿಯಲ್ಲಿ ವಿಕಲಾಂಗ ಮಕ್ಕಳನ್ನು ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದಿಂದ ಅಥವಾ ಮಾಧ್ಯಮಿಕ ಶಿಕ್ಷಣದಿಂದ ಅಂಗವಿಕಲತೆಯ ಆಧಾರದಲ್ಲಿ ಹೊರಗಿರಿಸಲಾಗದು ಎನ್ನುವುದನ್ನು ಖಾತರಿಪಡಿಸುತ್ತದೆ.

ಒಟ್ಟಾರೆಯಾಗಿ, ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಘೋಷಣೆಗಳು, ನಿರ್ಣಯಗಳು, ನೀತಿನಿಯಮಗಳು ಎಲ್ಲ ಮಕ್ಕಳೂ ಶಿಕ್ಷಣದಲ್ಲಿ ಪ್ರವೇಶ ಪಡೆಯುವಂತೆ ಮಾಡುವ ಮಹತ್ವವನ್ನು ಸತತವಾಗಿ ಒತ್ತಿಹೇಳುತ್ತಿವೆ. ಇದರ ಹೊರತಾಗಿಯೂ, ಇನ್ನೂ ಅನೇಕ ಮಕ್ಕಳು, ವಿಶೇಷವಾಗಿ ಸಮಾಜದ ದುರ್ಬಲ ವರ್ಗಗಳಿಗೆ ಸೇರಿದವರು ಶಿಕ್ಷಣದ ಮೂಲಭೂತ ಹಕ್ಕಿನಿಂದ ವಂಚಿತರಾಗಿ ಉಳಿದಿದ್ದಾರೆ.

## ಸೂಚ್ಯಂಕ

ಶಿಕ್ಷಣದಲ್ಲಿ ಸಮಾನ ಅವಕಾಶಗಳ ಅಗತ್ಯವನ್ನು ಶಿಕ್ಷಣ ಕ್ಷೇತ್ರದ ಅನೇಕ ತಜ್ಞರು ಒತ್ತಿ ಹೇಳಿದ್ದಾರೆ. ಪ್ರಾಚೀನ ಭಾರತೀಯ ಬರಹಗಳು ಸಮಾಜದ ಬೆಳವಣಿಗೆ ಮತ್ತು ವ್ಯಕ್ತಿಯ ಬೆಳವಣಿಗೆ ಪರಸ್ಪರ ಪೂರಕವಾಗಿದ್ದು ಅವು ಜೊತೆಜೊತೆಯಲ್ಲಿ ಸಾಗುತ್ತವೆ ಎಂಬುದನ್ನು ಸ್ಪಷ್ಟಪಡಿಸಿವೆ. ಆದ್ದರಿಂದ, ಎಲ್ಲ ರೀತಿಯಲ್ಲೂ ಶಿಕ್ಷಣದ ಗುರಿಯು ಸಮಾಜದ ಸದಸ್ಯರಾಗಿ ಅವನ/ಅವಳ ಸಾಮರ್ಥ್ಯದ ಮಟ್ಟಿಗೆ ವ್ಯಕ್ತಿಯನ್ನು ಬೆಳೆಸುತ್ತದೆ ಮತ್ತು ಆ ಮೂಲಕ ಅದು ಸಮಾಜದ ಅಭಿವೃದ್ಧಿಗೆ ಕಾರಣವಾಗುತ್ತದೆ. ಪ್ರಾಥಮಿಕ ಶಾಲೆಗಳು ಮರದ ನೆರಳಿನಲ್ಲಿ ಅಥವಾ ಹುಲ್ಲಿನ ಮಾಡಿನ

ಅಡಿಯಲ್ಲಿ ನಡೆಯುತ್ತಿದ್ದವು ಎಂಬುದು ನಿಜವಾದರೂ ಪ್ರಾಚೀನ ಭಾರತದಲ್ಲಿ ಅನೌಪಚಾರಿಕ ಶಿಕ್ಷಣ ವ್ಯವಸ್ಥೆಯು ಎಲ್ಲ ಮಕ್ಕಳನ್ನು ಸ್ವೀಕರಿಸಿತು. ತರಗತಿಗಳಲ್ಲಿ ಯಾವುದೇ ಔಪಚಾರಿಕ ವಿಭಜನೆ ಇರಲಿಲ್ಲ ಮತ್ತು ವಿದ್ಯಾರ್ಥಿಗಳು ಪರೀಕ್ಷೆಗಳ ಭಯವಿಲ್ಲದೆ ಅಥವಾ ಉತ್ತೀರ್ಣರು ಅಥವಾ ಅನುತ್ತೀರ್ಣರು ಎಂದು ಘೋಷಿಸಲ್ಪಡದೆ ತಮ್ಮದೇ ಆದ ವೇಗದಲ್ಲಿ ಕಲಿಯುತ್ತಿದ್ದರು.

ಸಾರ್ಜೆಂಟ್ ವರದಿ (1994) ತನ್ನ ಮೊದಲ ಭಾಗದಲ್ಲಿ ಸಾರ್ವತ್ರಿಕ, ಉಚಿತ ಮತ್ತು ಕಡ್ಡಾಯ ಶಿಕ್ಷಣದ ರಾಷ್ಟ್ರೀಯ ವ್ಯವಸ್ಥೆಯನ್ನು ಶಿಫಾರಸು ಮಾಡಿತು. ಅದರಂತೆ: *"ಅವಕಾಶಗಳಲ್ಲಿ ಸಮಾನತೆಯಂತಹ ಒಂದು ವಿಚಾರ ಇರುವಾಗ, ರಾಷ್ಟ್ರದ ಕೆಲವು ಮಕ್ಕಳಿಗೆ ಮಾತ್ರ ಆ ಸೌಲಭ್ಯಗಳನ್ನು ಒದಗಿಸಿಕೊಡುವುದು ಮತ್ತು ಕೆಲವರಿಗೆ ಆ ಸೌಲಭ್ಯಗಳನ್ನು ಒದಗಿಸಿಕೊಡದೆ ಇರುವುದನ್ನು ಸಮರ್ಥಿಸಿಕೊಳ್ಳಲು ಸಾಧ್ಯವಿಲ್ಲ. ಮೊದಲನೆಯದಾಗಿ, ರಾಷ್ಟ್ರೀಯ ವ್ಯವಸ್ಥೆಯೆಂದರೆ ಅದು ಸಾರ್ವತ್ರಿಕವಲ್ಲದೆ ಬೇರೇನಲ್ಲ".*

ಕೊಠಾರಿ ಆಯೋಗದ ಅಡಿಯಲ್ಲಿ ಸಾಮಾನ್ಯ ಶಾಲಾ ವ್ಯವಸ್ಥೆಯು ವೈವಿಧ್ಯಮಯ ಜನಾಂಗೀಯ, ಸಾಂಸ್ಕೃತಿಕ ಮತ್ತು ಭಾಷಿಕ ಹಿನ್ನೆಲೆಯ ವಿದ್ಯಾರ್ಥಿಗಳಲ್ಲಿ ಮೌಲ್ಯಗಳನ್ನು ತುಂಬುವ ವಿಶಿಷ್ಟ ವಿಧಾನಗಳನ್ನು ಪ್ರತಿನಿಧಿಸುತ್ತದೆ.

*ಪಠ್ಯಕ್ರಮ, ಸಂಸ್ಕೃತಿ ಮತ್ತು ಸ್ಥಳೀಯ ಕಲಿಕಾ ಕೇಂದ್ರಗಳಿಗೆ ಸಂಬಂಧಿಸಿದಂತೆ ಶಿಕ್ಷಣದಲ್ಲಿನ ಎಲ್ಲ ಹೊರಗಿರಿಸುವ ನೀತಿಗಳು ಮತ್ತು ಅಭ್ಯಾಸಗಳಿಗೆ ಸವಾಲು ಒಡ್ಡುವ ರೀತಿಯಲ್ಲಿ 'ವಿಶೇಷ ಅಗತ್ಯತೆಗಳನ್ನು ಹೊಂದಿರುವ' ಮಕ್ಕಳ ಪರವಾಗಿ ನಡೆದ ಹೋರಾಟಗಳಿಂದಾಗಿ ಎಲ್ಲರನ್ನೂ ಒಳಗೊಳಿಸಿಕೊಳ್ಳುವುದರ ಕುರಿತಾದ ಕಾಳಜಿಗಳು ಬೆಳೆದು ಬಂದವು. ಅಸ್ತಿತ್ವದಲ್ಲಿರುವ ಶಾಲೆಗಳಿಗೆ ಹೊಂದಿಕೊಳ್ಳುವಂತೆ ಮಕ್ಕಳನ್ನು ಅದಕ್ಕಾಗಿ ಸಿದ್ಧಪಡಿಸುವ ಬದಲು ವಿಶೇಷ ಗಮನದ ಮೂಲಕ ಉದ್ದೇಶಪೂರ್ವಕವಾಗಿ ಎಲ್ಲ ಮಕ್ಕಳನ್ನು ತಲುಪಬಹುದು ಎನ್ನುವ ನಿರೀಕ್ಷೆಯಿಂದ ಶಾಲೆಗಳನ್ನು ಅದಕ್ಕಾಗಿ ಸಿದ್ಧಪಡಿಸಲು ಹೆಚ್ಚಿನ ಒತ್ತು ನೀಡುವುದರ ಮೇಲೆ ಗಮನ ಕೇಂದ್ರೀಕರಿಸುತ್ತದೆ. ಶಾಲಾ ಪ್ರವೇಶದಲ್ಲಿನ ಹೆಚ್ಚಳ ಯಾವಾಗಲೂ ಗುಣಮಟ್ಟದ ಹೆಚ್ಚಳದೊಂದಿಗೆ ಜೊತೆಜೊತೆಯಾಗಿ ಇರುತ್ತವೆ ಎಂಬುದನ್ನು ಇದು ಗುರುತಿಸುತ್ತದೆ.*

*(ಯುನೆಸ್ಕೊ - UNESCO, 2000, ಪುಟ 18)*

ವಿವಿಧ ಸಮಿತಿಗಳು ಮತ್ತು ಆಯೋಗಗಳ ಶಿಫಾರಸುಗಳು ಎಲ್ಲರಿಗೂ ಗುಣಮಟ್ಟದ ಶಿಕ್ಷಣ ನೀಡುವ ಅಗತ್ಯವನ್ನು ಎತ್ತಿ ತೋರಿಸಿವೆ. ಸಮನ್ವಯ ಶಿಕ್ಷಣವು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ (NCERT, 2005) ಮಾರ್ಗದರ್ಶಿ ತತ್ವಗಳಲ್ಲಿ ಒಂದಾಗಿದೆ. ಪಠ್ಯಕ್ರಮವು ಪ್ರತಿ ಮಗುವಿನ ಮೌಲ್ಯವನ್ನು ಮತ್ತೆ ಮತ್ತೆ ಒತ್ತಿ ಹೇಳುವ ಕಾರ್ಯಕ್ರಮದ ಮೂಲಕ ಶಾಲೆಯಲ್ಲಿ ಎಲ್ಲ ಮಕ್ಕಳನ್ನು ಸೇರಿಸಿಕೊಳ್ಳುವ ಮತ್ತು ಉಳಿಸಿಕೊಳ್ಳುವ ಪ್ರಾಮುಖ್ಯತೆಯನ್ನು ಗುರುತಿಸುತ್ತದೆ. ಎಲ್ಲ ಮಕ್ಕಳು ಘನತೆಯನ್ನು ಅನುಭವಿಸಲು ಮತ್ತು ಆತ್ಮವಿಶ್ವಾಸದಿಂದ ಕಲಿಯಲು ಅನುವು ಮಾಡಿಕೊಡುತ್ತದೆ.

ಪ್ರಸ್ತುತ ಶಿಕ್ಷಣ ವ್ಯವಸ್ಥೆಯ ಕುರಿತು ಚಿಂತಿಸುವಾಗ, ಅತ್ಯಂತ ದುರ್ಬಲರು ಒತ್ತಟ್ಟಿಗಿರಲಿ, ಎಲ್ಲರಿಗೂ ಆರೋಗ್ಯಕರ ಶೈಕ್ಷಣಿಕ ವಾತಾವರಣವನ್ನು ಒದಗಿಸಲು ಇನ್ನೂ ಸಾಧ್ಯವಾಗಿಲ್ಲ ಎಂದೇ ತೀರ್ಮಾನಿಸಬಹುದು. ಕೆಲವೆಡೆಗಳಲ್ಲಿ ಶಾಲೆಗೆ ಹೋಗುವುದೇ ಮಕ್ಕಳ ಪಾಲಿಗೆ ಒಂದು ಹಿಂಸಾತ್ಮಕ ಅನುಭವವಾಗಿದೆ ಅಥವಾ ಶಿಕ್ಷೆ ಎಂದು ಮಕ್ಕಳು ಭಾವಿಸುತ್ತಾರೆ. ಮತ್ತೆ ಕೆಲವರಲ್ಲಿ ಇದು ಭಯ, ಆತಂಕ, ಒತ್ತಡ ಮತ್ತು ಅಭದ್ರತೆಯನ್ನು ಸೃಷ್ಟಿಸುತ್ತದೆ ಮತ್ತು ಮಕ್ಕಳಲ್ಲಿರುವ ಸೂಕ್ಷ್ಮತೆಯನ್ನು ಖುಷಿಯನ್ನು ಇದು ನಾಶಪಡಿಸುತ್ತದೆ. ಭಯದಿಂದ ಮುಕ್ತವಾಗಿದ್ದು ಮಕ್ಕಳಲ್ಲಿ ಬೇಸರ ಮೂಡಿಸದಂತೆ ಕಲಿಯುವುದಕ್ಕೆ ಶಾಲೆಯು ಮಾರ್ಗಮಾಡಿಕೊಡಬೇಕು ಮತ್ತು ಇಂದಿನ ಶಿಕ್ಷಣ ವ್ಯವಸ್ಥೆ ಮೇಲೆ ಹೇಳಿರುವ ಸಮಸ್ಯೆಗಳನ್ನು ಪರಿಹರಿಸುವಂತಾಗಬೇಕು.

ನೀತಿ ಮತ್ತು ಆಚರಣೆಯ ನಡುವೆ ಖಂಡಿತವಾಗಿಯೂ ವ್ಯತಾಸವಿರುತ್ತದೆ. ನೀತಿ ಒಂದು ಕಾರ್ಯಸೂಚಿಯನ್ನು ದೃಢವಾಗಿ ಪ್ರತಿಪಾದಿಸುತ್ತದೆ. ಆದರೆ, "ಸಮನ್ವಯ ಶಿಕ್ಷಣ" ದ ವಿಷಯಕ್ಕೆ ಬಂದಾಗ ಅದರ ಅಭ್ಯಾಸವು ಸಂಪೂರ್ಣವಾಗಿ ಭಿನ್ನವಾದ ವಾಸ್ತವತೆಯನ್ನೇ ತೆರೆದಿಡುತ್ತದೆ. ಶಿಕ್ಷಕರ ಕೊರತೆ, ಶಿಕ್ಷಕರು-ವಿದ್ಯಾರ್ಥಿಗಳ ಅನುಪಾತದಲ್ಲಿನ ಏರುಪೇರು, ಶೈಕ್ಷಣಿಕ ಯಶಸ್ಸು ಮತ್ತು ವೈಫಲ್ಯದ ಕುರಿತ ಸೀಮಿತ ತಿಳುವಳಿಕೆ, ಬದಲಾವಣೆಗೆ ಪ್ರತಿರೋಧ, ಸಮಾನಾಂತರ ವ್ಯವಸ್ಥೆಗಳಿರುವುದು (ಸಾಮಾನ್ಯ ಮತ್ತು ವಿಶೇಷ ಶಿಕ್ಷಣ), ಅಂಗವಿಕಲತೆಗೆ ಅಂಟಿಕೊಂಡಿರುವ ಸಾಮಾಜಿಕ ಕಳಂಕ, ಮಾತೃಭಾಷೆ ಮತ್ತು ಪಠ್ಯಪುಸ್ತಕದ ಭಾಷೆ ನಡುವಿನ ಸಂಘರ್ಷ, ಕಳಂಕಮಯ ಹಣೆಪಟ್ಟಿಗಳ ಅನಗತ್ಯ ಬಳಕೆ, ಪೋಷಕರ ಒಳಗೊಳ್ಳುವಿಕೆ ಇಲ್ಲದಿರುವುದು, ಬದಲಾವಣೆಗಳಿಗೆ ಮುಕ್ತವಲ್ಲದ ಪರೀಕ್ಷಾ ವ್ಯವಸ್ಥೆಗಳ ಬಿಡಿ ಹಿಡಿತ, ಕಲಿಕಾ ಪ್ರಕ್ರಿಯಲ್ಲಿ ಪರಸ್ಪರ ಸಹಕಾರದ ಕೊರತೆ, ಕೆಲವರು ಮುಂದುವರೆಸಿಕೊಂಡು ಹೋಗುವ ಮೌನ ಸಂಸ್ಕೃತಿ (ಗಿಬ್ಸನ್ 2006) ಮತ್ತು ಕೆಲವು ಸಮಾಜಗಳು ಬೆಳೆಸಿಕೊಂಡಿರುವ ನಿರ್ಲಕ್ಷ್ಯದ ಸಂಸ್ಕೃತಿ ಇವೆಲ್ಲವೂ ಸಮನ್ವಯ ಶಿಕ್ಷಣದ ಬೆಳವಣಿಗೆಗೆ ಅಡ್ಡಿಯಾಗಿರುವ ಕೆಲವು ಅಂಶಗಳಾಗಿವೆ. ಎಲ್ಲ ಮಕ್ಕಳನ್ನು ಶಿಕ್ಷಣ ಪಡೆಯುವ ಪ್ರಕ್ರಿಯೆಗೆ ಒಳಪಡಿಸಲು, ಅದರಲ್ಲೂ ಮುಖ್ಯವಾಗಿ ದುರ್ಬಲರಾಗಿರುವ ಮಕ್ಕಳನ್ನು ಸೇರಿಸಲು, ನಮ್ಮ ಪ್ರಯತ್ನಗಳ ದಿಕ್ಕಿನಲ್ಲಿ ಬದಲಾವಣೆಗಳನ್ನು ತಂದುಕೊಳ್ಳುವ ಅಗತ್ಯವಿದೆ.

ಈ ಸೂಚ್ಯಂಕವು ವಿದ್ಯಾರ್ಥಿಗಳ ಕುಟುಂಬಗಳು, ಶಾಲೆಗಳು, ಶಿಕ್ಷಣ ನಿರ್ವಾಹಕರು, ಶಿಕ್ಷಕರು ಮತ್ತು ಇತರ ಸಂಬಂಧಿತ ವೃತ್ತಿಪರರ ನಡುವೆ ನಡೆಯುವ ಸಂವಾದಗಳ ಆಧಾರದಲ್ಲಿ ಒಂದು ಚೌಕಟ್ಟನ್ನು ಒದಗಿಸಿಕೊಡುತ್ತದೆ. ವಿವಿಧ ಉದಾಹರಣೆಗಳ ಮೂಲಕ ಸಮನ್ವಯತೆಯ ಪ್ರಕ್ರಿಯೆಯನ್ನು ಅರ್ಥಮಾಡಿಕೊಳ್ಳಬೇಕಿರುವುದು ಮಾತ್ರವಲ್ಲದೆ ಏನು ಮಾಡಬೇಕಾಗಿದೆ ಮತ್ತು ಅದನ್ನು ಹೇಗೆ ಮಾಡಬೇಕಾಗಿದೆ ಎನ್ನುವುದಕ್ಕೆ ಹೆಚ್ಚಿನ ಒತ್ತು ನೀಡಿ ಅರ್ಥಮಾಡಿಕೊಳ್ಳಲು ಕೂಡ ಇದು ನೆರವಾಗುತ್ತದೆ. ಸೂಚ್ಯಂಕ್ಕೆ ಆಧಾರವಾಗಿರುವ ಊಹೆಗಳು:

- ಇದು ಖ್ಯಾತ ವಿದ್ವಾಂಸರು, ಶಿಕ್ಷಕರು, ಶಿಕ್ಷಕರ ಪ್ರಶಿಕ್ಷಕರು, ಪೋಷಕರು, ಸ್ವಯಂ ಸೇವಾ ಸಂಸ್ಥೆಗಳ ಪ್ರತಿನಿಧಿಗಳು ಮತ್ತು ವಿವಿಧ ಹಂತಗಳಲ್ಲಿ ಇನ್ನಿತರ ಹಲವಾರು

ಭಾಗೀದಾರರು ಕೂಡಿ ಆಳವಾಗಿ ನಡೆಸಿದ ವಿಚಾರಗೋಷ್ಠಿಗಳ ಸರಣಿಯ ಫಲವಾಗಿ ಹೊರಹೊಮ್ಮಿದ ಅತ್ಯುತ್ತಮ ಆಲೋಚನೆಗಳ ಸಂಗ್ರಹವನ್ನು ಆಧರಿಸಿದೆ.

- ಇದನ್ನು ನೀತಿನಿರೂಪಕರು, ಶೈಕ್ಷಣಿಕ ನಿರ್ವಾಹಕರು, ಶಿಕ್ಷಕರು, ಶಿಕ್ಷಕರ ಪ್ರಶಿಕ್ಷಕರು, ಪೋಷಕರು ಮತ್ತು ಪ್ರಸ್ತುತ ಶಿಕ್ಷಣ ವ್ಯವಸ್ಥೆಯು ಹೆಚ್ಚು ಹೆಚ್ಚು ಎಲ್ಲರ ಸಮನ್ವಯತೆಯನ್ನು ಸಾಧಿಸುವ ನಿಟ್ಟಿನಲ್ಲಿ ತಮ್ಮ ಕೊಡುಗೆ ನೀಡಲು ಬಯಸುವ ಎಲ್ಲರೂ ಬಳಸಬಹುದು.
- ಕಲಿಕೆಯ ಕೇಂದ್ರಗಳು/ಶಾಲೆಗಳು ವಿಶೇಷವಾಗಿ ಪ್ರಾಥಮಿಕ ಹಂತದಲ್ಲಿ ಹೆಚ್ಚು ಸಮನ್ವಯತೆ ಸಾಧಿಸುವ ನಿಟ್ಟಿನಲ್ಲಿ ಅಭಿವೃದ್ದಿಗೊಳ್ಳಲು ಹೆಚ್ಚಿನ ಗಮನ ನೀಡಲಾಗುವುದು.
- ಇದು ಎಲ್ಲ ಮಕ್ಕಳನ್ನು ಶಾಲೆಗೆ ಸೇರಿಸಲು ಮತ್ತು ಸೇರಿದ ಮಕ್ಕಳು ಶಾಲೆಯನ್ನು ತೊರೆಯದೆ ಶಾಲಾ ಪ್ರಕ್ರಿಯೆಯಲ್ಲಿ ಮುಂದುವರೆಯುವ ಹಾಗೆ ಉಳಿಸಿಕೊಳ್ಳುವ ಕುರಿತು ಕಾಳಜಿ ವಹಿಸುತ್ತದೆ.
- ಶಾಲೆಗೆ ಸಂಬಂಧಿಸಿದಂತೆ ಪ್ರವೇಶ, ತೊಡಗಿಸಿಕೊಳ್ಳುವಿಕೆ ಮತ್ತು ಸಬಲೀಕರಣ ಎಂಬ ಮೂರು ಆಯಾಮಗಳ ಆಧಾರದ ಮೇಲೆ ಶೈಕ್ಷಣಿಕ ಆಡಳಿತ, ಶಿಕ್ಷಕರ ಪ್ರಶಿಕ್ಷಣ ಮತ್ತು ಶಾಲೆಗೆ ಸಂಬಂಧಿಸಿದ ಕ್ಷೇತ್ರಗಳಿಗೆ ಕಾರ್ಯತಂತ್ರಗಳನ್ನು ವಿವರಿಸುತ್ತದೆ.
- ಇದು ಚಿಂತನೆಗೆ ಇರುವ ಒಂದು ಚೌಕಟ್ಟಾಗಿದೆ, ಮೌಲ್ಯಮಾಪನವಲ್ಲ.
- ಇದು ಅಳವಡಿಸಿಕೊಳ್ಳಬಹುದಾದ ಒಂದು ಚೌಕಟ್ಟಾಗಿದೆಯೇ ಹೊರತು ಆದೇಶವಲ್ಲ.
- ಇದು ರೂಢಿಯಲ್ಲಿರುವ ಅಭ್ಯಾಸಗಳ ಉದಾಹರಣೆಗಳನ್ನು ಎತ್ತಿಹಿಡಿಯುತ್ತದೆ ಮತ್ತು ಅನುಸರಿಸಬೇಕಾದ ಕಡ್ಡಾಯ ನಿಯಮಗಳಲ್ಲ.

ಸೂಚ್ಯಂಕವು ಸಮನ್ವಯ ಶಾಲೆಗಳನ್ನು ಅಭಿವೃದ್ದಿಪಡಿಸಲು ಮಾರ್ಗಸೂಚಿಗಳನ್ನು ಒದಗಿಸಲು ಪ್ರಯತ್ನಿಸುತ್ತದೆ. ಮಾತ್ರವಲ್ಲ, ಶಾಲೆಗಳು ತಮ್ಮ ವಿಧಾನಗಳಲ್ಲಿ ಹೆಚ್ಚಿನ ಸಮನ್ವಯತೆ ಸಾಧಿಸಲು ಸಹಾಯ ಮಾಡುವಲ್ಲಿ ಸ್ವ-ಅವಲೋಕನದ ಸಾಧನವಾಗಿ ಮೌಲ್ಯವರ್ಧನೆ ಮಾಡುತ್ತದೆ. ಸಮನ್ವಯ ಶಿಕ್ಷಣದಲ್ಲಿ ಸಂಶೋಧನೆಯ ಒಂದು ಸಾಧನವಾಗಿ ಸೂಚ್ಯಂಕವನ್ನು ಬಳಸಬಹುದು.

ಭಾರತೀಯ ಸಂದರ್ಭಕ್ಕೆ ಸಮನ್ವಯತೆಯ ಪರಿಕಲ್ಪನೆ ಹೊಸತೇನಲ್ಲ. ಹಿಂದಿನ ಆಯೋಗಗಳು, ನೀತಿನಿರೂಪಣೆಗಳು ಮತ್ತು ಇತ್ತೀಚಿನ ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯ್ದೆ, 2009 ರಲ್ಲಿ ಎತ್ತಿ ಹಿಡಿಯಲಾಗಿರುವ ಸಾಮಾನ್ಯ ಶಾಲಾ ವ್ಯವಸ್ಥೆಯ ಕಾರ್ಯಸೂಚಿಗೆ ಇದು ಬಹಳಷ್ಟು ಅನುಗುಣವಾಗಿಯೇ ಇದೆ. ಅಸ್ತಿತ್ವದಲ್ಲಿರುವ ಲೋಪದೋಷಗಳನ್ನು ಗುರುತಿಸುವುದು ಮತ್ತು ಶೈಕ್ಷಣಿಕ ಉಪಕ್ರಮಗಳ ಮೂಲಕ ಅವುಗಳನ್ನು ಪರಿಹರಿಸುವುದು ಸದ್ಯದ ಪ್ರಮುಖ ಕಾಳಜಿಯಾಗಿದೆ. ಅತ್ಯುತ್ತಮವಾದ ಉದ್ದೇಶಗಳು ಮತ್ತು ನೀತಿಯ ಉಪಕ್ರಮಗಳು ಇವೆಲ್ಲ ಇದ್ದಾಗ್ಯೂ ನಮ್ಮ ದೇಶದಲ್ಲಿ ಇನ್ನಷ್ಟೇ ಯಶಸ್ವಿಯಾಗಿ ಅನುಷ್ಠಾನಗೊಳ್ಳಬೇಕಾಗಿರುವ ಸಮನ್ವಯ ಶಿಕ್ಷಣಕ್ಕೆ ಈ ಸೂಚ್ಯಂಕವು ಅನುಷ್ಠಾನ ಪ್ರಕ್ರಿಯೆಗೆ ಸಹಾಯ ಮಾಡಬಲ್ಲುದು. ಆದ್ದರಿಂದ, ಸೂಚ್ಯಂಕವು ಸದಾ ಚಲನಾತ್ಮಕವಾಗಿದ್ದು, ವಿಕಾಸಗೊಳ್ಳುತ್ತಲೇ ಇರುತ್ತದೆ.

**ಸೂಚ್ಯಂಕವನ್ನು ಬಳಸುವ ವಿಧಾನ**

ಸೂಚ್ಯಂಕವನ್ನು ನಾಲ್ಕು ವಿಭಾಗಗಳಾಗಿ ವಿಂಗಡಿಸಲಾಗಿದೆ. ಮೊದಲ ವಿಭಾಗ **ಸಾಮಾನ್ಯ ಪರಿಚಯ,** ಇದನ್ನು ಭಾಗೀದಾರರೆಲ್ಲರೂ ಬಳಸಬಹುದು. ಇದರ ನಂತರ ಇರುವ ಮೂರು ವಿಭಾಗಗಳು – ಶೈಕ್ಷಣಿಕ ಕಾರ್ಯನಿರ್ವಾಹಕರು, ಶಿಕ್ಷಕರು, ಶಿಕ್ಷಕರ ಪ್ರಶಿಕ್ಷಕರು ಮತ್ತು ಎಲ್ಲರಿಗಾಗಿ ಶಾಲೆಗಳು. ಇವುಗಳಲ್ಲಿ ಪ್ರತಿ ವಿಭಾಗವು ಆಯಾ ಕ್ಷೇತ್ರಕ್ಕೆ ಸಂಬಂಧಸಿದ ವಿಭಿನ್ನ ಉತ್ತಮ ಅಭ್ಯಾಸಗಳ ಮಾಹಿತಿ ಹಾಗೂ ಉದಾಹರಣೆಗಳೊಂದಿಗೆ ಪ್ರಾರಂಭಗೊಂಡು ಆಯಾ ನಿರ್ದಿಷ್ಟ ಕ್ಷೇತ್ರದಲ್ಲಿ ಸಮನ್ವಯತೆಯ ತತ್ವವನ್ನು ಪ್ರತಿಫಲಿಸುವ ಸೂಚಕಗಳ ಪಟ್ಟಿಯನ್ನು ನೀಡುತ್ತದೆ. ಸೂಚ್ಯಂಕವನ್ನು ಬಳಸುವವರು ತಮ್ಮ ತಮ್ಮ ಅಥವಾ ತಮ್ಮ ಶಾಲೆಗಳ ಸ್ಥಾನಗಳನ್ನು ಗುರುತಿಸಿಕೊಂಡು ಶ್ರೇಯಾಂಕಗಳನ್ನು ಕೊಟ್ಟುಕೊಳ್ಳಬಹುದು. ಈ ಸೂಚಕಗಳಲ್ಲಿ ಕೆಲವು ಒಂದು ಮತ್ತೊಂದರ ವ್ಯಾಪ್ತಿಯನ್ನು ಅತಿಕ್ರಮಿಸಬಹುದು ಮತ್ತು ಸೂಚ್ಯಂಕವನ್ನು ಬಳಸುವವರಲ್ಲಿ ಕೆಲವರು ಮೂರು ಕ್ಷೇತ್ರಗಳನ್ನೂ ಗಮನಿಸಲು ಅಥವಾ ಒಂದು ಕ್ಷೇತ್ರದಲ್ಲಿ ಮಾತ್ರ ತಮ್ಮ ಗಮನವನ್ನು ಕೇಂದ್ರೀಕರಿಸಲು ಬಯಸಬಹುದು. ಉದಾಹರಣೆಗೆ,

ಶೈಕ್ಷಣಿಕ ಕಾರ್ಯನಿರ್ವಾಹಕರು ಎಂಬ ವಿಭಾಗದ ಕೆಳಗಿನ ಒಂದು ಸೂಚಕ ಹೀಗೆ ಹೇಳುತ್ತದೆ:

*ಅಗತ್ಯವಿದ್ದಾಗ ಸಮುದಾಯದಿಂದ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಶೈಕ್ಷಣಿಕ ಕಾರ್ಯನಿರ್ವಾಹಕರು ಪ್ರೋತ್ಸಾಹಿಸುತ್ತಾರೆ*

ಇದನ್ನು 3, 2, 1ರ ಪ್ರಮಾಣದಲ್ಲಿ ಸ್ಥಾನ ಗುರುತಿಸಬಹುದು

'3' ರ ಸ್ಥಾನ ಎಂದರೆ ಶೈಕ್ಷಣಿಕ ಕಾರ್ಯನಿರ್ವಾಹಕರು ಸ್ವತಃ ತಮ್ಮ ಸ್ಥಾನವನ್ನು ಅನುಷ್ಠಾನದ ಅಥವಾ ಅಭಿವೃದ್ಧಿಯ ಅನುಕರಣೀಯ ಮಟ್ಟದಲ್ಲಿ ಇರಿಸಿರುತ್ತಾರೆ.

'2' ರ ಸ್ಥಾನ ಎಂದರೆ ಶೈಕ್ಷಣಿಕ ಕಾರ್ಯನಿರ್ವಾಹಕರು ಸ್ವತಃ ತಮ್ಮ ಸ್ಥಾನವನ್ನು ಅನುಷ್ಠಾನದ ಅಥವಾ ಅಭಿವೃದ್ಧಿಯ ಭಾಗಶ: ಅನುಕರಣೀಯ ಮಟ್ಟದಲ್ಲಿ ಇರಿಸಿರುತ್ತಾರೆ.

'1' ರ ಸ್ಥಾನ ಎಂದರೆ ಕಡಿಮೆ ಮಟ್ಟ ಅಥವಾ ಅಭಿವೃದ್ಧಿ ಇಲ್ಲ ಎಂದು ಅರ್ಥ

ಶೈಕ್ಷಣಿಕ ಕಾರ್ಯನಿರ್ವಾಹಕರು ತಾವು ಸಾಧಿಸಿದ ಒಟ್ಟು ಸ್ಥಾನಗಳನ್ನು ಲೆಕ್ಕಹಾಕಿ ಕೂಡಿಸಬಹುದು. ಸೂಚ್ಯಂಕದಲ್ಲಿನ ಸೂಚಕಗಳು ಸಮನ್ವಯ ಶಾಲೆಗಳ ಯೋಜನೆ ಮತ್ತು ಅಭಿವೃದ್ಧಿಯ ಮೂಲಕ ಸುಧಾರಣೆಗೆ ಎಲ್ಲೆಲ್ಲಿ ಅವಕಾಶಗಳಿವೆ ಎಂಬುದನ್ನು ಗುರುತಿಸಲು ಭಾಗೀದಾರರಿಗೆ ಅನುವು ಮಾಡಿಕೊಡುತ್ತದೆ.

## ಸಮನ್ವಯ ಶಿಕ್ಷಣದ ಕುರಿತು 'ಕೇಬ್' ಸ್ಥಾಯಿ ಸಮಿತಿಯ (CABE's Standing Committee) ಶಿಫಾರಸುಗಳು

ಸಮನ್ವಯ ಶಿಕ್ಷಣದ ಕುರಿತು 'ಕೇಬ್' (CABE) ಸ್ಥಾಯಿ ಸಮಿತಿಯು ವಿಕಲಾಂಗ ಮಕ್ಕಳ ಮತ್ತು ಯುವ ಜನರ ಶಿಕ್ಷಣದಲ್ಲಿ ಸಮನ್ವಯತೆ ಕುರಿತು ಸಮಗ್ರ ಕ್ರಿಯಾಯೋಜನೆಯಿಂದ ಹೊರಹೊಮ್ಮುವ ನಾಲ್ಕು ಫಲಿತಾಂಶಗಳು ಮತ್ತು ಕಾರ್ಯತಂತ್ರದ ಮಧ್ಯಪ್ರವೇಶಿಕೆಗೆ ಅನುಗುಣವಾಗಿ ವಿವಿಧ ಶಿಫಾರಸುಗಳನ್ನು ಮಾಡಿದ್ದು, ಅವುಗಳನ್ನು ಈ ಕೆಳಗಿನ ವಿಭಾಗದಲ್ಲಿ ಪ್ರಸ್ತುತಪಡಿಸಲಾಗಿದೆ:

**ನಿರೀಕ್ಷಿತ ಫಲಿತಾಂಶ 1: ಸಾಮಾನ್ಯ ಶಿಕ್ಷಣ ವ್ಯವಸ್ಥೆಯಲ್ಲಿ ಎಲ್ಲ ವಿಕಲಾಂಗ ಮಕ್ಕಳ ದಾಖಲಾತಿ, ಶಾಲೆಯಲ್ಲಿ ಅವರ ಮುಂದುವರೆಯುವಿಕೆ ಮತ್ತು ಉಚಿತ ಶಿಕ್ಷಣ (ದೈಹಿಕ ಅಸಾಮರ್ಥ್ಯವುಳ್ಳ ವ್ಯಕ್ತಿಗಳ ಹಕ್ಕುಗಳ ಕಾಯ್ದೆಯಡಿಯಲ್ಲಿ 18 ವರ್ಷಗಳವರೆಗೆ ಉಚಿತ ಶಿಕ್ಷಣ – Rights of the Persons with Disabilities Act - PWD).**

**ಶಿಫಾರಸುಗಳು:**

1. 0-18 ವರ್ಷ ವಯಸ್ಸಿನ ಮಕ್ಕಳನ್ನು ಗುರುತಿಸುವ ಕಾರ್ಯವನ್ನು ಎಲ್ಲ ರಾಜ್ಯಗಳು/ಕೇಂದ್ರಾಡಳಿತ ಪ್ರದೇಶಗಳು ತಕ್ಷಣವೇ ಕೈಗೊಳ್ಳಬೇಕು. ಸರ್ವಶಿಕ್ಷಣ ಅಭಿಯಾನದ ಮಾದರಿಯಲ್ಲಿ ವಯಸ್ಸಿಗನುಗುಣವಾಗಿ ಅಂಗವೈಕಲ್ಯವಾರು ವಿಂಗಡಣೆಯನ್ನು ಸ್ಪಷ್ಟವಾಗಿ ನಮೂದಿಸಬೇಕು. ಗುರುತಿಸಿ ಗಮನವಹಿಸಬೇಕಾಗಿರುವ ವಿವಿಧ ವಯಸ್ಸಿನ ಗುಂಪುಗಳೆಂದರೆ: 0-3, 3-6, 6-14, 15-18 ಮತ್ತು 18-22. ಈಗಾಗಲೇ ಈ ಅಂಕಿ-ಅಂಶಗಳನ್ನು ಸಂಗ್ರಹಿಸಿ, ವಯಸ್ಸಿಗನುಗುಣವಾದ ವಿಭಜನೆ ಮಾಡಿರುವ ರಾಜ್ಯಗಳು ಮತ್ತೊಮ್ಮೆ ಅವುಗಳನ್ನು ಪರಿಶೀಲಿಸಿ ನವೀಕರಿಸಬಹುದು. ಗುರುತಿಸುವ ಈ ಕಾರ್ಯವನ್ನು ಮುಂದೆ ಸೂಚಿಸಿರುವಂತೆ ಮೂರು ಹಂತಗಳಲ್ಲಿ ಕೈಗೊಳ್ಳಬಹುದು: ವೀಕ್ಷಣೆಯ ಮೂಲಕ ಕಂಡುಕೊಳ್ಳುವ ಅಂಶಗಳನ್ನು ಗುರುತಿಸುವುದು, ತರಬೇತಿ ಹೊಂದಿರುವ ವ್ಯಕ್ತಿಗಳ ಮೂಲಕ ಗುರುತಿಸುವುದು ಮತ್ತು ವೈದ್ಯಕೀಯ ಪರಿಶೀಲನೆಯ ಮೂಲಕ ಗುರುತಿಸುವುದು. ಮಕ್ಕಳನ್ನು ಆರಂಭಿಕ ಹಂತದಲ್ಲಿಯೇ ಗುರುತಿಸುವುದರಿಂದ ಅವರಿಗೆ ಅಗತ್ಯವಿರುವ ಬೆಂಬಲವು ಕೂಡ ಆರಂಭದಲ್ಲಿಯೇ ಲಭ್ಯವಾಗುವಂತೆ ಮಾಡಲು ಸಾಧ್ಯವಾಗುತ್ತದೆ.
2. ಮುಖ್ಯವಾಹಿನಿ ಶಿಕ್ಷಣ ವ್ಯವಸ್ಥೆಯಲ್ಲಿ ಎಲ್ಲ ವಿಕಲಾಂಗ ಮಕ್ಕಳ ದಾಖಲಾತಿ ಮತ್ತು ಅವರನ್ನು ಶಾಲೆಯಲ್ಲಿ ಉಳಿಸಿಕೊಂಡು ಶಿಕ್ಷಣದಲ್ಲಿ ಮುಂದುವರೆಯುವಂತೆ ಮಾಡುವಲ್ಲಿ ಇರುವ ಸಮಸ್ಯೆಗಳೊಂದಿಗೆ ಅಂಗವೈಕಲ್ಯಕ್ಕೆ ಸಂಬಂಧಿಸಿದ ಪ್ರಮಾಣ ಪತ್ರಗಳು ಮತ್ತು ಸಹಾಯಕ ಸಾಧನ ಸಲಕರಣೆಗಳ ಸಮಸ್ಯೆಗಳು ಸಂಬಂಧಹೊಂದಿವೆ. ವಿಶೇಷ ಅಗತ್ಯತೆಯುಳ್ಳ ಮಕ್ಕಳ (CWSN – Children With Special Needs) ದಾಖಲಾತಿ ಮತ್ತು ಶಾಲಾ ಶಿಕ್ಷಣದಲ್ಲಿ ಅವರ ಮುಂದುವರಿಕೆಯನ್ನು ಸುಲಭಗೊಳಿಸಲು ಇವುಗಳನ್ನು ಪ್ರಮುಖವೆಂದು ಪರಿಗಣಿಸಲಾಗಿದೆ.

3. ವಿಕಲಾಂಗ ವ್ಯಕ್ತಿಗಳ (ಅವಕಾಶಗಳು, ಹಕ್ಕುಗಳ ರಕ್ಷಣೆ ಮತ್ತು ಸಂಪೂರ್ಣ ಭಾಗವಹಿಸುವಿಕೆ) ಕಾಯ್ದೆ, 1995ರ ಪ್ರಕಾರ, "ಅಂಗವೈಕಲ್ಯ ಹೊಂದಿರುವ ವ್ಯಕ್ತಿಗಳು" ಎಂದರೆ ವೈದ್ಯಕೀಯ ಪ್ರಾಧಿಕಾರದಿಂದ ಪ್ರಮಾಣೀಕರಿಸಲ್ಪಟ್ಟ ಯಾವುದೇ ಅಂಗವೈಕಲ್ಯ ಶೇಕಡಾ 40ಕ್ಕಿಂತ ಕಡಿಮೆಯಿಲ್ಲದ ವ್ಯಕ್ತಿ, ಸಾಮಾಜಿಕ ನ್ಯಾಯ ಮತ್ತು ಸಬಲೀಕರಣ ಸಚಿವಾಲಯವು ವಿವಿಧ ಅಂಗವೈಕಲ್ಯಗಳ ಮೌಲ್ಯಮಾಪನಕ್ಕಾಗಿ ಸಂಪೂರ್ಣ ಮಾರ್ಗಸೂಚಿಗಳನ್ನು ನೀಡಿದೆ. ಆದ್ದರಿಂದ, ಯಾವುದೇ ಮಗುವನ್ನು ವಿಶೇಷ ಅಗತ್ಯತೆ ಇರುವ ಮಗು (CWSN – Child with Special Needs) ಎಂದು ಪರಿಗಣಿಸುವ ಮೊದಲು ಆ ಮಗುವಿನ ಅಂಗವೈಕಲ್ಯ ಯಾವ ಬಗೆಯದೆಂದು ನಿರ್ಣಯಿಸಬೇಕಾಗುತ್ತದೆ. ಮಗುವಿನ ಅಂಗವೈಕಲ್ಯ ನಿರ್ಣಯಿಸಲ್ಪಟ್ಟ ನಂತರ ಅಂಗವಿಕಲತೆಯ ಪ್ರಮಾಣ ಪತ್ರವನ್ನು ನೀಡಬಹುದು ಮತ್ತು ಆ ಮಗುವಿಗೆ ಯಾವ ರೀತಿಯ ಸಹಾಯಕ ಸಾಧನಗಳ ಅಗತ್ಯವಿದೆ ಎಂಬ ತೀರ್ಮಾನಕ್ಕೆ ಕೂಡ ಬರಬಹುದು. ಮಗುವಿನ ಶಾಲಾ ಶಿಕ್ಷಣವನ್ನು ಸುಗಮಗೊಳಿಸುವ ಯಾವುದೇ ಸಹಾಯಕ ಸಾಧನವನ್ನು ಒದಗಿಸಲು ಇವೆಲ್ಲದರ ಜೊತೆಜೊತೆಯಲ್ಲೆ ವ್ಯವಸ್ಥೆ ಮಾಡಬೇಕಾಗುತ್ತದೆ. ಆದ್ದರಿಂದ, ಮಗುವನ್ನು ಯಾವುದೇ ಶಾಲೆಗೆ ಸೇರಿಸಿದರೂ ತಕ್ಷಣವೇ ಇದನ್ನು ಮೊದಲ ಆದ್ಯತೆಯಾಗಿ ಪರಿಗಣಿಸಬೇಕಾಗುತ್ತದೆ.
4. ವಿಶೇಷ ಅಗತ್ಯತೆಯುಳ್ಳ ಮಕ್ಕಳ (CWSN) ನಿಜವಾದ ಅಗತ್ಯತೆಯೇನು ಎಂಬುದನ್ನು ಆರಂಭದಲ್ಲಿಯೇ ಗುರುತಿಸುವುದರಿಂದ ಅವರಲ್ಲಿ ನಿರೀಕ್ಷಿತ ಸಾಮರ್ಥ್ಯಗಳನ್ನು ಬೆಳೆಸಲು ಮತ್ತು ಅವರು ಪೂರ್ವ-ಪ್ರಾಥಮಿಕ ಹಂತದಲ್ಲಿರುವಾಗಲೇ ಶಾಲೆಗಾಗಿ ಸಿದ್ಧತೆ ಕಾರ್ಯಕ್ರಮಗಳ ಮೂಲಕ ಅವುಗಳ ಕುರಿತು ಗಮನವಹಿಸಿ ಅವರನ್ನು ಸಿದ್ಧಪಡಿಸಲು ಅನುಕೂಲವಾಗುತ್ತದೆ. ಇದು ಅವರ ಅಂಗವಿಕಲತೆಯ ಪ್ರಮಾಣವು ಮತ್ತಷ್ಟು ಕ್ಷೀಣಗೊಳ್ಳುತ್ತ ಹೋಗುತ್ತಿದೆಯೇ ಎನ್ನುವುದನ್ನು ಪರಿಶೀಲಿಸುತ್ತದೆ ಮತ್ತು ಅಗತ್ಯ ನಿವಾರಣಾ ಕ್ರಮಗಳು ಸಮಯಕ್ಕೆ ಸರಿಯಾಗಿ ಲಭ್ಯವಿರುವಂತೆ ಮಾಡುತ್ತದೆ.
5. ವಿಶೇಷ ಅಗತ್ಯತೆ ಇರುವ ಮಕ್ಕಳನ್ನು ಗುರುತಿಸುವ ಕಾರ್ಯವು ನಿರಂತರವಾಗಿ ನಡೆಯುತ್ತಿರಬೇಕಾದ ಒಂದು ಪ್ರಕ್ರಿಯೆಯಾಗಿರುವುದರಿಂದ ಈಗಾಗಲೇ ಗುರುತಿಸಲಾಗಿರುವ ಮಕ್ಕಳಿಗೆ ಶೈಕ್ಷಣಿಕವಾಗಿ ಏನನ್ನು ನೀಡಬೇಕಾಗಿದೆಯೋ ಅವುಗಳನ್ನು ಒದಗಿಸಿಕೊಡಲು ಸೂಕ್ತವಾದ ಕಾರ್ಯತಂತ್ರಗಳನ್ನು ತಕ್ಷಣವೇ ಅಭಿವೃದ್ಧಿಪಡಿಸಬೇಕು. ಮಹಾರಾಷ್ಟ್ರ, ತಮಿಳುನಾಡು ಮತ್ತು ತ್ರಿಪುರಾ ಈ ಮೂರು ರಾಜ್ಯಗಳು ಸಾಕಷ್ಟು ದತ್ತಾಂಶಗಳನ್ನು ಈಗಾಗಲೇ ಸಂಗ್ರಹಿಸಿರುವುದರಿಂದ ಮಾದರಿ ಯೋಜನೆಗಳನ್ನು ಈ ರಾಜ್ಯಗಳಲ್ಲಿ ಪ್ರಾರಂಭಿಸಬಹುದು.
6. ಜಾಗತಿಕ ಶಾಂತಿ ಸೂಚ್ಯಂಕ (Global Peace Index-GPI) ವರದಿಯಲ್ಲಿ ವಿಕಲಾಂಗ ಮಕ್ಕಳ ಕುರಿತ ಸೂಚ್ಯಂಕವು ಗಣನೀಯವಾಗಿ ಕಡಿಮೆ ಪ್ರಮಾಣದಲ್ಲಿದೆ ಎಂದು ತೋರಿಸುತ್ತಿದೆ. ಆದ್ದರಿಂದ ವಿಕಲಚೇತನ ಬಾಲಕಿಯರನ್ನು ಶಾಲೆಗೆ ಕರೆತರುವ, ಶಾಲೆಗೆ ದಾಖಲು ಮಾಡುವ ವಿಶೇಷ ಅಭಿಯಾನವನ್ನು ಸಮಿತಿ ಶಿಫಾರಸು ಮಾಡಿದೆ.

7. ಎಲ್ಲ ರಾಜ್ಯಗಳು ಮತ್ತು ಕೇಂದ್ರಾಡಳಿತ ಪ್ರದೇಶಗಳು ಮಾಹಿತಿಯನ್ನು ಪ್ರಸಾರ ಮಾಡಲು, ಪೋಷಕರು ಮತ್ತು ಮಕ್ಕಳಿಗೆ ಮಾರ್ಗದರ್ಶನ ನೀಡಲು, ಪ್ರತಿ ಮಗುವಿಗೂ ಗಮನ ನೀಡಲು ಸಾಧ್ಯವಾಗುವಂತಹ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವಲ್ಲಿ ಸಾಮಾನ್ಯ ಶಿಕ್ಷಣದ ಶಿಕ್ಷಕರಿಗೆ ನೆರವಾಗಲು, ಲೆಕ್ಕ ಪರಿಶೋಧನೆಗೆ ಮತ್ತು ಕಟ್ಟಡಗಳು ಹಾಗೂ ಪೀಠೋಪಕರಣಗಳ ವಿನ್ಯಾಸದಿಂದ ಉಂಟಾಗಬಹುದಾದ ಅಡೆತಡೆಗಳನ್ನು ಪರಿಶೀಲಿಸಲು, ಕೈಗೊಳ್ಳಲಾಗಿರುವ ಮಧ್ಯಪ್ರವೇಶಿಕೆಗಳ ಮೌಲ್ಯಮಾಪನ ಮತ್ತು ದಾಖಲೀಕರಣ ಮಾಡಲು ಬಹುಶಿಸ್ತೀಯ ಸಂಪನ್ಮೂಲ ತಂಡಗಳನ್ನು ಜಿಲ್ಲಾ ಮತ್ತು ತಾಲ್ಲೂಕಾ ಮಟ್ಟಗಳಲ್ಲಿ ರಚಿಸಬೇಕು.
8. ಅಂಗನವಾಡಿ ಕೇಂದ್ರಗಳನ್ನು ಸಾಧ್ಯವಿರುವ ಕಡೆಗಳಲ್ಲೆಲ್ಲ ಶಾಲೆಯ ಆವರಣಕ್ಕೆ ಸ್ಥಳಾಂತರಿಸಬಹುದು. ಇದರಿಂದಾಗಿ, ಅಂಗನವಾಡಿ ಮಕ್ಕಳು ಸಹ ಶಾಲೆಯಲ್ಲಿ ಲಭ್ಯವಿರುವ ಸೌಲಭ್ಯಗಳನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ. ಮುಂದೆ, ಅಂಗನವಾಡಿಯಿಂದ ಮಕ್ಕಳು ಪ್ರಾಥಮಿಕ ಶಾಲೆಗಳಿಗೆ ಸೇರಲು ಇದರಿಂದ ಅನುಕೂಲವಾಗಲಿದೆ.

**ನಿರೀಕ್ಷಿತ ಫಲಿತಾಂಶ 2: ವಿಕಲಾಂಗ ಮಕ್ಕಳು ಮತ್ತು ಯುವಜನರು ತಮ್ಮ ಕಲಿಕೆ ಮತ್ತು ಸಾಮರ್ಥ್ಯಗಳನ್ನು ಅಭಿವೃದ್ಧಿಪಡಿಸಿಕೊಳ್ಳಲು ಸೂಕ್ತವಾದ ಪಠ್ಯಕ್ರಮ, ಸಾಂಸ್ಥಿಕ ವ್ಯವಸ್ಥೆಗಳು, ಬೋಧನಾ ತಂತ್ರಗಳು, ಸಂಪನ್ಮೂಲಗಳ ಬಳಕೆ ಮತ್ತು ಸಮುದಾಯಗಳೊಂದಿಗಿನ ಪಾಲುದಾರಿಕೆಯ ಮೂಲಕ ಗುಣಮಟ್ಟದ ಶಿಕ್ಷಣವನ್ನು ಅವರಿಗೆ ಒದಗಿಸಿಕೊಡುವುದು.**

**ಶಿಫಾರಸುಗಳು:**

1. ಕೈಕಾಲುಗಳ ಸ್ನಾಯು ಚಲನೆಯ ಅಸಮರ್ಥತೆ ಹೊಂದಿರುವ ಮಕ್ಕಳು ಶಾಲೆಗೆ ಬರದಂತೆ ತಡೆಯುವ ಭೌತಿಕ ಪರಿಸರದ ಮಿತಿಗಳನ್ನು ತೆಗೆದುಹಾಕುವುದು. ಶ್ರವಣ ಮತ್ತು ದೃಷ್ಟಿ ದೋಷ ಹೊಂದಿರುವ ವಿಕಲಾಂಗ ಮಕ್ಕಳಿಗೆ ಅಗತ್ಯವಿರುವ ಸಂಪನ್ಮೂಲಗಳು ಮತ್ತು ಅಧ್ಯಯನ ಸಾಮಗ್ರಿಗಳನ್ನು ಅವರ ಕೈಗೆಟುಕುವ ರೂಪದಲ್ಲಿ ಲಭ್ಯವಾಗುವಂತೆ ನೋಡಿಕೊಳ್ಳುವುದು. ಸರ್ವ ಶಿಕ್ಷಣ ಅಭಿಯಾನ ಯೋಜನೆಯು ಶಾಲೆಗಳ ಕಟ್ಟಡ ವಿನ್ಯಾಸದ ಕಾರಣದಿಂದಾಗಿ ಚಲನೆಗೆ ಉಂಟಾಗಿರುವ ಅಡೆತಡೆಗಳನ್ನು ತೆಗೆದುಹಾಕಿ ವಿಶೇಷ ಅಗತ್ಯತೆಯುಳ್ಳ ಮಕ್ಕಳು ಸುಲಭವಾಗಿ ಶಾಲೆಯೊಳಗೆ ಪ್ರವೇಶಿಸಲು ಅನುವು ಮಾಡಿಕೊಡುವ ವಾತಾವರಣವನ್ನು ಒದಗಿಸಲು ಶಾಲಾ ಕಟ್ಟಡಗಳಿಗೆ ನವೀನ ವಿನ್ಯಾಸಗಳನ್ನು ಕಾರ್ಯಕ್ರಮದ ಅಂಗವಾಗಿ ಅಭಿವೃದ್ಧಿಪಡಿಸಲಾಗುತ್ತದೆ. ಆದ್ದರಿಂದ, ಸರ್ಕಾರಿ/ಖಾಸಗಿ ವಲಯಗಳು ನಿರ್ಮಿಸುವ ಎಲ್ಲ ಹೊಸ ಶಾಲಾ ಕಟ್ಟಡಗಳು ಇಂತಹ ಮಿತಿಗಳನ್ನು ಹೊಂದಿರದೆ ಮುಕ್ತವಾಗಿರಬೇಕು. ಅಲ್ಲದೆ, ಈಗಿರುವ ಶಾಲೆಗಳನ್ನು ಒಂದು ಕಾಲಮಿತಿಯ ಒಳಗಾಗಿ ಇಂತಹ ಅಡೆತಡೆಗಳಿಂದ ಮುಕ್ತಗೊಳಿಸಬೇಕು. ರಾಜ್ಯ/ಕೇಂದ್ರ ಶಿಕ್ಷಣ ಮಂಡಳಿಗಳು ಇಂತಹ ಅಡೆತಡೆಗಳಿಂದ ಹೊರತಾದ ಶಾಲಾ ಕಟ್ಟಡಗಳಿಗೆ ಮಾತ್ರ ಅನುಮೋದನೆ ನೀಡುವಂತೆ ಸಂಬಂಧಪಟ್ಟ ಎಲ್ಲರಿಗೂ ಸೂಚನೆ ನೀಡಬಹುದು. ನಗರ

ವ್ಯವಹಾರಗಳು ಮತ್ತು ಉದ್ಯೋಗ ಸಚಿವಾಲಯವು ಅಂಗವಿಕಲರು ಮತ್ತು ಹಿರಿಯ ನಾಗರಿಕರಿಗಾಗಿ ಇಂತಹ ಅಡೆತಡೆಗಳಿಂದ ಮುಕ್ತವಾದ ಪರಿಸರವನ್ನು ಹೊಂದಿರುವ ಕಟ್ಟಡ ನಿರ್ಮಾಣಕ್ಕಾಗಿ ಮಾರ್ಗಸೂಚಿಗಳು ಮತ್ತು ಸ್ಥಳಾವಕಾಶದ ಮಾನದಂಡಗಳ ಚೌಕಟ್ಟನ್ನು ರೂಪಿಸಿದ್ದು, ಈ ಉದ್ದೇಶಕ್ಕಾಗಿ ಅವುಗಳನ್ನು ಅನುಸರಿಸುವುದು.

2. ಯೋಜನೆಗಳಲ್ಲಿನ ನಿಬಂಧನೆಗಳಂತೆ ವಿಶೇಷ ಶಿಕ್ಷಕರ ಸೇವೆಗಳು ಎಲ್ಲ ಸಮನ್ವಯ ಶಾಲೆಗಳಿಗೆ ಲಭ್ಯವಿರಬೇಕು. ಪ್ರತಿ ಶಾಲೆಯಲ್ಲಿ ವಿಶೇಷ ಶಿಕ್ಷಕರ ಸ್ಥಾನದಲ್ಲಿ ಕನಿಷ್ಠ ಒಬ್ಬರ ಸೇವೆ ಲಭ್ಯವಿದ್ದು, ಅವಶ್ಯಕತೆ ಇದ್ದಲ್ಲಿ ಅವರು ಶಾಲಾ ಸಮೂಹದ ಇತರ ಶಾಲೆಗಳಲ್ಲಿ ಕೂಡ ಕೆಲಸ ಮಾಡಬಹುದು. ಹೀಗೆ ನೇಮಕಗೊಂಡ ವಿಶೇಷ ಶಿಕ್ಷರು ವರ್ಗ ಶಿಕ್ಷಕರು, ಪಾಲಕರು ಮತ್ತು ಪೋಷಣೆ ನೀಡುವವರೊಂದಿಗೆ ಕೂಡಿ ಸಮನ್ವಯತೆಯಿಂದ ಕಾರ್ಯನಿರ್ವಹಿಸುತ್ತಾರೆ. ಸಮನ್ವಯ ಶಾಲೆಗಳಲ್ಲಿ ಸಾಮಾನ್ಯ ಶಿಕ್ಷಕರಿಗೆ ಇರುವ ಸಮಾನವಾದ ಸ್ಥಾನಮಾನವನ್ನೇ ಅವರು ಪಡೆಯುವಂತಿರಬೇಕು.
3. 'ಎಲ್ಲರಿಗೂ ಶಿಕ್ಷಣ'ದ ಉದ್ದೇಶಗಳನ್ನು ಸಾಧಿಸುವಲ್ಲಿ ಸಾಮಾನ್ಯ ಮತ್ತು ವಿಶೇಷ ಈ ಎರಡೂ ಬಗೆಯ ಶಿಕ್ಷಕರು ನಿರ್ಣಾಯಕ ಪಾತ್ರವಹಿಸಬೇಕಾಗಿದ್ದು ಶಾಲಾ ವ್ಯವಸ್ಥೆಗೆ ಅವರು ಸಹಾಯ ಮಾಡುವ ಅವಶ್ಯಕತೆಯಿದೆ. ಆದಾಗ್ಯೂ, ಸಮನ್ವಯತೆಯ ವ್ಯವಸ್ಥೆಯೊಂದರಲ್ಲಿ, ಈ ಎರಡು ವಿಧದ ಶಿಕ್ಷಕರು ಅವರ ಪರಿಣತಿ ಮತ್ತು ಸಾಮರ್ಥ್ಯಗಳ ಬಳಕೆಯನ್ನು ವಿಕಲಾಂಗ ಮಕ್ಕಳನ್ನೂ ಒಳಗೊಂಡಂತೆ ಎಲ್ಲ ಮಕ್ಕಳಿಗೆ ಶಿಕ್ಷಣವನ್ನು ಗರಿಷ್ಠಗೊಳಿಸುವಲ್ಲಿ ಬಳಸುವ ಹಾಗೆ ಅವರ ಪಾತ್ರಗಳನ್ನು ನಿಗದಿಗೊಳಿಸುವ ಅಗತ್ಯವಿದೆ. ಸಾಮಾನ್ಯ ಶಿಕ್ಷಕರು ತರಗತಿಯ ಎಲ್ಲ ಮಕ್ಕಳಿಗೆ ಕಲಿಸುವ ಜವಾಬ್ದಾರಿ ಹೊಂದಿರುತ್ತಾರೆ. ವಿಶೇಷ ಶಿಕ್ಷಕರು ತರಗತಿಯಲ್ಲಿ ಬೆಂಬಲವನ್ನು ಒದಗಿಸುವುದರ ಜೊತೆಗೆ ಪರಿಹಾರ ಬೋಧನೆಯನ್ನು ಆಯೋಜಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಕಲಿಕೆ ಎಲ್ಲ ಮಕ್ಕಳಿಗೂ ಅನುಕೂಲಕರವಾಗಿರುವಂತೆ ಮಾಡುವಲ್ಲಿ ಸೂಕ್ತವಾದ ಕಲಿಕಾ-ಬೋಧನಾ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸುವ ಕಾರ್ಯವನ್ನು ವಿಶೇಷ ಶಿಕ್ಷಕರು ವಹಿಸಿಕೊಳ್ಳುತ್ತಾರೆ.
4. ಶಾಲಾ ವಿಷಯಗಳ ಜೊತೆಗೆ ವಿಶೇಷ ಶಿಕ್ಷಣವನ್ನು ಅಧ್ಯಯನ ಮಾಡುವ ಈ ವಿಶೇಷ ಶಿಕ್ಷಕರನ್ನು ಶಿಕ್ಷಕರ ಪ್ರಶಿಕ್ಷಣದ ರಾಷ್ಟ್ರೀಯ ಮಂಡಳಿ (NCTE-National Council for Teacher Education) ಸಾಮಾನ್ಯ ಶಿಕ್ಷಕರಿಗೆ ಸಮಾನವಾಗಿ ಪರಿಗಣಿಸಬೇಕು ಮತ್ತು ಪರಸ್ಪರ ಬದಲಾವಣೆ ಮಾಡದೆಯೇ ಸಾಮಾನ್ಯ ಶಿಕ್ಷಕರಿಗೆ ಸಮಾನವಾದ ವೇತನ ಪಾವತಿ ಮಾಡಬೇಕು. ಶಿಕ್ಷಕ ವೃತ್ತಿಯ ಆಕಾಂಕ್ಷಿಗಳು ವಿಶೇಷ ಶಿಕ್ಷಕರಾಗಲು ತಾವಾಗಿಯೇ ಮುಂದೆ ಬರದೆ ಇರುವುದರಿಂದಾಗಿ ಪ್ರಸ್ತುತ ಇದರ ಕೊರತೆ ಇದೆ. ಅಲ್ಲದೆ, ಸೇವಾನಿರತ ತರಬೇತಿಯನ್ನು ಪೂರ್ಣಗೊಳಿಸುವ ಶಿಕ್ಷಕರು ಮತ್ತು ವಿಶೇಷ ಶಿಕ್ಷಣದಲ್ಲಿ ಹೆಚ್ಚುವರಿ ಬಿ.ಇಡಿ (B.Ed) ಪಡೆದವರಿಗೆ ಪ್ರೋತ್ಸಾಹ ಧನವನ್ನು ನೀಡಬಹುದು.
5. ಸಮನ್ವಯ ಶಿಕ್ಷಣ ಎಂದರೆ ನಿಜಾರ್ಥದಲ್ಲಿ ಅದು ಶಾಲಾ ತರಗತಿಗಳ ಮತ್ತು ಪಠ್ಯಕ್ರಮದ ಕಲಿಕಾ-ಬೋಧನಾ ಪ್ರಕ್ರಿಯೆಗಳ ಮರುಸಂಘಟನೆ. ಆದ್ದರಿಂದ, ಕೆಲವು ಮಾದರಿ

ಸಮನ್ವಯ ಶಾಲೆಗಳನ್ನು ರೂಪಿಸಿ ಅಭಿವೃದ್ಧಿಪಡಿಸಲು ಶಿಫಾರಸು ಮಾಡಲಾಗಿದೆ. ಇಂತಹ ಶಾಲೆಗಳು ಇತರ ಶಾಲೆಗಳಿಗೆ ಮಾದರಿ ಶಾಲೆಗಳಾಗಿ ಕಾರ್ಯನಿರ್ವಹಿಸಲಿವೆ.

6. ಈಗಾಗಲೇ ತಡವಾಗಿ ಶಾಲಾ ಕಲಿಕೆಯನ್ನು ಪ್ರಾರಂಭಿಸಿದ ವಿಕಲಾಂಗ ಮಕ್ಕಳ ಶಿಕ್ಷಣದ ಜವಾಬ್ದಾರಿಯನ್ನು ನೋಡಿಕೊಳ್ಳಲು ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ವಿಶೇಷ ಕಾರ್ಯಕ್ರಮಗಳನ್ನು ರೂಪಿಸಿ ಅಭಿವೃದ್ಧಿಪಡಿಸಬೇಕು.
7. ವಿಶೇಷ ಅಗತ್ಯತೆ ಇರುವ ಮಕ್ಕಳಿಗಾಗಿ ಪಠ್ಯಕ್ರಮವನ್ನು ಅಳವಡಿಸಿಕೊಳ್ಳುವಾಗ ಆ ಮಕ್ಕಳಿಗೆ ಇರುವ ಮಿತಿಗಳಿಗಿಂತ ಹೆಚ್ಚಾಗಿ ಅವರಿಗಿರುವ ಸಾಮರ್ಥ್ಯಗಳು ಮತ್ತು ಅವರು ಏನೇನು ಮಾಡಲು ಸಮರ್ಥರು ಎಂಬುದರ ಮೇಲೆ ಹೆಚ್ಚಿನ ಗಮನವನ್ನು ಕೇಂದ್ರೀಕರಿಸಬೇಕು.
8. ದೃಷ್ಟಿದೋಷ ಇರುವ ಮಕ್ಕಳಿಗೆ ಮತ್ತು ಯುವಜನರಿಗೆ ಪಠ್ಯಪುಸ್ತಕಗಳು ಸೇರಿದಂತೆ ವಿವಿಧ ವಿಷಯಗಳ ಅಧ್ಯಯನ ಸಾಮಗ್ರಿಗಳು ಬ್ರೈಲ್ ಲಿಪಿಯ ವ್ಯವಸ್ಥೆ, ದೊಡ್ಡ ಅಕ್ಷರಗಳಲ್ಲಿ ಮುದ್ರಿತವಾದವುಗಳು ಮತ್ತು ಆಡಿಯೋ ರೂಪ ಹಾಗೂ ಡೈಸಿ ಮುದ್ರಣಗಳಲ್ಲಿ ಲಭ್ಯವಾಗುವಂತೆ ಮಾಡಬೇಕು. ವಿಶೇಷ ಕಲಿಕಾ-ಬೋಧನಾ ಸಾಮಗ್ರಿಗಳನ್ನು (TLM) ಶಾಲೆಗಳಲ್ಲಿ ಒದಗಿಸಿಕೊಡುವ ಅವಶ್ಯಕತೆ ಇದೆ. ಶ್ರವಣ ಮತ್ತು ದೃಷ್ಟಿ ದೋಷ ಇರುವ ಮಕ್ಕಳಿಗೆ ಅಗತ್ಯವಿರುವ ಸಂಪನ್ಮೂಲಗಳು ಮತ್ತು ಅಧ್ಯಯನ ಸಾಮಗ್ರಿಗಳು ಮಕ್ಕಳು ಸುಲಭವಾಗಿ ಪಡೆದುಕೊಳ್ಳುವ ರೂಪದಲ್ಲಿ ಅವರಿಗೆ ಲಭ್ಯವಾಗುವಂತೆ ಸಂಪನ್ಮೂಲ ಕೊಠಡಿಗಳನ್ನು ವ್ಯವಸ್ಥೆಗೊಳಿಸುವ ಅಗತ್ಯವಿದೆ.
9. ಶಾಲಾ ಶಿಕ್ಷಣ ವ್ಯವಸ್ಥೆಯು ಇತರ ಮಕ್ಕಳೊಂದಿಗೆ ವಿಶೇಷ ಅಗತ್ಯವುಳ್ಳ ಮಕ್ಕಳೆಲ್ಲರ ಮನೋ-ಸಾಮಾಜಿಕ ಅವಶ್ಯಕತೆಗಳನ್ನು ಪೂರೈಸಿಕೊಡಬೇಕು ಮತ್ತು ಯುವಜನರ ಭಾವನಾತ್ಮಕ ಬೆಳವಣಿಗೆಯನ್ನು ಖಾತರಿಪಡಿಸಬೇಕು; ಆದುದರಿಂದ, ಇವೆಲ್ಲವುಗಳನ್ನು ಖಾತರಿಪಡಿಸಲು ಪ್ರತಿಯೊಂದು ಹಂತದಲ್ಲೂ ನಿರ್ದಿಷ್ಟ ಮಧ್ಯಪ್ರವೇಶಿಕೆಗಳನ್ನು ಸಂಯೋಜಿಸಬೇಕು.
10. ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ಸಮನ್ವಯ ಶಾಲೆಗಳಲ್ಲಿ ಅರ್ಹ ಮತ್ತು ಸಮರ್ಥ ಶಿಕ್ಷಕರು ಇರುವ ಹಾಗೆ ಸೇವಾನಿರತ ಮತ್ತು ಸೇವಾಪೂರ್ವ ಶಿಕ್ಷಕರ ಪ್ರಶಿಕ್ಷಣದ ಪಠ್ಯಕ್ರಮ/ಕಾರ್ಯಕ್ರಮಗಳಿರುವ ಹಾಗೆ ತಕ್ಷಣ ಗಮನಹರಿಸಬೇಕು. ಇದರಿಂದಾಗಿ ಪ್ರತಿ ಮಗುವೂ ಕಲಿಯುವ ಹಾಗೆ ವಿಕಲಾಂಗ ಮಕ್ಕಳ ಶೈಕ್ಷಣಿಕ ಅವಶ್ಯಕತೆಗಳನ್ನು ಮತ್ತು ಕಲಿಕೆಯಲ್ಲಿ ಅವರು ಎದುರಿಸುವ ತೊಂದರೆಗಳನ್ನು ನಿಭಾಯಿಸಲು ಸೂಕ್ತವಾದ ಕಲಿಕಾ-ಬೋಧನಾ ಪ್ರಕ್ರಿಯೆಗಳನ್ನು ರೂಪಿಸಿ ಆ ಮಕ್ಕಳ ಕಲಿಕೆಗೆ ಹೆಚ್ಚಿನ ಗಮನ ಕೊಡಲು ಸಾಧ್ಯವಾಗುತ್ತದೆ. ಸೇವಾಪೂರ್ವ ಶಿಕ್ಷಕರ ಪ್ರಶಿಕ್ಷಣ ಪಠ್ಯಕ್ರಮ ಮತ್ತು ಸೇವಾನಿರತ ಶಿಕ್ಷಕರ ತರಬೇತಿ ಕಾರ್ಯಕ್ರಮಗಳನ್ನು ಸಂಬಂಧಿಸಿದ ನೀತಿಗಳು, ಸಮಗ್ರ ಕ್ರಿಯಾ ಯೋಜನೆ ಮತ್ತು ರಾಜ್ಯ ನಿರ್ದಿಷ್ಟ ಅವಶ್ಯಕತೆಗಳಿಗೆ ಅನುಗುಣವಾಗಿದೆಯೇ ಎಂದು ಪರಿಶೀಲಿಸಿ ಸೂಕ್ತ ರೀತಿಯಲ್ಲಿ ಪರಿಷ್ಕರಣೆ ಮಾಡಬೇಕು ಎಂದು ಶಿಫಾರಸು ಮಾಡಲಾಗಿದೆ.
11. ಮಾನವ ಸಂಪನ್ಮೂಲ ಅಭಿವೃದ್ಧಿ ಮಂತ್ರಾಲಯವು ಪರಿಶಿಷ್ಟ ಜಾತಿ ಮತ್ತು ಪರಿಶಿಷ್ಟ ಪಂಗಡದವರು ಮತ್ತು ಅಲ್ಪಸಂಖ್ಯಾತರು ಈ ಕ್ಷೇತ್ರಗಳಿಗೆ ಸಂಬಂಧಿಸಿದಂತೆ ಶಿಕ್ಷಕರ ಶೈಕ್ಷಣಿಕ ಸಾಮರ್ಥ್ಯವನ್ನು ಹೆಚ್ಚಿಸುವ ಪ್ರಯತ್ನದಲ್ಲಿವೆ. ಹಾಗೆಯೇ, ಅಂಗವಿಕಲತೆಯ ಸಮಸ್ಯೆಗಳ ಕುರಿತು ಸಾಮಾನ್ಯ ಶಿಕ್ಷಕರ ಶೈಕ್ಷಣಿಕ ಸಾಮರ್ಥ್ಯವನ್ನು ಹೆಚ್ಚಿಸುವ

ಅವಶ್ಯಕತೆಯಿದೆ. ಇದಕ್ಕಾಗಿ ಸೇವೆಯಲ್ಲಿರುವ ಎಲ್ಲ ಶಿಕ್ಷಕರಿಗೆ ವಿಷಯ ಪರಿಣತಿ ನೀಡುವ ಮೂರು ದಿನಗಳ ಕಾರ್ಯಕ್ರಮವನ್ನು ಒದಗಿಸಬಹುದಾಗಿದೆ.

12. ವೈವಿಧ್ಯತೆಯನ್ನು ಗೌರವಿಸುವ ಮತ್ತು ಎಲ್ಲರನ್ನು ಒಳಗೊಳ್ಳುವ ಸಮಾಜದ ಪರಿಕಲ್ಪನೆಯನ್ನು ಬೆಳೆಸುವ ನಿಟ್ಟಿನಲ್ಲಿ ಶಿಕ್ಷಕರ ಪ್ರಶಿಕ್ಷಣ ಕಾರ್ಯಕ್ರಮಗಳಲ್ಲಿ ಶಿಕ್ಷಣದ ಒಂದು ಅಂಶವಾಗಿ ಮಾನವ ಹಕ್ಕನ್ನು ಅಳವಡಿಸಬೇಕಾಗಿದೆ.
13. ವಿಕಲಾಂಗ ಮಕ್ಕಳನ್ನು ಒಳಗೊಂಡಂತೆ ಎಲ್ಲ ಮಕ್ಕಳ ಸಮಗ್ರ ಅಭಿವೃದ್ಧಿಗಾಗಿ ಕಾಳಜಿವಹಿಸಬೇಕು. ನಮ್ಮ ಪರಂಪರೆಯ ವಿವಿಧ ಅಂಶಗಳನ್ನು ಅಂಗವಿಕಲ ಮಕ್ಕಳ ಬದುಕಿಗೆ ತರಬೇಕು. ಜಾನಪದ ಸಂಗೀತ, ನೃತ್ಯ, ಯೋಗ ಮತ್ತು ಧ್ಯಾನ, ಕರಕುಶಲ ಕಾರ್ಯಾಗಾರಗಳಿಗೆ ಅವಕಾಶ ಮಾಡಿಕೊಡುವುದು, ಶ್ರೇಷ್ಠ ಚಲನಚಿತ್ರಗಳನ್ನು ನೋಡಲು ಅವಕಾಶ ಕಲ್ಪಿಸುವುದು, ಇತಿಹಾಸಕಾರರೊಂದಿಗೆ ಚಾರಿತ್ರಿಕ ಸ್ಮಾರಕಗಳಿಗೆ ಪ್ರವಾಸ ಕೈಗೊಳ್ಳುವುದು, ಮತ್ತು ಪ್ರಖ್ಯಾತ ಬರಹಗಾರರು, ವರ್ಣಚಿತ್ರಕಾರರು ಮತ್ತು ತತ್ವಜ್ಞಾನಿಗಳ ಜೊತೆಗೆ ಮಾತುಕತೆ ಏರ್ಪಡಿಸುವುದು ಅಂತಹ ಕೆಲವು ಉದಾಹರಣೆಗಳು.
14. 3-6 ವರ್ಷ ವಯಸ್ಸಿನ ವಿಶೇಷ ಅಗತ್ಯತೆಯುಳ್ಳ ಮಕ್ಕಳಿಗೆ ವಿಶೇಷ ಗಮನ ನೀಡುವ ಅವಶ್ಯಕತೆ ಇದೆ. ಆದ್ದರಿಂದ, ಸಮಗ್ರ ಮಕ್ಕಳ ಅಭಿವೃದ್ಧಿ ಸೇವೆಗಳ ಕಾರ್ಯಕ್ರಮದ ಮೇಲೆ ಈ ಕುರಿತು ಹೆಚ್ಚಿನ ಗಮನ ಹರಿಸಬೇಕು ಎಂದು ಶಿಫಾರಸು ಮಾಡಲಾಗಿದೆ. ಅಂಗನವಾಡಿ ಕಾರ್ಯಕರ್ತೆಯರಿಗೆ ಮಕ್ಕಳ ನಿರ್ದಿಷ್ಟ ವಯಸ್ಸು ಮತ್ತು ಆಯಾ ಹಂತಗಳಿಗೆ ಸೂಕ್ತವಾಗಿ ಅವರಲ್ಲಿ ಆಗಬೇಕಾದ ಬೆಳವಣಿಗೆಗಳ ಕುರಿತು ಸೂಕ್ತ ತರಬೇತಿ ಇರಬೇಕು.
15. ಆರಂಭಿಕ ಭಾಷಾ ಕಲಿಕೆಯನ್ನು ಹೊಂದಿರದ ಶ್ರವಣ ದೋಷವಿರುವ ಮಕ್ಕಳು ವ್ಯಾಸಂಗ ಮಾಡುತ್ತಿರುವ ಶಾಲೆಗಳಲ್ಲಿ ಕಲಿಕಾ ಮಾಧ್ಯಮವಾಗಿ ಕೂಡ ಸಂಜ್ಞಾ ಭಾಷೆಯನ್ನು ಬಳಸುವಂತಾಗಬೇಕು. ಇದಕ್ಕಾಗಿ, ಸಮನ್ವಯ ಶಿಕ್ಷಣದ ಶಾಲೆಗಳಲ್ಲಿ ಕಲಿಸಲು ಸಂಜ್ಞಾ ಭಾಷೆಯಲ್ಲಿ ತರಬೇತಿ ಪಡೆದ ಶಿಕ್ಷಕರ ಅಗತ್ಯವಿದೆ. ಉನ್ನತ ಶಿಕ್ಷಣದವರೆಗೆ ಅದನ್ನು ಒಂದು ಭಾಷೆಯಾಗಿ ಬೆಳೆಸುವ ಪ್ರಯತ್ನವೂ ನಡೆಯಬೇಕು.
16. ವಿಶೇಷ ಅಗತ್ಯತೆಯುಳ್ಳ ಪ್ರತಿಭಾವಂತ ಮಕ್ಕಳಿಗೆ ವಿಶೇಷವಾದ ತರಬೇತಿಗಳನ್ನು ಆಯೋಜಿಸುವುದರಿಂದ ಅವರು ಕೂಡ ಐಐಟಿ (IIT), ಐಐಎಂ (IIM) ಗಳಂತಹ ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳಿಗೆ ಪ್ರವೇಶ ಪಡೆಯಬಹುದು ಮತ್ತು ಭೌತಶಾಸ್ತ್ರ, ರಸಾಯನಶಾಸ್ತ್ರ ಮತ್ತು ಗಣಿತಶಾಸ್ತ್ರದ ವಿಶೇಷ ಸುಧಾರಿತ ಕೋರ್ಸ್ ಗಳಿಗೆ ಸೇರಬಹುದು.
17. ಸಮನ್ವಯ ಶಿಕ್ಷಣ ಮತ್ತು ಅದರ ಘಟಕಗಳ ಬಗ್ಗೆ ಜಿಲ್ಲಾ ಮಟ್ಟದಲ್ಲಿ ಅಧಿಕಾರಿಗಳನ್ನು ಸಂವೇದನಾಶೀಲಗೊಳಿಸುವ ತುರ್ತು ಅವಶ್ಯಕತೆಯಿದೆ. ಏಕೆಂದರೆ, ಅವರಲ್ಲಿ ಹೆಚ್ಚಿನವರು ಸಮನ್ವಯತೆಯ ಪರಿಕಲ್ಪನೆಯ ಬಗ್ಗೆ ಕೇಳಿಯೇ ಇಲ್ಲ. ಇದರ ಪರಿಣಾಮವಾಗಿ ವಿಶೇಷ ಅಗತ್ಯತೆಯುಳ್ಳ ಮಕ್ಕಳ ನಡುವಿನ ಅತ್ಯಂತ ಕಷ್ಟಕರ ಗುಂಪುಗಳಲ್ಲಿ ಒಂದಾದ ಬಹುವಿಕಲಾಂಗ ಮಕ್ಕಳು ಗೃಹಾಧಾರಿತ ಶಿಕ್ಷಣದಲ್ಲಿ ಸಿಕ್ಕಿಬೀಳುತ್ತಾರೆ. ಸದ್ಯದಲ್ಲಿ ಗೃಹಾಧಾರಿತ ಶಿಕ್ಷಣವು ಸೇತುಬಂಧ ಕಾರ್ಯಕ್ರಮವಾಗಿ ಬಳಕೆಯಾಗುತ್ತಿದ್ದು, ಈ ಮಕ್ಕಳ ಮಟ್ಟಿಗೆ ಅದು ಶಿಕ್ಷಣದ ಪ್ರಾರಂಭಿಕ ಹಂತವಾಗಿದೆ. ಅವರ ಅವಶ್ಯಕತೆಗಳು ಮತ್ತು ಸೇರ್ಪಡೆಗಳನ್ನು ಪೂರೈಸಲು ಹೆಚ್ಚಿನ ಆಯ್ಕೆಗಳು ಮತ್ತು ಕಾರ್ಯತಂತ್ರಗಳನ್ನು ಇನ್ನಷ್ಟೇ ರೂಪಿಸಬೇಕಾಗಿದೆ.
18. ಶಿಕ್ಷಕರು ತಮ್ಮ ಸ್ವವಿವರವನ್ನು ನಮೂದಿಸಿ ಹಂಚಿಕೊಳ್ಳಲು ಮೀಸಲಾದ ವೆಬ್ಸೈಟ್ ಅನ್ನು ಬಳಸಿಕೊಳ್ಳುವಂತೆ ಶಿಫಾರಸು ಮಾಡಲಾಗಿದೆ. ಸಾಮಾನ್ಯ ಶಾಲೆಗಳು

ವಿಳಂಬವಿಲ್ಲದೆ ಈ ಶಿಕ್ಷಕರ ಸೇವೆಯನ್ನು ಬಳಸಿಕೊಳ್ಳಲು ಇದು ಅನುವು ಮಾಡಿಕೊಡುತ್ತದೆ. ನೋಂದಾಯಿಸಿಕೊಂಡಿರುವ ಎಲ್ಲ ಶಿಕ್ಷಕರ ಪಟ್ಟಿಯನ್ನು ಭಾರತೀಯ ಪುನರ್ವಸತಿ ಮಂಡಳಿ (RCI- Rehabilitation Council of India) ಸಿದ್ಧಪಡಿಸಿದೆ.

19. ವಿಶ್ವವಿದ್ಯಾಲಯಗಳ ಅನುದಾನ ಮಂಡಳಿ (University Grants Commission-UGC) ಪ್ರಾಯೋಜಿತ ವಿಶೇಷ ಅಗತ್ಯತೆಯುಳ್ಳ ವ್ಯಕ್ತಿಗಳ ಉನ್ನತ ಶಿಕ್ಷಣ(Higher Education for the Persons with Special Needs –HEPSN) ಯೋಜನೆಯಲ್ಲಿ ಪ್ರಸ್ತುತ ಲಭ್ಯವಿರುವ ಅನುದಾನವು ಬಹಳ ಕಡಿಮೆಯಿದೆ. ಅದನ್ನು ಪರಿಷ್ಕರಿಸುವ ಅಗತ್ಯವಿದ್ದು, ಅದರ ಸಮರ್ಪಕ ಬಳಕೆಗಾಗಿ ಅದು ಅಭಿವೃದ್ಧಿ ಅನುದಾನದ ಭಾಗವಾಗಬೇಕಾಗಿದೆ.
20. ಸಮಗ್ರ ಕ್ರಿಯಾ ಯೋಜನೆಯನ್ನು ಕಾರ್ಯಗತಗೊಳಿಸುವಲ್ಲಿ ಸಮನ್ವಯತೆ ಮತ್ತು ಭಾಗೀದಾರಿಕೆಗಳು ಕೈಗೊಳ್ಳಲು ಸಾಧ್ಯವಿರುವ ಕಾರ್ಯತಂತ್ರವಾಗಿ ಹೊರಹೊಮ್ಮಿದೆ. ಯೋಜನೆ ರೂಪಿಸುವಲ್ಲಿ ಮತ್ತು ನಿರ್ಧಾರ ತೆಗೆದುಕೊಳ್ಳುವುದರಲ್ಲಿ ಪೋಷಕರ ಭಾಗವಹಿಸುವಿಕೆಯ ಮೂಲಕ ಅವರನ್ನು ಸಮಗ್ರ ಕ್ರಿಯಾಯೋಜನೆಯ ಅವಿಭಾಜ್ಯ ಅಂಗವಾಗಿಸಬೇಕೆಂದು ಪೋಷಕರ ಪಾತ್ರವನ್ನು ಶಿಫಾರಸು ಮಾಡಲಾಗಿದೆ. ಇದು ಅವರ ತರಬೇತಿಗೆ ಅನುವು ಮಾಡಿಕೊಡುವುದರೊಂದಿಗೆ ಅವರು ತಮ್ಮ ಮನೆಗಳಲ್ಲಿ ಅನುಸರಣಾ ಚಟುವಟಿಕೆಗಳನ್ನು ಕೈಗೊಳ್ಳಲು ಸಹಾಯಕವಾಗುತ್ತದೆ. ಆದ್ದರಿಂದ ಅಂತಹ ತರಬೇತಿಗಳನ್ನು ನಿರಂತರವಾಗಿ ಆಯೋಜಿಸಬೇಕು ಎಂದು ಶಿಫಾರಸು ಮಾಡಲಾಗಿದೆ.

**ನಿರೀಕ್ಷಿತ ಫಲಿತಾಂಶ 3: ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಅಸ್ತಿತ್ವದಲ್ಲಿರುವ ಮೀಸಲಾತಿಯ ಪಾಲಿನ ಸರಿಯಾದ ಅನುಷ್ಠಾನದ ಮೂಲಕ ವೃತ್ತಿಪರ ಉನ್ನತ ಶಿಕ್ಷಣವನ್ನು ಬೆಂಬಲಿಸುವುದುದು ಮತ್ತು ಎಲ್ಲ ಅಡೆತಡೆಗಳಿಂದ ಮುಕ್ತವಾದ ಕಲಿಕಾ ವಾತಾವರಣವನ್ನು ರೂಪಿಸುವುದು.**

**ಶಿಫಾರಸುಗಳು:**

1. ಎಲ್ಲ ಶಿಕ್ಷಣ ಸಂಸ್ಥೆಗಳಲ್ಲಿ ಶೇಕಡಾ 3ರಷ್ಟು ಮೀಸಲಾತಿಯನ್ನು ಕಡ್ಡಾಯ ಮತ್ತು ಶೀಘ್ರವಾಗಿ ಅನುಸರಿಸಬೇಕು. ಎಲ್ಲ ಸಂಸ್ಥೆಗಳು ವ್ಯವಸ್ಥಿತ ಕಾರ್ಯವಿಧಾನಗಳ ಮೂಲಕ ಅದನ್ನು ಖಾತರಿಪಡಿಸಬೇಕು.
2. ಮಾಹಿತಿ ತಂತ್ರಜ್ಞಾನ ಮತ್ತು ಸಂವಹನ (ICT)ಆಧಾರಿತ ವೃತ್ತಿಪರ ಕೋರ್ಸ್‌ಗಳನ್ನು ಅಭಿವೃದ್ಧಿಪಡಿಸಿ ವಿಕಲಾಂಗ ವ್ಯಕ್ತಿಗಳು ಅಧ್ಯಯನ ಮಾಡಲು ಅನುವಾಗುವಂತೆ ಅವನ್ನು ವೃತ್ತಿಪರ ಸಂಸ್ಥೆಗಳಿಗೆ ಲಭ್ಯವಾಗುವಂತೆ ಮಾಡಬೇಕು. ಭೋಪಾಲ್‌ನಲ್ಲಿರುವ ಪಂಡಿತ್ ಸುಂದರ್‌ಲಾಲ್ ಶರ್ಮಾ ಕೇಂದ್ರೀಯ ವೃತ್ತಿ ಶಿಕ್ಷಣ ಸಂಸ್ಥೆ (Pandith Sundarlal Sharma Central Institute of Vocational Education – PSSCIVE), ವಿಚಾರದಲ್ಲಿ ಮುಂದಾಳತ್ವ ವಹಿಸಿಕೊಳ್ಳಬೇಕು.

3. ವಿಕಲಾಂಗ ವ್ಯಕ್ತಿಗಳ ಬಳಕೆಗೆ ಅಗತ್ಯವಾದ ಯಂತ್ರಗಳು, ಸಾಧನ ಸಲಕರಣೆಗಳು ಮುಂತಾದವುಗಳನ್ನು ಆಯಾ ವ್ಯಕ್ತಿಗಳ ಅವಶ್ಯಕತೆಗಳಿಗೆ ಅನುಗುಣವಾಗಿ ಅಳವಡಿಕೆ ಮಾಡಿಕೊಡಬೇಕಾಗುತ್ತದೆ.
4. ಮೀಸಲಾತಿ ಸೇರಿದಂತೆ, ಪ್ರತಿಷ್ಠಿತ ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಪ್ರವೇಶ ಪಡೆಯಲು ಕ್ರಮಗಳನ್ನು ರೂಪಿಸಬೇಕು ಮತ್ತು ಅದನ್ನು ಎಲ್ಲ ಸಂಸ್ಥೆಗಳಿಗೆ ಪ್ರಸಾರ ಮಾಡಬೇಕು.
5. ಉನ್ನತ ಶಿಕ್ಷಣ ಸಂಸ್ಥೆಗಳಲ್ಲಿ ಅಂಗವಿಕಲಸ್ನೇಹಿ ಶೌಚಾಲಯಗಳು ಮತ್ತು ಸಂಚಾರಕ್ಕಾಗಿ ಇಳಿಜಾರಿನಿಂದ ಕೂಡಿದ ಸಂಚಾರ ವ್ಯವಸ್ಥೆ ಅತ್ಯಗತ್ಯ. ಗ್ರಂಥಾಲಯಗಳು, ನೆರಳಚ್ಚು ಯಂತ್ರಗಳಿರುವ ಸ್ಥಳಗಳು, ಮತ್ತು ಪ್ರಯೋಗಾಲಯಗಳಂತಹ ಎಲ್ಲ ಸೌಲಭ್ಯಗಳಿಗೆ ಸರಾಗ ಪ್ರವೇಶಾವಕಾಶ ಒದಗಿಸುವ ವ್ಯವಸ್ಥೆ ಮಾಡುವುದು ಅತ್ಯಂತ ಪ್ರಮುಖ ಅಂಶವಾಗಿದೆ.
6. ವಿಶ್ವವಿದ್ಯಾಲಯಗಳ ಅನುದಾನ ಸಮಿತಿ (UGC) ಯು ಎಲ್ಲ ಕಟ್ಟಡಗಳನ್ನು ಅಂಗವಿಕಲರ ಸ್ನೇಹಿಯನ್ನಾಗಿ ಮಾಡಬೇಕೆಂದು 1971ರಲ್ಲಿ ನಿರ್ದೇಶನ ನೀಡಿತ್ತು. ಈ ನಿರ್ದೇಶನಗಳನ್ನು ಜಾರಿಗೊಳಿಸಿದ ನಂತರ ಮಾತ್ರ ಅಂತಿಮ ಅನುದಾನವನ್ನು ಬಿಡುಗಡೆ ಮಾಡಲಾಗುವುದು ಎನ್ನುವ ಷರತ್ತು ವಿಧಿಸಬಹುದು.
7. ಆಯೋಜಿಸಿರುವ ರೀತಿಯಲ್ಲಿ ಅಂಗವಿಕಲತೆಗಾಗಿ ಕೆಲಸ ಮಾಡುವ ಸಂಯೋಜಕರು ಆಯಾ ಸ್ಥಾನಕ್ಕೆ ನೇಮಕ ಮಾಡುವುದು.
8. ಮೇಲ್ವಿಚಾರಣೆಯು ನಿಗದಿತ ಅನುಷ್ಠಾನದ ಅವಧಿಯ ಭಾಗವಾಗಿರಬೇಕು. ಕೈಗೊಳ್ಳಲಾಗಿರುವ ಸಮರ್ಪಕ ಕ್ರಮದ ಸೂಕ್ತ ಮೇಲ್ವಿಚಾರಣೆಯನ್ನು ಖಾತರಿಪಡಿಸುವಲ್ಲಿ ಫಲಿತಾಂಶ ಆಧಾರಿತ ನಿರ್ವಹಣೆಯ ವಿನ್ಯಾಸವು ಅತ್ಯಂತ ಪರಿಣಾಮಕಾರಿಯಾಗಿರುತ್ತದೆ.

**ನಿರೀಕ್ಷಿತ ಫಲಿತಾಂಶ 4: ವಿಶ್ವವಿದ್ಯಾಲಯಗಳು ಮತ್ತು ಶೈಕ್ಷಣಿಕ ಸಂಸ್ಥೆಗಳಲ್ಲಿ ಅಂಗವೈಕಲ್ಯ ಕೇಂದ್ರಿತ ಸಂಶೋಧನೆ ಮತ್ತು ಮಧ್ಯಪ್ರವೇಶಿಕೆಗಳು.**

**ಶಿಫಾರಸುಗಳು:**

ಎಲ್ಲ ವಿಶ್ವವಿದ್ಯಾಲಯಗಳಲ್ಲಿ ಅಂಗವಿಕಲತೆ ಮತ್ತು ಪುನರ್ವಸತಿ ಅಧ್ಯಯನ ವಿಭಾಗವನ್ನು ಸ್ಥಾಪಿಸುವುದು. ಅಂಗವಿಕಲತೆ ಕುರಿತ ಅಧ್ಯಯನಗಳಿಗೆ ನಿರ್ದಿಷ್ಟ ಮೊತ್ತದ ಹಂಚಿಕೆಯನ್ನು ಕೂಡ ಶಿಫಾರಸು ಮಾಡಲಾಗಿದೆ.

**ಸಾಮಾನ್ಯ ಶಿಫಾರಸುಗಳು**

ಫಲಿತಾಂಶ ನಿರ್ದಿಷ್ಟ ಶಿಫಾರಸುಗಳಲ್ಲದೆ ಸಮಿತಿಯು ಈ ಕೆಳಗಿನ ಕೆಲವು ಶಿಫಾರಸುಗಳನ್ನು ಸಹ ಮಾಡಿದೆ:

1. ಅನುಷ್ಠಾನದ ಪ್ರಗತಿಗೆ ಸಂಬಂಧಿಸಿದಂತೆ, ಅನುಷ್ಠಾನಗೊಳಿಸಲಿರುವ ಸಂಸ್ಥೆಗಳು ನಿಯಮಿತವಾಗಿ ನಿರ್ವಹಿಸಿ ಸಲ್ಲಿಸಬೇಕಾದ ಪ್ರಗತಿ ವರದಿಗಳು ಸಲ್ಲಿಕೆಯಾಗಿವೆಯೇ ಎಂಬ ಅನುಸರಣೆ ಇಲ್ಲದಿರುವುದನ್ನು ಗಮನಿಸಲಾಗಿದೆ. ಅಂತಹ ವರದಿಗಳ

ಕ್ರಮಬದ್ಧತೆಯನ್ನು ಆಯೋಜಕರು, ಪ್ರತಿ ಪಾಲುದಾರ ಸಂಸ್ಥೆಗಳು ಮತ್ತು ಅನುಷ್ಠಾನ ಸಂಸ್ಥೆಗಳು ಖಚಿತಪಡಿಸಿಕೊಳ್ಳಬೇಕು.

2. ಪ್ರತಿ ಸಚಿವಾಲಯವು ತನ್ನ ವ್ಯಾಪ್ತಿಯಲ್ಲಿ ಬರುವ ಕಾರ್ಯವನ್ನು ಯೋಜಿತ ಮತ್ತು ವ್ಯವಸ್ಥಿತ ರೀತಿಯಲ್ಲಿ ಕಾರ್ಯಗತಗೊಳಿಸುವುದನ್ನು ಖಾತರಿಪಡಿಸಿಕೊಳ್ಳಬೇಕು.
3. ಎನ್‌ಸಿಇಆರ್‌ಟಿ - ರಾಷ್ಟ್ರೀಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿ (NCERT National Council of Educational Research and Training) ತನ್ನ ವೆಬ್‌ಸೈಟ್‌ನಿಂದ ಎನ್‌ಸಿಇಆರ್‌ಟಿ ಪ್ರಕಟಿಸಿರುವ ಪುಸ್ತಕಗಳ ಪ್ರತಿಗಳನ್ನು ಪಡೆದುಕೊಳ್ಳಲು ಸೂಕ್ತವಾದ ಸಾಫ್ಟ್‌ವೇರ್‌ಅನ್ನು ವ್ಯವಸ್ಥೆಗೊಳಿಸಬಹುದು ಮತ್ತು ಅವುಗಳನ್ನು ಅಂಧ ಬಳಕೆದಾರರ ಕೈಗೆಟುಕುವಂತೆ ಮಾಡಬಹುದು.
4. ಮಾನ್ಯತೆಗಾಗಿ/ಅಂಗಸಂಸ್ಥೆಯಾಗಿ ಸಹಯೋಗ ಹೊಂದುವುದಕ್ಕಾಗಿ ಸಂಪರ್ಕಿಸುತ್ತಿರುವ ಸಂಸ್ಥೆಗಳು/ಮಂಡಳಿಗಳು ಅಂಗವಿಕಲ ಮಕ್ಕಳು/ಯುವಜನರ ಪ್ರವೇಶಕ್ಕಾಗಿ ತಡೆಮುಕ್ತವಾಗಿಲ್ಲದಿದ್ದರೆ ಮತ್ತು ಅವರಿಗೆ ಪ್ರವೇಶವನ್ನು ನಿರಾಕರಿಸಿದರೆ ಅಂತಹ ಸಂಸ್ಥೆಗಳ ಮಾನ್ಯತೆಯನ್ನು ಹಿಂಪಡೆಯಬೇಕು.
5. ಸಮಗ್ರ ಕ್ರಿಯಾಯೋಜನೆಯ ಅನುಷ್ಠಾನದ ಪ್ರಗತಿಯ ಮೇಲ್ವಿಚಾರಣೆಯನ್ನು ಒಂದು ಗೊತ್ತಾದ ಸಂಸ್ಥೆಗೆ/ಪ್ರತಿನಿಧಿಸುವ ಶಾಖೆಗೆ ಮೀಸಲಾದ ಕೆಲಸವಾಗಿ ವಹಿಸಿಕೊಡಬೇಕು. ಇದಕ್ಕಾಗಿ ಸಂಬಂಧಪಟ್ಟ ಸಂಸ್ಥೆಯಲ್ಲಿ/ಪ್ರತಿನಿಧಿಸುವ ಶಾಖೆಯಲ್ಲಿ ಪ್ರತ್ಯೇಕ ಕೋಶವನ್ನು ಸ್ಥಾಪಿಸಬಹುದು.

*ಮೂಲ: ವಿಶೇಷ ಅಗತ್ಯತೆಗಳನ್ನು ಹೊಂದಿರುವ ಮಕ್ಕಳು ಮತ್ತು ಯುವಜನರಿಗೆ ಸಮನ್ವಯ ಶಿಕ್ಷಣದ ಕುರಿತ 'ಕೇಬ್' ಸ್ಥಾಯಿ ಸಮಿತಿಯ ವರದಿ, 2007.*

## ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣದ ಕುರಿತು ರಾಷ್ಟ್ರೀಯ ಫೋಕಸ್ ಗುಂಪಿನ ಶಿಫಾರಸುಗಳು

- ಶಿಕ್ಷಕರ ಪ್ರಶಿಕ್ಷಣದ ಎಲ್ಲ ಕಾರ್ಯಕ್ರಮಗಳನ್ನು (ಸೇವಾ ಪೂರ್ವ ಮತ್ತು ಸೇವಾ ನಿರತ, ಇವೆರಡರಲ್ಲೂ) ಸಮನ್ವಯ ಶಿಕ್ಷಣದ ತರಗತಿಗಳಿಗೆ ಅಗತ್ಯವಿರುವ ಕಲಿಕಾ-ಬೋಧನಾ ಕೌಶಲಗಳನ್ನು ಅಭಿವೃದ್ಧಿಪಡಿಸಲು ಕ್ರಮ ಕೈಗೊಳ್ಳುವುದು.
- ಎಲ್ಲ ಮಕ್ಕಳ ಕಲಿಕಾ ಶೈಲಿಗೆ ಅನುರೂಪವಾಗಬಲ್ಲ ಬೋಧನಾ ಶೈಲಿಯನ್ನು ರೂಪಿಸುವುದು.
- ವಿಶೇಷ ಶಾಲೆಗಳನ್ನು ಸಮನ್ವಯ ಶಿಕ್ಷಣಕ್ಕೆ ಬೆಂಬಲ ಒದಗಿಸುವ ಸಂಪನ್ಮೂಲ ಕೇಂದ್ರಗಳನ್ನಾಗಿ ಸಜ್ಜುಗೊಳಿಸುವುದು.
- ಶಿಕ್ಷಣದ ಎಲ್ಲ ಅಂಶಗಳಿಗೆ ಸಂಬಂಧಿಸಿದಂತೆ ವಿಕಲಾಂಗ ಮಕ್ಕಳ ಭಾಗವಹಿಸುವಿಕೆಯನ್ನು ಉತ್ತೇಜಿಸಲು ಉನ್ನತ ಶಿಕ್ಷಣ ಸಂಸ್ಥೆಗಳು, ಸರ್ಕಾರಿ ಮತ್ತು ಸರ್ಕಾರೇತರ ಸಂಸ್ಥೆಗಳೊಂದಿಗೆ ಸಹಭಾಗಿತ್ವವನ್ನು ಅಭಿವೃದ್ಧಿಪಡಿಸುವುದು.

- ತರಗತಿಯ ಗಾತ್ರವನ್ನು ಗರಿಷ್ಠ 30 ವಿದ್ಯಾರ್ಥಿಗಳಿಗೆ ಮತ್ತು ತರಗತಿಯು ವಿಶೇಷ ಶೈಕ್ಷಣಿಕ ಅಗತ್ಯವುಳ್ಳ (SEN) ಮಕ್ಕಳನ್ನು ಒಳಗೊಂಡಿದ್ದಲ್ಲಿ ಅದನ್ನು ಗರಿಷ್ಠ 20 ವಿದ್ಯಾರ್ಥಿಗಳಿಗೆ ಕಡಿಮೆಗೊಳಿಸುವುದು.
- ತರಗತಿಯಲ್ಲಿರುವ ಎಲ್ಲ ಮಕ್ಕಳಿಗೆ ವರ್ಗ ಶಿಕ್ಷಕರನ್ನು ಜವಾಬ್ದಾರರನ್ನಾಗಿ ಮಾಡುವುದು. ಒಂದು ವೇಳೆ, ವಿಶೇಷ ಶೈಕ್ಷಣಿಕ ಅಗತ್ಯವುಳ್ಳ ವಿಭಾಗಕ್ಕೆ ವಿಶೇಷ ಬೆಂಬಲದ ಅಗತ್ಯವಿದ್ದಲ್ಲಿ ಇದು ವರ್ಗ ಶಿಕ್ಷಕರಿಗೆ ಸಹಾಯದ ರೂಪದಲ್ಲಿ ಇರುವುದು.
- ಶಾಲೆಯೊಂದರ ಎಲ್ಲ ವಿಶೇಷ ಶಿಕ್ಷಕರನ್ನು ಶಾಲಾ ಸಮುದಾಯದ ಪೂರ್ಣ ಪ್ರಮಾಣದ ಸದಸ್ಯರಂತೆ ಪರಿಗಣಿಸುವುದು.
- ವಿಶೇಷ ಶೈಕ್ಷಣಿಕ ಅವಶ್ಯಕತೆಗಳಿರುವ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಕಾಳಜಿಗಳನ್ನು ಪರಿಣಾಮಕಾರಿಯಾಗಿ ನಿಭಾಯಿಸಲು ಪಠ್ಯಕ್ರಮಕ್ಕೆ ಸಂಬಂಧಿಸಿದ ಎಲ್ಲ ನೀತಿಗಳು ಮತ್ತು ಕಾರ್ಯಕ್ರಮಗಳನ್ನು ಸಮನ್ವಯತೆಯ ಸ್ವರೂಪದಲ್ಲಿ ಸಂಘಟಿಸುವುದು.
- ಸಮನ್ವಯತೆಯ ತತ್ವದ ಆಧಾರದಲ್ಲಿ ಕಾರ್ಯಕ್ರಮಗಳನ್ನು ಯೋಜಿಸಲು ಮತ್ತು ಕಾರ್ಯಗತಗೊಳಿಸಲು ಶಾಲಾ ಮುಖ್ಯಸ್ಥರು ಸೇರಿದಂತೆ ಪ್ರತಿಯೊಬ್ಬ ಶೈಕ್ಷಣಿಕ ನಿರ್ವಾಹಕರಲ್ಲಿ ಸೂಕ್ತ ದೃಷ್ಟಿಕೋನ ಮತ್ತು ಕೌಶಲಗಳನ್ನು ಬೆಳೆಸುವುದು.
- ಮಕ್ಕಳಲ್ಲಿರುವ ಮಿತಿಗಳನ್ನು ಎತ್ತಿ ತೋರಿಸುವುದರ ಬದಲಿಗೆ ಪ್ರತಿ ಮಗುವಿನಲ್ಲೂ ಇರುವ ಸಾಧ್ಯತೆಗಳು ಮತ್ತು ಬಲಗಳನ್ನು ಗುರುತಿಸುವುದು.
- ಕಲಿಕಾರ್ಥಿಗಳ ನಡುವಿನ ವೈವಿಧ್ಯತೆಗಳನ್ನು ಗುರುತಿಸುವುದು ಮತ್ತು ಶ್ರವಣ ದೋಷವುಳ್ಳ ಮಕ್ಕಳಿಗೆ ಸಂಜ್ಞಾ ಭಾಷೆಯನ್ನು ಮತ್ತು ದೃಷ್ಟಿ ದೋಷವಿರುವ ಮಕ್ಕಳಿಗೆ ಬ್ರೈಲ್ ಲಿಪಿಯ ವ್ಯವಸ್ಥೆಯನ್ನು ಬೋಧನಾ ಮಾಧ್ಯಮವಾಗಿ ಅಳವಡಿಸಿಕೊಳ್ಳುವುದು. ಅದೇ ಸಮಯದಲ್ಲಿ ಎಲ್ಲ ಮಕ್ಕಳಿಗೂ ಸಂಜ್ಞಾ ಭಾಷೆ, ಬ್ರೈಲ್ ಲಿಪಿ, ಬೆರಳು ಬ್ರೈಲ್ ಲಿಪಿ ಇತ್ಯಾದಿಗಳ ಕಲಿಕೆಯನ್ನು ಐಚ್ಛಿಕ ವಿಷಯವಾಗಿ ಅಥವಾ ತೃತೀಯ ಭಾಷೆಯಾಗಿ ಪರಿಚಯಿಸುವುದು.
- ಮಕ್ಕಳಲ್ಲಿ ಸ್ವಾವಲಂಬನೆಯನ್ನು ಉತ್ತೇಜಿಸಲು ಮತ್ತು ಹೊಂದಿಕೊಳ್ಳುವ ಹಾಗೂ ನಿಭಾಯಿಸುವ ಕೌಶಲಗಳ ಮೂಲಕ ಅವರನ್ನು ಬಲಗೊಳಿಸಲು ಸಮನ್ವಯ ಶಿಕ್ಷಣವು ಸ್ವತಂತ್ರ ಜೀವನ ಕೌಶಲಗಳು, ವಿಮರ್ಶಾತ್ಮಕ ಚಿಂತನೆ, ನಿರ್ಧಾರ ತೆಗೆದುಕೊಳ್ಳುವಿಕೆ ಮತ್ತು ಸಮಸ್ಯೆ ಪರಿಹರಿಸುವ ಕೌಶಲಗಳು ಮತ್ತು ತಮ್ಮ ಸೂಕ್ಷ್ಮ ಕಾಳಜಿಗಳ ಕುರಿತು ಸ್ಪಷ್ಟವಾಗಿ ವ್ಯಕ್ತಪಡಿಸುವ ಕೌಶಲಗಳನ್ನು ಬೆಳೆಸಲು ಹೆಚ್ಚಿನ ಮಹತ್ವವನ್ನು ನೀಡುವುದು.
- ಮಕ್ಕಳು ಜ್ಞಾನವನ್ನು ಸಮಗ್ರವಾಗಿ ಕಟ್ಟಿಕೊಳ್ಳಲು ಅನುವಾಗುವಂತೆ ಐದನೆಯ ತರಗತಿಯವರೆಗೆ ಒಬ್ಬರೇ ಶಿಕ್ಷಕರು ಎಲ್ಲ ವಿಷಯಗಳ ತರಗತಿ ನಿರ್ವಹಣೆ ಮಾಡುವ ವ್ಯವಸ್ಥೆಯನ್ನು ಅಳವಡಿಸುವುದು.
- ಸಮನ್ವಯ ಶಿಕ್ಷಣದ ಕ್ರಮದಲ್ಲಿ ಪರಿಣಾಮಕಾರಿಯಾಗಿ ಶೈಕ್ಷಣಿಕ ಪ್ರಕ್ರಿಯೆಗಳನ್ನು ಕೈಗೊಳ್ಳಲು ಶಿಕ್ಷಕರ ಪ್ರಶಿಕ್ಷಣವನ್ನು (ಸೇವಾಪೂರ್ವ ಮತ್ತು ಸೇವಾನಿರತ) ಮರು ರಚನೆಮಾಡುವುದು.

- ಶೈಕ್ಷಣಿಕ ಪ್ರಕ್ರಿಯೆಗಳು ಸಂಜ್ಞಾ ಭಾಷೆ, ಬ್ರೈಲ್ ಲಿಪಿ ಇತ್ಯಾದಿಗಳನ್ನೂ ಒಳಗೊಂಡಂತೆ ವಿವಿಧ ಕಲಿಕಾ ಶೈಲಿಗಳೊಂದಿಗೆ ಮಕ್ಕಳಿಗೆ ಅಮೂರ್ತ ಪರಿಕಲ್ಪನೆಗಳನ್ನು ಪರಿಣಾಮಕಾರಿಯಾಗಿ ಸಂವಹನ ಮಾಡುವ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸುವ ಗುರಿಯನ್ನು ಹೊಂದಿರಬೇಕು.
- ವೈವಿಧ್ಯತೆ ಮತ್ತು ಎಲ್ಲರನ್ನೂ ಒಳಗೊಳಿಸಿಕೊಂಡಿರುವಂತಹ ಸಮಾಜವೊಂದರ ಪರಿಕಲ್ಪನೆಯನ್ನು ಗೌರವಿಸಲು, ಶಿಕ್ಷಕರ ಪ್ರಶಿಕ್ಷಣ ಕಾರ್ಯಕ್ರಮಗಳು ಮತ್ತು ಪಠ್ಯಕ್ರಮ ಚೌಕಟ್ಟುಗಳು ಮಾನವ ಹಕ್ಕುಗಳ ಶಿಕ್ಷಣವನ್ನು ಒಂದು ಅಂಶವಾಗಿ ಒಳಗೊಂಡಿರುವುದು.
- ಜ್ಞಾನಾತ್ಮಕ, ಭಾವನಾತ್ಮಕ ಮತ್ತು ಬದುಕಿಗೆ ಅರ್ಥ ಕೊಡುವ ಸಂಗತಿಗಳನ್ನು ಒಳಗೊಂಡಂತೆ ವ್ಯಕ್ತಿತ್ವದ ಎಲ್ಲ ಅಂಶಗಳನ್ನು ಪೋಷಿಸಲು ಕ್ರೀಡೆ, ನೃತ್ಯ, ನಾಟಕ, ಸಂಗೀತ, ಕಲೆ ಮತ್ತು ಕರಕುಶಲತೆ ಇವೆಲ್ಲವುಗಳಿಗೆ ಸಮಾನವಾದ ಪ್ರಾಮುಖ್ಯತೆ ಮತ್ತು ಮೌಲ್ಯವನ್ನು ನೀಡುವುದು.
- ಮಕ್ಕಳ ಶಾಲಾ ಪ್ರವೇಶ, ಶಾಲೆಯಲ್ಲಿ ಅವರ ಮುಂದುವರಿಕೆ ಮತ್ತು ಸಂಪೂರ್ಣ ಭಾಗವಹಿಸುವಿಕೆ ಸೇರಿದಂತೆ ಅವರ ಶಿಕ್ಷಣದ ಯಾವುದೇ ಅಂಶವಾಗಿರಲಿ ಅದು ಮನೋ-ವೈದ್ಯಕೀಯ ಪ್ರಮಾಣ ಪತ್ರಗಳೂ ಸೇರಿದಂತೆ ವೃತ್ತಿಪರರು ಮತ್ತು ತಜ್ಞರ ಮೌಲ್ಯಮಾಪನ ಪರೀಕ್ಷೆಗಳು ಮತ್ತು ತೀರ್ಪಿನ ಆಧಾರಗಳಂತಹ ಯಾವುದೇ ಮಾನದಂಡಗಳಿಂದ ತಡೆಗೆ ಒಳಪಡಬಾರದು.
- ಶಾಲಾ ಪ್ರವೇಶ, ಪರೀಕ್ಷೆ, ವಿದ್ಯಾರ್ಥಿ ವೇತನ ಸೇರಿದಂತೆ ಯಾವುದೇ ಬೆಂಬಲ ಸೌಲಭ್ಯಗಳನ್ನು ಪಡೆಯುವುದು ಇತ್ಯಾದಿಗಳಿಗಾಗಿ ಅಂಗವೈಕಲ್ಯ ಹೊಂದಿರುವ ಯಾವುದೇ ಮಗುವಿನಲ್ಲೂ ಪ್ರಮಾಣ ಪತ್ರಗಳನ್ನು ನೀಡುವಂತೆ ಕೇಳಬಾರದು.
- ವಿದ್ಯಾರ್ಥಿಗಳನ್ನು ಅನುತ್ತೀರ್ಣಗೊಳಿಸುವ ನೀತಿಯನ್ನು ಬಿಟ್ಟು, ಅದರ ಬದಲಿಗೆ ಪ್ರತಿ ಮಗುವೂ ತನಗಿರುವ ತೊಂದರೆಗಳನ್ನು ನಿವಾರಿಸಿಕೊಂಡು ಅವುಗಳನ್ನು ಮೀರಿ ನಿಲ್ಲಲು ಅನುವು ಮಾಡಿಕೊಡುವ ಮೂಲಕ ಮಗುವನ್ನು ಸಶಕ್ತಗೊಳಿಸುವುದು.
- ಸ್ವಾವಲಂಬನೆ ಮತ್ತು ಸ್ವತಂತ್ರ ಜೀವನ ನಡೆಸಬಲ್ಲ ಸಾಮರ್ಥ್ಯಗಳನ್ನು ವಿಶೇಷ ಶೈಕ್ಷಣಿಕ ಅಗತ್ಯತೆಗಳಿರುವ ವಿದ್ಯಾರ್ಥಿಗಳಲ್ಲಿ ಉತ್ತೇಜಿಸುವುದಕ್ಕಾಗಿ ವಿಮರ್ಶಾತ್ಮಕ ಚಿಂತನೆ, ನಿರ್ಧಾರ ಕೈಗೊಳ್ಳುವಿಕೆ, ಸಮಸ್ಯೆಗಳನ್ನು ಪರಿಹರಿಸುವ ಶಕ್ತಿ ಮತ್ತಿತರ ನಿಭಾವಣಾ ಕೌಶಲ ಅಥವಾ ಜೀವನ ಕೌಶಲಗಳನ್ನು ಅವರಲ್ಲಿ ಬೆಳೆಸುವುದು.

## ವಿಕಲಾಂಗ ವ್ಯಕ್ತಿಗಳ ಹಕ್ಕುಗಳ ಒಡಂಬಡಿಕೆ

**ಪರಿಚ್ಛೇದ 24: ಶಿಕ್ಷಣ**

1. ಸದಸ್ಯ ರಾಷ್ಟ್ರಗಳು ವಿಕಲಾಂಗ ವ್ಯಕ್ತಿಗಳ ಶಿಕ್ಷಣದ ಹಕ್ಕನ್ನು ಮಾನ್ಯ ಮಾಡಿವೆ. ತಾರತಮ್ಯವಿಲ್ಲದೆ ಮತ್ತು ಸಮಾನ ಅವಕಾಶಗಳ ಆಧಾರದಲ್ಲಿ ಈ ಹಕ್ಕು ಸಾಕಾರಗೊಳ್ಳುವ

ದೃಷ್ಟಿಯಿಂದ ಸದಸ್ಯ ರಾಷ್ಟ್ರಗಳು ಸಮನ್ವಯ ಶಿಕ್ಷಣದ ವ್ಯವಸ್ಥೆಯನ್ನು ಎಲ್ಲ ಹಂತಗಳಲ್ಲೂ ಮತ್ತು ಜೀವಿತಾವಧಿಯವರೆಗೂ ಕಲಿಕೆಯನ್ನು ಖಾತರಿಪಡಿಸುವತ್ತ ನಿರ್ದೇಶಿಸುತ್ತದೆ:

(ಅ) ಮಾನವ ಸಾಮರ್ಥ್ಯದ ಹಾಗೂ ಘನತೆ ಮತ್ತು ಸ್ವ-ಮೌಲ್ಯದ ಅರಿವಿನ ಸಂಪೂರ್ಣ ಬೆಳವಣಿಗೆ, ಮತ್ತು  ಮಾನವ ಹಕ್ಕುಗಳು, ಮೂಲಭೂತ ಸ್ವಾತಂತ್ರ್ಯಗಳು ಮತ್ತು ಮಾವನ ವೈವಿಧ್ಯತೆ ಇವುಗಳ ಬಗೆಗಿನ ಗೌರವವನ್ನು ಬಲಪಡಿಸುವುದು;

(ಬ) ವಿಕಲಾಂಗ ವ್ಯಕ್ತಿಗಳಿಂದಲೇ ಅವರ ವ್ಯಕ್ತಿತ್ವ, ಪ್ರತಿಭೆ ಮತ್ತು ಅವರಲ್ಲಿರುವ ಸೃಜನಶೀಲತೆ ಹಾಗೆಯೇ ಅವರ ಮಾನಸಿಕ ಮತ್ತು ದೈಹಿಕ ಸಾಮರ್ಥ್ಯಗಳನ್ನು ಅವುಗಳ ಪೂರ್ಣ ಸಾಮರ್ಥ್ಯ ವಿಕಸನಗೊಳ್ಳುವಂತೆ ಅಭಿವೃದ್ಧಿಪಡಿಸುವುದು;

(ಕ) ವಿಕಲಾಂಗ ವ್ಯಕ್ತಿಗಳು ಮುಕ್ತ ಸಮಾಜವೊಂದರಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸಲು ಅನುವು ಮಾಡಿಕೊಡುವುದು.

2. ಈ ಹಕ್ಕು ಸಾಕಾರಗೊಳ್ಳುವಲ್ಲಿ ಸದಸ್ಯ ರಾಷ್ಟ್ರಗಳು ಈ ಕೆಳಗಿನವುಗಳನ್ನು ಖಾತರಿಪಡಿಸಬೇಕು:

(ಅ) ಅಂಗವೈಕಲ್ಯದ ಆಧಾರದ ಮೇಲೆ ಸಾಮಾನ್ಯ ಶಿಕ್ಷಣ ವ್ಯವಸ್ಥೆಯಿಂದ ವಿಕಲಾಂಗ ವ್ಯಕ್ತಿಗಳನ್ನು ಹೊರಗಿಡುವುದಿಲ್ಲ. ವಿಕಲಾಂಗ ಮಕ್ಕಳನ್ನು ಉಚಿತ ಮತ್ತು ಕಡ್ಡಾಯ ಪ್ರಾಥಮಿಕ ಶಿಕ್ಷಣದಿಂದ ಅಥವಾ ಮಾಧ್ಯಮಿಕ ಶಿಕ್ಷಣದಿಂದ ಹೊರಗಿಡುವುದಿಲ್ಲ.

(ಬ) ವಿಕಲಾಂಗ ವ್ಯಕ್ತಿಗಳು ತಾವು ವಾಸಿಸುವ ಸಮುದಾಯಗಳಲ್ಲಿ ಇತರರೊಂದಿಗೆ ಸಮಾನತೆಯ ಆಧಾರದಲ್ಲಿ ಸಮನ್ವಯತೆಯ, ಗುಣಮಟ್ಟದ ಮತ್ತು ಉಚಿತ ಪ್ರಾಥಮಿಕ ಶಿಕ್ಷಣ ಮತ್ತು ಮಾಧ್ಯಮಿಕ ಶಿಕ್ಷಣಕ್ಕೆ ಪ್ರವೇಶವನ್ನು ಪಡೆಯಬಹುದು;

(ಕ) ವ್ಯಕ್ತಿಯೊಬ್ಬರ ಸಮಂಜಸವಾದ ಅಗತ್ಯತೆಗಳಿಗೆ ತಕ್ಕಂತೆ ಸೌಕರ್ಯಗಳನ್ನು ಒದಗಿಸುವುದು;

(ಡಿ) ವಿಕಲಾಂಗ ವ್ಯಕ್ತಿಗಳು ತಾವು ಪರಿಣಾಮಕಾರಿ ಶಿಕ್ಷಣ ಪಡೆದುಕೊಳ್ಳುವುದನ್ನು ಸುಲಭಗೊಳಿಸಲು ಸಾಮಾನ್ಯ ಶಿಕ್ಷಣ ವ್ಯವಸ್ಥೆಯೊಳಗೆ ಅಗತ್ಯವಿರುವ ಬೆಂಬಲವನ್ನು ಪಡೆಯುವರು;

(ಇ) ಸಂಪೂರ್ಣ ಸಮನ್ವಯತೆಯ ಸ್ಥಿರವಾದ ಗುರಿಯೊಂದಿಗೆ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಗರಿಷ್ಠಗೊಳಿಸುವ ಪರಿಸರಗಳಲ್ಲಿ ಪರಿಣಾಮಕಾರಿಯಾದ ವೈಯಕ್ತಿಕ ಬೆಂಬಲ ಕ್ರಮಗಳನ್ನು ಒದಗಿಸುವುದು;

3. ಸದಸ್ಯ ರಾಷ್ಟ್ರಗಳು ವಿಕಲಾಂಗ ವ್ಯಕ್ತಿಗಳಿಗೆ ಶಿಕ್ಷಣದಲ್ಲಿ ಮತ್ತು ಸಮುದಾಯದ ಸದಸ್ಯರಾಗಿ ಅವರು ಸಂಪೂರ್ಣವಾಗಿ ಮತ್ತು ಸಮಾನವಾಗಿ ಭಾಗವಹಿಸುವಂತೆ ಮಾಡಲು ಅವರಿಗೆ ಅಗತ್ಯವಿರುವ ಜೀವನ ಕೌಶಲ ಮತ್ತು ಸಾಮಾಜಿಕ ಅಭಿವೃದ್ಧಿ ಕೌಶಲಗಳನ್ನು ಕಲಿಯಲು ಅನುವು ಮಾಡಿಕೊಡುತ್ತವೆ. ಅದಕ್ಕಾಗಿ ಸದಸ್ಯ ರಾಷ್ಟ್ರಗಳು ಈ ಕೆಳಗಿನವುಗಳನ್ನು ಒಳಗೊಂಡ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತವೆ;

(ಅ) ಬ್ರೈಲ್ ಮತ್ತು ಪರ್ಯಾಯ ಲಿಪಿ, ಕಲಿಕೆಯನ್ನು ಹೆಚ್ಚಿಸುವ ವಿಧಾನಗಳು ಮತ್ತು ಪರ್ಯಾಯ ವಿಧಾನಗಳು, ಸಂವಹನ-ವಿಷಯಪರಿಚಯ-ಶಾರೀರಿಕ ಚಲನಶೀಲತೆಯ ಕೌಶಲಗಳ ವಿಧಾನಗಳು ಮತ್ತು ಕೌಶಲಗಳ ಸ್ವರೂಪಗಳ ಕಲಿಕೆಯನ್ನು ಸುಗಮಗೊಳಿಸುವುದು, ಮತ್ತು ಸಹವರ್ತಿಗಳ ಬೆಂಬಲ ಹಾಗೂ ಮಾರ್ಗದರ್ಶನ ಇವುಗಳನ್ನು ಪಡೆಯುವ ಬಗೆಯನ್ನು ಸುಗಮಗೊಳಿಸುವುದು;

(ಬ) ಸಂಜ್ಞಾ ಭಾಷೆಯ ಕಲಿಕೆಯನ್ನು ಸುಗಮಗೊಳಿಸಿಕೊಡುವುದು ಮತ್ತು ಶ್ರವಣ ದೋಷವುಳ್ಳವರ ಸಮುದಾಯದ ಭಾಷಾ ಅನನ್ಯತೆಯ ಪ್ರಚಾರ ನಡೆಸುವುದು;

(ಸಿ) ಕುರುಡು ಅಥವಾ ಕಿವುಡು ಮಕ್ಕಳು ಅಥವಾ ಕಿವುಡು-ಕುರುಡುತನ ಎರಡೂ ಇರುವ ಮಕ್ಕಳಿಗೆ ಶಿಕ್ಷಣವನ್ನು ವೈಯಕ್ತಿಕ ನೆಲೆಯಲ್ಲಿ ಅತ್ಯಂತ ಸೂಕ್ತವಾದ ಭಾಷೆಗಳು ಮತ್ತು ಸೂಕ್ತವಾದ ಸಂವಹನ ವಿಧಾನಗಳ ಮೂಲಕ ಸುಗಮವಾಗಿ ನೀಡುವುದನ್ನು ಖಾತರಿಪಡಿಸುವುದು; ಮಾತ್ರವಲ್ಲದೆ, ಇವೆಲ್ಲವನ್ನು ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಗರಿಷ್ಠಗೊಳಿಸುವ ಪರಿಸರದಲ್ಲಿ ಸುಗಮವಾಗಿ ನಡೆಯುವುದನ್ನು ಖಾತರಿಪಡಿಸುವುದು.

4. ಈ ಹಕ್ಕುಗಳ ಈಡೇರಿಕೆಯನ್ನು ಖಾತರಿಪಡಿಸಿಕೊಳ್ಳಲು ಸದಸ್ಯ ರಾಷ್ಟ್ರಗಳು ವಿಕಲಾಂಗ ಶಿಕ್ಷಕರು ಸೇರಿದಂತೆ ಸಂಜ್ಞಾ ಭಾಷೆಯಲ್ಲಿ ಮತ್ತು/ಅಥವಾ ಬ್ರೈಲ್ ಲಿಪಿಯಲ್ಲಿ ಅರ್ಹತೆ ಹೊಂದಿರುವವರು ಮತ್ತು ಶಿಕ್ಷಣದ ಎಲ್ಲ ಹಂತಗಳಲ್ಲಿ ಕೆಲಸ ಮಾಡುವ ವೃತ್ತಿಪರರು ಮತ್ತು ಸಿಬ್ಬಂದಿಗೆ ತರಬೇತಿ ನೀಡುವ ಶಿಕ್ಷಕರ ನೇಮಕಾತಿಗೆ ಸೂಕ್ತ ಕ್ರಮಗಳನ್ನು ಕೈಗೊಳ್ಳುತ್ತವೆ. ಅಂತಹ ತರಬೇತಿಯು ಅಂಗವಿಕಲತೆಯ ಕುರಿತ ಜಾಗೃತಿ ಮೂಡಿಸುವ ಮತ್ತು ವಿಕಲಾಂಗ ವ್ಯಕ್ತಿಗಳನ್ನು ಬೆಂಬಲಿಸುವ ಸೂಕ್ತವಾದ ಸಂವರ್ಧನೆಯ ಪ್ರಕ್ರಿಯೆಗಳು, ಪರ್ಯಾಯ ವಿಧಾನಗಳು, ಸಂವಹನದ ಮಾದರಿಗಳು ಹಾಗೂ ಸ್ವರೂಪಗಳು ಮತ್ತು ಶೈಕ್ಷಣಿಕ ತಂತ್ರಗಳು ಹಾಗೂ ಸಾಮಗ್ರಿಗಳ ಬಳಕೆಯನ್ನು ಒಳಗೊಂಡಿರುತ್ತದೆ.

5. ವಿಕಲಾಂಗ ವ್ಯಕ್ತಿಗಳು ಸಾಮಾನ್ಯ ಉನ್ನತ ಶಿಕ್ಷಣ, ವೃತ್ತಿಪರ ತರಬೇತಿ, ವಯಸ್ಕರ ಶಿಕ್ಷಣ ಮತ್ತು ತಾರತಮ್ಯವಿಲ್ಲದೆ ಮತ್ತು ಇತರರಂತೆ ಸಮಾನತೆಯ ಆಧಾರದ ಮೇಲೆ ಜೀವಮಾನದ ಕಲಿಕೆಯನ್ನು ಪಡೆದುಕೊಳ್ಳಲು ಸಾಧ್ಯವಾಗುತ್ತದೆ ಎಂಬುದನ್ನು ಸದಸ್ಯ ರಾಷ್ಟ್ರಗಳು

ಖಾತರಿಪಡಿಸಿಕೊಳ್ಳಬೇಕು. ಈ ನಿಟ್ಟಿನಲ್ಲಿ ವಿಕಲಾಂಗ ವ್ಯಕ್ತಿಗಳಿಗೆ ಸಮಂಜಸವೆನಿಸುವಂತಹ ವಸತಿ ಸೌಕರ್ಯಗಳನ್ನು ಒದಗಿಸುವುದನ್ನು ಸದಸ್ಯ ರಾಷ್ಟ್ರಗಳು ಖಾತರಿಪಡಿಸಿಕೊಳ್ಳಬೇಕು.

## ಶೈಕ್ಷಣಿಕ ಕಾರ್ಯನಿರ್ವಾಹಕರು

2009ರ ಶಿಕ್ಷಣ ಹಕ್ಕು ಕಾಯ್ದೆಯಿಂದ ಬಲಗೊಳಿಸಲಾಗಿರುವ ಸರ್ವಶಿಕ್ಷಣ ಅಭಿಯಾನದ 'ಶೂನ್ಯ ನಿರಾಕರಣೆ' ನೀತಿಯು ಶಿಕ್ಷಣ ಕ್ಷೇತ್ರದಲ್ಲಿ ಆಗಿರುವ ಅತ್ಯಂತ ಅಸಾಧಾರಣವಾದ ವಿಸ್ತರಣೆಯನ್ನು ಪ್ರತಿನಿಧಿಸುತ್ತದೆ. ಮಕ್ಕಳು ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸುವ ಪ್ರಕ್ರಿಯೆಯಲ್ಲಿ ಪರಿಣಾಮಕಾರಿಯಾಗಿ ಭಾಗವಹಿಸದಂತೆ ಅಡ್ಡಿಪಡಿಸುವ ಯಾವುದೇ ಸಾಮಾಜಿಕ, ಆರ್ಥಿಕ, ಶೈಕ್ಷಣಿಕ, ಭಾಷಿಕ, ಸಾಂಸ್ಕೃತಿಕ, ಭೌತಿಕ ಇತ್ಯಾದಿ ಅಡೆತಡೆಗಳನ್ನು ತೊಡೆದುಹಾಕುವುದು ಸರ್ಕಾರದ ಬಾಧ್ಯತೆಯಾಗಿದೆ ಎಂಬುದನ್ನು ಶಿಕ್ಷಣದ ಹಕ್ಕು ಸೂಚಿಸುತ್ತದೆ. ದುರ್ಬಲ ವರ್ಗಗಳ ಮಕ್ಕಳಿಗೆ ತೃಪ್ತಿಕರ ಗುಣಮಟ್ಟದ ಉಚಿತ ಮತ್ತು ಕಡ್ಡಾಯ ಶಿಕ್ಷಣ ದೊರಕುವಂತೆ ಮಾಡುವುದು ಕೇವಲ ಸರ್ಕಾರ ನಡೆಸುತ್ತಿರುವ ಅಥವಾ ಬೆಂಬಲಿಸುತ್ತಿರುವ ಶಾಲೆಗಳ ಜವಾಬ್ದಾರಿ ಮಾತ್ರವಲ್ಲ, ಸರ್ಕಾರದ ಆರ್ಥಿಕ ನೆರವಿನ ಮೇಲೆ ಅವಲಂಬಿತವಾಗಿಲ್ಲದ ಶಾಲೆಗಳ ಜವಾಬ್ದಾರಿ ಕೂಡ ಆಗಿದೆ ಎಂದು ಅದು ಸೂಚಿಸುತ್ತದೆ. ಸರ್ಕಾರದ ಅನುದಾನದ ಮೇಲೆ ಅವಲಂಬಿಸದೆ ಇರುವ ಶಾಲೆಗಳು ಕನಿಷ್ಠ ಅಲ್ಲಿ ದಾಖಲಾಗುವ ಮಕ್ಕಳಲ್ಲಿ ಶೇಕಡಾ 25 ರಷ್ಟು ಅವಕಾಶವನ್ನು ಅಂತಹ ಮಕ್ಕಳಿಗೆ ನೀಡಿ ಶಿಕ್ಷಣವನ್ನು ಒದಗಿಸಬೇಕಾಗಿದೆ. ಆದಾಗ್ಯೂ, ಈ ನೀತಿಯು 'ಎಲ್ಲರಿಗೂ ಶಿಕ್ಷಣ' ಎಂಬ ಆಶಯವನ್ನು ಕಾರ್ಯಗತಗೊಳಿಸುವಲ್ಲಿ ನಿರ್ಣಾಯಕ ಪಾತ್ರವನ್ನು ವಹಿಸಲು ಕೇಂದ್ರ ಸರ್ಕಾರವನ್ನು ಮಾತ್ರವಲ್ಲದೆ ರಾಜ್ಯ ಸರ್ಕಾರದ ಶಿಕ್ಷಣ ಇಲಾಖೆಗಳನ್ನು ಕೂಡ ಹೆಚ್ಚಿನದಾಗಿ ಅವಲಂಬಿಸಿದೆ.

ನಮಗೆಲ್ಲರಿಗೂ ತಿಳಿದಿರುವಂತೆ ಸಮನ್ವಯ ಶಿಕ್ಷಣ ಎಂದರೆ ಅಡೆತಡೆಗಳನ್ನು ತೆಗೆದುಹಾಕಿ ಎಲ್ಲರಿಗೂ ಶೈಕ್ಷಣಿಕ ಅವಕಾಶಗಳನ್ನು ಹೆಚ್ಚಿಸುವುದೇ ಆಗಿದೆ. ಇದು ಶಾಲೆಗಳೊಳಗಿನ ಪ್ರತಿಯೊಂದು ಗುಂಪಿನ ವಿದ್ಯಾರ್ಥಿಗಳು ಪಡೆಯುವ ಶೈಕ್ಷಣಿಕ ಪ್ರಯೋಜನಗಳ ಮಟ್ಟಗಳು ಮತ್ತು ವಿಧಗಳನ್ನು ಒಳಗೊಂಡಿರುತ್ತವೆ. ಆಡಳಿತಾತ್ಮಕ ನೆಲೆಯಲ್ಲಿ ಉತ್ತಮ ನೀತಿಗಳು ಮತ್ತು ದೃಢನೋಟಗಳಿದ್ದಾಗ್ಯೂ ಸಂಪನ್ಮೂಲಗಳ ಕೊರತೆ ಮತ್ತು ಈ ಕುರಿತ ಅಗತ್ಯ ಜ್ಞಾನವಿಲ್ಲದಿರುವಿಕೆಯು ಅಸಾಮಾನ್ಯ ಗುರಿಗಳನ್ನು ಸಾಧಿಸುವುದಕ್ಕೆ ಅಡ್ಡಿಯಾಗಿದೆ.

**(box item)**

ಉಚಿತ ಮತ್ತು ಕಡ್ಡಾಯ ಶಿಕ್ಷಣ ಹಕ್ಕು ಕಾಯೆಯ ಸಂದರ್ಭದಲ್ಲಿ ಸರ್ವಶಿಕ್ಷಣ ಅಭಿಯಾನದ ಸಮತೆಯ ಕಾರ್ಯಸೂಚಿಯು ಈ ಮುಂದಿನಂತೆ ಕಾರ್ಯೋನ್ಮುಖವಾಗುತ್ತದೆ:

- ಪ್ರೋತ್ಸಾಹಕಗಳು ಮತ್ತು ಅವಕಾಶಗಳು ಆಧಾರಿತ ವಿಧಾನದಿಂದ ಹಕ್ಕುಗಳು ಮತ್ತು ಅರ್ಹತೆ ಆಧಾರಿತ ವಿಧಾನದೆಡೆಗೆ ಚಲಿಸುವುದು
- ಹೊರಗಿಡಲ್ಪಡುವುದಕ್ಕೆ ಮತ್ತು ಅವಕಾಶಗಳಿಂದ ವಂಚಿಸಲ್ಪಡುವುದಕ್ಕೆ ಕಾರಣವಾಗುವ ಸಮಸ್ಯೆಗಳಾದ ಭದ್ರುವಾದ ಶ್ರೇಣೀಕೃತ ರಚನೆಗಳು, ಶಾಲೆಯೊಳಗಿನ ಸ್ಥಳವೂ ಸೇರಿದಂತೆ (ಸಾಮಾಜಿಕ, ಭಾಷಿಕ, ಸಾಂಸ್ಕೃತಿಕ, ಧಾರ್ಮಿಕ ಹಿನ್ನೆಲೆಗಳು) ಪ್ರಚಲಿತದಲ್ಲಿರುವ ಏಕರೂಪತೆಗಳು ಮತ್ತು ಹಿಂದುಳಿದ ಸಮುದಾಯಗಳ ಮಕ್ಕಳು ಎದುರಿಸುತ್ತಿರುವ ಸವಾಲುಗಳ ಬಗ್ಗೆ ಆಳವಾದ ತಿಳುವಳಿಕೆಯನ್ನು ಬೆಳೆಸುವುದು

ವಿಭಿನ್ನವಾದ, ಹೊರಗಿರಿಸಲ್ಪಟ್ಟ ಮತ್ತು ಅಂಚಿಗೆ ತಳ್ಳಲ್ಪಟ್ಟ ಗುಂಪುಗಳು ಹಾಗೂ ಸಮುದಾಯಗಳ ಅಗತ್ಯಗಳೇನೆಂದು ಪರಿಶೀಲಿಸಿ ನಿರ್ಣಯಕ್ಕೆ ಬರುವುದು ಮತ್ತು ಅದಕ್ಕೆ ಅನುಗುಣವಾಗಿ ಆಯಾ ಸಂದರ್ಭಗಳಿಗೆ ಸೂಕ್ತವಾದ ಕಾರ್ಯತಂತ್ರಗಳ ಮೂಲಕ ಈ ಅಗತ್ಯಗಳ ನಿರ್ವಹಣೆ ಮಾಡುವುದು

- 
- ಸರ್ವಶಿಕ್ಷಣ ಅಭಿಯಾನದ ವಿವಿಧ ಗುರಿಗಳೊಂದಿಗೆ ಹಾಸುಹೊಕ್ಕಾಗಿರುವ ಲಿಂಗತ್ವ, ಸಮತೆ ಮತ್ತು ಹೊರಗಿರಿಸುವಿಕೆಯಂತಹ ಸಮಸ್ಯೆಗಳನ್ನು ಪರಿಹರಿಸುವುದಕ್ಕಾಗಿ ಸಮಗ್ರ, ಬಹುಮುಖಿ ಮತ್ತು ಕೈಗೊಳ್ಳಲು ಸಾಧ್ಯವಿರುವ ಕಾರ್ಯತಂತ್ರಗಳನ್ನು ಗುರುತಿಸಲು ಹೊಸ ಬಗೆಯ ಚಿಂತನೆಗಳು ಮತ್ತು ಸಂವಾದಗಳನ್ನು ಪ್ರೋತ್ಸಾಹಿಸುವುದು
- ಮುಖ್ಯವಾಹಿನಿ ಶಿಕ್ಷಣ ವ್ಯವಸ್ಥೆಯನ್ನು ಬಲಪಡಿಸುವ ದೃಷ್ಟಿಯಿಂದ ಪರಿಣಾಮಕಾರಿಯಾದ, ಕೈಗೊಳ್ಳಲು ಸಾಧ್ಯವಿರುವ ಮತ್ತು ಸುಸ್ಥಿರವೆಂದು ಕಂಡುಕೊಳ್ಳಲಾದ ಮಧ್ಯಪ್ರವೇಶಿಕೆಗಳು ಮತ್ತು ಕಾರ್ಯತಂತ್ರಗಳ ಉನ್ನತೀಕರಿಸಲು ಮತ್ತು ಸಾಂಸ್ಥೀಕರರಿಸಲು ಉತ್ತೇಜಿಸುವುದು

- ಮೂಲ: ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು ಕಾಯ್ದೆ – 2009ಯನ್ನು ಆಧರಿಸಿದ

*ಸರ್ವಶಿಕ್ಷಣ ಅಭಿಯಾನದ ಅನುಷ್ಠಾನ ಚೌಕಟ್ಟು – 2009.*

**ಸಮನ್ವಯತೆಗಾಗಿ ಯೋಜನೆ**

ಸಮನ್ವಯತೆಗಾಗಿ ಯೋಜಿಸುವಾಗ, ಶಿಕ್ಷಕರು, ಪೋಷಕರು ಮತ್ತು ತಜ್ಞ ಸಿಬ್ಬಂದಿ ಮುಂತಾದ ಸಮನ್ವಯತೆಗೆ ಒಳಪಡುವ ಮತ್ತು ಪರಿಣಾಮಕ್ಕೆ ಒಳಗಾಗುವ ಎಲ್ಲರನ್ನು ಅದರ ಭಾಗವಾಗಿರಿಸಿಕೊಳ್ಳುವುದು ಮುಖ್ಯ. ಸಮನ್ವಯತೆಯು ದೊಡ್ಡ-ಪ್ರಮಾಣದ ಮತ್ತು ವ್ಯಾಪಕ-ವ್ಯವಸ್ಥೆಯ ಯೋಜನೆ ಹಾಗೂ ಸಾಮರ್ಥ್ಯವನ್ನು ಬೆಳೆಸುವ ಪ್ರಕ್ರಿಯೆಗಳನ್ನು ಒಳಗೊಂಡಿದ್ದು, ಶಾಲಾ ಹಂತದ ಯೋಜನೆ ರೂಪಿಸುವಿಕೆಯೂ ಇದರಲ್ಲಿ ಸೇರಿರುತ್ತದೆ. ಏಕೆಂದರೆ, ಸಮನ್ವಯತೆಯ ತತ್ವವನ್ನು ಬೆಂಬಲಿಸುವ ಸರ್ವಶಿಕ್ಷಣ ಅಭಿಯಾನ, ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು-2005, ರಾಷ್ಟ್ರೀಯ ಫೋಕಸ್ ಗುಂಪುಗಳ (ಎನ್‌ಸಿಇಆರ್‌ಟಿ) ಪೊಸಿಶನ್ ಪೇಪರ್‌ಗಳು, ವಿಕಲಚೇತನ ಮಕ್ಕಳು ಮತ್ತು ಯುವಜನರ ಒಳಗೊಳ್ಳುವಿಕೆಗಾಗಿ ಸಮಗ್ರ ಕ್ರಿಯಾ ಯೋಜನೆ-2005, 'ಕೇಬ್' ಸಮಿತಿಯ ವರದಿಗಳು, ಹನ್ನೆರಡನೇ ಪಂಚವಾರ್ಷಿಕ ಯೋಜನೆ, ಅಂಗವಿಕಲತೆ ಕುರಿತ ರಾಷ್ಟ್ರೀಯ ನೀತಿ-2006, ಮತ್ತು ಶಿಕ್ಷಣ ಹಕ್ಕು ಕಾಯ್ದೆ-2009 ಮುಂತಾದ ರಾಷ್ಟ್ರೀಯ ಮಟ್ಟದ ನೀತಿಯ ಪರಿಣಾಮಗಳು ಇವೆಲ್ಲವೂ ಸಮನ್ವಯತೆಯ ತತ್ವವನ್ನು ಬೆಂಬಲಿಸುತ್ತವೆ. ಮಾತ್ರವಲ್ಲದೆ, ಭಾರತವು ಅನುಮೋದಿಸಿರುವ ಅಥವಾ ಒಪ್ಪಿ ಸಹಿ ಮಾಡಿರುವ ಅಂತರರಾಷ್ಟ್ರೀಯ ಘೋಷಣೆಗಳು ಮತ್ತು ಒಡಂಬಡಿಕೆಗಳು ಶೈಕ್ಷಣಿಕ ಸುಧಾರಣೆಗಳಿಗೆ ಮಾರ್ಗದರ್ಶಿ ತತ್ವವಾಗಿ ಸಮನ್ವಯ ಶಿಕ್ಷಣದ ಮಹತ್ವವನ್ನು ಒತ್ತಿ ಹೇಳುತ್ತವೆ. ಇವುಗಳಲ್ಲಿ ಪ್ರಮುಖವಾದ ಕೆಲವು - 1990ರ ದಶಕದ ಜಾಮ್ಟಿಯೆನ್ ಘೋಷಣೆ, ಸಾಲಾಮಾಂಕಾ ಹೇಳಿಕೆ (1994), ಡಕಾರ್ ಚೌಕಟ್ಟು (2000) ಸಹಸ್ರಮಾನದ ಅಭಿವೃದ್ಧಿ ಗುರಿಗಳು, 'ಬಿವಾಕೊ' ಸಹಸ್ರಮಾನದ ಅಭವೃದ್ಧಿ ನಿಯಮಗಳು ಮತ್ತು ವಿಕಲಾಂಗ ವ್ಯಕ್ತಿಗಳ ಹಕ್ಕುಗಳ ಒಡಂಬಡಿಕೆ (2006).

ಸಮನ್ವಯ ಶಿಕ್ಷಣವನ್ನು ಅನುಷ್ಠಾನಗೊಳಿಸಲು ಸಹಾಯಕವಾಗುವ ಕೆಲವು ಕಾರ್ಯತಂತ್ರಗಳು ಈ ಕೆಳಗಿನಂತಿವೆ:

## ಕಾರ್ಯತಂತ್ರಗಳು

### ಸಮನ್ವಯತೆಯನ್ನು ಅರ್ಥಮಾಡಿಕೊಳ್ಳುವುದು

ಶಾಲಾ ಪರಿಸರವು ಔಪಚಾರಿಕ ಅಥವಾ ಅನೌಪಚಾರಿಕ ಯಾವುದೇ ಆಗಿರಲಿ, ಸೂಕ್ತವಾಗಿ ಸ್ಪಂದಿಸುವುದರ ಮೂಲಕ ಪೂರೈಸಬೇಕಾಗಿರುವ ಕಲಿಕೆಯ ಅಗತ್ಯಗಳ ವಿಶಾಲ ವ್ಯಾಪ್ತಿಯೊಂದು ಅದಕ್ಕೆ ಇರುತ್ತದೆ. ಸಮಗ್ರ ಶಿಕ್ಷಣವನ್ನು ಕೇವಲ ಹೆಸರಿಗೆ ಮಾತ್ರ ಸಮನ್ವಯ ಶಿಕ್ಷಣ ಎಂಬ ಪರಿಭಾಷೆಗೆ ಪರಿವರ್ತಿಸುವುದಲ್ಲ. ಬದಲಿಗೆ, ಇದು ಕಲಿಕಾರ್ಥಿಗಳ ವೈವಿಧ್ಯಮಯ ಅಗತ್ಯಗಳನ್ನು ಅರಿತು ಅದನ್ನು ನಿಭಾಯಿಸುವ ಮತ್ತು ಅದಕ್ಕೆ ಸೂಕ್ತವಾಗಿ ಸ್ಪಂದಿಸುವ ಒಂದು ಆಂದೋಲನವೇ ಆಗಿದೆ. ಇದು ಆಯಾ ವಯಸ್ಸಿಗನುಗುಣವಾಗಿ ವಿವಿಧ ವಯೋಮಾನದ ಎಲ್ಲಾ ಮಕ್ಕಳನ್ನು ಒಳಗೊಳ್ಳುವ ಒಂದು ಸಾಮಾನ್ಯ ದೃಷ್ಟಿ ಮತ್ತು ಎಲ್ಲ ಮಕ್ಕಳಿಗೆ ಶಿಕ್ಷಣ ನೀಡುವ ನಿಯಮಿತ ವ್ಯವಸ್ಥೆಯೊಂದರ ಜವಾಬ್ದಾರಿಯಾಗಿದೆ ಎಂಬ ದೃಢನಿಶ್ಚಯಗಳೊಂದಿಗೆ ವಿಷಯಾಂಶಗಳು, ವಿಧಾನಗಳು, ಸಂರಚನೆಗಳು ಮತ್ತು ಕಾರ್ಯತಂತ್ರಗಳಲ್ಲಿ ಬದಲಾವಣೆಗಳು ಮತ್ತು ಮಾರ್ಪಾಡುಗಳನ್ನು ಒಳಗೊಂಡಿರುತ್ತದೆ (ಯುನೆಸ್ಕೊ - UNESCO, 1994). ಎಲ್ಲ ಮಕ್ಕಳ ದೈಹಿಕ, ಬೌದ್ಧಿಕ, ಸಾಮಾಜಿಕ, ಭಾವನಾತ್ಮಕ, ಭಾಷಿಕ ಅಥವಾ ಇತರ ಪರಿಸ್ಥಿಗಳನ್ನು ಲೆಕ್ಕಿಸದೆ ಶಾಲೆಗಳು ಎಲ್ಲ ಮಕ್ಕಳಿಗೆ ಅವಕಾಶ ಕಲ್ಪಿಸಬೇಕು ಎಂಬುದು ಸಮನ್ವಯತೆಗೆ ಆಧಾರವಾಗಿರುವ ಮಾರ್ಗದರ್ಶಿ ತತ್ವವಾಗಿದೆ. ಇದು ಅಂಗವಿಕಲ ಮತ್ತು ಪ್ರತಿಭಾನ್ವಿತ ಮಕ್ಕಳು, ಬೀದಿ ಬದಿಯ ಮತ್ತು ದುಡಿಯುವ ಮಕ್ಕಳು, ದೂರದ ಕುಗ್ರಾಮಗಳ ಮತ್ತು ಅಲೆಮಾರಿ ಜನಾಂಗಳ ಮಕ್ಕಳು, ಭಾಷಿಕ-ಜನಾಂಗೀಯ ಅಥವಾ ಸಾಂಸ್ಕೃತಿಕ ಅಲ್ಪಸಂಖ್ಯಾತರ ಮಕ್ಕಳು, ಮತ್ತು ಹಿಂದುಳಿದ ಅಥವಾ ಅಂಚಿಗೆ ತಳ್ಳಲ್ಪಟ್ಟಿರುವ ಗುಂಪುಗಳು ಅಥವಾ ಪ್ರದೇಶಗಳಿಗೆ ಸೇರಿದ ಮಕ್ಕಳನ್ನು ಒಳಗೊಂಡಿರಬೇಕು. ಇಂತಹ ಪರಿಸ್ಥಿತಿಗಳು ಶಾಲಾ ವ್ಯವಸ್ಥೆಗೆ ಬೇರೆ ಬೇರೆ ರೀತಿಯದೇ ಆದ ಹಲವು ಸವಾಲುಗಳನ್ನು ಸೃಷ್ಟಿಸುತ್ತವೆ.

ಶಾಲೆಯಲ್ಲಿ ಸಮನ್ವಯತೆಗೆ ಸಂಬಂಧಿಸಿದ ಬದಲಾವಣೆಗಳನ್ನು ಅನುಷ್ಠಾನಗೊಳಿಸುವಲ್ಲಿ ನೀತಿಗಳು ಮತ್ತು ಅಭ್ಯಾಸಗಳನ್ನು ಸ್ಥಾಪಿಸುವ ಆದೇಶವನ್ನು ಪ್ರಮುಖ ಅವಶ್ಯಕತೆ ಎಂದು ಪರಿಗಣಿಸಲಾಗಿದೆ. ಸಮನ್ವಯತೆಗೆ ಸಂಬಂಧಿಸಿದಂತೆ ಕೆಲವು ಶೈಕ್ಷಣಿಕ ಸುಧಾರಣೆಗಳು ಮತ್ತು ಬದಲಾವಣೆಗಳು ಹೆಚ್ಚುತ್ತಿರುವುದು ಕಂಡುಬರುತ್ತಿದೆ. ಇದು ಶಾಲಾ ಸುಧಾರಣೆಗೆ ಮತ್ತು ಶಾಲಾ ದಕ್ಷತೆಗೆ ಕಾರಣವಾಗುತ್ತದೆ, ಉದಾಹರಣೆಗೆ, ಉತ್ತಮ ತರಗತಿ ಬೋಧನೆಯು ಶಾಲಾ ದಕ್ಷತೆಯನ್ನು ಹೆಚ್ಚಿಸುತ್ತದೆ. ಇತರ ಬದಲಾವಣೆಗಳು ವ್ಯವಸ್ಥೆಯ ಮೂಲ ಸಂರಚನೆಯನ್ನು ಬದಲಾಯಿಸುವ ಗುರಿಯನ್ನು ಹೊಂದಿವೆ. ಇವುಗಳಲ್ಲಿ ಪ್ರಮುಖವಾದವುಗಳೆಂದರೆ ಶಾಲಾ ದಾಖಲಾತಿಯ ವ್ಯವಸ್ಥೆ, ಶಿಕ್ಷಕರನ್ನು ಸಜ್ಜುಗೊಳಿಸಲು ವ್ಯವಸ್ಥೆ ಮಾಡುವುದು ಹಾಗೂ ಮೇಲುಸ್ತುವಾರಿ ಮತ್ತು ಶೈಕ್ಷಣಿಕ ನಾಯತ್ವದ ಮೂಲಕ ಅವರಲ್ಲಿ ವೃತ್ತಿಪರತೆಯನ್ನು ಬೆಳೆಸುವುದು, ಪರೀಕ್ಷೆಯ ವ್ಯವಸ್ಥೆ, ಭೌತಿಕ ಮೂಲ ಸೌಕರ್ಯ, ಸಮುದಾಯದ ಬೆಂಬಲ ಮತ್ತು ಅಗತ್ಯವಿದ್ದರೆ ವಿಶೇಷ ಅಥವಾ ಹೆಚ್ಚುವರಿ ಬೆಂಬಲ ಪಡೆಯುವುದು. ಹೆಚ್ಚಿನ ಕಾಳಜಿಯ ಅಗತ್ಯವಿರುವ

ಮತ್ತೊಂದಷ್ಟು ನಿರ್ಣಾಯಕ ಕ್ಷೇತ್ರಗಳನ್ನು ಗುರುತಿಸಲಾಗಿದ್ದು ಅವುಗಳ ಕುರಿತು ಮುಂದೆ ಚರ್ಚಿಸಲಾಗಿದೆ.

(

***ಸಮನ್ವಯ ಶಿಕ್ಷಣದಲ್ಲಿ ರಾಜ್ಯ ಸಂಯೋಜಕರ ಪಾತ್ರ***

*ರಾಜ್ಯ ಮಟ್ಟದಲ್ಲಿ ಸಮನ್ವಯ ಶಿಕ್ಷಣಕ್ಕೆ ಸಂಬಂಧಿಸಿದಂತೆ ಚಟುವಟಿಕೆಗಳ ಯೋಜನೆ ಮತ್ತು ನಿರ್ವಹಣೆಯ ಜೊತೆಗೆ ಸಮನ್ವಯ ಶಿಕ್ಷಣಕ್ಕಾಗಿ ರಾಜ್ಯ ಮಟ್ಟದ ಸಂಯೋಜಕರು ಈ ಕೆಳಗಿನವುಗಳನ್ನು ಕೈಗೊಳ್ಳಬಹುದು:*

- *ವಿಶೇಷ ಅಗತ್ಯತೆಯುಳ್ಳ ಮಕ್ಕಳ ದತ್ತಾಂಗಳ ನಿಯಮಿತ ಸಂಕಲನ*
- *ವಾರ್ಷಿಕ ಕ್ರಿಯಾ ಯೋಜನೆಯ ತಯಾರಿ ಮತ್ತು ಅಂತಿಮಗೊಳಿಸುವಿಕೆ*
- *ವಿಶೇಷ ಅಗತ್ಯತೆಯುಳ್ಳ ಮಕ್ಕಳ ಶಿಕ್ಷಣಕ್ಕೆ ಸಂಬಂಧಿಸಿದ ಚಟುವಟಿಕೆಗಳ ಮೇಲ್ವಿಚಾರಣೆ*
- *ಜಿಲ್ಲ/ತಾಲ್ಲೂಕಾ ಮಟ್ಟದಲ್ಲಿ ಕಾರ್ಯಕರ್ತರಿಗೆ ನಿರಂತರ ಬೆಂಬಲ*
- *ಸಮನ್ವಯ ಶಿಕ್ಷಣದ ಕುರಿತ ಕಾರ್ಯಾಗಾರಗಳ ಆಯೋಜನೆ*

*ರಾಜ್ಯ ಕಾರ್ಯಕ್ರಮ ನಿರ್ದೇಶಕರಿಂದ ನಿಯೋಜಿಸಲ್ಪಟ್ಟ ಇತರ ಯಾವುದೇ ಕೆಲಸ*

*ಮೂಲ: ಸರ್ವಶಿಕ್ಷಣ ಅಭಿಯಾನ*

**ಸಮನ್ವಯ ಶಿಕ್ಷಣದ ಉಸ್ತುವಾರಿಯ ಹೊಣೆಗಾರಿಕೆ**

ಈ ಉಸ್ತುವಾರಿಯ ಹೊಣೆಗಾರಿಕೆ ವಹಿಸುವವರು ಸರ್ವಶಿಕ್ಷಣ ಅಭಿಯಾನ ಯೋಜನೆಯ ಅಡಿಯಲ್ಲಿ ಶಾಲಾ ಸಮೂಹಗಳು, ತಾಲ್ಲೂಕಾ, ಜಿಲ್ಲೆ ಅಥವಾ ರಾಜ್ಯ ಮಟ್ಟದಲ್ಲಿ ಸಂಯೋಜಕರಾಗಿ ಜವಾಬ್ದಾರಿ ನಿರ್ವಹಣೆ ಮಾಡುವವರು ಯಾರೇ ಆಗಿರಬಹುದು. ಸಮನ್ವಯತೆ ಎಂದರೆ 'ಏನು' ಎಂದು ಅದನ್ನು ನಿರ್ವಚಿಸಬಲ್ಲವರು, ಮತ್ತು, ಸಮನ್ವಯತೆಯ 'ಹೇಗೆ' - ಅಂದರೆ, ಅನುಷ್ಠಾನ ವಿಧಾನಗಳ ಸ್ಪಷ್ಟತೆ ಇರುವ ವ್ಯಕ್ತಿಗಳಿಗೆ ಈ ಜವಾಬ್ದಾರಿಯನ್ನು ವಹಿಸಿಕೊಡಬಹುದು. ಸಮನ್ವಯತೆಯ ಪ್ರಕ್ರಿಯೆಯ ಸಮಗ್ರ ಉಸ್ತುವಾರಿ ವಹಿಸುವ ವ್ಯಕ್ತಿಯು ಈ ಕ್ಷೇತ್ರದಲ್ಲಿ ತರಬೇತಿ ಪಡೆದವರಾಗಿದ್ದು, ಶಾಲಾ ಚಟುವಟಿಕೆಗಳಲ್ಲಿ ಸಕ್ರಿಯವಾಗಿ ತಮ್ಮನ್ನು ತೊಡಗಿಸಿಕೊಳ್ಳುವವರಾಗಿರಬೇಕು.

ಇತರೆಲ್ಲ ವಿಷಯಗಳ ಜೊತೆಗೆ, ಈ ವ್ಯಕ್ತಿಯು (ಅಥವಾ ವ್ಯಕ್ತಿಗಳು) ಎಲ್ಲ ಮಕ್ಕಳು ಕಲಿಯಲು ಇಂಬು ಕೊಡುವಂತಹ ಅತ್ಯುತ್ತಮ ಯೋಜನೆಯನ್ನು ರೂಪಿಸಲು ಮತ್ತು ಅವುಗಳನ್ನು ಸಂಯೋಜಿಸಲು ನೆರವಾಗುವ ಚಿಂತನೆ ಆಲೋಚನೆಗಳಿರುವವರು ಮತ್ತು ಅವುಗಳನ್ನು ವಿನಿಮಯ ಮಾಡಿಕೊಳ್ಳಬಲ್ಲವರ ಸಭೆಗಳನ್ನು ತಳಮಟ್ಟದಲ್ಲಿ ಸಂಘಟಿಸುವ ಜವಾಬ್ದಾರಿಯನ್ನು ಹೊಂದಿರುತ್ತಾರೆ. ಸಿಬ್ಬಂದಿಗೆ (ಶಿಕ್ಷಕರು ಮತ್ತು ಪೂರಕ ವೃತ್ತಿಪರರು) ತರಬೇತಿಯನ್ನು ಆಯೋಜಿಸಲು, ಅಗತ್ಯವಿರುವ ಸಂಪನ್ಮೂಲಗಳು ಲಭ್ಯವಾಗುವಂತೆ ನೋಡಿಕೊಳ್ಳುವಲ್ಲಿ ಮತ್ತು ಒಟ್ಟಾರೆ ತರಬೇತಿ ಪ್ರಕ್ರಿಯೆಯನ್ನು ಮೇಲ್ವಿಚಾರಣೆ ಮಾಡುವಲ್ಲಿ

ಸಂಯೋಜಕರು ಪ್ರಮುಖ ಪಾತ್ರ ವಹಿಸಬಹುದು. ಅಗತ್ಯವಿದ್ದರೆ, ಈ ಯೋಜನೆಯ ಭಾಗವಾಗಿರುವ ಶಿಕ್ಷಕರು, ಪೋಷಕರು ಮತ್ತು ವಿದ್ಯಾರ್ಥಿಗಳು ಪ್ರತಿಯೊಬ್ಬರಿಗೂ ಇದರ ಯಶಸ್ಸಿನ ಫಲವು ಗರಿಷ್ಠ ಮಟ್ಟದಲ್ಲಿ ದೊರೆಯುವಂತೆ ಮಾಡಲು, ಸಾಂಸ್ಥಿಕ ಹಾಗೂ ಇತರ ಅಡೆತಡೆಗಳ ನಿವಾರಣೆ ಮಾಡಲು ಈ ವ್ಯಕ್ತಿಯು ತಳಮಟ್ಟದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಳ್ಳಬಹುದು.

***ಸರ್ವಶಿಕ್ಷಣ ಅಭಿಯಾನದ ಅಡಿಯಲ್ಲಿ ಸಮನ್ವಯ ಶಿಕ್ಷಣ ಜಿಲ್ಲಾ ಸಂಯೋಜಕರ ಪಾತ್ರ***

*ಸಮನ್ವಯ ಶಿಕ್ಷಣಕ್ಕಾಗಿ ಜಿಲ್ಲಾ ಮಟ್ಟದ ಸಂಯೋಜಕರ ಪ್ರಮುಖ ಜವಾಬ್ದಾರಿಗಳನ್ನು ಹೀಗೆ ಗುರುತಿಸಬಹುದು:*

- *ಜಿಲ್ಲೆಯ ಎಲ್ಲ ತಾಲ್ಲೂಕಾಗಳು/ಶಾಲಾ ಸಮೂಹಗಳಲ್ಲಿ ವಿಶೇಷ ಶಿಕ್ಷಕರ ಕೆಲಸಗಳ ಮೇಲ್ವಿಚಾರಣೆ*
- *ಎಲ್ಲ ತಾಲ್ಲೂಕಾಗಳು/ಶಾಲಾ ಸಮೂಹಗಳಲ್ಲಿ ವಿಶೇಷ ಶಿಕ್ಷಕರಿಗೆ ಸಂಪನ್ಮೂಲ ಬೆಂಬಲವನ್ನು ಒದಗಿಸುವುದು*
- *ಎಲ್ಲ ತಾಲ್ಲೂಕಾಗಳು/ಶಾಲಾ ಸಮೂಹಗಳಿಂದ ವಿಶೇಷ ಅಗತ್ಯತೆಗಳಿರುವ ಮಕ್ಕಳ ದತ್ತಾಂಶ ಸಂಗ್ರಹ*
- *ಜಿಲ್ಲೆಯಲ್ಲಿ ವಿಕಲಚೇತನ ಮಕ್ಕಳ ಸಮನ್ವಯತೆಯ ಬಗ್ಗೆ ನಿಗಾ ವಹಿಸುವುದು*
- *ಶಿಕ್ಷಕರಿಗೆ ವಿಷಯ ಪರಿಚಯ ನೀಡಿ ಅವರಲ್ಲಿ ದೃಷ್ಟಿಕೋನ ಬೆಳೆಸುವುದು ಮತ್ತು ಸಮುದಾಯದಲ್ಲಿ ಜಾಗೃತಿ ಮೂಡಿಸುವ ಕೆಲಸಗಳ ಮೇಲ್ವಿಚಾರಣೆ ಮಾಡುವುದು*
- *ರಾಜ್ಯ ಕಾರ್ಯಕ್ರಮ ನಿರ್ದೇಶಕರು ಅಥವಾ ಸಮನ್ವಯ ಶಿಕ್ಷಣದ ರಾಜ್ಯ ಸಂಯೋಜಕರು ನಿಯೋಜಿಸಬಹುದಾದ ಇತರ ಯಾವುದೇ ಕರ್ತವ್ಯಗಳು*

*ಮೂಲ: ಸರ್ವಶಿಕ್ಷಣ ಅಭಿಯಾನ*

**ಪ್ರಾಂಶುಪಾಲರು/ಮುಖ್ಯ ಶಿಕ್ಷಕರ ಪಾತ್ರ**

ಪ್ರಾಂಶುಪಾಲರು/ಮುಖ್ಯ ಶಿಕ್ಷಕರನ್ನು ವಾಸ್ತವದಲ್ಲಿ ಶಾಲಾ ಬದಲಾವಣೆಯ ಹರಿಕಾರರೆಂದೇ ಪರಿಗಣಿಸಬಹುದು. ಸಕ್ರಿಯರಾಗಿ ಮುಂದಾಗುವ ಮತ್ತು ಬದ್ಧತೆಯುಳ್ಳ ಶಾಲಾ ಪ್ರಾಂಶುಪಾಲರು/ಮುಖ್ಯ ಶಿಕ್ಷಕರು ಯಶಸ್ವಿಯಾಗಿ ಸಮನ್ವಯತೆ ಸಾಧಿಸುವುದರಲ್ಲಿ ನಿರ್ಣಾಯಕ ಪಾತ್ರ ವಹಿಸುತ್ತಾರೆ. ಪ್ರಾಂಶುಪಾಲರ ನಾಯಕತ್ವದ ಮೂಲಕ ಮಾತ್ರ ಶಾಲೆಯೊಂದು ವಿಭಿನ್ನ ಹಿನ್ನೆಲೆಯ ಮತ್ತು ವಿಭಿನ್ನ ಸಾಮರ್ಥ್ಯದ ವಿದ್ಯಾರ್ಥಿಗಳನ್ನು ಸ್ವೀಕರಿಸುವ ಮತ್ತು ಸ್ವಾಗತಿಸುವ ಮಾದರಿ ಸಮನ್ವಯ ಶಾಲೆಯಾಗಬಹುದು. ಸಹಭಾಗಿತ್ವಕ್ಕಾಗಿ ತಂಡ ನಿರ್ಮಾಣ, ಪೋಷಕರ ಒಳಗೊಳಿಸುವಿಕೆ, ಸಂಪನ್ಮೂಲದ ಬೆಂಬಲ, ಪಠ್ಯಕ್ರಮದಲ್ಲಿ ಹೊಂದಾಣಿಕೆ, ಪರೀಕ್ಷಾ ಕಾರ್ಯವಿಧಾನಗಳಲ್ಲಿ ಸಡಿಲಿಕೆ ಇವುಗಳನ್ನೆಲ್ಲ ಪ್ರಾಂಶುಪಾಲರು/ಮುಖ್ಯ ಶಿಕ್ಷಕರು ಪ್ರೋತ್ಸಾಹಿಸಬಹುದು.

## ಶಾಲೆಗಳಲ್ಲಿ ಶೈಕ್ಷಣಿಕ ನಾಯಕತ್ವ

ಸಮನ್ವಯ ಶಿಕ್ಷಣದ ಕಾರ್ಯಸೂಚಿಯನ್ನು ಶಾಲೆಯಲ್ಲಿ ಅನುಸರಿಸುವಂತೆ ಶಿಕ್ಷಕರಿಗೆ ಪ್ರೇರಣೆ ನೀಡುವಲ್ಲಿ ಪ್ರಾಂಶುಪಾಲರು/ಮುಖ್ಯ ಶಿಕ್ಷಕರು ಮಹತ್ವದ ಪಾತ್ರವನ್ನು ವಹಿಸುತ್ತಾರೆ. ಶಿಕ್ಷಕರು ಬದಲಾವಣೆಗಳನ್ನು ತರುವುದಕ್ಕೆ ಆಸಕ್ತಿ ಹೊಂದಿದ್ದರೂ ಕೂಡ ಆತ/ಆಕೆ ಅಧಿಕಾರಯುತವಾಗಿ ಸಶಕ್ತರಾಗಿರದ ಹೊರತು ಅದನ್ನು ಕಾರ್ಯರೂಪಕ್ಕೆ ತರಲು ಸಾಧ್ಯವಾಗುವುದಿಲ್ಲ ಎಂಬುದು ಕಂಡುಕೊಂಡಿರುವ ಒಂದು ಸಂಗತಿಯಾಗಿದೆ. ತನ್ನ ತರಗತಿಯಲ್ಲಿನ ಕೆಲವು ಮಕ್ಕಳನ್ನು ನಿರ್ಲಕ್ಷಿಸಿದ ಬಗ್ಗೆ ಪ್ರಶ್ನಿಸುವಾಗ, ಶಿಕ್ಷಕರು ಸಾಮಾನ್ಯವಾಗಿ ಉನ್ನತ ಅಧಿಕಾರಿಗಳು ಕೇಳುವವರೆಗೂ ಈ ಮಕ್ಕಳಿಗೆ ಏನನ್ನೂ ಮಾಡಲು ಸಾಧ್ಯವಾಗದ ತಮ್ಮ ಅಸಮರ್ಥತೆಯನ್ನು ವ್ಯಕ್ತಪಡಿಸುತ್ತಾರೆ. ಶಿಕ್ಷಕರೊಬ್ಬರು ವ್ಯಕ್ತಪಡಿಸಿದಂತೆ "ಮುಖ್ಯ ಶಿಕ್ಷಕರು ಎಲ್ಲಿಯವರೆಗೆ ಆಸಕ್ತಿ ತೋರುವುದಿಲ್ಲವೋ ಅಲ್ಲಿಯ ತನಕ ನಾನು ತರಗತಿಯಲ್ಲಿ ಯಾವುದೇ ಬದಲಾವಣೆಯನ್ನು ಮಾಡಲು ಸಾಧ್ಯವಿಲ್ಲ. ನಾನು ಪಠ್ಯಕ್ರಮವನ್ನು ಮುಗಿಸಬೇಕು ಮತ್ತು ಪರೀಕ್ಷೆಯ ವೇಳಾಪಟ್ಟಿಯ ಹಿಡಿತಕ್ಕೆ ತಕ್ಕ ವೇಗದಲ್ಲಿ ಅದರಲ್ಲಿ ಪ್ರಗತಿ ತೋರಬೇಕು. ವಿಭಿನ್ನವಾಗಿ ಯೋಚಿಸಲು ನಾನು ಯಾರು?" ನಾಯಕರು ನಾವೀನ್ಯಕ್ಕೆ ಬಲವಾದ ಬೆಂಬಲವನ್ನು ಸ್ಪಷ್ಟವಾಗಿ ವ್ಯಕ್ತಪಡಿಸಿದಾಗ ಮಾತ್ರ ಶಿಕ್ಷಕರು, ಇತರ ಸಿಬ್ಬಂದಿ ಮತ್ತು ಸಮುದಾಯದ ಸದಸ್ಯರು ಪ್ರಕ್ರಿಯೆಗೆ ಅಗತ್ಯವಾದ ಸಮಯ ಮತ್ತು ಸಂಪನ್ಮೂಲಗಳನ್ನು ನೀಡುವ ಸಾಧ್ಯತೆಯಿದೆ ಎಂಬುದು ಸ್ಪಷ್ಟವಾಗಿದೆ. ಶಾಲಾ ನಿರ್ವಾಹಕರು ಶಾಲೆಗಳಿಗೆ ಅಗತ್ಯವಿರುವ ನಿರ್ದಿಷ್ಟ ಬೆಂಬಲಗಳನ್ನು ಗುರುತಿಸುವುದು, ಶಾಲಾ ಸಮೂಹ ಮತ್ತು ತಾಲ್ಲೂಕಾ ಮಟ್ಟದ  ಸಿಬ್ಬಂದಿಯಿಂದ ತರಬೇತಿ ಮತ್ತು ಶಾಲಾ ಭೇಟಿಗಳ ಸಂದರ್ಭದಲ್ಲಿ ತಮ್ಮ ನಿರೀಕ್ಷೆಗಳೇನೆಂದು ತಿಳಿಸುವುದು, ಗುಣಮಟ್ಟವನ್ನು ಖಾತರಿಪಡಿಸುವುದಕ್ಕಾಗಿ ಪರಿಶೀಲನೆ ಮತ್ತು ಮೇಲ್ವಿಚಾರಣೆಯ ಪ್ರಕ್ರಿಯೆಗಳಲ್ಲಿ ಭಾಗವಹಿಸುವುದು ಮುಖ್ಯವಾಗಿದೆ.

ಮುಖ್ಯವಾಗಿ, ಪ್ರಾಂಶುಪಾಲರು/ಮುಖ್ಯ ಶಿಕ್ಷಕರು ತಮ್ಮ ಶಾಲಾ ಮಟ್ಟದ ಯೋಜನೆಯ ಭಾಗವಾಗಿ, ತಮಗೆ ಅಗತ್ಯವಿರುವ ಕಾರ್ಯಕ್ರಮಗಳನ್ನು ನಿರ್ಧರಿಸುವಲ್ಲಿ ಮತ್ತು ಇವುಗಳನ್ನು ನಿಯಮಿತ ಶಾಲಾ ಚಟುವಟಿಕೆಗಳಲ್ಲಿ ಯಾವ ರೀತಿಯಲ್ಲಿ ಸಂಯೋಜಿಸಬೇಕು ಎಂದು ನಿರ್ಧಾರ ತೆಗೆದುಕೊಳ್ಳುವಲ್ಲಿ ಭಾಗವಹಿಸಲು  ಸಾಧ್ಯವಾಗುತ್ತದೆ.

## ಪ್ರವೇಶ ನೀತಿ

ಎಲ್ಲ ಮಕ್ಕಳು ತಮ್ಮ ನೆರೆಹೊರೆಯಲ್ಲಿರುವ ಶಾಲೆಗೆ ಹಾಜರಾಗಲು ಅವಕಾಶವನ್ನು ಪಡೆಯುವುದು ಮುಖ್ಯವಾಗಿದೆ. ಪ್ರವೇಶಕ್ಕೆ ಸಂಬಂಧಿಸಿದ ಕೆಲವು ನಿಯಮಗಳ (ಪರಿಶೋಧನೆ, ಪ್ರಮಾಣೀಕರಣ, ಪೋಷಕರ ಸಂವಹನ, ಆಯ್ಕೆ ಮತ್ತು ಮೌಲ್ಯಮಾಪನ)  ಕಾರಣದಿಂದಾಗಿ ಕೆಲವೊಮ್ಮೆ ಮಗುವಿನ ಪ್ರವೇಶವನ್ನು ನಿರಾಕರಿಸಬಹುದು. ಶಾಲಾ ಪ್ರವೇಶದ ಹಂತದಲ್ಲಿ ಪೋಷಕರು ಸಾಮಾನ್ಯವಾಗಿ ಈ ಕೆಳಗಿನ ದಾಖಲೆಗಳನ್ನು ಸಲ್ಲಿಸಬೇಕಾಗುತ್ತದೆ.

- ಜನನ ಪ್ರಮಾಣಪತ್ರ ಅಥವಾ ಜನನ ರುಜುವಾತು ಆದೇಶ ಪತ್ರ **(ಅಫಿಡವಿಟ್)**

- ಪರಿಶಿಷ್ಟ ಜಾತಿ/ಪರಿಶಿಷ್ಟ ವರ್ಗ/ಇತರ ಹಿಂದುಳಿದ ವರ್ಗಗಳ ಮಕ್ಕಳ ಜಾತಿ ಪ್ರಮಾಣಪತ್ರ
- ಆದಾಯ ಪ್ರಮಾಣಪತ್ರ
- ಅಂಗವೈಕಲ್ಯ ಪ್ರಮಾಣಪತ್ರ, ಅಗತ್ಯವಿದ್ದಲ್ಲಿ

ಶಿಕ್ಷಣ ಎಲ್ಲರ ಮೂಲಭೂತ ಹಕ್ಕಾಗಿರುವುದರಿಂದಾಗಿ ಅಗತ್ಯ ದಾಖಲೆಗಳಿಲ್ಲದ ಕಾರಣಕ್ಕೆ ಪ್ರವೇಶ ನಿರಾಕರಿಸುವುದು ಸರಿಯಲ್ಲ. ಮಗು ಶಾಲೆಗೆ ಹಾಜರಾಗಲು ಪ್ರಾರಂಭಿಸಿದ ನಂತರ ಪೋಷಕರು ಅಗತ್ಯ ದಾಖಲೆಗಳನ್ನು ಒದಗಿಸಬಹುದು.

ಜನನ ಪ್ರಮಾಣಪತ್ರ, ಪಡಿತರ ಚೀಟಿ, ಕಾರ್ಯನಿರ್ವಾಹಕ ಮ್ಯಾಜಿಸ್ಟ್ರೇಟ್‌ರಿಂದ ದೃಢೀಕರಿಸಲ್ಪಟ್ಟ ಜನನ ದಿನಾಂಕದ ರುಜುವಾತು ಆದೇಶ ಪತ್ರ (ಅಫಿಡವಿಟ್), ಅಂಗವಿಕಲ ಮಗುವಿನ ಸಂದರ್ಭದಲ್ಲಿ ಅಂಗವೈಕಲ್ಯ ಪ್ರಮಾಣಪತ್ರ ಇತ್ಯಾದಿಗಳು ಸರಿಯಾಗಿ ಲಭ್ಯವಿಲ್ಲ ಎಂಬಂತಹ ಅಪ್ರಸ್ತುತ ಆಧಾರದ ಮೇಲೆ ಪ್ರವೇಶವನ್ನು ನಿರಾಕರಿಸುವಂತಿಲ್ಲ ಎಂದು *ಸೋಶಿಯಲ್ ಜ್ಯೂರಿಸ್ಟ್ ಮತ್ತು ಯೂನಿಯನ್ ಆಫ್ ಇಂಡಿಯಾ ಮತ್ತು ಇತರರು (Social Jurist & Union of India and Others)* ವಿವಾದದಲ್ಲಿ ದೆಹಲಿ ಹೈಕೋರ್ಟ್ ಸೂಚಿಸಿದೆ.

ಮಕ್ಕಳ ಉಚಿತ ಮತ್ತು ಕಡ್ಡಾಯ ಶಿಕ್ಷಣದ ಹಕ್ಕು, 2009, ಅದರ ವಿಭಾಗ 4ರಲ್ಲಿ ಸ್ಪಷ್ಟವಾಗಿ ಹೀಗೆ ಹೇಳಲಾಗಿದೆ -

*ಆರು ವರ್ಷಕ್ಕಿಂತ ಮೇಲ್ಪಟ್ಟ ಮಗುವನ್ನು ಯಾವುದೇ ಶಾಲೆಯಲ್ಲಿ ಸೇರಿಸಿಲ್ಲವಾದರೆ ಅಥವಾ ಪ್ರವೇಶ ಪಡೆದಿದ್ದರೂ, ಅವನ ಅಥವಾ ಅವಳ ಪ್ರಾಥಮಿಕ ಶಿಕ್ಷಣವನ್ನು ಪೂರ್ಣಗೊಳಿಸಲು ಸಾಧ್ಯವಾಗದಿದ್ದರೆ, ಅವನನ್ನು ಅಥವಾ ಅವಳನ್ನು ಅವನ ಅಥವಾ ಅವಳ ವಯಸ್ಸಿಗೆ ಸೂಕ್ತವಾದ ತರಗತಿಯಲ್ಲಿ ಸೇರಿಸಿಕೊಳ್ಳಬೇಕು.*

**ಪೋಷಕರು ಮತ್ತು ಸಮುದಾಯದ ಭಾಗವಹಿಸುವಿಕೆ**

ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು (2005) ಶಾಲೆಗಳಲ್ಲಿನ ಪಠ್ಯಕ್ರಮದ ಪ್ರಕ್ರಿಯೆಯ ಮೇಲೆ ಪ್ರಭಾವ ಬೀರುವಲ್ಲಿ ಸಮುದಾಯದಂತಹ ಶಾಲೆಯ ಹೊರಗಿರುವ ಬಹು ವಿಸ್ತಾರವಾದ ಜಗತ್ತಿನ ಪಾತ್ರವನ್ನು ಎತ್ತಿ ತೋರಿಸುತ್ತದೆ. ಅದು ಹೇಳುತ್ತದೆ:

*"ಪೋಷಕರು ಮತ್ತು ಸಮುದಾಯದ ಸದಸ್ಯರು ಸಂಪನ್ಮೂಲ ವ್ಯಕ್ತಿಗಳಾಗಿ ಶಾಲೆಗೆ ಬರಬಹುದು ಮತ್ತು ಅಧ್ಯಯನ ಮಾಡುತ್ತಿರುವ ನಿರ್ದಿಷ್ಟ ವಿಷಯಕ್ಕೆ ಸಂಬಂಧಿಸಿದಂತೆ ತಮ್ಮ ಜ್ಞಾನ ಮತ್ತು ಅನುಭವಗಳನ್ನು ಹಂಚಿಕೊಳ್ಳಬಹುದು."*

ಪಾಲಕರು ತಮ್ಮ ಮಗುವಿನ ವ್ಯಕ್ತಿತ್ವ, ಸಾಮರ್ಥ್ಯ ಮತ್ತು ಅಗತ್ಯಗಳ ಕುರಿತು ಆಳವಾಗಿ ಅರಿತಿರುತ್ತಾರೆ ಆದ್ದರಿಂದ ಶಿಕ್ಷಣದಲ್ಲಿ ಅವರನ್ನು ಒಳಗೊಳಿಸಿಕೊಳ್ಳುವುದರಿಂದ ಅವರು ಹೆಚ್ಚಿನ

ಪ್ರಮಾಣದಲ್ಲಿ ಕೊಡುಗೆ ನೀಡಲು ಸಾಧ್ಯವಾಗಬಹುದು. ಪ್ರಕ್ರಿಯೆಯ ಯೋಜನೆ ಮತ್ತು ಅನುಷ್ಠಾನದ ಉದ್ದಕ್ಕೂ ವಿಶೇಷವಾಗಿ, ಸಮನ್ವಯ ಶಿಕ್ಷಣ ಕಾರ್ಯಕ್ರಮದ ವ್ಯಾಪ್ತಿ ಮತ್ತು ರಚನೆಯ ಬಗ್ಗೆ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಪೋಷಕರನ್ನು ಪ್ರಾಥಮಿಕ ಭಾಗೀದಾರರಾಗಿ ಸೇರಿಸಿಕೊಳ್ಳುವಂತಾಗಬೇಕು. ಅವರು ಯೋಜನೆಯ ಪಟ್ಟಿಗೆ ನೀಡಬಹುದಾದ ಜ್ಞಾನಕ್ಕೆ ಬೆಲೆ ಕಟ್ಟಲು ಸಾಧ್ಯವಿಲ್ಲ ಮತ್ತು ಅವರ ಮಗುವಿನ ಕುರಿತಾಗಿ ಅವರಿಗೆ ಇರುವ ಕಾಳಜಿ ಮತ್ತು ಅವರು ನೀಡುವ ಸಲಹೆಗಳು ಪ್ರಶಂಸೆಗೆ ಅರ್ಹವಾಗಿರುತ್ತವೆ. ಪೋಷಕರೊಂದಿಗೆ ನಡೆಸುವ ಸಂವಹನವು ಮುಕ್ತ ಮತ್ತು ಪ್ರಾಮಾಣಿಕವಾಗಿ ಇರುವುದರೊಂದಿಗೆ ಅವರ ಕುಟುಂಬದ ಸಾಂಸ್ಕೃತಿಕ ಮಾದರಿಗಳು ಮತ್ತು ನಂಬಿಕೆಗಳನ್ನು ಗೌರವಿಸಬೇಕು. ಸರ್ವಶಿಕ್ಷಣ ಅಭಿಯಾನದ ಅಡಿಯಲ್ಲಿ, ಮಕ್ಕಳಿಗೆ ಬೆಂಬಲ ನೀಡುವಂತಹ ಶಾಲಾ ಪರಿಸರವನ್ನು ಸೃಷ್ಟಿಸಲು, ಪೋಷಕರು ಮತ್ತು ಸ್ಥಳೀಯ ಸಮುದಾಯದೊಂದಿಗೆ ಶಾಲೆಗಳ ಸಂಬಂಧವನ್ನು ಬಲಪಡಿಸಲು, ಪೋಷಕ-ಶಿಕ್ಷಕರ ಸಂಘಗಳು, ಸ್ಥಳೀಯ ಮಟ್ಟದ ಸಮಿತಿಗಳಾದ ಗ್ರಾಮ ಶಿಕ್ಷಣ ಸಮಿತಿ ಮತ್ತು ಶಾಲಾ ಆಡಳಿತ ಸಮಿತಿಗಳಂತಹ ಸಾಂಸ್ಥಿಕ ರಚನೆಗಳಿಗೆ ಅವಕಾಶ ಕಲ್ಪಿಸಲಾಗಿದೆ.

ಶಾಲೆ ಮತ್ತು ಶಾಲೆಯ ಸೌಲಭ್ಯಗಳ ನಿರ್ವಹಣೆ ಮಾಡಲು ಸಮುದಾಯದ ಪಾಲ್ಗೊಳ್ಳುವಿಕೆಗೆ ಅವಕಾಶಗಳನ್ನು ಕಲ್ಪಿಸಿಕೊಡಬಹುದು. ಶಾಲೆಯ ಸುತ್ತಲೂ ಸುರಕ್ಷತೆಗಾಗಿ ಗೋಡೆಗಳನ್ನು ನಿರ್ಮಿಸುವುದು, ಶಾಲೆಯ ಇತರ ಸೌಲಭ್ಯಗಳನ್ನು ಹೆಚ್ಚಿಸುವುದು ಮುಂತಾದುವುಗಳಿಗೆ ಸ್ಥಳೀಯ ಕೊಡುಗೆಗಳ ಉದಾಹರಣೆಗಳಿವೆ. ಆದಾಗ್ಯೂ, ಸಮುದಾಯದ ಭಾಗವಹಿಸುವಿಕೆಯು ಬಡ ಕುಟುಂಬಗಳ ಆರ್ಥಿಕ ಹೊರೆಗೆ ಕಾರಣವಾಗಬಾರದು. ಮತ್ತೊಂದೆಡೆ, ಸ್ಥಳೀಯ ಕಾರ್ಯಕ್ರಮಗಳಿಗಾಗಿ ಶಾಲಾ ಆವರಣದಲ್ಲಿ ಸ್ಥಳಾವಕಾಶವನ್ನು ಕಲ್ಪಿಸಿಕೊಡಬಹುದು, ಅಂತೆಯೇ, ಶಾಲಾ ಆವರಣವನ್ನು ನಿರ್ವಹಿಸುವಲ್ಲಿ ಕೆಲವು ಸಾಮೂಹಿಕ ಜವಾಬ್ದಾರಿಗಳು ಕೂಡ ಇರುತ್ತವೆ ಎಂಬ ಒಂದು ಒಪ್ಪಂದಕ್ಕೆ ಬರಬಹುದು (NCF, 2005).

ತಮ್ಮ ಮಗುವಿನ ಶಿಕ್ಷಣದಲ್ಲಿ ಅತ್ಯಂತ ಹಿಂದುಳಿದ ವಿದ್ಯಾರ್ಥಿಗಳ ಕುಟುಂಬಗಳನ್ನು ತೊಡಗಿಸಿಕೊಳ್ಳುವುದು ಒಂದು ದೊಡ್ಡ ಸವಾಲಾಗಿದೆ. ಪೋಷಕರನ್ನು ವಯಸ್ಕರ ಶಿಕ್ಷಣದಲ್ಲಿ ಸೇರಿಸುವುದರಿಂದ ಅವರು ತಮ್ಮ ಮಕ್ಕಳ ಶಾಲಾ ಜೀವನದಲ್ಲಿ ತಮ್ಮನ್ನು ತೊಡಗಿಸಿಕೊಳ್ಳಲು ಮತ್ತು ಶಿಕ್ಷಣದ ಅನುಸರಣೆಯನ್ನು ಮಾಡಲು ಅವರಿಗೆ ಅನುಕೂಲಕರವಾಗುವಂತೆ ಮಾಡಬಹುದು.

ತಮ್ಮ ಮಕ್ಕಳ ಶಿಕ್ಷಣದ ಬಗ್ಗೆ ಕಾಳಜಿ ವಹಿಸುವ ಪೋಷಕರಿಗೆ ಒದಗಿಸಲಾಗುವ ಮಾಹಿತಿಯು ಅವರಿಗೆ ಅರ್ಥವಾಗುವ ಭಾಷೆಯಲ್ಲಿರುವಂತೆ ಖಾತರಿಪಡಿಸಿಕೊಳ್ಳಬೇಕು ಮತ್ತು ಅವರು ಗ್ರಹಿಸಿಕೊಳ್ಳಬಹುದಾದ ಮಾತುಗಳಲ್ಲಿ ಈ ಮಾಹಿತಿಗಳು ಅವರನ್ನು ತಲುಪುವ ಹಾಗೆ ಶಾಲೆಯು ಪ್ರಯತ್ನಗಳನ್ನು ಮಾಡಬಹುದು (ಯುನೆಸ್ಕೊ - UNESCO, 2001c).



**ಮಧ್ಯಾಹ್ನದ ಬಿಸಿ ಊಟದ ತಾಯಂದಿರು**

ಉತ್ತರಾಂಚಲ ರಾಜ್ಯದಲ್ಲಿ ಅಳವಡಿಸಿಕೊಂಡಿರುವ ಒಂದು ವ್ಯವಸ್ಥೆ ಇದಾಗಿದ್ದು, ಮೊದಲನೆಯದಾಗಿ ಮಧ್ಯಾಹ್ನದ ಬಿಸಿ ಊಟದ ಕಾರ್ಯಕ್ರಮದ ಅಡಿಯಲ್ಲಿ ಆಹಾರದ ಗುಣಮಟ್ಟವನ್ನು ಖಾತರಿಪಡಿಸಿಕೊಳ್ಳಲು ಇದನ್ನು ವಿನ್ಯಾಸಗೊಳಿಸಲಾಗಿದೆ. ಗ್ರಾಮವೊಂದರ ಸಮುದಾಯಕ್ಕೆ ಸೇರಿದ ಹಾಗೂ ಅದೇ ಶಾಲೆಯಲ್ಲಿ ಓದುತ್ತಿರುವ ಮಗುವಿನ ತಾಯಿಯಾಗಿರುವ ***ಭೋಜನ ಮಾತೆ***ಯನ್ನು ಗ್ರಾಮ ಶಿಕ್ಷಣ ಸಮಿತಿ ಗುತ್ತಿಗೆ ಆಧಾರದ ಮೇಲೆ ನೇಮಕ ಮಾಡಿಕೊಂಡಿದೆ. ಉತ್ತರಾಂಚಲದ ಕೆಲವು ಗ್ರಾಮಗಳಲ್ಲಿ ಈ 'ಭೋಜನ್ ಮಾತೆ' ಯರು ಆಹಾರದ ಗುಣಮಟ್ಟವನ್ನು ಕಾಪಾಡುವುದು ಮಾತ್ರವಲ್ಲದೆ ಶಾಲಾ ಶಿಕ್ಷಣಕ್ಕೆ ಸಂಬಂಧಿಸಿದ ಸಮಸ್ಯೆಗಳನ್ನು ಪರಿಹರಿಸುವಲ್ಲಿ ಸಕ್ರಿಯ ಪಾತ್ರವನ್ನು ವಹಿಸುವುದು ಅಥವಾ ಶಾಲೆಯ ಸಮಸ್ಯೆಗಳನ್ನು ಪರಿಹರಿಸಲು ಶಾಲಾ ಆಡಳಿತ ಸಮಿತಿಗೆ ಪ್ರೇರಣೆ ನೀಡುತ್ತಿರುವುದು ಕಂಡುಬಂದಿದೆ. ಉದಾಹರಣೆಗೆ, ರಸ್ತೆಗಳನ್ನು ದುರಸ್ತಿ ಮಾಡಿಸುವ ಮೂಲಕ ಮಕ್ಕಳು ಸುಲಭವಾಗಿ ಶಾಲೆಗಳನ್ನು ತಲುಪುವಂತೆ ಮಾಡುವುದು, ಕುಡಿಯುವ ನೀರಿನ ವ್ಯವಸ್ಥೆಯನ್ನು ಖಾತರಿಪಡಿಸುವುದು, ಜಾತಿ ಸಂಬಂಧಿತ ಸಮಸ್ಯೆಗಳನ್ನು ಪರಿಹರಿಸುವುದು ಇತ್ಯಾದಿ.



More on the Web
www.hindustantimes.com

# Failing eyes sight rare school success

*With 2% vision, Soma pulls of 92% at Boards*

SANJEEV K. Ahuja
Gurgaon, May 29

SOMA PATNAIK was seldom able to figure out what her teacher would scribble on the blackboard. With barely two per cent vision in both eyes, studying meant poring over textbooks with a chunky magnifying glass. Many would have given up midway. But this DAV Public School girl from Gurgaon's sector 14 scored 92.6 per cent in the class 10 exam.

Suffering from what doctors call Retinitis Pigmentosa, Patnaik could go totally blind by the time she is 30, says Shuvendu Patnaik, her father.

"There is no cure, really. Both her retinas are damaged and cannot be replaced. We detected her problem when she was two. The doctors had advised us to get her admitted into the blind school at R.K. Puram," the father said.

But the principal of the blind school advised the man to take her little girl to a normal school as she had about 5 per cent vision at that time.

Soma took it all in her strike, scoring 463 out of 500, with 92 in English, 97 in SST, 95 in maths, 93 in science and 86 in Sanskrit.

According to principal of DAV Public School, Anita Makkar, Soma is a "brilliant student".

Asked how she managed studies, Soma told the *Hindustan Times*: "I know I am heading towards 100 per cent blindness. But I am mentally prepared and have decided on my future course. I have started learning the Brail system."

In the class, Soma solely relied on her hearing. "At home, my mother helps in studies and reads out textbooks. I cannot read for long. My eyes get strained and start watering if I read a for more than an hour," said Soma.

The girl was recently knocked down by a car as she was crossing a colony street.

Soma's mother, Sushma, who is a lecturer in geology, is her only tutor.

"My score could have crossed 95 percent mark had I not lost some marks in the Sanskrit paper. I would generally get 99 in that subject. I scored less as I failed to read a few questions correctly. Now, I have gone for humanities even though I love science. I cannot opt for science subjects as I would not be able to perform practicals," Soma said.

She wants to be a writer. But her story is already the stuff of racy novels.

**GIRL UNINTERRUPTED**

SANJEEV VERMA/HT
Soma (left) with her mother.

**I know I am heading towards 100 per cent blindness. But I am mentally prepared and have decided on my future course. I have started learning the Brail system. At home, my mother helps in studies and reads out textbooks. I cannot read for long. My eyes get strained and start watering if I read for more than an hour**

**ಕಳೆದುಹೋಗುತ್ತಿರುವ ದೃಷ್ಟಿ**
**ಅಪರೂಪದ ಕಲಿಕಾ ಸಾಧನೆ**

**ಕೇವಲ 2% ದೃಷ್ಟಿಬಲದೊಂದಿಗೆ ಬೋರ್ಡ್ ಪರೀಕ್ಷೆಯಲ್ಲಿ ಶೋಮಾ ಸಾಧನೆ 92%**

**ಅಡೆತಡೆಗಳನ್ನು ಮೀರಿದ ಬಾಲಕಿ**

ಶೋಮಾ ಪಟ್ನಾಯಕ್ ಎಂಬ ಬಾಲಕಿಗೆ ಶಿಕ್ಷಕರು ಬೋರ್ಡ್ ಮೇಲೆ ಏನು ಬರೆಯುತ್ತಿದ್ದಾರೆಂದೇ ತಿಳಿಯುತ್ತಿರಲಿಲ್ಲ. ಆಕೆಯ ಎರಡು ಕಣ್ಣುಗಳಲ್ಲೂ ಕೇವಲ 2% ದೃಷ್ಟಿ ಹೊಂದಿರುವ ಆಕೆಯ ಪಾಲಿಗೆ ಓದುವುದೆಂದರೆ, ದಪ್ಪಗಾಜಿನ ಭೂತಗನ್ನಡಿಯ ಮೂಲಕ ಪಠ್ಯಪುಸ್ತಕಗಳ ಅಧ್ಯಯನವೇ ಆಗಿತ್ತು. ಇಂತಹ ಸನ್ನಿವೇಶ ಎದುರಾದಾಗ ಹಲವರು ಮಧ್ಯದಲ್ಲಿ ಕೈಬಿಟ್ಟುಬಿಡುವುದೇ ಹೆಚ್ಚು. ಆದರೆ ಗುರ್‌ಗಾಂವ್‌ನ ಸೆಕ್ಟರ್ 14ರ ನಿವಾಸಿ, DAV ಪಬ್ಲಿಕ್ ಶಾಲೆಯ 10ನೇ ತರಗತಿಯಲ್ಲಿ ಓದುತ್ತಿರುವ ಈ ಬಾಲಕಿ 92.6 ಶೇಕಡಾ ಅಂಕಗಳನ್ನು ಪಡೆದಳು.

ವೈದ್ಯರು ಹೆಸರಿಸಿರುವಂತೆ 'ರೆಟಿನಿಟಿಸ್ ಪಿಗ್‌ಮೆನ್ಟೋಸಾ' ಎಂಬ ತೊಂದರೆಯಿಂದ ಬಳಲುತ್ತಿರುವ ಈ ಪಟ್ನಾಯಕ್ ತನ್ನ 30ನೇ ವರ್ಷ ವಯಸ್ಸು ತಲುಪುವ ವೇಳೆಗೆ ಆಕೆಯ ತಂದೆ ಶುವೇಂದು ಹೇಳುವಂತೆ ಸಂಪೂರ್ಣ ಅಂಧಳಾಗುವ ಸಾಧ್ಯತೆಯಿದೆ.

ವಾಸ್ತವದಲ್ಲಿ ಇದು ಗುಣಪಡಿಸಲು ಸಾಧ್ಯವಾಗದ ಒಂದು ಸಮಸ್ಯೆಯಾಗಿದ್ದು, ಆಕೆಯ ಎರಡೂ ಕಣ್ಣುಗಳ ಅಕ್ಷಿಪಟಲಗಳು ಸರಿಪಡಿಸಲಾರದಷ್ಟು ಹಾನಿಗೊಳಗಾಗಿವೆ. ಆಕೆಗೆ ಎರಡು ವರ್ಷ ವಯಸ್ಸಿರುವಾಗ ಈ ಸಮಸ್ಯೆ ಇರುವುದು ನಮಗೆ ಪತ್ತೆಯಾಯಿತು. "ವೈದ್ಯರು ಆಕೆಯನ್ನು ಆರ್ ಕೆ ಪುರಂ ನಲ್ಲಿರುವ ಅಂಧ ಮಕ್ಕಳ ಶಾಲೆಗೆ ಸೇರಿಸಲು ನಮಗೆ ಸಲಹೆ ನೀಡಿದರು" ಎಂದು ಆಕೆಯ ತಂದೆ ಹೇಳುತ್ತಾರೆ.

ಆದರೆ, ಆ ಶಾಲೆಯ ಪ್ರಾಂಶುಪಾಲರು ಆಕೆಗೆ ಆ ಸಮಯದಲ್ಲಿ 5% ದೃಷ್ಟಿಯಿದ್ದುದರಿಂದ ಆಕೆಯನ್ನು ಸಾಮಾನ್ಯ ಶಾಲೆಗೆ ಸೇರಿಸುವಂತೆ ಸಲಹೆ ನೀಡಿದರು. ಶೋಮಾ ಇವೆಲ್ಲ ಅಡ್ಡಿಆತಂಕಗಳನ್ನು ಮೀರಿ ಇಂಗ್ಲಿಷ್‌ನಲ್ಲಿ ಶೇ.92, ಸಮಾಜ ವಿಜ್ಞಾನದಲ್ಲಿ ಶೇ.97, ಗಣಿತದಲ್ಲಿ ಶೇ.95, ವಿಜ್ಞಾನದಲ್ಲಿ ಶೇ.93 ಮತ್ತು ಸಂಸ್ಕೃತದಲ್ಲಿ ಶೇ.86 ಅಂಕಗಳನ್ನು ಪಡೆಯುವುದರೊಂದಿಗೆ, ಒಟ್ಟು 500ಕ್ಕೆ 463 ಅಂಕಗಳನ್ನು ಗಳಿಸುವಲ್ಲಿ ಯಶಸ್ವಿಯಾದಳು.

DAV ಪಬ್ಲಿಕ್ ಶಾಲೆಯ ಪ್ರಾಂಶುಪಾಲರಾದ ಅನಿತಾ ಮಕ್ಕರ್ ಹೇಳುತ್ತಾರೆ, ಶೋಮಾ ಒಬ್ಬ "ಅತ್ಯದ್ಭುತ ವಿದ್ಯಾರ್ಥಿನಿ".

ಹಿಂದೂಸ್ತಾನ್ ಟೈಮ್ಸ್ ನವರು ಇವೆಲ್ಲ ಹೇಗೆ ಸಾಧ್ಯವಾಯಿತು ಎಂದು ಕೇಳಿದಾಗ ಶೋಮಾ ಹೇಳುತ್ತಾಳೆ "ನಾನು ನೂರಕ್ಕೆ ನೂರು ಅಂಧತ್ವದತ್ತ ಸಾಗುತ್ತಿರುವುದು ನನಗೆ ತಿಳಿದಿದೆ. ಅದಕ್ಕೆ ಮಾನಸಿಕವಾಗಿ ನಾನು ಸಿದ್ಧಳಾಗುತ್ತಿದ್ದೇನೆ ಮತ್ತು ಮುಂದೇನು ಈಗಾಗಲೇ ಮಾಡಬೇಕೆಂದು ತೀರ್ಮಾನಿಸಿದ್ದೇನೆ. ಬ್ರೈಲ್ ಪದ್ಧತಿಯಲ್ಲಿ ಕಲಿಯುವುದನ್ನು ಅಭ್ಯಾಸ ಮಾಡುತ್ತಿದ್ದೇನೆ".

ತರಗತಿಗಳಲ್ಲಿ ಶೋಮಾ ತನ್ನ ಆಲಿಸುವ ಶಕ್ತಿಯೊಂದನ್ನು ಮಾತ್ರವೇ ತನ್ನ ಕಲಿಕೆಗಾಗಿ ಆಶ್ರಯಿಸಿಕೊಂಡಿದ್ದಾಳೆ. "ಮನೆಯಲ್ಲಿ ನನ್ನ ತಾಯಿ ನನ್ನ ಕಲಿಕೆಗೆ ನೆರವಾಗುತ್ತಿದ್ದಾರೆ. ನನಗೆ ಹೆಚ್ಚು ಸಮಯ ಓದುವುದು ಸಾಧ್ಯವಿಲ್ಲ. ಒಂದು ಗಂಟೆಗಳಿಗೂ ಹೆಚ್ಚು ಕಾಲ ಓದಿದರೆ ನನ್ನ ಕಣ್ಣುಗಳಿಗೆ ಬಹಳ ಶ್ರಮವಾಗುತ್ತದೆ ಮತ್ತು ನನ್ನ ಕಣ್ಣುಗಳಿಂದ ನೀರು ಸುರಿಯಲು ಶುರುವಾಗುತ್ತದೆ" ಎನ್ನುತ್ತಾಳೆ ಶೋಮಾ.

ಇತ್ತೀಚೆಗೆ ಈ ಬಾಲಕಿ ತನ್ನ ಕಾಲನಿಯಲ್ಲಿ ರಸ್ತೆ ದಾಟುತ್ತಿರುವಾಗ ಕಾರೊಂದು ಆಕೆಯನ್ನು ಗುದ್ದಿಕೊಂಡು ಹೋಗಿತ್ತು.

ಪ್ರಾಣಿಶಾಸ್ತ್ರದ ಪ್ರಾಧ್ಯಾಪಕಿಯಾಗಿರುವ ಆಕೆಯ ತಾಯಿಯೇ ಆಕೆಯ ಏಕಮಾತ್ರ ಶಿಕ್ಷಕಿಯಾಗಿದ್ದಾರೆ.

"ನನ್ನ ಅಂಕಗಳು ಶೇ.95 ನ್ನು ದಾಟಬೇಕಾಗಿತ್ತು ಮತ್ತು ನಾನು ನನ್ನ ಸಂಸ್ಕೃತ ಪರೀಕ್ಷೆಯಲ್ಲಿ ಕೆಲವು ಅಂಕಗಳನ್ನು ಕಳೆದುಕೊಳ್ಳಬಾರದಾಗಿತ್ತು. ಸಾಮಾನ್ಯವಾಗಿ ಈ ವಿಷಯದಲ್ಲಿ ನನಗೆ

ಶೇ.99 ಅಂಕ ದೊರೆಯುತ್ತಿತ್ತು. ಕೆಲವು ಪ್ರಶ್ನೆಗಳನ್ನು ಒದುವುದು ನನಗೆ ಸಾಧ್ಯವಾಗದೆ

ಹೋದುದರಿಂದಾಗಿ ನನಗೆ ಕಡಿಮೆ ಅಂಕಗಳು ಬಂದವು. ವಿಜ್ಞಾನ ನನ್ನ ಆಸಕ್ತಿಯ ವಿಷಯವಾಗಿದ್ದರೂ ನಾನು ಮಾನವಿಕ ವಿಭಾಗವನ್ನು ಆಯ್ಕೆಮಾಡಿಕೊಳ್ಳಬೇಕಾಯಿತು. ನನಗೆ ಪ್ರಾಯೋಗಿಕ ಅಧಿವೇಶನಗಳಲ್ಲಿ ಭಾಗವಹಿಸುವುದು ಸಾಧ್ಯವಿಲ್ಲದಿರುವುದರಿಂದ ನಾನು ವಿಜ್ಞಾನ ವಿಷಯಗಳನ್ನು ತೆಗೆದುಕೊಳ್ಳುವುದು ಸಾಧ್ಯವಲ್ಲ" ಎನ್ನುತ್ತಾಳೆ ಶೋಮಾ.

ಆಕೆಗೆ ತಾನೊಬ್ಬ ಬರಹಗಾರ್ತಿಯಾಗಬೇಕೆಂಬ ಹಂಬಲವಿದೆ. ಆದರೆ ಈಗಾಗಲೇ ಶೋಮಾ ಒಂದು ಬಹು ಬೇಡಿಕೆಯ ಕಾದಂಬರಿಯ ಹಂದರಕ್ಕೆ ಬೇಕಾದ ವಿಷಯವಸ್ತು ತಾನೇ ಆಗಿದ್ದಾಳೆ.

ಮೇಲೆ ಕೊಡಲಾಗಿರುವ ಸುದ್ದಿ ಅಂಕಣದಲ್ಲಿ, ಶೋಮಾ ಎಂಬ ಬಾಲಕಿಯು ತನ್ನ ತಾಯಿ ತನಗಾಗಿ ಪಠ್ಯಪುಸ್ತಕಗಳನ್ನು ಓದಿ ಕೇಳಿಸುವ ಮೂಲಕ ತನ್ನ ಅಧ್ಯಯನಕ್ಕೆ ನೀಡಿದ ಬೆಂಬಲವನ್ನು ಪ್ರಶಂಸೆ ಮಾಡುತ್ತಾಳೆ. ಕಾರಣ, ನಿರಂತರವಾಗಿ ಒಂದು ಗಂಟೆಗಿಂತ ಹೆಚ್ಚು ಕಾಲ ಓದುವುದನ್ನು ಮುಂದುವರೆಸಿದರೆ ಅವಳ ಕಣ್ಣುಗಳಲ್ಲಿ ನೀರು ಸುರಿಯಲು ಪ್ರಾರಂಭಿಸುತ್ತದೆ.

**ಮಣಿಪುರದಲ್ಲೊಂದು ಕುಟುಂಬ ಶಾಲೆ**

ಇಂಫಾಲ್ ಫೆಬ್ರುವರಿ 17: ನಿಮ್ಮ ಮಗು ಪಡೆಯುತ್ತಿರುವ ಶಿಕ್ಷಣದ ಗುಣಮಟ್ಟ ನಿಮಗೆ ಇಷ್ಟವಾಗದಿದ್ದರೆ ಮತ್ತು ಅದರ ಬಗ್ಗೆ ದೂರು ನೀಡುವುದರಿಂದ ಹೆಚ್ಚು ಪ್ರಯೋಜನವಾಗದಿದ್ದರೆ, ಅದರ ಬಗ್ಗೆ ನೀವು ಬೇರೆ ಏನಾದರೂ ಮಾಡಬಹುದು--ನಿಮ್ಮ ಸ್ವಂತ ಶಾಲೆಯನ್ನು ಸ್ಥಾಪಿಸಿ. ರಾಜ್ಯ ರಾಜಧಾನಿಯಲ್ಲಿ ವೈವಿಧ್ಯಮಯ ಪೋಷಕರ ಒಂದು ಗುಂಪು ಮಾಡಿದ್ದು ಇದನ್ನೇ.

ಕೆಲವು ವರ್ಷಗಳ ಹಿಂದೆ, ಈ ಕಾಳಜಿಯುಳ್ಳ ಪೋಷಕರು ತಮ್ಮ ಮಕ್ಕಳಿಗೆ ಉತ್ತಮ ಶಿಕ್ಷಣ ದೊರೆಯುತ್ತಿಲ್ಲ ಎಂದು ಅರಿತುಕೊಂಡಾಗ, ಅವರೊಂದು ಸಂಘವನ್ನು ರಚನೆ ಮಾಡಿಕೊಂಡರು. ಅದು - "ಪೋಷಕರು, ಪೋಷಕರಿಂದ, ಅವರ ಮಕ್ಕಳಿಗಾಗಿ" ಮತ್ತು ತಾವೇ ಒಂದು ಶಾಲೆಯನ್ನು ರೂಪಿಸಲು ಹಣ ಸಂಗ್ರಹ ಮಾಡತೊಡಗಿದರು.

ನಾಲ್ಕು ವರ್ಷಗಳ ನಂತರ, *ಮೆಗಲ್ ಮಣಿಪುರ ಸೊಸೈಟಿ (MMS)* ಯನ್ನು ಇಂಫಾಲ್ ಬಳಿಯ ಟಿನ್‌ಸೀಡ್ ಕೊಂಜಿಲ್‌ನಲ್ಲಿ ಗುಡ್ಡ ಮತ್ತು ಹೊಲವನ್ನು ಹಾಯುವ ಏನೂ ಇಲ್ಲದ 25 ಎಕರೆ

ಖಾಲಿ ಭೂಪ್ರದೇಶದಲ್ಲಿ ಸ್ಥಾಪಿಸಿದರು. ಹೆಚ್ಚಾಗಿ *ಪೋಷಕರ ಕ್ಲಬ್* ಎಂದೇ ಹೆಸರಾಗಿರುವ ಮೆಗಾ ಮಣಿಪುರ ಶಾಲೆಯು ಕಳೆದ ವರ್ಷ ಏಪ್ರಿಲ್‌ನಲ್ಲಿ ಜನ್ಮ ತಾಳಿತು.

"ನಾವು 2002 ರಲ್ಲಿ MMS ಅನ್ನು ರಚಿಸಿದಾಗ ಶಾಲೆಗಳಲ್ಲಿ ಯಾವುದೇ ಗುಣಮಟ್ಟದ ನಿಯಂತ್ರಣ ಇರಲಿಲ್ಲ" ಎಂದು ಸೊಸೈಟಿಯ ಖಜಾಂಚಿ ಗೌತಮ್ ಅರಿಬಮ್ ಹೇಳುತ್ತಾರೆ. “ಖಾಸಗಿ ಶಾಲೆಗಳಲ್ಲಿ ಕೂಡ ಒಂದು ತರಗತಿಯಲ್ಲಿ 70 ಕ್ಕೂ ಮೀರಿದಂತೆ ವಿದ್ಯಾರ್ಥಿಗಳ ಸಂಖ್ಯೆ ಇತ್ತು. ಬಹಳ ಸ್ಪಷ್ಟವಾಗಿ, ಪ್ರಾರಂಭದಲ್ಲಿ ಪ್ರಮಾಣಕ್ಕೆ ಒತ್ತು ನೀಡಲಾಗಿತ್ತೇ ವಿನ: ಗುಣಮಟ್ಟಕ್ಕಲ್ಲ.

MMS ಅನ್ನು ರೂಪಿಸಿದ 300ಕ್ಕೂ ಹೆಚ್ಚಿನ ಪೋಷಕರು ತಲಾ 15,000 ರೂಪಾಯಿಗಳನ್ನು ಚಂದಾದಾರಿಕೆ ಶುಲ್ಕವಾಗಿ ಮೂರು ವರ್ಷಗಳಲ್ಲಿ ಪಾವತಿಸಿದ್ದಾರೆ. ರಾಜ್ಯ ಸರ್ಕಾರವು ಹೆಚ್ಚಿನ ಪ್ರಮಾಣದ ಭೂಮಿಯನ್ನು ಮಂಜೂರು ಮಾಡುವ ಮೂಲಕ ಸಹಾಯ ಮಾಡಿದೆ. ಸದಸ್ಯತ್ವ ಹೆಚ್ಚಾದಂತೆ ಮತ್ತು ಚಂದಾ ದ್ವಿಗುಣಗೊಂಡಂತೆ ಶಾಲೆಯು ರೂಪುಗೊಳ್ಳುತ್ತಾ ಹೋಯಿತು.

"ಅತ್ಯುತ್ತಮ ಶಿಕ್ಷಕರು ಉತ್ತಮ ವೇತನಕ್ಕೆ ಅರ್ಹರಾಗಿದ್ದಾರೆ ಎಂಬ ಸರಳ ಕಾರಣದಿಂದಾಗಿ ನಮ್ಮ ಶಿಕ್ಷಕರು ಮಣಿಪುರದಲ್ಲಿ ಉತ್ತಮ ವೇತನ ಪಡೆಯುತ್ತಿದ್ದಾರೆ" ಎಂದು ಅರಿಬಮ್ ಹೇಳುತ್ತಾರೆ. "1:20 ರ ಶಿಕ್ಷಕ-ವಿದ್ಯಾರ್ಥಿ ಅನುಪಾತದ ಬಗ್ಗೆ ನಾವು ಕಟ್ಟುನಿಟ್ಟಾಗಿದ್ದೇವೆ. "

ಹಾಗಾದರೆ ಇತರರು ನೀಡದ ಏನನ್ನು ಮೆಗಾ ಮಣಿಪುರ ಶಾಲೆ ನೀಡುತ್ತಿದೆ? ಎಂಬ ಪ್ರಶ್ನೆಗೆ, "ಸ್ಥಳೀಯ ಹೊಂದಾಣಿಕೆಗಳು ಮತ್ತು ಸಾಕಷ್ಟು ಪ್ರಾಯೋಗಿಕ ಕಲಿಕೆಯೊಂದಿಗೆ ಮಾಂಟೆಸ್ಸರಿ ವ್ಯವಸ್ಥೆ ಇದೆ" ಎನ್ನುತ್ತಾರೆ ಪ್ರಿನ್ಸಿಪಾಲ್ ಎಂ. ಎಲಿಜಬೆತ್.

ಪ್ರಸ್ತುತ, ಶಾಲೆಯಲ್ಲಿ ಪೂರ್ವ ಪ್ರಾಥಮಿಕದಿಂದ ನಾಲ್ಕರವರೆಗೆ ತರಗತಿಗಳು ನಡೆಯುತ್ತಿವೆ. ಇದು ಪ್ರತಿ ವರ್ಷ ಕೆಲವು ತರಗತಿ ಕೊಠಡಿಗಳನ್ನು ಸೇರಿಸಲು ಮತ್ತು ಆಟದ ಮೈದಾನಗಳು ಮತ್ತು ಚಾರಣದ ಹಾದಿ (ಟ್ರೆಕ್ಕಿಂಗ್ ಟ್ರೇಲ್) ಗಳಿಗಾಗಿ ಕ್ಯಾಂಪಸ್ ಅನ್ನು ಅಭಿವೃದ್ಧಿಪಡಿಸಲು ಯೋಜಿಸಿದೆ.

ಮಕ್ಕಳೂ ತಮ್ಮ “ಕುಟುಂಬ ಶಾಲೆಯಲ್ಲಿ” ಆನಂದವಾಗಿರುವಂತೆ ತೋರುತ್ತಿದೆ. ಮಿಷನರಿ ಶಾಲೆಯಲ್ಲಿ ಕಲಿಯುವಾಗ ಗಣಿತದಲ್ಲಿ ಅನುತ್ತೀರ್ಣಳಾಗಿದ್ದ ಯುಮ್ನಂ ಸಂಜನಾ ಈಗ 6ನೇ ತರಗತಿಯಲ್ಲಿ ಮೊದಲಿಗಳು”. "ಶಾಲೆಯು ವಿನೋದಮಯವಾಗಿದೆ" ಎನ್ನುತ್ತಾಳೆ ಆಕೆ.

ಹಿಂದೂಸ್ತಾನ್ ಟೈಮ್ಸ್
www.mangalorean.com

## ಸಿಬ್ಬಂದಿ ಅಭಿವೃದ್ಧಿ

ಸಾಕಷ್ಟು ತರಬೇತಿಗಳಿಲ್ಲದಿರುವಾಗ ತರಗತಿಗಳಲ್ಲಿ ವೈವಿಧ್ಯಮಯ ಅಗತ್ಯಗಳನ್ನು ಹೊಂದಿರುವ ವಿದ್ಯಾರ್ಥಿಗಳನ್ನು ಸೃಜನಾತ್ಮಕವಾಗಿ ಮತ್ತು ಉತ್ಪಾದಕವಾಗಿ ತೊಡಗಿಸಿಕೊಳ್ಳುವುದನ್ನು ಸಾಮಾನ್ಯ ಶಿಕ್ಷಣದ ಶಿಕ್ಷಕರಿಂದ ನಿರೀಕ್ಷಿಸುವುದು ಅವಾಸ್ತವಿಕ ಮತ್ತು ಅನ್ಯಾಯ. ಸೇವಾನಿರತ ತರಬೇತಿಯು ಶಿಕ್ಷಕರ ವೃತ್ತಿಪರ ಬೆಳವಣಿಗೆಗೆ ಮಾತ್ರವಲ್ಲದೆ ಶಾಲೆಗೆ ಸಂಬಂಧಿಸಿದ ಇತರ ಅಭ್ಯಾಸಗಳಲ್ಲಿ ಬದಲಾವಣೆಗಳನ್ನು ತರುವಲ್ಲಿ ಮಹತ್ವದ ಪಾತ್ರವನ್ನು ವಹಿಸುತ್ತದೆ. ಈ ತರಬೇತಿಯನ್ನು ಹಲವು ರೂಪಗಳಲ್ಲಿ ನೀಡಬಹುದು: ವಿಚಾರ ಸಂಕಿರಣಗಳು, ಪುನಶ್ಚೇತನ ಕಾರ್ಯಕ್ರಮಗಳು, ವಿವಿಧ ವಿಶ್ವವಿದ್ಯಾಲಯಗಳಲ್ಲಿ ಕಾರ್ಯಾಗಾರಗಳು, ಬೇಸಿಗೆ ಶಿಬಿರಗಳು, ಡಯಟ್‌ಗಳಲ್ಲಿ ಸೇವಾನಿರತ ತರಬೇತಿ, ಶಿಕ್ಷಕರ ಪ್ರಶಿಕ್ಷಣ ವಿದ್ಯಾಸಂಸ್ಥೆಗಳು ಮತ್ತು ಇನ್‌ಸ್ಟಿಟ್ಯೂಟ್ ಆಫ್ ಅಡ್ವಾನ್ಸ್ಡ್ ಸ್ಟಡೀಸ್ (Institute of Advanced Studies) ಮತ್ತು ಎಸ್‌ಸಿಇಆರ್‌ಟಿಎಸ್ (SCERTS) ಮೂಲಕ, ತಾಲ್ಲೂಕಾ ಸಂಪನ್ಮೂಲ ಕೇಂದ್ರಗಳು, ಸಮೂಹ ಸಂಪನ್ಮೂಲ ಕೇಂದ್ರಗಳು ಮತ್ತು ಸ್ವಯಂಸೇವಾ ಸಂಸ್ಥೆಗಳು, ಇತ್ಯಾದಿ. ಯಶ್‌ಪಾಲ್ ಸಮಿತಿ(1993)ಯು ತನ್ನ *ಹೊರೆಯಿಲ್ಲದ ಕಲಿಕೆ* ವರದಿಯಲ್ಲಿ ಹೇಳಿರುವಂತೆ: "ತರಬೇತಿ ಪಡೆಯುವವರಿಗೆ ಸ್ವಯಂ-ಕಲಿಕೆ ಮತ್ತು ಸ್ವತಂತ್ರ ಚಿಂತನೆಯ ಸಾಮರ್ಥ್ಯವನ್ನು ಪಡೆದುಕೊಳ್ಳಲು ಅನುವು ಮಾಡಿಕೊಡುವುದಕ್ಕೆ ಈ ಕಾರ್ಯಕ್ರಮಗಳಲ್ಲಿ ಒತ್ತು ನೀಡಬೇಕಾಗಿದೆ”. ಆಚಾರ್ಯ ರಾಮಮೂರ್ತಿ ಪರಿಶೀಲನಾ ಸಮಿತಿಯ ವರದಿಯಲ್ಲಿ (1990) ಸೇವಾನಿರತ ತರಬೇತಿಗಳು ಮತ್ತು ಪುನಶ್ಚೇತನ ತರಬೇತಿಗಳು ಶಿಕ್ಷಕರ ನಿರ್ದಿಷ್ಟ ಅಗತ್ಯಗಳಿಗೆ ಸಂಬಂಧಿಸಿರಬೇಕು ಮತ್ತು ಮೌಲ್ಯಮಾಪನ ಮತ್ತು ಅನುಸರಣೆ ಯೋಜನೆಯ ಭಾಗವಾಗಿರಬೇಕು ಎಂದು ಸ್ಪಷ್ಟವಾಗಿ ಹೇಳಲಾಗಿದೆ.

ವಿಶೇಷ ಅಗತ್ಯತೆಯಿರುವ ಮಕ್ಕಳಿರುವ ಸಮನ್ವಯ ಶಿಕ್ಷಣದ ತರಗತಿಗಳನ್ನು ನಿರ್ವಹಿಸುವಲ್ಲಿ ಶಿಕ್ಷಕರಿಗೆ ನಿಜವಾದ ಸಮಸ್ಯೆಗಳಿರುವುದು ಕಂಡುಬಂದಿದೆ. ಇದು ಅವರಲ್ಲಿ ಹಲವರು ಅಂಗವಿಕಲತೆಯ ಕುರಿತು ನಿಯಮಿತವಾಗಿ ತರಬೇತಿ ಪಡೆದವರಾಗಿದ್ದಾರೆ ಎಂಬ ಅಂಶದ ಹೊರತಾಗಿಯೂ ಇರುವ ಪರಿಸ್ಥಿತಿಯಾಗಿದೆ. ಆದಾಗ್ಯೂ, ವಿವಿಧ ಅಂಗವಿಕಲತೆಯ ಸನ್ನಿವೇಶದಿಂದ ಹುಟ್ಟಿಕೊಳ್ಳುವ ವಿಶೇಷ ಅಗತ್ಯಗಳ ಬಗ್ಗೆ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳ ನಡುವೆ ಜಾಗೃತಿ ಮೂಡಿಸುವ ಅವಶ್ಯಕತೆ ಇದೆ. ಶಾಲೆಗಳಲ್ಲಿ ವಿಶೇಷ ಅಗತ್ಯತೆಯಿರುವ ಮಕ್ಕಳನ್ನು ಇತರರು ಸ್ವೀಕರಿಸುವ ವಾತಾವರಣವನ್ನು ಸೃಷ್ಟಿಸಲು ಮತ್ತು ಸಮನ್ವಯತೆಯನ್ನು ಉತ್ತೇಜಿಸುವ ಚಟುವಟಿಕೆಗಳನ್ನು ಯೋಜಿಸಲು ಇದು ಶಿಕ್ಷಕರಿಗೆ ಸಹಾಯ ಮಾಡುತ್ತದೆ.

ದೂರಶಿಕ್ಷಣವು ಮತ್ತೊಂದು ಮಾಧ್ಯಮವಾಗಿದ್ದು, ಇದರ ಮೂಲಕ ಶಿಕ್ಷಕರಿಗಾಗಿ ಸಾಕಷ್ಟು ತರಬೇತಿಗಳು ನಡೆಯುತ್ತಿವೆ. ಉದಾಹರಣೆಗೆ, ಸೆಪ್ಟೆಂಬರ್ 2004 ರಲ್ಲಿ ಪ್ರಾರಂಭವಾದ ಇಗ್ನೌ (IGNOU) ಮತ್ತು ಎಡುಸ್ಯಾಟ್ (EDUSAT). ಶಿಕ್ಷಕರ-ತರಬೇತಿ ಪ್ರಯತ್ನಗಳಲ್ಲಿ ತರಗತಿಗಳಿಗೆ ದೂರದಿಂದಲೇ ಬೆಂಬಲವನ್ನು ಒದಗಿಸುವ ಮೂಲಕ ಇವು ಶಿಕ್ಷಕರ ಪ್ರಶಿಕ್ಷಣ ತರಬೇತಿಗಳ ಮೇಲೆ ಹೆಚ್ಚಿನ ಪ್ರಭಾವ ಬೀರಿವೆ. ಪ್ರಾರಂಭದಲ್ಲಿ ತಾಲ್ಲೂಕಾ ಮಟ್ಟದ ಸಂಪನ್ಮೂಲ ಕೇಂದ್ರ (BRC – Block Resource Center)ಗಳಲ್ಲಿ ನಡೆಸಲಾಗುವ ಶಿಕ್ಷಕರ ತರಬೇತಿಯ ಮೇಲೆ ಹೆಚ್ಚಿನ

ಗಮನವನ್ನು ಕೇಂದ್ರೀಕರಿಸಲಾಗಿತ್ತು. ಇದನ್ನು ಈಗ ಡಯಟ್‌ಗಳು, SIET, CIET, NIOS, ಮತ್ತು KVS ನಂತಹ ವಿವಿಧ ಶಿಕ್ಷಕ-ಪ್ರಶಿಕ್ಷಣ ಸಂಸ್ಥೆಗಳಿಗೆ ವಿಸ್ತರಿಸಲಾಗಿದೆ.

**ತರಗತಿಗಳಿಗೆ ಸಾಕಷ್ಟು ಬೆಂಬಲವನ್ನು ಖಾತರಿಪಡಿಸುವುದು**

ವಿಶೇಷವಾಗಿ, ವಿಕಲಾಂಗರು ಮತ್ತು ಹಿಂದುಳಿದ ಗುಂಪುಗಳಿಗೆ ಸೇರಿದ ವಿದ್ಯಾರ್ಥಿಗಳನ್ನು ಅವರಿಗೆ ಅಥವಾ ಅವರ ಶಿಕ್ಷಕರಿಗೆ ಸೂಕ್ತವಾದ ಸಾಕಷ್ಟು ಬೆಂಬಲ ವ್ಯವಸ್ಥೆ ಇಲ್ಲದಿರುವಂತಹ ಸಾಮಾನ್ಯ ಶಾಲೆಗಳಿಗೆ ಕರೆತರುವ ಮೂಲಕ "ಸಮನ್ವಯ ಶಿಕ್ಷಣ" ದ ಹೆಸರಿನಲ್ಲಿ ಸಾಮಾನ್ಯ ಶಾಲೆಗಳು ಯಾವುದೇ ಸೂಕ್ತ ಪೂರ್ವತಯಾರಿಗಳಿಲ್ಲದೆ ವಸ್ತುಗಳನ್ನು ತಂದು ಹೇರುವ ಮೈದಾನಗಳಂತೆ ಆಗಬಾರದು.

ಮಕ್ಕಳ ವಿಶೇಷ ಅಗತ್ಯಗಳನ್ನು ಪೂರೈಸುವುದಕ್ಕೆ ಬೇಕಾದ ವ್ಯವಸ್ಥೆಗಳು ಮತ್ತು ಬೆಂಬಲಗಳು ಈ ಮುಂದೆ ಸೂಚಿಸಿದಂತೆ - ಸಾಮಾನ್ಯ ಪಠ್ಯಕ್ರಮದಲ್ಲಿ ಮಾರ್ಪಾಡುಗಳು, ತರಗತಿಯ ವಿಶೇಷ ಅಗತ್ಯಗಳನ್ನು ಪೂರೈಸಲು ಸಾಧ್ಯವಾಗುವ ನಿಟ್ಟಿನಲ್ಲಿ ಸಾಮಾನ್ಯ ಶಿಕ್ಷಕರು ಮತ್ತು ಪೂರ್ಣಾವಧಿಯ ಅಥವಾ ತರಬೇತು ಹೊಂದಿದ ಸಂಚಾರಿ ಶಿಕ್ಷಕರ ನಡುವಿನ ಸಹಯೋಗ, ದೈಹಿಕವಾಗಿ ಸ್ನಾಯು ಚಲನೆಗೆ ತರಬೇತು ನೀಡಿ ನೆರವಾಗುವ ದೈಹಿಕ ಚಿಕಿತ್ಸಕರಂತಹ ಅರೆ ವೈದ್ಯಕೀಯ ವೃತ್ತಿಪರರು ಮತ್ತು ವಾಕ್ ಚಿಕಿತ್ಸಕರ ಬೆಂಬಲ, ನಿಯಮಿತವಾದ ಶಿಕ್ಷಕರ ಪ್ರಶಿಕ್ಷಣ, ಸಂಪನ್ಮೂಲ ಕೊಠಡಿ ಮತ್ತು ಕಂಪ್ಯೂಟರ್‌ನಂತಹ ಸಹಾಯಕ ಸಾಧನಗಳ ಬಳಕೆ ಇತ್ಯಾದಿಗಳನ್ನು ಒಳಗೊಂಡಿರಬೇಕಾಗುತ್ತದೆ.

*ವಿಶೇಷ ಅಗತ್ಯವುಳ್ಳ ಮಕ್ಕಳ ಶಿಕ್ಷಣದ ಕುರಿತ ರಾಷ್ಟ್ರೀಯ ಗಮನ ಗುಂಪು* (National Focus Group on education of CWSN) ಇದನ್ನು ಸೂಚಿಸುತ್ತದೆ:

*"ಪಠ್ಯಕ್ರಮವು ಎಲ್ಲರಿಗೂ ಸಾಮಾನ್ಯವಾದುದಾಗಿಬೇಕು ಮತ್ತು ಅದು ಕಲಿಯುವವರ ವೈಯಕ್ತಿಕ ಅಗತ್ಯಗಳನ್ನು ಗಣನೆಗೆ ತೆಗೆದುಕೊಳ್ಳುವ ರೀತಿಯಲ್ಲಿ ಸಮತೋಲನದಿಂದ ಕೂಡಿರಬೇಕು".*

ವಿಕಲಾಂಗ ವ್ಯಕ್ತಿಗಳ ಕಾಯ್ದೆ, 1995ರ ಸೆಕ್ಷನ್ 30ರ ಅಡಿಯಲ್ಲಿ ವಿಕಲಾಂಗ ವಿದ್ಯಾರ್ಥಿಗಳಿಗೆ ಸಂಬಂಧಿಸಿದಂತೆ ಪಠ್ಯಕ್ರಮದ ಅಳವಡಿಕೆಯು ಕಾನೂನು ಅವಶ್ಯಕತೆಯಾಗಿದ್ದು, *ವಿಕಲಾಂಗ ಮಕ್ಕಳ ಅನುಕೂಲಕ್ಕೆ ತಕ್ಕಂತೆ ಪಠ್ಯಕ್ರಮದ ಪುನರ್ರಚನೆಗಾಗಿ* ಸಮಗ್ರ ಶಿಕ್ಷಣ ಯೋಜನೆಯನ್ನು ಸಿದ್ಧಪಡಿಸುವಂತೆ ಅದು ಆಯಾ ಸರ್ಕಾರಗಳನ್ನು ಒತ್ತಾಯಿಸುತ್ತದೆ. ಅಂತೆಯೇ, ಆರ್ಟಿಕಲ್ 24 ರಲ್ಲಿ ವಿಕಲಾಂಗ ವ್ಯಕ್ತಿಗಳ ಹಕ್ಕುಗಳ ಕುರಿತು ಇತ್ತೀಚೆಗೆ ಅಂಗೀಕರಿಸಲಾದ ಅಂತರರಾಷ್ಟ್ರೀಯ ಒಡಂಬಡಿಕೆಯು ಕೂಡ ಹೀಗೆ ಹೇಳುತ್ತದೆ:

*2(ಇ) ಸಂಪೂರ್ಣ ಸಮನ್ವಯತೆಯ ಗುರಿಗೆ ಅನುಗುಣವಾಗಿ ಶೈಕ್ಷಣಿಕ ಮತ್ತು ಸಾಮಾಜಿಕ ಅಭಿವೃದ್ಧಿಯನ್ನು ಗರಿಷ್ಠಗೊಳಿಸುವ ಪರಿಸರದಲ್ಲಿ ಪರಿಣಾಮಕಾರಿ ವೈಯಕ್ತಿಕ ಬೆಂಬಲ ಕ್ರಮಗಳನ್ನು ಒದಗಿಸಲಾಗುವುದು.*


**ಆರುಷಿ ಸಂಪನ್ಮೂಲ ಕೇಂದ್ರ**

ಭೋಪಾಲ್, ಮಧ್ಯಪ್ರದೇಶ



**ಸಮನ್ವಯ ಶಿಕ್ಷಣ**

- ಸೆಹೋರ್ ಜಿಲ್ಲೆಯ 2,000 ಕ್ಕೂ ಹೆಚ್ಚು ವಿಕಲಚೇತನ ಮಕ್ಕಳನ್ನು ಸರ್ವಶಿಕ್ಷಾ ಅಭಿಯಾನದ ಅಡಿಯಲ್ಲಿ ಸಂಪೂರ್ಣ ಬೆಂಬಲದೊಂದಿಗೆ ಸಾಮಾನ್ಯ ಶಾಲೆಗಳಲ್ಲಿ ಇರಿಸಲಾಗಿದೆ.
- ಸಾಮಾನ್ಯ ಶಾಲೆಗಳ ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಪೋಷಕರಲ್ಲಿ ಜಾಗೃತಿ ಮೂಡಿಸುವ ಸಲುವಾಗಿ ಮಧ್ಯಪ್ರದೇಶ ಪಠ್ಯಪುಸ್ತಕ ನಿಗಮವು ಹೊರತಂದಿರುವ ಪ್ರತಿಯೊಂದು ಪಠ್ಯ ಪುಸ್ತಕದಲ್ಲಿ (6.5 ಕೋಟಿ) ಒಂದು ಪುಟವನ್ನು ವಿಕಲಾಂಗತೆಯ 15 ವಿವಿಧ ಅಂಶಗಳ ಕುರಿತು ಮಾಹಿತಿಗಾಗಿ ಮೀಸಲಾಗಿರಿಸಿದೆ.
- ದೃಷ್ಟಿದೋಷವಿರುವ ವಿದ್ಯಾರ್ಥಿಗಳಿಗೆ ಕಂಪ್ಯೂಟರ್ ಮತ್ತು ಬ್ರೈಲ್ ಸಾಕ್ಷರತೆ.
- ರಾಜ್ಯದ 3 ಲಕ್ಷ ಶಿಕ್ಷಕರಿಗೆ ಅಂಗವೈಕಲ್ಯ ಸಮಸ್ಯೆಗಳ ಕುರಿತ ಸ್ವಯಂ ಕಲಿಕೆಗಾಗಿ ಕಲಿಕಾ ಸಾಮಗ್ರಿ ಮತ್ತು ತಯಾರಿ.
- ಸರ್ವಶಿಕ್ಷಾ ಅಭಿಯಾನದ ಬೆಂಬಲದೊಂದಿಗೆ ಶಾಲಾ ಶಿಕ್ಷಕರಿಗೆ ಬ್ರೈಲ್ ಬೋಧನೆ, ಗಣಿತವನ್ನು ದೃಷ್ಟಿವಿಹೀನರಿಗೆ ಕಲಿಸುವ ವಿಧಾನದ ಬಗ್ಗೆ ಮತ್ತು ಶ್ರವಣದೋಷವುಳ್ಳವರಿಗೆ ಸಂಜ್ಞಾ ಭಾಷೆಯನ್ನು ಕಲಿಸುವ ಕುರಿತು ತಲಾ ಒಂದರಂತೆ ಒಟ್ಟು 3 ವೀಡಿಯೋ ಚಿತ್ರಗಳ ತಯಾರಿ.
- ಖ್ಯಾತ ಬರಹಗಾರ ಮತ್ತು ಗೀತರಚನೆಕಾರ ಶ್ರೀ ಗುಲ್ಜಾರ್ ಅವರ ಶೀರ್ಷಿಕೆಗಳೊಂದಿಗೆ ಸಮನ್ವಯ ಶಿಕ್ಷಣದ ಕುರಿತು ಜಾಗೃತಿ ಮೂಡಿಸಲು ನವೀನ ಭಿತ್ತಿಪತ್ರಗಳ ತಯಾರಿ.
- ವಿವಿಧ ಭಾಗೀದಾರರಿಗಾಗಿ ಚಲನಚಿತ್ರಗಳು, ಭಿತ್ತಿಪತ್ರಗಳು, ಮತ್ತು ಜಾಗೃತಿ ಕಾರ್ಯಕ್ರಮಗಳ ಮೂಲಕ ಸಮುದಾಯದ ನಡುವೆ ಅಂಗವೈಕಲ್ಯ ಸಂಬಂಧಿತ ಸಮಸ್ಯೆಗಳ ಕುರಿತು ಜಾಗೃತಿ ಮೂಡಿಸುವುದು.




**ಪಠ್ಯಪುಸ್ತಕದಲ್ಲಿ ಒಂದು ಪುಟ**

ನಿಮ್ಮ ತರಗತಿಯಲ್ಲಿ ದೈಹಿಕವಾಗಿ ಸವಾಲುಗಳನ್ನೆದುರಿಸುತ್ತಿರು ವಿದ್ಯಾರ್ಥಿಗಳಿದ್ದಲ್ಲಿ ಅವರಿಗೆ ನಿಮ್ಮ ಬೆಂಬಲ ನೀಡಿ

1. ಅವರಿಗೆ ತರಗತಿ, ಮಹಡಿಯ ಮೆಟ್ಟಿಲುಗಳು, ಪ್ರಾಂಶುಪಾಲರ ಕೊಠಡಿ, ಕುಡಿಯುವ ನೀರಿನ ಸೌಕರ್ಯವಿರುವ ಸ್ಥಳ, ಶೌಚಾಲಯ ಮತ್ತು ಗ್ರಂಥಾಲಯಗಳಿಗೆ ಸಂಚರಿಸಲು ಪರಿಚಯಿಸಿ ಮತ್ತು ಅಭ್ಯಾಸ ಮಾಡಿಸಿ. ತಮ್ಮ ಕೆಲಸಕಾರ್ಯಗಳನ್ನು ಅವರು ಸ್ವತಂತ್ರವಾಗಿ ನಿರ್ವಹಿಸಿಕೊಳ್ಳಲು ಅವರನ್ನು ಇದು ಶಕ್ತರನ್ನಾಗಿಸುತ್ತದೆ.

2. ತರಗತಿ ಮತ್ತು ಹತ್ತಿರದ ಸ್ಥಳಗಳನ್ನು ಅಡೆತಡೆಗಳಿಲ್ಲದಂತೆ ತೆರವು ಮಾಡಿ. ಕುಡಿಯುವ ನೀರಿನ ನಲ್ಲಿಯು ಅವರ ಕೈಗಳಿಗೆ ಎಟುಕುವ ಹಾಗೆ ಇರಲಿ. ಶೌಚಾಲಯಗಳಲ್ಲಿ ಕಮೋಡ್‌ಗಳಿರಲಿ, ಅವರಿಗೆ ಕುಳಿತುಕೊಳ್ಳುವಾಗ ಮತ್ತು ನಿಂತುಕೊಳ್ಳುವಾಗ ಅಗತ್ಯವಿದ್ದರೆ ಹಿಡಿದುಕೊಳ್ಳಲು ಆಸರೆಯಾಗುವಂತೆ ಅಲ್ಲಿ ಕಬ್ಬಿಣದ ರಾಡ್‌ಗಳಿರಲಿ.

3. ಇತರ ವಿದ್ಯಾರ್ಥಿಗಳಿಗೆ ತಮ್ಮ ಸಹಪಾಠಿಗಳ ಕುರಿತು ಸ್ನೇಹ ಮತ್ತು ಸಹಕಾರ ಭಾವಗಳನ್ನು ಹೊಂದಿರುವಂತೆ ಅವರನ್ನು ಪ್ರೋತ್ಸಾಹಿಸಿ.

**ಅಂಗವಿಕಲ ಸ್ನೇಹಿ ಶೌಚಾಲಯಗಳು** – ಅರುಷಿ ಸಂಸ್ಥೆಯು, ಯುನಿಸೆಫ್ (UNICEF) ಸಹಯೋಗದೊಂದಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಶಾಲೆಗಳು, ಅಂಗನವಾಡಿಗಳು ಮತ್ತು ಮನೆಗಳಿಗೆ ಶುಚಿತ್ವ ಹಾಗೂ ನೈರ್ಮಲ್ಯದ ಸಮಗ್ರ ಮಾದರಿಗಳನ್ನು ಪ್ರಸ್ತುತಪಡಿಸಿದೆ.

ಅಂಗವಿಕಲ ಸ್ನೇಹಿ ಮತ್ತು ಮಕ್ಕಳ ಸ್ನೇಹಿ ಶೌಚಾಲಯಗಳು ಮತ್ತು ಶೌಚಾಲಯ ಸಮುಚ್ಚಯಗಳ ವಿನ್ಯಾಸಗಳನ್ನು ಇದು ಅಭಿವೃದ್ಧಿಪಡಿಸಿದೆ. ಮಧ್ಯಪ್ರದೇಶದ ಎಂಟು ಜಿಲ್ಲೆಗಳಲ್ಲಿ ಈ ಪ್ರತಿಕೃತಿಗಳ ಮಾದರಿಯಂತೆ ಸರ್ಕಾರಿ ಶಾಲೆಗಳು ಮತ್ತು ಅಂಗನವಾಡಿಗಳಲ್ಲಿ ಹಾಗೂ ಜನಸಾಮಾನ್ಯರ ಗಮನ ಸೆಳೆಯುವ ಪ್ರದೇಶಗಳು ಸೇರಿದಂತೆ ಒಟ್ಟು 30ಕ್ಕೂ ಹೆಚ್ಚು ಅಂಗವಿಕಲ ಸ್ನೇಹಿ ಶೌಚಾಲಯಗಳನ್ನು ನಿರ್ಮಿಸಲಾಗಿದೆ. ಇದಲ್ಲದೆ, ವಾಸ್ತುಶಿಲ್ಪಿಗಳು, ಕಟ್ಟಡ ಕಾರ್ಮಿಕರು ಮತ್ತು ಲೋಕೋಪಯೋಗಿ ಇಲಾಖೆ (PWD-Public Works Department), ಸಾರ್ವಜನಿಕ ಆರೋಗ್ಯ ಶಿಕ್ಷಣ ಇಲಾಖೆ (PHED-Public Health Education Department), ಶಾಲಾ ಶಿಕ್ಷಣ ಇಲಾಖೆ, ಮಹಿಳಾ ಮತ್ತು ಮಕ್ಕಳ ಅಭಿವೃದ್ಧಿ ಇಲಾಖೆ ಮತ್ತು ಸಂಪೂರ್ಣ ನೈರ್ಮಲ್ಯ ಅಭಿಯಾನ ಮತ್ತು ಅಂಗವೈಕಲ್ಯದ ಸಮಸ್ಯೆಗಳಿಗಾಗಿ ಸಕ್ರಿಯರಾಗಿರುವ ಸಂಸ್ಥೆಗಳು ಮುಂತಾದ ವಿವಿಧ ಭಾಗೀದಾರರಿಗೆ ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಸಂವೇದನಾಶೀಲತೆ ಮತ್ತು ಜಾಗೃತಿ ಮೂಡಿಸುವಂತಹ ಸಾಮರ್ಥ್ಯವೃದ್ಧಿ ಕಾರ್ಯಕ್ರಮಗಳನ್ನು ನಡೆಸಿದೆ. ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದ ಸಮ್ಮೇಳನಗಳಲ್ಲಿ ಕೂಡ ಈ ಸಮಸ್ಯೆಗಳ ಕುರಿತು ಗಮನಸೆಳೆಯಲಾಗಿದೆ. ಕೊಲಂಬೊದಲ್ಲಿ ನಡೆದ 32ನೇ 'ವೆಡೆಕ್' ಸಮ್ಮೇಳನದಲ್ಲಿ (WEDC-Water, Engineering and Development Center) ಸಮ್ಮೇಳನದಲ್ಲಿ ಪ್ರಸ್ತುತಪಡಿಸಲಾದ ಶುಚಿತ್ವ ಮತ್ತು ನೈರ್ಮಲ್ಯ ಕುರಿತ ಸಮನ್ವಯ ಮಾದರಿಗಳ ಕುರಿತಾದ ಪ್ರಬಂಧ ಮತ್ತು ಅಖಿಲ ಭಾರತ ಪ್ರಧಾನ ಮಂತ್ರಿಗಳ ಸಮ್ಮೇಳನ ನವದೆಹಲಿಯಲ್ಲಿ ನಡೆದ ಪ್ರಸ್ತುತಿ ಅವುಗಳಲ್ಲಿ ಗಮನಾರ್ಹವಾದವುಗಳು.



**ವಿಕಲಾಂಗ ವ್ಯಕ್ತಿಗಳಿಗಾಗಿ ರಾಷ್ಟ್ರೀಯ ನೀತಿ (2006)**

**III ಮಾನವ ಸಂಪನ್ಮೂಲ ಅಭಿವೃದ್ಧಿ**

46. ಸಮನ್ವಯ ಶಿಕ್ಷಣ, ವಿಶೇಷ ಶಿಕ್ಷಣ, ಗೃಹಾಧಾರಿತ ಶಿಕ್ಷಣ, ಶಾಲಾಪೂರ್ವ ಶಿಕ್ಷಣ ಇತ್ಯಾದಿಗಳ ಅಡಿಯಲ್ಲಿ ವಿಕಲಾಂಗ ಮಕ್ಕಳಿಗೆ ಶಿಕ್ಷಣದ ಅವಶ್ಯಕತೆಗಳನ್ನು ಒದಗಿಸಿಕೊಡುವ ನಿಟ್ಟಿನಲ್ಲಿ ಮಾನವ ಸಂಪನ್ಮೂಲ ಅಭಿವೃದ್ಧಿ ತರಬೇತಿ ನೀಡಲಾಗುತ್ತದೆ.

ಈ ಕೆಳಗೆ ವಿವರಿಸಿರುವಂತೆ, ವಿವಿಧ ವಿಷಯಗಳಲ್ಲಿ ತಜ್ಞತೆ ಮತ್ತು ವಿವಿಧ ಹಂತಗಳ ತರಬೇತಿ ಕಾರ್ಯಕ್ರಮಗಳನ್ನು ಅಭಿವೃದ್ಧಿಪಡಿಸುವುದು:
(i) ಸಮನ್ವಯ ಶಿಕ್ಷಣಕ್ಕಾಗಿ ಶಿಕ್ಷಕರಿಗೆ ತರಬೇತಿ ಕೈಪಿಡಿಗಳು.
(ii) ವಿಶೇಷ ಶಿಕ್ಷಣದಲ್ಲಿ ಡಿಪ್ಲೊಮಾ, ಪದವಿ ಮತ್ತು ಉನ್ನತ ಮಟ್ಟದ ಕಾರ್ಯಕ್ರಮಗಳು.
(iii) ಅಂಗವಿಕಲ ವಯಸ್ಕರಿಗೆ/ ಹಿರಿಯ ನಾಗರಿಕರಿಗೆ ಗೃಹಾಧಾರಿತ ಶಿಕ್ಷಣ ಮತ್ತು ಆರೈಕೆ ಸೇವೆಗಳಿಗಾಗಿ ಆರೈಕೆದಾರರ ತರಬೇತಿ, ಇತ್ಯಾದಿ.

## ವಿಕಲಾಂಗ ವ್ಯಕ್ತಿಗಳ ಶಿಕ್ಷಣ

48. 2020ರ ವೇಳೆಗೆ ಅಂಗವೈಕಲ್ಯ ಹೊಂದಿರುವ ಪ್ರತಿ ಮಗುವಿಗೆ ಸೂಕ್ತವಾದ ಪೂರ್ವ ಪ್ರಾಥಮಿಕ, ಪ್ರಾಥಮಿಕ ಮತ್ತು ಮಾಧ್ಯಮಿಕ ಹಂತದ ಶಿಕ್ಷಣಕ್ಕೆ ಪ್ರವೇಶವಿದೆ ಎಂಬುದನ್ನು ಖಾತರಿಪಡಿಸುವುದು. ವಿಶೇಷ ಕಾಳಜಿವಹಿಸಲಿರುವ ಅಂಶಗಳು ಈ ಕೆಳಗಿನಂತಿವೆ –

(i) ಎಲ್ಲಾ ರೀತಿಯ ಅಂಗವೈಕಲ್ಯವಿರುವ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಕೂಲವಾಗುವಂತೆ ಶಾಲೆಗಳನ್ನು (ಕಟ್ಟಡ, ಪ್ರವೇಶಾವಕಾಶ ವಿಧಾನಗಳು, ಶೌಚಾಲಯಗಳು, ಆಟದ ಮೈದಾನಗಳು, ಪ್ರಯೋಗಾಲಯಗಳು, ಗ್ರಂಥಾಲಯಗಳು, ಇತ್ಯಾದಿ) ತಡೆರಹಿತವಾಗಿರುವಂತೆ ಮಾಡಲಾಗುವುದು.

(ii) ಕಲಿಕಾ ಮಾಧ್ಯಮ ಮತ್ತು ಬೋಧನಾ ವಿಧಾನಗಳನ್ನು ಹೆಚ್ಚಿನ ಅಂಗವೈಕಲ್ಯ ಹೊಂದಿರುವವರ ಪರಿಸ್ಥಿತಿಯ ಅವಶ್ಯಕತೆಗಳಿಗೆ ಸೂಕ್ತವಾಗುವಂತೆ ಅಳವಡಿಸಿಕೊಳ್ಳಲಾಗುವುದು.
(iii) ಕಲಿಕಾ ಬೋಧನೆಯ ತಾಂತ್ರಿಕ/ಪೂರಕ/ವಿಶೇಷ ವ್ಯವಸ್ಥೆಯನ್ನು ಶಾಲೆಯೊಳಗೆ ಅಥವಾ ಶಾಲೆಗಳ ಸಮೂಹಕ್ಕೆ ಸುಲಭವಾಗಿ ಪ್ರವೇಶಿಸಲು ಸಾಧ್ಯವಾಗುವಂತಹ ಸಾಮಾನ್ಯ ಕೇಂದ್ರದಲ್ಲಿ ಲಭ್ಯವಾಗುವಂತೆ ಮಾಡಲಾಗುವುದು.
(iv) ಶೈಕ್ಷಣಿಕ ಆಟಿಕೆಗಳು, ಬ್ರೈಲ್/ಮಾತನಾಡುವ ಪುಸ್ತಕಗಳು, ಸೂಕ್ತವಾದ ಸಾಫ್ಟ್‌ವೇರ್, ಇತ್ಯಾದಿಗಳಂತಹ ಕಲಿಕಾಬೋಧನಾ ಉಪಕರಣಗಳು ಮತ್ತು ಸಹಾಯಕ ಸಾಮಗ್ರಿಗಳು ಲಭ್ಯವಾಗುವಂತೆ ಮಾಡಲಾಗುವುದು. ಸಾಮಾನ್ಯ ಗ್ರಂಥಾಲಯಗಳು, ಇ-ಲೈಬ್ರರಿಗಳು, ಬ್ರೈಲ್-ಗ್ರಂಥಾಲಯಗಳು ಮತ್ತು ಮಾತನಾಡುವ ಪುಸ್ತಕಗಳ ಗ್ರಂಥಾಲಯಗಳು, ಸಂಪನ್ಮೂಲ ಕೊಠಡಿಗಳು ಇತ್ಯಾದಿಗಳನ್ನು ಸ್ಥಾಪಿಸಲು ಸೌಲಭ್ಯಗಳನ್ನು ವಿಸ್ತರಿಸಲು ಪ್ರೋತ್ಸಾಹವನ್ನು ನೀಡಲಾಗುವುದು.

(v) ರಾಷ್ಟ್ರೀಯ ಮುಕ್ತಶಿಕ್ಷಣ ಶಾಲೆ ಮತ್ತು ದೂರಶಿಕ್ಷಣ ಕಾರ್ಯಕ್ರಮಗಳನ್ನು ಜನಪ್ರಿಯಗೊಳಿಸಲಾಗುವುದು ಮತ್ತು ದೇಶದ ಇತರ ಭಾಗಗಳಿಗೆ ಅವುಗಳನ್ನು ವಿಸ್ತರಿಸಲಾಗುವುದು.

(vi) ಸಂಜ್ಞೆ ಭಾಷೆ, ಸಂವಹನದ ಪರ್ಯಾಯ ಮಾರ್ಗಗಳು ಮತ್ತು ಅವುಗಳ ಬಲಪಡಿಸುವಿಕೆ (Alternative and Augmentative Communications - AAC) ಮತ್ತು ಇತರ ವಿಧಾನಗಳನ್ನು ಅಂತರ್ ವ್ಯಕ್ತೀಯ ನೆಲೆಯ ಸಂವಹನದಲ್ಲಿ ಕೈಗೊಳ್ಳಲು ಸಾಧ್ಯವಾಗಬಹುದಾದ ಮಾಧ್ಯಮವಾಗಿ ಗುರುತಿಸಲಾಗುತ್ತದೆ, ಪ್ರಮಾಣೀಕರಿಸಲಾಗುತ್ತದೆ ಮತ್ತು ಜನಪ್ರಿಯಗೊಳಿಸಲಾಗುತ್ತದೆ.

(vii) ಶಾಲೆಗಳು ಸುಲಭವಾಗಿ ಪ್ರಯಾಣಿಸಿ ತಲುಪಬಹುದಾದ ಪ್ರಯಾಣದ ಅಂತರದಲ್ಲಿ ಲಭ್ಯವಾಗುವಂತೆ ಮಾಡುವುದು. ಪರ್ಯಾಯ ವ್ಯವಸ್ಥೆಯಾಗಿ - ಸಮುದಾಯ, ಸರ್ಕಾರ ಮತ್ತು ಸ್ವಯಂ ಸೇವಾ ಸಂಸ್ಥೆಗಳ ನೆರವಿನೊಂದಿಗೆ ಕೈಗೊಳ್ಳಲು ಸಾಧ್ಯವಾಗಬಹುದಾದ ಪ್ರಯಾಣ ವ್ಯವಸ್ಥೆಗಳನ್ನು ಮಾಡಲಾಗುವುದು.

(viii) ಪೋಷಕ-ಶಿಕ್ಷಕರ ಸಮಾಲೋಚನೆ ಮತ್ತು ಕುಂದುಕೊರತೆಗಳ ಪರಿಹಾರ ವ್ಯವಸ್ಥೆಯನ್ನು ಶಾಲೆಗಳಲ್ಲಿ ಸ್ಥಾಪಿಸಲಾಗುವುದು.

(ix) ಪ್ರಾಥಮಿಕ, ಮಾಧ್ಯಮಿಕ ಮತ್ತು ಉನ್ನತ ಮಟ್ಟದ ಶಿಕ್ಷಣಕ್ಕೆ ಅಂಗವೈಕಲ್ಯ ಹೊಂದಿರುವ ಹೆಣ್ಣು ಮಗುವಿನ ದಾಖಲಾತಿ ಮತ್ತು ಮುಂದುವರಿಕೆಯ ವಾರ್ಷಿಕ ಪರಿಶೀಲನೆಗಾಗಿ ಪ್ರತ್ಯೇಕ ಕಾರ್ಯವಿಧಾನವಿರುವುದು.

(x) ಸಮನ್ವಯ ಶಿಕ್ಷಣ ವ್ಯವಸ್ಥೆಗೆ ಸೇರ್ಪಡೆಗೊಳ್ಳಲು ಸಾಧ್ಯವಾಗದ ಅನೇಕ ಮಕ್ಕಳು ವಿಶೇಷ ಶಾಲೆಗಳಿಂದ ಶೈಕ್ಷಣಿಕ ಸೇವೆಗಳನ್ನು ಪಡೆಯುವುದನ್ನು ಮುಂದುವರೆಸುವರು. ವಿಶೇಷ ಶಾಲೆಗಳನ್ನು ತಾಂತ್ರಿಕ ಅಭಿವೃದ್ಧಿಗೆ ಅನುಗುಣವಾಗಿ ಸೂಕ್ತವಾದ ಹೊಸ ಮಾದರಿಯಲ್ಲಿ ರೂಪಿಸುವುದು ಮತ್ತು ಸೂಕ್ತ ವಿಷಯ ಪರಿಣತಿಯನ್ನು ಸಂಬಂಧಿಸಿದವರಿಗೆ ನೀಡುವುದು. ಈ ಶಾಲೆಗಳು ವಿಕಲಾಂಗ ಮಕ್ಕಳನ್ನು ಮುಖ್ಯವಾಹಿನಿಯ ಸಮನ್ವಯ ಶಿಕ್ಷಣಕ್ಕೆ ಸೇರ್ಪಡೆಗೊಳಿಸುವಂತೆ ತಯಾರಿಗೊಳಿಸಲು ಇದು ಸಹಾಯ ಮಾಡುತ್ತದೆ.

(xi) ಕೆಲವು ಸಂದರ್ಭಗಳಲ್ಲಿ ಅಂಗವೈಕಲ್ಯದ ಸ್ವರೂಪ (ಅದರ ಪ್ರಕಾರ ಮತ್ತು ಹಂತಗಳು), ವೈಯಕ್ತಿಕ ಸಂದರ್ಭಗಳು ಮತ್ತು ಆದ್ಯತೆಗಳ ಕಾರಣದಿಂದಾಗಿ, ಗೃಹಾಧಾರಿತ ಶಿಕ್ಷಣವನ್ನು ಒದಗಿಸಲಾಗುವುದು.

(xii) ವಿವಿಧ ವಿಕಲಾಂಗ ಮಕ್ಕಳಿಗಾಗಿ ಕೋರ್ಸ್ನ ಪಠ್ಯಕ್ರಮ ಮತ್ತು ಮೌಲ್ಯಮಾಪನ ವ್ಯವಸ್ಥೆಯನ್ನು ಅವರ ಸಾಮರ್ಥ್ಯಗಳನ್ನು ಗಮನದಲ್ಲಿಟ್ಟುಕೊಂಡು ಅಭಿವೃದ್ಧಿಪಡಿಸುವುದು, ಗಣಿತವನ್ನು ಕಲಿಯಬೇಕಿರುವುದರಿಂದ ವಿನಾಯಿತಿ ಮತ್ತು ಒಂದು ಭಾಷೆಯನ್ನು ಮಾತ್ರ ಕಲಿಯುವ ಹಾಗೆ ವ್ಯವಸ್ಥೆ ಮಾಡುವುದು ಇತ್ಯಾದಿ ಸಡಿಲಿಕೆಗಳ ಮೂಲಕ ಪರೀಕ್ಷಾ ವ್ಯವಸ್ಥೆಯನ್ನು ಮಾರ್ಪಡಿಸುವುದು. ಹೆಚ್ಚುವರಿ ಸಮಯ ನೀಡುವುದು, ಕ್ಯಾಲ್ಕುಲೇಟರ್‌ಗಳ ಬಳಕೆಗೆ ಅವಕಾಶ, ಕ್ಲಾರ್ಕ್ಸ್ ಟೇಬಲ್‌ಗಳ ಬಳಕೆ, ಲಿಪಿಕಾರರ ಸಹಾಯ ಇತ್ಯಾದಿ ಸೌಲಭ್ಯಗಳನ್ನು ಅವಶ್ಯಕತೆಗೆ ತಕ್ಕಂತೆ ಒದಗಿಸಿಕೊಡುವುದು.

(xiii) ವಿಕಲಚೇತನರ ಶಿಕ್ಷಣವನ್ನು ಉತ್ತೇಜಿಸಲು ಪ್ರತಿ ರಾಜ್ಯ ಮತ್ತು ಕೇಂದ್ರಾಡಳಿತ ಪ್ರದೇಶದಲ್ಲಿಸಮನ್ವಯ ಶಿಕ್ಷಣದ ಮಾದರಿ ಶಾಲೆಗಳನ್ನು ಸ್ಥಾಪಿಸಲಾಗುವುದು.

(xiv) ಜ್ಞಾನ ಆಧರಿತ ಸಮಾಜದ ಈ ಯುಗದಲ್ಲಿ, ಕಂಪ್ಯೂಟರ್‌ಗಳು ಬಹಳ ಮುಖ್ಯವಾದ ಪಾತ್ರವನ್ನು ವಹಿಸುತ್ತವೆ. ಅಂಗವೈಕಲ್ಯ ಹೊಂದಿರುವ ಪ್ರತಿ ಮಗುವೂ ಕಂಪ್ಯೂಟರ್ ಬಳಕೆಗೆ ಸೂಕ್ತವಾಗಿ ತನ್ನನ್ನು ತಾನು ತೆರೆದುಕೊಳ್ಳುವಂತೆ ಪ್ರಯತ್ನಗಳನ್ನು ಮಾಡಲಾಗುವುದು.
(xv) 6 ವರ್ಷ ವಯಸ್ಸಿನೊಳಗಿನ ವಿಕಲಾಂಗ ಮಕ್ಕಳನ್ನು ಗುರುತಿಸಲಾಗುವುದು ಮತ್ತು ಅವರು ಸಮನ್ವಯ ಶಿಕ್ಷಣಕ್ಕೆ ಸೇರ್ಪಡೆಗೊಳ್ಳಲು ಸಮರ್ಥರಾಗುವಂತೆ ಅಗತ್ಯ ಮಧ್ಯಪ್ರವೇಶಿಕೆಗಳನ್ನು ಮಾಡಲಾಗುವುದು.
(xvi) ಮಾನಸಿಕ ಅಸ್ವಸ್ಥತೆ ಉಳ್ಳವರಿಗೆ ಮನೋ-ಸಾಮಾಜಿಕ ಪುನರ್ವಸತಿ ಕೇಂದ್ರಗಳಲ್ಲಿ ಶೈಕ್ಷಣಿಕ ಸೌಲಭ್ಯಗಳನ್ನು ಒದಗಿಸಲಾಗುವುದು.
(xvii) ಅಂಗವಿಕಲ ವ್ಯಕ್ತಿಗಳ ಸಾಮರ್ಥ್ಯಗಳ ಬಗ್ಗೆ ಇರುವ ಅರಿವಿನ ಕೊರತೆಯಿಂದಾಗಿ ಅನೇಕ ಶಾಲೆಗಳು ವಿದ್ಯಾರ್ಥಿಗಳ ಅಸಾಮರ್ಥ್ಯದ ಕಾರಣದಿಂದ ದಾಖಲಾತಿಯನ್ನು ನಿರುತ್ಸಾಹಗೊಳಿಸುತ್ತವೆ. ಎಲ್ಲ ಶಾಲೆಗಳಲ್ಲೂ ಶಿಕ್ಷಕರು, ಪ್ರಾಂಶುಪಾಲರು ಮತ್ತು ಇತರ ಸಿಬ್ಬಂದಿಗಳ ಸಂವೇದನಾಶೀಲತೆಗಾಗಿ ಕಾರ್ಯಕ್ರಮಗಳನ್ನು ಕೈಗೊಳ್ಳಲಾಗುವುದು.
(xix) ತೀವ್ರವಾದ ಕಲಿಕಾ ಸಮಸ್ಯೆಗಳನ್ನು ಎದುರಿಸುತ್ತಿರುವ ವಯಸ್ಕರಿಗೆ ವಯಸ್ಕರ ಕಲಿಕೆ/ ವಿರಾಮ ಕೇಂದ್ರಗಳನ್ನು ಉತ್ತೇಜಿಸಲಾಗುವುದು.
(xx) ಉನ್ನತ ಶಿಕ್ಷಣ ಸಂಸ್ಥೆಗಳ ಪ್ರವೇಶದಲ್ಲಿ ವಿಕಲಾಂಗ ವ್ಯಕ್ತಿಗಳಿಗೆ ಮೂರು ಪ್ರತಿಶತ ಮೀಸಲಾತಿಯನ್ನು ಜಾರಿಗೊಳಿಸಬೇಕು. ವಿಶ್ವವಿದ್ಯಾಲಯಗಳು, ಕಾಲೇಜುಗಳು ಮತ್ತು ವೃತ್ತಿಪರ ಸಂಸ್ಥೆಗಳು ವಿಕಲಾಂಗ ವಿದ್ಯಾರ್ಥಿಗಳ ಶೈಕ್ಷಣಿಕ ಅಗತ್ಯಗಳನ್ನು ನೋಡಿಕೊಳ್ಳಲು ಅಂಗವೈಕಲ್ಯ ಕೇಂದ್ರವನ್ನು ಸ್ಥಾಪಿಸಲು ಹಣಕಾಸಿನ ನೆರವು ನೀಡಲಾಗುವುದು. ತರಗತಿ ಕೊಠಡಿಗಳು, ಹಾಸ್ಟೆಲ್‌ಗಳು, ಕೆಫೆಟೇರಿಯಾಗಳು ಮತ್ತು ಕ್ಯಾಂಪಸ್‌ನಲ್ಲಿರುವ ಇತರ ಸೌಲಭ್ಯಗಳನ್ನು ವಿಕಲಚೇತನ ವಿದ್ಯಾರ್ಥಿಗಳ ಪ್ರವೇಶಕ್ಕೆ ಅನುಕೂಲ ವಾಗುವ ರೀತಿಯಲ್ಲಿ ವ್ಯವಸ್ಥೆ ಮಾಡಲು ಅವರನ್ನು ಪ್ರೋತ್ಸಾಹಿಸುವುದು.
(xxi) ಶಿಕ್ಷಕರ ವೃತ್ತಿ ಪ್ರವೇಶದ ಸಂದರ್ಭದಲ್ಲಿ ಮತ್ತು ಸೇವಾನಿರತ ತರಬೇತಿ ಕಾರ್ಯಕ್ರಮಗಳಲ್ಲಿ ವಿಕಲಾಂಗ ಮಕ್ಕಳ ನಿರ್ವಹಣೆಗೆ ಸಂಬಂಧಿಸಿದ ವಿಷಯಗಳ ಕುರಿತ ಅಧಿವೇಶನಗಳ ಕೈಪಿಡಿಯನ್ನು ಒಳಗೊಳಿಸುವುದು.
49. ಮಾನವ ಸಂಪನ್ಮೂಲ ಅಭಿವೃದ್ಧಿ ಸಚಿವಾಲಯವು ವಿಕಲಾಂಗ ವ್ಯಕ್ತಿಗಳ ಶಿಕ್ಷಣಕ್ಕೆ ಸಂಬಂಧಿಸಿದ ಎಲ್ಲಾ ವಿಷಯಗಳನ್ನು ಸಂಘಟಿಸುವ ಜವಾಬ್ದಾರಿ ಹೊಂದಿರುವ (ನೋಡಲ್) ಸಚಿವಾಲಯವಾಗಿರುತ್ತದೆ.

## ಸಹಯೋಗ

ಸಹಯೋಗವು ಸಮನ್ವಯ ಶಿಕ್ಷಣದ ಪ್ರಮುಖ ಮಂತ್ರವಾಗಿದೆ. ಪಾಲುದಾರಿಕೆಯನ್ನು ರೂಪಿಸಲು ಹೆಚ್ಚಿನ ಮಹತ್ವ ಕೊಡಲು ಇರುವ ಕಾರಣಗಳು ಈ ಕೆಳಗಿನವುಗಳನ್ನು ಒಳಗೊಂಡಿವೆ:

- ಉನ್ನತವಾದ ಶಿಕ್ಷಕ-ವಿದ್ಯಾರ್ಥಿ ಅನುಪಾತ ಮತ್ತು ಗುಣಮಟ್ಟದ ಶಿಕ್ಷಣಕ್ಕಾಗಿ ಶೈಕ್ಷಣಿಕ ಬೆಂಬಲ

- ಸಂಪನ್ಮೂಲಗಳ ಕೊರತೆ – ವಿವಿಧ ಮೂಲಗಳಿಂದ ಸಂಪನ್ಮೂಲದ ಒಳಹರಿವು ಮತ್ತು ಸಂಗ್ರಹ
- ಜ್ಞಾನ ಮತ್ತು ಪರಿಣತಿಯು ದೇಶದಾದ್ಯಂತ ಅಲ್ಲಲ್ಲಿ ಚದುರಿದಂತೆ ಇರುವುದು
- ಹೊಸ ಆಲೋಚನೆಗಳು, ನಾವೀನ್ಯ ಮತ್ತು ಪ್ರಯೋಗಗಳನ್ನು ಕಾರ್ಯರೂಪಕ್ಕೆ ತರಲು ಇರುವ ಪರಸ್ಪರ ಅನುಭವ ಹಂಚಿಕೆಯ ಅವಶ್ಯಕತೆ
- ಸಹಯೋಗದಿಂದ ಕೂಡಿದ ಬಹುಶಿಸ್ತೀಯ ಸಂಶೋಧನೆ
- ವಿಕೇಂದ್ರೀಕರಣ ಮತ್ತು ಭಾಗೀದಾರಿಕೆ

**ಸರ್ವಶಿಕ್ಷಣ ಅಭಿಯಾನದ ಕೆಳಗೆ ಸಹಯೋಗಕ್ಕಾಗಿ ನಡೆದ ವಿವಿಧ ಪ್ರಯತ್ನಗಳಿಗೆ ಉದಾಹರಣೆಗಳು ಈ ಕೆಳಗಿನಂತಿವೆ:**

| **ವಿವಿಧ ಕ್ಷೇತ್ರಗಳು** | **ಸಂಘಟನೆಗಳು** |
|---|---|
| **ಅರಿವು** | ತಾಯಂದಿರ ಮತ್ತು ಶಿಕ್ಷಕರ ಸಂಘಟನೆ, ಪೋಷಕರು ಮತ್ತು ಶಿಕ್ಷಕರ ಸಂಘಟನೆ |
| **ಭೌತಿಕ ಸಂರಚನೆಗಳು** | ರಾಜ್ಯ, ಜಿಲ್ಲೆ, ತಾಲ್ಲೂಕಾ/ಸಮೂಹ ಮತ್ತು ಗ್ರಾಮ ಮಟ್ಟದಲ್ಲಿ |
| **ಆರಂಭಿಕ ಹಂತದ ಪತ್ತೆ ಮಾಡುವಿಕೆ ಮತ್ತು ಗುರುತಿಸುವಿಕೆ** | ಪ್ರಾಥಮಿಕ ಆರೋಗ್ಯ ಕೇಂದ್, ಗ್ರಾಮ ಶಿಕ್ಷಣ ಸಮಿತಿ, ಸಂಪನ್ಮೂಲ ಶಿಕ್ಷಕರು |
| **ಮೌಲ್ಯಮಾಪನ** | ಶಿಕ್ಷಕರು, ತಜ್ಞರು, ಪ್ರಾಥಮಿಕ ಆರೋಗ್ಯ ಕೇಂದ್ರಗಳು, ರಾಷ್ಟ್ರೀಯ ಸಂಸ್ಥೆಗಳು, ಸಂಪನ್ಮೂಲ ಸಂಸ್ಥೆಗಳು |
| **ಶಿಕ್ಷಣಕ್ಕಾಗಿ ಸ್ಥಳ ನಿಯೋಜನೆ** | ಸಾಮಾನ್ಯ ಶಾಲೆಗಳು, ಪರ್ಯಾಯ ಮತ್ತು ನಾವೀನ್ಯಯುತ ಶಾಲೆಗಳು, ದೂರ ಶಿಕ್ಷಣ, ಗೃಹ ಆಧಾರಿತ ಶಿಕ್ಷಣ, **ಇಜಿಎಸ್** |
| **ಸಹಾಯಕ ಸಾಮಗ್ರಿಗಳು ಮತ್ತು ಸಾಧನ ಸಲಕರಣೆಗಳು** | ವಿವಿಧ ಸಚಿವಾಲಯಗಳು, ರೆಡ್ ಕ್ರಾಸ್ ಸಂಸ್ಥೆ, ರಾಷ್ಟ್ರೀಯ ಸಂಸ್ಥೆಗಳು, ಸ್ವಯಂ ಸೇವಾ ಸಂಸ್ಥೆಗಳು, ಸಂಪನ್ಮೂಲ ಸಂಸ್ಥೆಗಳು |
| **ಶಿಕ್ಷಕರ ಪ್ರಶಿಕ್ಷಣ** | ರಾಜ್ಯ, ಜಿಲ್ಲೆ, ತಾಲ್ಲೂಕಾ, ಸಮೂಹ ಮಟ್ಟದ ತರಬೇತಿ ಸಂಸ್ಥೆಗಳು, ಇತರೆ ಸರ್ಕಾರಿ ಸಂಸ್ಥೆಗಳು |
| **ಬೆಂಬಲ** | ಸ್ವಯಂ ಸೇವಾ ಸಂಸ್ಥೆಗಳು, ವಿಶೇಷ ಶಾಲೆಗಳು, ಸಂಪನ್ಮೂಲ ಶಿಕ್ಷಕರು, ವೃತ್ತಿಪರ ತರಬೇತಿ ಸಂಸ್ಥೆಗಳು |
| **ಮೇಲ್ವಿಚಾರಣೆ** | ಪೋಷಕರು ಮತ್ತು ಕುಟುಂಬದ ಸದಸ್ಯರು, |

| | |
|---|---|
| | ಸ್ವಯಂ ಸೇವಾ ಸಂಸ್ಥೆಗಳು, ಸಮುದಾಯದ ಸಂಸ್ಥೆಗಳು |

:
:

:
:

ಸಂಪನ್ಮೂಲಗಳ ಕ್ರೋಢೀಕರಣವು ಸಮನ್ವಯತೆಯ ಅಭ್ಯಾಸಗಳನ್ನು ಬೆಳೆಸುವುದರೊಂದಿಗೆ ಅನುಷ್ಠಾನವನ್ನು ಸುಗಮಗೊಳಿಸುತ್ತದೆ. ಸ್ವಯಂ ಸೇವಾ ಸಂಸ್ಥೆಗಳು, ನಾಗರಿಕ ಸಾಮಾಜಿಕ ಗುಂಪುಗಳು, ಶಿಕ್ಷಕರ ಸಂಘಗಳು, ವಿಶ್ವವಿದ್ಯಾಲಯಗಳು, ಉನ್ನತ ಶಿಕ್ಷಣ ಸಂಸ್ಥೆಗಳು, ರಾಜ್ಯ ಮತ್ತು ಜಿಲ್ಲಾ ಮಟ್ಟದ ಸಂಸ್ಥೆಗಳು, ಶಾಲೆ-ಸಮುದಾಯ, ಶಾಲಾ ಶಿಕ್ಷಕರು, ಶಿಕ್ಷಕರು-ಶಿಕ್ಷಕರು, ಮಕ್ಕಳು-ಮಕ್ಕಳು, ಶಿಕ್ಷಕರು-ಪೋಷಕರು ಮತ್ತು ಶಾಲಾ ವ್ಯವಸ್ಥೆಗಳು-ಹೊರಗಿನ ವ್ಯವಸ್ಥೆಗಳು – ಇವೆಲ್ಲವುಗಳ ಭಾಗೀದಾರಿಕೆಗೆ ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005 ಕರೆಕೊಡುತ್ತದೆ.



**ಪರಸ್ಪರ ಕೊಂಡಿಗಳಾಗಿ ಶಾಲಾ ಪ್ರಾಂಶುಪಾಲರು**

ಶಾಲಾ ಪ್ರಾಂಶುಪಾಲರಿಗಿರುವ ಬದ್ಧತೆ ಮತ್ತು ಶಿಕ್ಷಕರೊಂದಿಗೆ ಅವರಿಗಿರುವ ಸೌಹಾರ್ದಯುತ ಸಂಬಂಧಗಳ ಸ್ವರೂಪವು ಶಿಕ್ಷಕರ ಪರಿಣಾಮಕಾರಿ ಭಾಗವಹಿಸುವಿಕೆ ಮತ್ತು ಪರಸ್ಪರ ಸಹಕಾರಕ್ಕೆ ಹಾದಿ ಸುಗಮಗೊಳಿಸುತ್ತದೆ. ಶಾಲೆಗಳು ಹೆಚ್ಚು ಸಮನ್ವಯತೆಯ

ವ್ಯವಸ್ಥೆಯೊಂದರತ್ತ ಮುಂದಡಿಯಿಡುವ ವಿವಿಧ ವಿಧಾನಗಳನ್ನು ರೂಪಿಸುವುದಕ್ಕಾಗಿ ಉತ್ತಮ ಸಹಯೋಗ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು ಇದು ಅತ್ಯಗತ್ಯ. **ಮಣಿಪುರದ ಚುರಾಚಾಂದ್‌ಪುರ್ ಜಿಲ್ಲೆಯ ಲಾಲ್‌ಪುಯಿತ್ಲುಅಯಿ ಫೌಂಡೇಶನ್ ಶಾಲೆಯಲ್ಲಿ**, ಶಿಕ್ಷಕರೊಂದಿಗೆ ಉತ್ತಮ ಬಾಂಧವ್ಯವನ್ನು ಹೊಂದುವಲ್ಲಿ ಶಾಲೆಯ ಪ್ರಾಂಶುಪಾಲರ ಪ್ರಯತ್ನ ಮತ್ತು ಅವರ ಸಾಮರ್ಥ್ಯ ಹಾಗೂ ಭಾಗವಹಿಸುವಿಕೆಯಲ್ಲಿ ಅವರಿಗಿರುವ ಉತ್ಸಾಹ ಶಿಕ್ಷಕರನ್ನು ಬಹಳ ಬೇಗ ಈ ನಿಟ್ಟಿನಲ್ಲಿ ತಯಾರಿಗೊಳ್ಳಲು ಪ್ರೇರಣೆ ನೀಡಿತು. ಶಾಲೆಗೆ ಹೊರಗಿನಿಂದ ಭೇಟಿ ನೀಡುವ ಶಿಕ್ಷಣತಜ್ಞರು, ಸಂಶೋಧಕರು, ವಿಷಯ ಪರಿಣತರು ಇವರೆಲ್ಲರೊಂದಿಗೆ ಸಮನ್ವಯ ಶಿಕ್ಷಣದ ಅಭ್ಯಾಸಗಳ ಕುರಿತು ಮುಕ್ತವಾಗಿ ಪರಸ್ಪರ ಚಿಂತನೆ ಆಲೋಚನೆಗಳ ವಿನಿಮಯದಲ್ಲಿ ಪಾಲ್ಗೊಳ್ಳಲು ಶಿಕ್ಷಕರಿಗೆ ಅವಕಾಶ ನೀಡಿತು. ಈ ರೀತಿಯ ಚಟುವಟಿಕೆಗಳಿಂದ ಶಿಕ್ಷಕರಿಗೆ ತಮ್ಮ ವರ್ತನೆಗಳ ಕುರಿತು ತಾವೇ ಚಿಂತನಾತ್ಮಕವಾಗಿ ವಿಶ್ಲೇಷಿಸಲು ಮತ್ತು ಹೊಸ ಆಲೋಚನೆಗಳು ಮತ್ತು ರೂಢಿಗಳಿಗೆ ತಮ್ಮನ್ನು ಮುಕ್ತವಾಗಿರಿಸಿಕೊಳ್ಳುವ ಅವಕಾಶವನ್ನು ನೀಡುತ್ತವೆ. ಅದೇ ಸಮಯದಲ್ಲಿ, ಭೇಟಿ ನೀಡುವ ಸಂಶೋಧಕರು ಮತ್ತು ತಜ್ಞರಿಗೂ ಸಮನ್ವಯ ಶಿಕ್ಷಣದ ಕುರಿತು ಹೊಸ ಒಳನೋಟಗಳನ್ನು ನೀಡುವ ಮೂಲಕ ಅವರ ಆಲೋಚನೆಗಳನ್ನು ಇದು ಸಮೃದ್ಧಗೊಳಿಸುತ್ತದೆ.

ಕೊನೆಯ ಮಾತೇನೆಂದರೆ, ಸಮನ್ವಯ ಶಿಕ್ಷಣದ ನೀತಿಯು ಶಿಕ್ಷಣ ಕ್ಷೇತ್ರದಲ್ಲಿ ಆಗುತ್ತಿರುವ ಒಂದು ಅತ್ಯಂತ ಮಹತ್ವದ ಬೆಳವಣಿಗೆಯಾಗಿದೆ. ಇದು ನಮ್ಮ ಬಹುತ್ವ ಸಂಸ್ಕೃತಿಯೊಂದಿಗೆ ಹಾಸುಹೊಕ್ಕಾಗಿರುವುದು ಮಾತ್ರವಲ್ಲದೆ, ವೈವಿಧ್ಯವನ್ನು ಸಂಭ್ರಮಿಸುವುದರ ಮೂಲಕ ಅದನ್ನು ಪ್ರತಿಫಲಿಸುತ್ತದೆ ಮತ್ತು ಅವಕಾಶಗಳ ಸಮಾನತೆಯನ್ನು ಎತ್ತಿಹಿಡಿಯುತ್ತದೆ. ಪ್ರಜಾಪ್ರಭುತ್ವ, ಸಮಾನತೆ, ನ್ಯಾಯ, ಸ್ವಾತಂತ್ರ್ಯದಂತಹ ಮೌಲ್ಯಗಳಿಗೆ ಬದ್ಧತೆ, ಇತರರ ಯೋಗಕ್ಷೇಮದ ಕುರಿತ ಕಾಳಜಿ, ಜಾತ್ಯತೀತತೆ ಮತ್ತು ಮಾನವ ಘನತೆ ಹಾಗೂ ಮಾನವ ಹಕ್ಕುಗಳನ್ನು ಗೌರವಿಸುವಂತಹ ಮೌಲ್ಯಗಳನ್ನು ಪಾಲಿಸುವುದರಿಂದ ಸಮನ್ವಯತೆಯು ನಿಜವಾದ ಸಮಗ್ರ ಶಿಕ್ಷಣ ವ್ಯವಸ್ಥೆಯ ಕೇಂದ್ರ ವಿಷಯವೆಂದು ಪರಿಗಣಿಸಲ್ಪಡಬೇಕು.

**(ಮೂರು ಕಾಲಮ್ಗಳ ಟೇಬಲ್ ರೂಪದಲ್ಲಿ)**

## ಶೈಕ್ಷಣಿಕ ನಿರ್ವಾಹಕರಿಗೆ ಸೂಚಕಗಳು

**ನೀತಿ** **ಸ್ವಯಂ-ಸ್ಥಾನ ನಿಗದಿ (3 2 1ರ ಕ್ರಮದಲ್ಲಿ)**

1 ಪ್ರಾಂಶುಪಾಲರು/ಮುಖ್ಯೋಪಾಧ್ಯಾಯರು/ರಾಜ್ಯ, ಜಿಲ್ಲೆ, ತಾಲ್ಲೂಕಾ ಮತ್ತು ಸಮೂಹ ಸಂಪನ್ಮೂಲ ವ್ಯಕ್ತಿಗಳು ಸೇರಿದಂತೆ ಶೈಕ್ಷಣಿಕ ಕಾರ್ಯನಿರ್ವಾಹಕರು ನೆರೆಹೊರೆಯ ಪೋಷಕರಿಗೆ ತಮ್ಮ ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ಮನವೊಲಿಸುವರು.

2 ಶೈಕ್ಷಣಿಕ ಕಾರ್ಯನಿರ್ವಾಹಕರು ಸಮನ್ವಯತೆಯ ಸ್ಪಷ್ಟ ದೃಷ್ಟಿಕೋನವನ್ನು ಹೊಂದಿದ್ದು, ತಮ್ಮ ಗ್ರಹಿಕೆಯನ್ನು ವ್ಯಕ್ತಪಡಿಸುವರು ಮತ್ತು ಶಾಲೆಯಲ್ಲಿ ಸುರಕ್ಷಿತವಾದ, ಮುಕ್ತವಾಗಿ

ಸ್ವೀಕರಿಸುವ ಮತ್ತು ಸಹಯೋಗದ ಕಲಿಕೆಯ ಸಮುದಾಯವನ್ನು ರೂಪಿಸುತ್ತಾರೆ. ಇದರಲ್ಲಿ ಪ್ರತಿಯೊಬ್ಬರ ಹಿನ್ನೆಲೆ, ಸಾಮರ್ಥ್ಯದ ಮಟ್ಟ, ಸಂಸ್ಕೃತಿ ಮತ್ತು ಧರ್ಮಗಳಿಗೆ ಮನ್ನಣೆ ಇರುತ್ತದೆ.

3 ಶೈಕ್ಷಣಿಕ ಕಾರ್ಯನಿರ್ವಾಹಕರು ಸಮನ್ವಯತೆಯ ತತ್ವಚಿಂತನೆಯ ಆಧಾರದ ಮೇಲೆ ಕಾರ್ಯಕ್ರಮಗಳನ್ನು ಯೋಜಿಸುವರು ಮತ್ತು ಕಾರ್ಯಗತಗೊಳಿಸುವರು

4 ಶೈಕ್ಷಣಿಕ ಕಾರ್ಯನಿರ್ವಾಹಕರು ಶಾಲೆಯಿಂದ ಹೊರಗಿರುವ ಜನರೊಂದಿಗೆ ತಮ್ಮ ಶಾಲೆಯಲ್ಲಿರುವ ತಾರತಮ್ಯವಿಲ್ಲದ ಸಮನ್ವಯತೆಯ ದೃಷ್ಟಿಕೋನದ ಕುರಿತು ಹಂಚಿಕೊಳ್ಳುವರು

5 ಶೈಕ್ಷಣಿಕ ಕಾರ್ಯನಿರ್ವಾಹಕರು ಮಕ್ಕಳ ಶಾಲಾ ದಾಖಲೀಕರಣ ಮತ್ತು ಪ್ರವೇಶ ಪ್ರಕ್ರಿಯೆಗಳಿಗಾಗಿ ರೂಪಿಸಿರುವ ಕೆಲವು ಅಡೆತಡೆಗಳ (ಪರಿಶೀಲನೆ, ಗುರುತಿಸುವಿಕೆ, ಅಂಗವೈಕಲ್ಯ ಪ್ರಮಾಣಪತ್ರಗಳು, ಪೋಷಕರ ಸಂವಹನ, ಆಯ್ಕೆ ಮತ್ತು ಮೌಲ್ಯಮಾಪನದಂತಹ) ನಿವಾರಣೆಗೆ ಪ್ರಯತ್ನಿಸುವರು

6 ಶೈಕ್ಷಣಿಕ ಕಾರ್ಯನಿರ್ವಾಹಕರು ಒಟ್ಟು ವ್ಯಕ್ತಿತ್ವದ ಸಮಗ್ರ ಅಂಶಗಳ ಪೋಷಣೆಯನ್ನು ಪ್ರೋತ್ಸಾಹಿಸುವರು. ಜ್ಞಾನಾತ್ಮಕ ಅಂಶಗಳು, ಬದುಕಿಗೆ ಸಾರ್ಥಕ್ಯ ನೀಡುವ ಅಂಶಗಳು ಆಟಗಳು, ನೃತ್ಯ, ನಾಟಕ, ಸಂಗೀತ ಮತ್ತು ಕಲೆ ಮತ್ತು ಕರಕುಶಲತೆಗೆ ಸಮಾನ ಪ್ರಾಮುಖ್ಯತೆ ಮತ್ತು ಮೌಲ್ಯವನ್ನು ನೀಡುವರು

7 ಶೈಕ್ಷಣಿಕ ಕಾರ್ಯನಿರ್ವಾಹಕರು ಮಕ್ಕಳ ಶಾಲಾ ದಾಖಲೀಕರಣ ಮತ್ತು ಪ್ರವೇಶ ಮತ್ತು ಶಾಲೆಗಳಲ್ಲಿ ಅವರು ಉಳಿದು ಮುಂದುವರೆಯಲು - ಬೆಂಬಲ ಸೌಲಭ್ಯಗಳು-ವಿದ್ಯಾರ್ಥಿವೇತನಗಳು-ಶಾಲಾ ಪ್ರಕ್ರಿಯೆಗಳಲ್ಲಿ ಅವರ ಸಂಪೂರ್ಣ ಭಾಗವಹಿಸುವಿಕೆಗೆ ಮನೋವೈಜ್ಞಾನಿಕ ಪ್ರಮಾಣಪತ್ರಗಳನ್ನು ಒಳಗೊಂಡಂತೆ ಮೌಲ್ಯಮಾಪನ ಪರೀಕ್ಷೆಗಳು, ವೃತ್ತಿಪರರ ಮತ್ತು ತಜ್ಞರ ತೀರ್ಪುಗಳು ಸೇರಿದಂತೆ ಯಾವುದೇ ಆಧಾರದ ಮೇಲಿನ ಮಾನದಂಡಗಳಿಗೆ ಮಕ್ಕಳ ಶಿಕ್ಷಣವನ್ನು ಒಳಪಡಿಸುವುದಿಲ್ಲ

8 ಶೈಕ್ಷಣಿಕ ಕಾರ್ಯನಿರ್ವಾಹಕರು ವಿದ್ಯಾರ್ಥಿಗಳು, ಕುಟುಂಬ ಮತ್ತು ಸಮುದಾಯವನ್ನು ಒಟ್ಟಾಗಿ ನೋಡುವ ಪ್ರಜ್ಞೆಯು ಶಾಲೆಯ ಹೃದಯಭಾಗದಲ್ಲಿದೆ ಎಂದು ಖಚಿತಪಡಿಸಿಕೊಳ್ಳುವರು

9 ಶೈಕ್ಷಣಿಕ ಕಾರ್ಯನಿರ್ವಾಹಕರು ಶಿಕ್ಷಣ ಕ್ಷೇತ್ರದಲ್ಲಿನ ವಿವಿಧ ಬದಲಾವಣೆಗಳ ಬೆಳಕಿನಲ್ಲಿ ನೀತಿಗಳು ಮತ್ತು ಕಾರ್ಯವಿಧಾನಗಳನ್ನು ನಿರಂತರ ಮೌಲ್ಯಮಾಪನ ಮತ್ತು ಮೇಲ್ವಿಚಾರಣೆ ಮಾಡುವರು

10 ಶೈಕ್ಷಣಿಕ ಕಾರ್ಯನಿರ್ವಾಹಕರು ವಿದ್ಯಾರ್ಥಿಗಳ ಬೋಧನೆ ಮತ್ತು ಕಲಿಕೆಯನ್ನು ಹೆಚ್ಚಿಸಲು ತಮ್ಮ ಶಾಲೆಗೆ ಅನ್ವಯವಾಗುವ ಕೆಲವು ನೀತಿಗಳನ್ನು ಪ್ರಾಯೋಗಿಕವಾಗಿ ಅನುಸರಿಸಿ ನೋಡುವರು

**ಯೋಜನೆ ಮತ್ತು ನಾಯಕತ್ವ**

11 ಶಾಲಾ ನಾಯಕತ್ವವು ಶಾಲೆ ಮತ್ತು ಸಮುದಾಯದ ಭಾಗೀದಾರರಾದ ಗ್ರಾಮ ಶಿಕ್ಷಣ ಸಮಿತಿ, ಶಾಲಾ ಆಡಳಿತ ಸಮಿತಿ, ಪೋಷಕರು ಮತ್ತು ಇತರರೊಂದಿಗೆ ಕಾಳಜಿವಹಿಸಬೇಕಾದ ವಿವಿಧ ಅಂಶಗಳನ್ನು ಕೈಗೆತ್ತಿಕೊಳ್ಳಲು ಮತ್ತು ಅಗತ್ಯವಿದ್ದರೆ, ಭವಿಷ್ಯಕ್ಕಾಗಿ ಶಾಲೆಯ ದೂರದೃಷ್ಟಿಯನ್ನು ಪರಿಷ್ಕರಿಸಲು ಸಭೆಗಳು ನಿಯಮಿತವಾಗಿ ನಡೆಯುವಂತೆ ನೋಡಿಕೊಳ್ಳುತ್ತದೆ.

12 ಶೈಕ್ಷಣಿಕ ಕಾರ್ಯನಿರ್ವಾಹಕರು ತೆಗೆದುಕೊಳ್ಳುವ ನಿರ್ಧಾರಗಳಿಗೆ ದತ್ತಾಂಶಗಳು ಚಾಲನೆ ನೀಡಿರುತ್ತವೆ ಮತ್ತು ಈ ನಿರ್ಧಾರಗಳನ್ನು ಎಲ್ಲರ ಸಹಯೋಗದಲ್ಲಿ ತೆಗೆದುಕೊಳ್ಳಲಾಗುತ್ತದೆ.

13 ಶಾಲಾ/ಜಿಲ್ಲಾ/ತಾಲ್ಲೂಕಾ ಮಟ್ಟದ ಕಾರ್ಯ ನಿರ್ವಾಹಕರು ತರಗತಿಯಲ್ಲಿನ ಕಲಿಕಾಬೋಧನಾ ಪ್ರಕ್ರಿಯೆಯಲ್ಲಿ ಮಕ್ಕಳ ಕಲಿಕೆಗೆ ಅನುಕೂಲವಾಗುವಂತೆ ಬಳಸಲು ಎಲ್ಲಾ ಶಿಕ್ಷಕರಿಗೆ ಪಠ್ಯಕ್ರಮಕ್ಕೆ ಸಂಬಂಧಿಸಿದ ಪೂರಕ ಸಾಮಗ್ರಿಗಳು ಮತ್ತು ತರಬೇತಿಗಳು ಲಭ್ಯವಿರುವುದನ್ನು ಖಾತರಿಪಡಿಸಲಾಗಿದೆ.

14 ಶೈಕ್ಷಣಿಕ ಕಾರ್ಯನಿರ್ವಾಹಕರು ಸಮಯಕ್ಕೆ ಮೌಲ್ಯ ನೀಡಿ, ಅದನ್ನು ಜನಗಣತಿಯ ಕೆಲಸ, ಚುನಾವಣಾ ಕರ್ತವ್ಯ ಇತ್ಯಾದಿಗಳಂತಹ ಇತರ ಚಟುವಟಿಕೆಗಳಿಗಾಗಿ ವ್ಯಯ ಮಾಡದೆ ಆ ಸಮಯವನ್ನು ಪಠ್ಯಕ್ರಮ ಮತ್ತು ಕಲಿಕಾಬೋಧನಾ ಪ್ರಕ್ರಿಯೆಗಾಗಿ ಮೀಸಲಿರಿಸುತ್ತಾರೆ.

15 ಶೈಕ್ಷಣಿಕ ಕಾರ್ಯನಿರ್ವಾಹಕರು ಸಂಪನ್ಮೂಲಗಳ ಯೋಜನೆ ತಯಾರಿ ಮತ್ತು ಹಂಚಿಕೆ ಮಾಡುತ್ತಾರೆ. ಪ್ರಗತಿಯ ಮೇಲ್ವಿಚಾರಣೆ ಮಾಡುತ್ತಾರೆ ಮತ್ತು ಸಾಂಸ್ಥಿಕ ಮೂಲಸೌಕರ್ಯಗಳನ್ನು ಒದಗಿಸಲು ಕೆಲಸ ಮಾಡುತ್ತಾ ಸುಸ್ಥಿರ ಶಾಲಾಭಿವೃದ್ಧಿಯ ಹಾದಿಯಲ್ಲಿ ಇರಬಹುದಾದ ಅಡೆತಡೆಗಳನ್ನು ನಿವಾರಿಸುತ್ತಾರೆ.

16 ಶಾಲಾ ಆಡಳಿತ ಸಮಿತಿಯು ಶಾಲೆಗಾಗಿ ನಿರ್ಧಾರಗಳನ್ನು ತೆಗೆದುಕೊಳ್ಳುವಾಗ ಜನಸಮೂಹದಲ್ಲಿರುವ ತನ್ನದೇ ಆದ ವೈವಿಧ್ಯಕ್ಕೆ ಸಂಬಂಧಿಸಿದ ಕಾಳಜಿಗಳ ಕುರಿತು ಸೂಕ್ಷ್ಮತೆ ಹೊಂದಿರುವುದನ್ನು ಖಾತರಿಪಡಿಸುತ್ತದೆ.

17 ಶೈಕ್ಷಣಿಕ ಕಾರ್ಯನಿರ್ವಾಹಕರು ಪೋಷಕರ ಸಂಘಗಳ ಅಭಿವೃದ್ಧಿಗೆ ಪ್ರೋತ್ಸಾಹ ನೀಡುತ್ತಾರೆ ಮತ್ತು ತಮ್ಮ ಮಕ್ಕಳ ಕಲಿಕೆಯನ್ನು ಹೆಚ್ಚಿಸಲು ಕಾರ್ಯಕ್ರಮಗಳನ್ನು ಯೋಜಿಸುವಲ್ಲಿ ಅವರು ಕಾರ್ಯಪ್ರವೃತ್ತರಾಗುವಂತೆ ಅವರನ್ನು ತೊಡಗಿಸಿಕೊಳ್ಳುತ್ತಾರೆ.

18 ಮಕ್ಕಳಲ್ಲಿರುವ ವ್ಯಕ್ತಿಗತ ಭಿನ್ನತೆಗಳು ಮತ್ತು ಅವರ ಸನ್ನಿವೇಶಗಳನ್ನು ಸಂಪೂರ್ಣವಾಗಿ ಗಮನದಲ್ಲಿರಿಸಿಕೊಂಡು ಶೈಕ್ಷಣಿಕ ನೀತಿಗಳು ಮತ್ತು ಹಣಕಾಸು ವ್ಯವಸ್ಥೆಗಳನ್ನು ರೂಪಿಸುವುದನ್ನು ಖಾತರಿಪಡಿಸುವ ಮೂಲಕ ಶೈಕ್ಷಣಿಕ ಕಾರ್ಯನಿರ್ವಾಹಕರು ಸಮನ್ವಯ ಶಾಲೆಗಳು ಅಭಿವೃದ್ಧಿ ಸಾಧಿಸುವಂತೆ ಮಾಡುವರು.

19 ಶೈಕ್ಷಣಿಕ ಕಾರ್ಯನಿರ್ವಾಹಕರು ಅನೇಕ ಮೂಲಗಳೊಂದಿಗೆ ಮತ್ತು ಭಾಗೀದಾರರೊಂದಿಗೆ ಸಹಯೋಗವನ್ನು ಸಾಧಿಸಿ ಶಾಲಾ ಸಾಧನೆಯನ್ನು ಗರಿಷ್ಠಗೊಳಿಸಲು ಮುಂಗಡ ಪತ್ರದಲ್ಲಿ ನಿಗದಿಪಡಿಸಲಾದ ಹಣಕಾಸನ್ನು ಸೂಕ್ತವಾಗಿ ಬಳಸುವರು.

20 ಶೈಕ್ಷಣಿಕ ಕಾರ್ಯನಿರ್ವಾಹಕರು ಪ್ರತಿ ವಿದ್ಯಾರ್ಥಿಯ ಬೆಳವಣಿಗೆಯ ಅವಶ್ಯಕತೆಗಳನ್ನು ಪೂರೈಸಲು ಮತ್ತು ಕಲಿಕೆಯ ಶೈಲಿಗೆ ತಕ್ಕಂತೆ ಕಲಿಕಾ ಪ್ರಕ್ರಿಯೆಗಳನ್ನು ಸುಗಮಗೊಳಿಸಲು ಅಗತ್ಯವಾಗಿರುವ ಸಮಯ ಮತ್ತು ತಾಂತ್ರಿಕ ಸಂಪನ್ಮೂಲಗಳ ಸೃಜನಶೀಲ ವೇಳಾಪಟ್ಟಿ ಸಂಯೋಜಿಸುವುದನ್ನು ಪ್ರೋತ್ಸಾಹಿಸುವರು.

21 ಶಾಲೆಗಾಗಿ ತಯಾರಿ ಮಾಡಲಾಗುವ ಯೋಜನೆಯು ವಾಸ್ತವಿಕತೆಯಿಂದ ಕೂಡಿದ್ದು, ಸಂಪನ್ಮೂಲಗಳು, ಲಭ್ಯವಿರುವ ಸಮಯ ಮತ್ತು ಚಟುವಟಿಕೆಗಳನ್ನು ಕೈಗೊಳ್ಳುವ ಸಲುವಾಗಿ ಜವಾಬ್ದಾರಿಯುತರಾಗಿ ಮುಂದೆ ಬರುವ ಜನರು ಇವೆಲ್ಲವುಗಳನ್ನು ಇದು ಆಧರಿಸಿದೆ.

22 ಸಿದ್ಧಪಡಿಸಲಾದ ಯೋಜನೆಗಳನ್ನು ಶಾಲೆಯ ಸುಧಾರಣೆಗಾಗಿ ಮತ್ತು ತರಗತಿ ಪ್ರಕ್ರಿಯೆಯ ಮೇಲೆ ಪರಿಣಾಮ ಬೀರುವುದಕ್ಕಾಗಿ ಕಾಲಕಾಲಕ್ಕೆ ಮೌಲ್ಯಮಾಪನ ಮಾಡಲಾಗುತ್ತಿದೆ.

23 ಶಾಲಾ ಯೋಜನೆಯು ವಿಶೇಷ ಅಗತ್ಯವುಳ್ಳ ಮಕ್ಕಳು, ಸಾಮಾಜಿಕವಾಗಿ ಅನನುಕೂಲ ಸ್ಥಿತಿಯಲ್ಲಿರುವ ಗುಂಪುಗಳಿಗೆ ಸೇರಿದ ಮಕ್ಕಳು ಇತ್ಯಾದಿಗಳನ್ನು ಒಳಗೊಂಡ ಜನಸಮೂಹದ ವೈವಿಧ್ಯತೆಯನ್ನು ಗಣನೆಗೆ ತೆಗೆದುಕೊಳ್ಳುತ್ತದೆ.

24 ವಿಶೇಷ ಅಗತ್ಯತೆಗಳಿರುವ ಮಕ್ಕಳು ಮಾಧ್ಯಮಿಕ ಶಾಲಾ ನಂತರದಲ್ಲಿ ತಮ್ಮ ಶಿಕ್ಷಣವನ್ನು ಯಶಸ್ವಿಯಾಗಿ ಮುಂದುವರೆಸಲು ಶೈಕ್ಷಣಿಕ ಕಾರ್ಯನಿರ್ವಾಹಕರು ಕ್ರಮ ಕೈಗೊಳ್ಳುವರು.

25 ವಿಶೇಷ ಅಗತ್ಯತೆಗಳಿರುವ ಮಕ್ಕಳೂ ಸೇರಿದಂತೆ ಎಲ್ಲ ಮಕ್ಕಳಿಗೆ ಕ್ರೀಡೆ ಮತ್ತು ದೈಹಿಕ ಶಿಕ್ಷಣಕ್ಕಾಗಿ ಅವಕಾಶಗಳನ್ನು ಕಲ್ಪಿಸಲು ಗಂಭೀರ ಪ್ರಯತ್ನಗಳನ್ನು ಪ್ರಾರಂಭಿಸಲಾಗಿದೆ.

26 ವಿಶೇಷ ಅಗತ್ಯತೆಯುಳ್ಳ ಮಕ್ಕಳನ್ನು ಸಮನ್ವಯಗೊಳಿಸಲಾಗಿರುವ ತರಗತಿಯ ಗಾತ್ರವನ್ನು ಸೂಕ್ತ ರೀತಿಯಲ್ಲಿ ಸರಿಹೊಂದಿಸಲು ಪ್ರಯತ್ನಗಳನ್ನು ಮಾಡಲಾಗುವುದು.

27 ಶಾಲಾ ಕಾರ್ಯನಿರ್ವಾಹಕರು ಜಿಲ್ಲಾ/ರಾಜ್ಯ ಅಥವಾ ಇತರ ಮಟ್ಟದ ಅಧಿಕಾರಿಗಳ ಸಹಯೋಗದಲ್ಲಿ ಅವಶ್ಯಕತೆಗಳನ್ನು ಆಧರಿಸಿದ ವಾರ್ಷಿಕ ಆಯವ್ಯಯ ವರದಿಯನ್ನು ತಯಾರಿಸಲು ಸಹಕರಿಸುವರು. ಇದು ಶಾಲೆಯ ಪ್ರತಿ ಮಗುವಿನ ವೈವಿಧ್ಯಮಯ ಅಗತ್ಯವನ್ನು ಕುರಿತ ಸೂಕ್ಷ್ಮ ದೃಷ್ಟಿಯನ್ನು ಹೊಂದಿರುತ್ತದೆ.

28 ವಿಶೇಷ ಅಗತ್ಯತೆಯುಳ್ಳ ಮಕ್ಕಳು ಸೇರಿದಂತೆ ಮಕ್ಕಳು ಶಾಲಾ ಪ್ರಕ್ರಿಯೆಯಲ್ಲಿ ತೋರುವ ಕ್ಷಮತೆಯ ಆಧಾರದ ಮೇಲೆ ಶಾಲೆಗೆ ಹಣಕಾಸಿನ ನೆರವು ಮತ್ತು ಸಂಪನ್ಮೂಲ ಹಂಚಿಕೆಗಳನ್ನು ಆಯಾ ಸಮಯಕ್ಕೆ ನಿಯಮಿತವಾಗಿ ಸರಿಹೊಂದಿಸಲಾಗುತ್ತದೆ.

29 ಶೈಕ್ಷಣಿಕ ಕಾರ್ಯನಿರ್ವಾಹಕರು ಮುಂಗಡಪತ್ರದನ್ವಯ ಆಯವ್ಯಯದಲ್ಲಿ ಮೀಸಲಿರಿಸಿದ ಹಣಕಾಸನ್ನು ಗರಿಷ್ಠ ಸಾಧನೆಯನ್ನು ತೋರುವ ನಿಟ್ಟಿನಲ್ಲಿ ಸೂಕ್ತ ರೀತಿಯಲ್ಲಿ ಬಳಸಲು ವಿವಿಧ ಮೂಲಗಳೊಂದಿಗೆ ಮತ್ತು ಎಲ್ಲ ಭಾಗೀದಾರರೊಂದಿಗೆ ಪರಸ್ಪರ ಅರ್ಥಪೂರ್ಣ ಸಹಯೋಗವನ್ನು ಸಾಧಿಸುತ್ತಾರೆ.

30 ಶೈಕ್ಷಣಿಕ ಕಾರ್ಯನಿರ್ವಾಹಕರು ಶಾಲೆಯ ದತ್ತಾಂಶ /ಸಮಸ್ಯೆಗಳನ್ನು ಪರಿಶೀಲಿಸಲು ಶಾಲಾ ಸಿಬ್ಬಂದಿ ಮತ್ತು ಸಮುದಾಯದ ಸದಸ್ಯರೊಂದಿಗೆ ನಿಯಮಿತವಾಗಿ ಸಭೆಗಳನ್ನು ನಡೆಸುತ್ತಾರೆ ಮತ್ತು ಕಾಳಜಿವಹಿಸಬೇಕಾದ ಅಂಶಗಳ ಕುರಿತು ಪರಿಹಾರ ಕ್ರಮಕ್ಕೆ ಮುಂದಾಗುತ್ತಾರೆ.

31 ಶಾಲಾಭಿವೃದ್ಧಿಗಾಗಿ ಯೋಜನೆ ರೂಪಿಸುವ ಶೈಕ್ಷಣಿಕ ಕಾರ್ಯನಿರ್ವಾಹಕರು ಹೊಸ ಆಲೋಚನೆಗಳಿಗಾಗಿ ತಮ್ಮ ಸಿಬ್ಬಂದಿ ಶಾಲಾ ವ್ಯಾಪ್ತಿಯಲ್ಲಿ ನಡೆಸಿದ ಕ್ರಿಯಾ ಸಂಶೋಧನೆಯಿಂದ ಮಾರ್ಗದರ್ಶನ ಪಡೆಯುತ್ತಾರೆ.

32 ಶಾಲಾ ಕಾರ್ಯನಿರ್ವಾಹಕರು ತಮ್ಮ ಶಾಲೆಯಲ್ಲಿರುವ ವಿಶೇಷ ಅಗತ್ಯತೆಯುಳ್ಳ ಮಕ್ಕಳ ಅವಶ್ಯಕತೆಗಳು ಸೇರಿದಂತೆ ತಮ್ಮ ಶಾಲೆಗೆ ಅಗತ್ಯವಾಗಿರುವ ಧನಸಹಾಯ ಮತ್ತು ಇತರ ಸಂಪನ್ಮೂಲದ ಅವಶ್ಯಕತೆಗಳನ್ನು ತಮ್ಮ ವಾರ್ಷಿಕ ಯೋಜನೆಗಳಲ್ಲಿ (ಸರ್ವಶಿಕ್ಷಣ ಅಭಿಯಾನ ಅಥವಾ ಇನ್ನಿತರ ಯೋಜನೆಗಳ ಅಡಿಯಲ್ಲಿ) ಸೇರಿಸುವಂತೆ ತಾಲ್ಲೂಕಾ/ಜಿಲ್ಲಾ/ರಾಜ್ಯ ಮಟ್ಟದ ಕಾರ್ಯನಿರ್ವಹಣಾಧಿಕಾರಿಗಳಿಗೆ ತಿಳಿಸುತ್ತಾರೆ.

## ಸಿಬ್ಬಂದಿ ಸಾಮರ್ಥ್ಯಾಭಿವೃದ್ಧಿ

33 ವೃತ್ತಿ ಪ್ರವೇಶದ ಹಂತದಲ್ಲಿರುವ ಶಿಕ್ಷಕರು ಮತ್ತು ಸೇವಾನಿರತ ಶಿಕ್ಷಕರ ವಿಷಯ ಜ್ಞಾನ ಮತ್ತು ಉತ್ತಮ ಅಭ್ಯಾಸಗಳನ್ನು ನವೀಕರಿಸುವುದನ್ನು ಒಳಗೊಂಡ ವೃತ್ತಿಪರ ಅಭಿವೃದ್ಧಿ ಕಾರ್ಯಕ್ರಮಗಳನ್ನು ಆಯೋಜಿಸುವ ಮೂಲಕ ಶೈಕ್ಷಣಿಕ ಕಾರ್ಯನಿರ್ವಾಹಕರು ಶಿಕ್ಷಕರ ವೃತ್ತಿಪರ ಬೆಳವಣಿಗೆಯನ್ನು ಬೆಂಬಲಿಸುತ್ತಾರೆ.

34 ವಿದ್ಯಾರ್ಥಿಗಳ ಸಾಧನೆಗಳು ಮತ್ತು ಕಲಿಕಾ ಅಭಿವೃದ್ಧಿಯ ಮೇಲೆ ಶಿಕ್ಷಕರ ವೃತ್ತಿಪರ ಬೆಳವಣಿಗೆಯ ಪರಿಣಾಮವನ್ನು ಶೈಕ್ಷಣಿಕ ಕಾರ್ಯನಿರ್ವಾಹಕರು ನಿರಂತರವಾಗಿ ಮೇಲ್ವಿಚಾರಣೆ ಮಾಡುತ್ತಾರೆ.

35 ಶೈಕ್ಷಣಿಕ ಕಾರ್ಯನಿರ್ವಾಹಕರು ಶಿಕ್ಷಕರ ವೃತ್ತಿಪರ ಅಭಿವೃದ್ಧಿಗಾಗಿ ನಿಯಮಿತವಾಗಿ ಹೊರಗಿನಿಂದ ಸಂಪನ್ಮೂಲ ಬೆಂಬಲವನ್ನು ಅಪೇಕ್ಷಿಸುತ್ತಾರೆ.

36 ವಿದ್ಯಾರ್ಥಿಗಳ ಕಲಿಕೆಯನ್ನು ಉತ್ತೇಜಿಸುವುದಕ್ಕಾಗಿ ಶಿಕ್ಷಕರು ಪರಸ್ಪರ ಸಹಕಾರವನ್ನು ಪಡೆದು ಕೆಲಸ ಮಾಡುವಂತೆ ಶಿಕ್ಷಕರ ನಡುವೆ ಸಹಯೋಗದ ಸಂಸ್ಕೃತಿಯನ್ನು ಪ್ರೋತ್ಸಾಹಿಸಲಾಗಿದೆ.

37 ಶಾಲೆಯ ಕಾರ್ಯಕ್ಷಮತೆ ಮತ್ತು ಶಾಲೆಯ ದೂರದೃಷ್ಟಿಯನ್ನು ಪರಿಷ್ಕರಿಸಲು ಶಿಕ್ಷಕರು ತಮ್ಮ ಶಾಲೆಯಲ್ಲಿ ಪರಸ್ಪರರೊಂದಿಗೆ ಮತ್ತು ಇತರ ಶಾಲೆಗಳ ಶಿಕ್ಷಕರೊಂದಿಗೆ ಸಹಕರಿಸುತ್ತಾರೆ.

38 ತರಗತಿಯಲ್ಲಿನ ಪ್ರತಿ ಮಗುವಿನ ಪ್ರಾಥಮಿಕ ಜವಾಬ್ದಾರಿಯನ್ನು ತೆಗೆದುಕೊಳ್ಳುವಂತೆ ಆಯಾ ತರಗತಿಯ ಸಾಮಾನ್ಯ ಶಿಕ್ಷಕರನ್ನು ಶೈಕ್ಷಣಿಕ ಕಾರ್ಯನಿರ್ವಾಹಕರು ಪ್ರೋತ್ಸಾಹಿಸುತ್ತಾರೆ ಮತ್ತು ಎಲ್ಲ ಮಕ್ಕಳು ಹೆಚ್ಚಿನ ಸಾಧನೆ ಮಾಡುವುದನ್ನು ನಿರೀಕ್ಷಿಸುತ್ತಾರೆ.

39 ಸಮನ್ವಯ ತರಗತಿಗಳ ಅವಶ್ಯಕತೆಗಳಿಗೆ ಅನುಗುಣವಾಗಿ ನವೀನ ಅಭ್ಯಾಸಗಳು ಮತ್ತು ಹೊಸ ಕಲಿಕಾಬೋಧನಾ ಸಾಮಗ್ರಿಗಳನ್ನು ಅಭಿವೃದ್ಧಿಪಡಿಸಲು ಶೈಕ್ಷಣಿಕ ಕಾರ್ಯನಿರ್ವಾಹಕರು ಶಿಕ್ಷಕರನ್ನು ಪ್ರೋತ್ಸಾಹಿಸುವರು.

40 ಶಿಕ್ಷಕರೊಂದಿಗೆ ಉತ್ತಮ ಬಾಂಧವ್ಯವನ್ನು ನೆಲೆಗೊಳಿಸಲು ಶೈಕ್ಷಣಿಕ ಕಾರ್ಯನಿರ್ವಾಹಕರು ಶ್ರಮಿಸುವರು.

41 ಶೈಕ್ಷಣಿಕ ನಿರ್ವಾಹಕರು ತರಬೇತಿ ಶಿಬಿರಗಳು ಮತ್ತು ವಿಚಾರ ಸಂಕಿರಣಗಳನ್ನು ಆಯೋಜಿಸಲು ಹೊರಗಿನಿಂದ ಭಾಷಣಕಾರರು ಮತ್ತು ಸಂಶೋಧಕರನ್ನು ಆಹ್ವಾನಿಸುವರು.

42 ಶಿಕ್ಷಕರು ನಿರ್ಧಾರ ತೆಗೆದುಕೊಳ್ಳುವ ಪ್ರಕ್ರಿಯೆಯಲ್ಲಿ ಭಾಗವಹಿಸುವಂತೆ ಶೈಕ್ಷಣಿಕ ನಿರ್ವಾಹಕರು ಪ್ರೋತ್ಸಾಹಿಸುತ್ತಾರೆ.

43 ಶೈಕ್ಷಣಿಕ ನಿರ್ವಾಹಕರು ಮಕ್ಕಳ ಕಲಿಕೆಗಾಗಿ ಮಗು ಕೇಂದ್ರಿತ ಕಲಿಕಾ-ಬೋಧನಾ ಪ್ರಕ್ರಿಯೆಯ ಬಳಕೆಯನ್ನು ಪ್ರೋತ್ಸಾಹಿಸುತ್ತಾರೆ.

44 ತರಗತಿಗಳಲ್ಲಿ ತಂತ್ರಜ್ಞಾನವನ್ನು ಬಳಸಲು ಶಿಕ್ಷಕರಿಗೆ ಪ್ರೋತ್ಸಾಹ ನೀಡಲಾಗಿದೆ.

45 ಕಲಿಕಾ-ಬೋಧನಾ ಸಮಯವಲ್ಲದೆ, ವೈಯಕ್ತಿಕವಾಗಿ ಅಥವಾ ಸಾಮೂಹಿಕವಾಗಿ ಪಠ್ಯಕ್ರಮದ ಪೂರಕ ಸಾಮಗ್ರಿಗಳು, ಮತ್ತು ಕಲಿಕಾ ವಿಷಯಾಂಶಗಳಿಗಾಗಿ ಕೆಲಸ ಮಾಡಲು ಸಿಬ್ಬಂದಿಗೆ ಸೂಕ್ತ ಸಮಯ ದೊರೆಯುವಂತೆ ಮಾಡಲು ಕ್ರಮಗಳನ್ನು ಕೈಗೊಳ್ಳಲಾಗುವುದು.

46 ಶಿಕ್ಷಕರಿಗೆ ಹೆಚ್ಚಿನ ಹೊರೆಗಳಿರುವುದಿಲ್ಲ ಮತ್ತು ಅವಶ್ಯಕತೆಯಿದ್ದಲ್ಲಿ ಅವರು ವಿದ್ಯಾರ್ಥಿಗಳಿಗೆ ವಿಶೇಷ ಗಮನ ನೀಡಲು ಸಮಯ ತೆಗೆದುಕೊಳ್ಳುವರು.

47 ಪ್ರತಿ ವಿದ್ಯಾರ್ಥಿಯ ಕಲಿಕಾ ಗುರಿಗಳನ್ನು ಸಾಧಿಸಲು ಬೇಕಾಗಿರುವ ತರಬೇತಿ ಮತ್ತು ಪಠ್ಯ ಸಾಮಗ್ರಿಗಳು ಶಾಲಾ ಸಿಬ್ಬಂದಿಯ ಬಳಿಯಲ್ಲಿ ಲಭ್ಯ ಇರುವುದನ್ನು ಶೈಕ್ಷಣಿಕ ಕಾರ್ಯನಿರ್ವಾಹಕರು ಖಾತರಿಪಡಿಸಿಕೊಳ್ಳುವರು.

48 ವಿಶೇಷ ಶಿಕ್ಷಕರು ಶಾಲೆಯ ಪೂರ್ಣ ಪ್ರಮಾಣದ ಸದಸ್ಯರಾಗಿರುವರು.

## ಸಂಪನ್ಮೂಲಗಳು

49 ತರಗತಿಯಲ್ಲಿ ಎಲ್ಲ ವಿದ್ಯಾರ್ಥಿಗಳ ಒಳಗೊಳ್ಳುವಿಕೆಯನ್ನು ಬೆಂಬಲಿಸಲು ಮಾಹಿತಿ ತಂತ್ರಜ್ಞಾನ ಮತ್ತು ಸಹಾಯಕ ಸಾಧನ ಸಲಕರಣೆಗಳ ಬಳಕೆಗೆ ಪ್ರೋತ್ಸಾಹ ನೀಡಲಾಗಿದೆ.

50 ದೃಷ್ಟಿಯ ತೊಂದರೆಗಳಿರುವ ಮಕ್ಕಳಿಗಾಗಿ ಸಾಕಷ್ಟು ಸಂಖ್ಯೆಯಲ್ಲಿ ಶಾಲಾ ಗ್ರಂಥಾಲಯದಲ್ಲಿ ಬ್ರೈಲ್ ಲಿಪಿಯ ವ್ಯವಸ್ಥೆ ಮತ್ತು ಮಾತನಾಡುವ/ಡೈಸಿ ಪುಸ್ತಕಗಳು ಮಕ್ಕಳಿಗೆ ಸಿಗುವಂತೆ ನೋಡಿಕೊಳ್ಳಲಾಗಿದೆ.

51 ವಿಶೇಷ ಅಗತ್ಯತೆಯುಳ್ಳ ಮಕ್ಕಳು ಶಾಲೆಗೆ ಬರಲು ಯಾವುದೇ ತೊಂದರೆ ಉಂಟಾಗದಿರಲು ಅವರಿಗಾಗಿ ಸರಿಯಾದ ರಸ್ತೆ ಮತ್ತು ಸಮರ್ಪಕವಾದ ಸಾರಿಗೆಯ ವ್ಯವಸ್ಥೆಗಳಿವೆ.

52 ವಿದ್ಯಾರ್ಥಿಗಳ ಆರೋಗ್ಯ ಮತ್ತು ಸಾಮಾಜಿಕ ಸಮಸ್ಯೆಗಳನ್ನು ನಿಭಾಯಿಸಲು ಸೂಕ್ತವಾದ ಸೌಲಭ್ಯಗಳಿವೆ.

53 ಬುಡಕಟ್ಟು ಭಾಷೆಗಳೂ ಸೇರಿದಂತೆ ವಿವಿಧ ಭಾಷೆಗಳ ಕಲಿಕಾ-ಬೋಧನಾ/ಪೂರಕ ಸಾಮಗ್ರಿಗಳ ಸ್ವರೂಪದಲ್ಲಿ ಸಂಪನ್ಮೂಲ ಬೆಂಬಲವು ಶಾಲೆಯಲ್ಲಿ ಲಭ್ಯವಿದೆ.

54 ಬ್ರೈಲ್ ವ್ಯವಸ್ಥೆಯಲ್ಲಿ ಕಲಿಕೆ, ತರಬೇತಿ ಮತ್ತು ಚಲನೆಯ ಕೌಶಲಗಳು ಮತ್ತು ಸಂಜ್ಞಾ ಭಾಷೆಯ ಬೋಧನೆಯು ಶಾಲಾ ಕಾರ್ಯಕ್ರಮಗಳ ಪ್ರಮುಖ ಭಾಗವಾಗಿದೆ.

55 ಮಕ್ಕಳ ವಿಶೇಷ ಅಗತ್ಯಗಳನ್ನು ಪೂರೈಸಲು ವಿಶೇಷ ಸಿಬ್ಬಂದಿಗಳಾದ ವಾಕ್ ಶ್ರವಣ ಚಿಕಿತ್ಸಕರು, ಪ್ರಾಥಮಿಕ ಆರೋಗ್ಯ ಕಾರ್ಯಕರ್ತರು, ಶಾರೀರಿಕ ಚಲನೆಗೆ ನೆರವಾಗುವ ಚಿಕಿತ್ಸಕರು, ಮತ್ತು ವಿಶೇಷ ಶಿಕ್ಷಕರು ಇವರೆಲ್ಲರ ನಿಯೋಜನೆಗೆ ಅವಕಾಶಗಳು ಮುಂಗಡ ಪತ್ರದ ಪ್ರಮುಖ ಭಾಗವಾಗಿದೆ.

56 ಪ್ರತಿ ವಿದ್ಯಾರ್ಥಿಗೆ ಸಂಪನ್ಮೂಲದ ಬೆಂಬಲವನ್ನು ಒದಗಿಸುವುದಕ್ಕಾಗಿ ಶೈಕ್ಷಣಿಕ ಕಾರ್ಯನಿರ್ವಾಹಕರು ಹಲವು ಮೂಲಗಳ ಮೇಲೆ ಪ್ರಭಾವ ಬೀರಿ ನಿಧಿ ಸಂಗ್ರಹಿಸಲು ನಿರಂತರವಾಗಿ ಪ್ರಯತ್ನಿಸುವರು.

57 ಶಾಲೆಯು ತನ್ನ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಮಾಹಿತಿ ತಂತ್ರಜ್ಞಾನ ಮತ್ತು ಸಂವಹನ ತರಬೇತಿಯ ಜೊತೆಯಲ್ಲಿ ಇತರ ತಾಂತ್ರಿಕ ಬೆಂಬಲದ ಸೌಲಭ್ಯಗಳನ್ನು ಒದಗಿಸಿಕೊಡುತ್ತದೆ.

58 ಮಕ್ಕಳು ಶಾಲಾ ಆವರಣದೊಳಕ್ಕೆ ಪ್ರವೇಶಿಸಲು ಇರುವ ಅಡೆತಡೆಗಳನ್ನು ತೆಗೆದು ಹಾಕಿ, ಸರಾಗ ಪ್ರವೇಶಕ್ಕೆ ಅವಕಾಶ ಮಾಡಿಕೊಡುವಂತಹ ಭೌತಿಕ ಪರಿಸರವನ್ನು ಅಳವಡಿಸಿಕೊಳ್ಳಲು ಶಾಲೆಯು ತನ್ನ ಆಯವ್ಯಯದಲ್ಲಿ ಅವಕಾಶವನ್ನು ಕಲ್ಪಿಸುತ್ತದೆ.

## ಸಹಯೋಗ

59 ಶಾಲೆಯಲ್ಲಿ ಎಲ್ಲ ಮಕ್ಕಳ ಭಾಗವಹಿಸುವಿಕೆಯನ್ನು ಪ್ರೋತ್ಸಾಹಿಸುವ ನಿಟ್ಟಿನಲ್ಲಿ ಉನ್ನತ ಶಿಕ್ಷಣ ಸಂಸ್ಥೆಗಳು, ವಿಶೇಷ ಶಾಲೆಗಳು, ಸ್ವಯಂ ಸೇವಾ ಸಂಸ್ಥೆಗಳು ಮತ್ತು ಸರ್ಕಾರಿ ಸಂಸ್ಥೆಗಳೊಂದಿಗೆ ಶೈಕ್ಷಣಿಕ ಕಾರ್ಯನಿರ್ವಾಹಕರು ಸಹಭಾಗಿತ್ವ ಬೆಳೆಸುವರು.

60 ವಿಶೇಷ ಅಗತ್ಯತೆಯುಳ್ಳ ಮಕ್ಕಳ ಪರವಾಗಿ ಸಕಾರಾತ್ಮಕ ಧೋರಣೆಗಳನ್ನು ಬೆಳೆಸುವಲ್ಲಿ ಮತ್ತು ಎಲ್ಲ ಬಗೆಯ ಏಕರೂಪತೆಗಳು/ಪೂರ್ವಾಗ್ರಹಗಳು/ತಾರತಮ್ಯ ಇವುಗಳನ್ನೆಲ್ಲ ತೊಡೆದುಹಾಕುವಲ್ಲಿ ಹೆಚ್ಚು ಜನರನ್ನು ಪರಿಣಾಮಕಾರಿಯಾಗಿ ತಲುಪಬಲ್ಲ ಮಾಧ್ಯಮದ ವ್ಯಾಪಕತೆಯನ್ನು ಶೈಕ್ಷಣಿಕ ಕಾರ್ಯ ನಿರ್ವಾಹಕರು ಬಳಸಿಕೊಳ್ಳುವರು.

61 ಕುಟುಂಬಗಳೊಂದಿಗೆ ಸಭೆಗಳನ್ನು ನಡೆಸುವಾಗ ಅವರು ಅದಕ್ಕಾಗಿ ಕೊಡಲು ಸಾಧ್ಯವಿರಬಹುದಾದ ಸಮಯ ಮತ್ತು ಸಾರಿಗೆಗೆ ಸಂಬಂಧಿಸಿದಂತೆ ಕುಟುಂಬದ ಆದ್ಯತೆಗಳು ಮತ್ತು ಅಗತ್ಯಗಳ ವ್ಯಾಪ್ತಿಯನ್ನು ಶೈಕ್ಷಣಿಕ ಕಾರ್ಯನಿರ್ವಾಹಕರು ಗಣನೆಗೆ ತೆಗೆದುಕೊಳ್ಳುವರು.

62 ಶೈಕ್ಷಣಿಕ ಕಾರ್ಯನಿರ್ವಾಹಕರು ಅಗತ್ಯವಿದ್ದಲ್ಲಿ ಮಗುವಿನೊಂದಿಗೆ ಅಥವಾ ಶಾಲೆಯಲ್ಲಿ ಕುಳಿತುಕೊಳ್ಳಲು ಪೋಷಕರಿಗೆ ಅನುಮತಿ ನೀಡುವರು.

63 ಅಂಗವಿಕಲ ಮಕ್ಕಳಿಗೆ ಸಂಬಂಧಿಸಿದ ಶಾಲಾ ಕಾರ್ಯಕ್ರಮಗಳ ವಿನ್ಯಾಸ ಮತ್ತು ಅನುಷ್ಠಾನಕ್ಕೆ ಸಂಬಂಧಿಸಿದಂತೆ ಈ ನಿಟ್ಟಿನಲ್ಲಿ ಶ್ರಮಿಸುತ್ತಿರುವ ಸಂಸ್ಥೆಗಳನ್ನು ಸಂಪರ್ಕಿಸಿ ಅವರೊಂದಿಗೆ ಸಮಾಲೋಚಿಸುವರು.

64 ಶೈಕ್ಷಣಿಕ ಕಾರ್ಯನಿರ್ವಾಹಕರು ಅಗತ್ಯವಿದ್ದಲ್ಲಿ ಸಮುದಾಯದಿಂದ ಸಂಪನ್ಮೂಲಗಳನ್ನು ಕ್ರೋಢೀಕರಣ ಮಾಡಲು ಪ್ರೋತ್ಸಾಹಿಸುವರು.

65 ಶೈಕ್ಷಣಿಕ ಅಧಿಕಾರಿಗಳು, ಆರೋಗ್ಯ, ಉದ್ಯೋಗ ಮತ್ತು ಸರ್ಕಾರೇತರ ವಲಯದಲ್ಲಿ ಜವಾಬ್ದಾರಿಯುತ ಸ್ಥಾನದಲ್ಲಿರುವವರ ನಡುವೆ ಸಮನ್ವಯತೆಯನ್ನು ಸಾಧಿಸುವುದನ್ನು ಶೈಕ್ಷಣಿಕ ಕಾರ್ಯನಿರ್ವಾಹಕರು ಬೆಂಬಲಿಸುವರು.

ಶಿಕ್ಷಕರು ಮತ್ತು ಶಿಕ್ಷಕರ ಪ್ರಶಿಕ್ಷಕರು

ಭಾರತದಂತಹ ಬಹುತ್ವ ಸಮಾಜದಲ್ಲಿ ಶಿಕ್ಷಕರ ಶಿಕ್ಷಣವು ಬೋಧಕ ಪಡೆಯನ್ನು ಹುಟ್ಟುಹಾಕುವಲ್ಲಿ ಮತ್ತು ಆರ್ಥಿಕ ಹಾಗೂ ಸಾಮಾಜಿಕ ಒಗ್ಗಟ್ಟನ್ನು ಬಲಪಡಿಸುವ ಮೂಲ ಆಧಾರಗಳಾದ ವೈಯಕ್ತಿಕ ಅವಕಾಶಗಳು ಮತ್ತು ಅಸ್ಮಿತೆಗಳು, ಪ್ರತಿಭೆಗಳನ್ನು ಬೆಳೆಸಲು ಬಹಳ ಪ್ರಮುಖ ಪಾತ್ರ ವಹಿಸುತ್ತದೆ.¬ ಶಿಕ್ಷಕರು ಶಾಲೆಗಳಲ್ಲಿ ಮತ್ತು ಸಮುದಾಯ ಆಧಾರಿತ ಕಾರ್ಯಕ್ರಮಗಳಲ್ಲಿ ಗುಣಮಟ್ಟದ ಶಿಕ್ಷಣವನ್ನು ಉತ್ತೇಜಿಸುವ ನಿಟ್ಟಿನಲ್ಲಿ ಮಾತ್ರ ಗಮನಾರ್ಹ ಪಾತ್ರ ವಹಿಸುವುದಿಲ್ಲ. ಬದಲಾಗಿ, ಅವರು ಬದಲಾವಣೆಯ ಪರ್ವದ ಪ್ರತಿಪಾದಕರೂ ಆಗಿರುತ್ತಾರೆ. ಅವರ ಸಕ್ರಿಯ ಪಾತ್ರ ಮತ್ತು ಸಹಭಾಗಿತ್ವ ಇಲ್ಲದೆ ಶಿಕ್ಷಣದ ಯಾವುದೇ ಸುಧಾರಣೆಯಲ್ಲಿ ಯಶಸ್ಸು ಕಾಣಲು ಸಾಧ್ಯವಿಲ್ಲ. ಶಿಕ್ಷಣದ ಎಲ್ಲಾ ಹಂತಗಳಲ್ಲಿಯೂ, ಶಿಕ್ಷಕರಿಗೆ ಮುಕ್ತ ಮತ್ತು ದೂರಶಿಕ್ಷಣ ಮಾದರಿಯ ತರಬೇತಿ, ಕಾಲಾನುಕ್ರಮದ ವೃತ್ತಿಪರ ಬೆಳವಣಿಗೆ ಮತ್ತು ಪ್ರೋತ್ಸಾಹಿಸಿ, ಬಲವರ್ಧನೆ ಮಾಡಬೇಕು. ಕಲಿಕಾ ವಾತಾವರಣಗಳಿಗೆ ಸಂಬಂಧಿಸಿ ಸ್ಥಳೀಯ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ನಿರ್ಣಯ ಕೈಗೊಳ್ಳುವ ಸಂದರ್ಭದಲ್ಲಿ ಪಾಲ್ಗೊಳ್ಳಲು ಶಿಕ್ಷಕರಿಗೆ ಅವಕಾಶ ಕಲ್ಪಿಸಬೇಕು. ಆದರೂ, ಶಿಕ್ಷಕರ ಶಿಕ್ಷಣದ ಬಹುತೇಕ ಕಾರ್ಯಕ್ರಮಗಳು ವಿದ್ಯಾರ್ಥಿ ಶಿಕ್ಷಕರಿಗೆ ತಮ್ಮ ಅನುಭವಗಳನ್ನು ಪ್ರತಿಬಿಂಬಿಸಲು ಮತ್ತು ಬದಲಾವಣೆಯ ಹರಿಕಾರರಾಗಲು ಕಲ್ಪಿಸುವ ಅವಕಾಶ ಬಹಳ ಕಡಿಮೆ ಇರುತ್ತದೆ. ಯಶಪಾಲ್ ಸಮಿತಿ ವರದಿ (1993) 'ಲರ್ನಿಂಗ್ ವಿತೌಟ್ ಬರ್ಡನ್' (Learning without Burden) ಪ್ರಕಾರ, "ತರಬೇತಿ ಪಡೆಯುವವರನ್ನು ಸ್ವಯಂ ಕಲಿಕೆ ಮತ್ತು ಸ್ವತಂತ್ರ ಚಿಂತನೆಗೆ ಹಚ್ಚುವ ದಿಸೆಯಲ್ಲಿ ಇಂತಹ ಕಾರ್ಯಕ್ರಮಗಳಿಗೆ ಪ್ರಾಶಸ್ತ್ಯ ಸಿಗಬೇಕು" (NCF 2005).

NCF ಎನ್.ಸಿ.ಎಫ್ 2005ರಲ್ಲಿ ಶಿಕ್ಷಕರ ಶಿಕ್ಷಣದ ದೃಷ್ಟಿಕೋನ ಈ ಕೆಳಗಿನಂತಿರಬೇಕು ಎಂದು ಹೇಳಲಾಗಿದೆ:

ಶಿಕ್ಷಕರ ಶಿಕ್ಷಣವು ಪ್ರಸ್ತುತ ಶಾಲಾ ವ್ಯವಸ್ಥೆಗೆ ತಕ್ಕುದಾಗಿ ಹೆಚ್ಚು ಸಂವೇದನಾಶೀಲವಾಗಬೇಕಾಗಿದೆ. ಅದಕ್ಕಾಗಿ, ಶಿಕ್ಷಕರನ್ನು ಈ ಕೆಳಗಿನ ಪಾತ್ರಗಳಿಗೆ ಹೊಂದುವಂತೆ ತಯಾರು ಮಾಡಬೇಕು.

• ಕಲಿಕೆ-ಬೋಧನೆಯ ಸನ್ನಿವೇಶದಲ್ಲಿ ವಿದ್ಯಾರ್ಥಿಗಳು (ಕಲಿಕಾರ್ಥಿಗಳು) ತಮ್ಮ ಪ್ರತಿಭೆಯನ್ನು ಅನ್ವೇಷಿಸಿ, ದೈಹಿಕ ಮತ್ತು ಬೌದ್ಧಿಕ ಸಾಮರ್ಥ್ಯವನ್ನು ಪರಿಪೂರ್ಣವಾಗಿ ಅರ್ಥ ಮಾಡಿಕೊಂಡು, ನಡತೆಯನ್ನು ಬೆಳೆಸಿಕೊಂಡು, ಸಾಮಾಜಿಕ ಮತ್ತು ಮಾನವೀಯ

ಮೌಲ್ಯಗಳನ್ನು ಒಳಗೊಂಡ ಜವಾಬ್ದಾರಿಯುತ ನಾಗರಿಕರಾಗಲು ಪ್ರೋತ್ಸಾಹಿಸುವ, ನೆರವಾಗುವ ಮತ್ತು ಮಾನವೀಯ ಸಹಾಯಕರಾಗಿರಬೇಕು.

- ಪಠ್ಯಕ್ರಮದ ನವೀಕರಣದಲ್ಲಿ ಪ್ರಜ್ಞಾಪೂರ್ವಕವಾಗಿ ಶ್ರಮವಹಿಸುವ ವ್ಯಕ್ತಿಗಳ ಗುಂಪಿನೊಂದಿಗೆ ಕ್ರಿಯಾಶೀಲವಾಗಿರಬೇಕು. ಆ ಮೂಲಕ ಕಲಿಕಾರ್ಥಿಗಳ ಸಾಮಾಜಿಕ ಮತ್ತು ವೈಯಕ್ತಿಕ ಅವಶ್ಯಕತೆಗಳನ್ನು ಬದಲಾಯಿಸಲು ಅದು ಪ್ರಸ್ತುತವೆನಿಸುತ್ತದೆ.

ಈ ದೃಷ್ಟಿಕೋನವನ್ನು ಅರ್ಥ ಮಾಡಿಕೊಳ್ಳಬೇಕಾದರೆ, ವಿದ್ಯಾರ್ಥಿ ಶಿಕ್ಷಕರಲ್ಲಿ ಬಲ ತುಂಬುವ ಈ ಕೆಳಗಿನ ಅಂಶಗಳನ್ನು ಶಿಕ್ಷಕರ ಶಿಕ್ಷಣವು ಒಳಗೊಳ್ಳಬೇಕಾಗುತ್ತದೆ:

- ಕಲಿಕೆಯು ಸಾಧ್ಯವಾಗಬಲ್ಲ ವಿಧಾನವನ್ನು ಅರ್ಥ ಮಾಡಿಕೊಳ್ಳಿ ಮತ್ತು ಕಲಿಕೆಗೆ ಅನುಕೂಲಕರವಾದ ಸಂಭಾವ್ಯ ಸನ್ನಿವೇಶಗಳನ್ನು ನಿರ್ಮಿಸಿ.
- ಜ್ಞಾನವೆಂಬುದು, ಪಠ್ಯಪುಸ್ತಕಗಳಲ್ಲಿ ಹುದುಗಿಸಿಟ್ಟ ಹೊರಗಿನ ವಾಸ್ತವ ಎಂಬುದರ ಬದಲಾಗಿ, ಅದು ಬೋಧನೆ- ಕಲಿಕೆ ಎಂಬ ಪರಿಕಲ್ಪನೆಯಡಿ ಕಟ್ಟಿರುವ ವೈಯಕ್ತಿಕ ಅನುಭವಗಳು ಎಂದು ಪರಿಭಾವಿಸಿ.
- ಅವರು ಕಾರ್ಯ ನಿರ್ವಹಿಸಬೇಕಾದ ಸಾಮಾಜಿಕ, ವೃತ್ತಿಪರ ಮತ್ತು ಆಡಳಿತಾತ್ಮಕ ಸಂದರ್ಭಗಳಲ್ಲಿ ಹೆಚ್ಚು ಸಂವೇದನಾಶೀಲರಾಗಿರುವಂತೆ ಮಾಡಿ.
- ಮೇಲೆ ಹೇಳಿದಂತೆ ವಾಸ್ತವ ಸನ್ನಿವೇಶಗಳನ್ನು ಅರ್ಥೈಸಿಕೊಳ್ಳುವುದಷ್ಟೇ ಅಲ್ಲದೆ, ಅಂತಹ ಸನ್ನಿವೇಶಗಳನ್ನು ನಿರ್ಮಿಸಿಕೊಳ್ಳಲು ಬೇಕಾದ ಸಮರ್ಪಕ ಸಾಮರ್ಥ್ಯವನ್ನೂ ಬೆಳೆಸಿಕೊಳ್ಳಲಿ.
- ಉತ್ತಮ ಜ್ಞಾನ ಮತ್ತು ಭಾಷಾ ಪ್ರಾವೀಣ್ಯ ಸಾಧಿಸಲಿ.
- ಅವರ ವೈಯಕ್ತಿಕ ನಿರೀಕ್ಷೆಗಳು, ಸ್ವಯಂ ಗ್ರಹಿಕೆ, ಯೋಗ್ಯತೆ ಮತ್ತು ಒಲವನ್ನು ಗುರುತಿಸಿ.
- ನಿರ್ದಿಷ್ಟ ಸಂದರ್ಭ ಸನ್ನಿವೇಶಗಳಲ್ಲಿ ಓರ್ವ ಶಿಕ್ಷಕರಾಗಿ ಅವರು ತಮ್ಮದೇ ಆದ ವೃತ್ತಿಪರ ನಿಷ್ಠೆಯನ್ನು ರೂಪಿಸಿಕೊಳ್ಳುವಂತೆ ಮಾಡಲು ಪ್ರಜ್ಞಾಪೂರ್ವಕವಾಗಿ ಪ್ರಯತ್ನಿಸಿ.
- ಮೌಲ್ಯಮಾಪನವನ್ನು ನಿರಂತರವಾದ ಶೈಕ್ಷಣಿಕ ಪ್ರಕ್ರಿಯೆಯಾಗಿ ಪರಿಭಾವಿಸಿ.
- ಕಲಾ ಶಿಕ್ಷಣದ ಮೂಲಕ ಮಕ್ಕಳಲ್ಲಿ ಕಲಾತ್ಮಕತೆ ಮತ್ತು ಸೌಂದರ್ಯದ ಪ್ರಜ್ಞೆಯನ್ನು ಬೆಳೆಸಿ.
- ಕಟ್ಟಕಡೆಯ ಮತ್ತು ಅಂಗವಿಕಲ ಮಕ್ಕಳನ್ನೂ ಒಳಗೊಂಡು ಎಲ್ಲಾ ಮಕ್ಕಳ ಕಲಿಕೆಯ ಅಗತ್ಯತೆಗೆ ಗಮನಕೊಡಿ.
- ಬದಲಾವಣೆಯ ದೃಷ್ಟಿಕೋನದೊಂದಿಗೆ, ಶಿಕ್ಷಕರ ವೃತ್ತಿಪರತೆಯನ್ನು ಬಲಪಡಿಸುವ ಉದ್ದೇಶದಿಂದ ಶಿಕ್ಷಕರ ಶಿಕ್ಷಣದ ಸಮಗ್ರ ಮಾದರಿಯನ್ನು ಅಳವಡಿಸುವಂತೆ ಒತ್ತಾಯಿಸುವುದು ಕಡ್ಡಾಯ.
- ಶೈಕ್ಷಣಿಕ, ವೈಯಕ್ತಿಕ ಮತ್ತು ಸಾಮಾಜಿಕ ಸಂದರ್ಭಗಳಿಗೆ ಸಂಬಂಧಿಸಿದ ದೈನಂದಿನ ಸಮಸ್ಯೆಗಳಿಗೆ ಪರಿಹಾರ ಕಂಡುಕೊಳ್ಳಲು ನಿರ್ದಿಷ್ಟ ರೀತಿಯ ಸಹಾಯದ ಅವಶ್ಯಕತೆ ಇರುವ ಮಕ್ಕಳಿಗೆ 'ಅನುಕೂಲಕ' (ಫೆಸಿಲಿಟೇಟರ್) ಮತ್ತು 'ಸಹಾಯಕ' (ಹೆಲ್ಪರ್) ಆಗಲು ಬೇಕಾಗಿರುವ ಆಪ್ತ ಸಮಾಲೋಚನೆಯ ಕೌಶಲ ಮತ್ತು ಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಿ.
- ಬೇರೆ ಬೇರೆ ವಿಷಯಗಳಲ್ಲಿ ಜ್ಞಾನ ಗಳಿಸಲು, ಮೌಲ್ಯಗಳನ್ನು ಬೆಳೆಸಲು ಮತ್ತು ಬಹು ಕೌಶಲಗಳನ್ನು ಕಲಿಯಲು ಶಿಕ್ಷಣಶಾಸ್ತ್ರೀಯ ಮಾಧ್ಯಮವನ್ನು ಹೇಗೆ ಫಲಪ್ರದವಾಗಿಸಬಹುದು ಎಂದು ತಿಳಿದುಕೊಳ್ಳಿ.

ಶಿಕ್ಷಕರ ತರಬೇತಿ

ಸೇವಾನಿರತ ತರಬೇತಿ ಕಾರ್ಯಕ್ರಮಗಳು

ವಿಶ್ವವಿದ್ಯಾಲಯಗಳು ಮತ್ತು ಶಿಕ್ಷಕರ ಸಂಘಟನೆಗಳು ಶಿಕ್ಷಕರಿಗಾಗಿ ಪ್ರತಿ ಐದು ವರ್ಷಗಳಿಗೊಮ್ಮೆ ಎರಡು ಅಥವಾ ಮೂರು ತಿಂಗಳ ಶಿಕ್ಷಣ ಕಾರ್ಯಕ್ರಮಗಳನ್ನು ಆಯೋಜಿಸಿ, ಪ್ರತಿ ಸೇವಾ ನಿರತ ಶಿಕ್ಷಕರೂ ಶಿಕ್ಷಣ ಪಡೆಯುವಂತೆ ಮಾಡಬೇಕು ಎಂದು ಶಿಕ್ಷಣ ಆಯೋಗವು (1964-66) ಶಿಫಾರಸು ಮಾಡಿತ್ತು. ಈ ಶಿಕ್ಷಣ ಕಾರ್ಯಕ್ರಮಗಳು ಸಂಶೋಧನೆ ಆಧಾರಿತ ಅಂಶಗಳನ್ನು ಒಳಗೊಂಡಿರಬೇಕು, ತರಬೇತಿ ಸಂಸ್ಥೆಗಳು 12 ತಿಂಗಳಲ್ಲೂ ತರಬೇತಿಗಳನ್ನು ನಡೆಸುವಂತಿದ್ದು, ಪುನಶ್ಚೇತನ ಕಾರ್ಯಕ್ರಮಗಳು, ವಿಚಾರ ಸಂಕಿರಣಗಳು, ಕಾರ್ಯಾಗಾರಗಳು ಮತ್ತು ಬೇಸಿಗೆ ಕಾರ್ಯಕ್ರಮಗಳನ್ನು ಆಯೋಜಿಸುವಂತಿರಬೇಕು ಎಂದೂ ತಿಳಿಸಿತ್ತು.
ಶಿಕ್ಷಕರ ರಾಷ್ಟ್ರೀಯ ಆಯೋಗದ ವರದಿಯಲ್ಲಿ (1983-85), ಶಿಕ್ಷಕರ ಕಲಿಕಾ ಕೇಂದ್ರಗಳ ಕಲ್ಪನೆಯನ್ನು ಪ್ರಸ್ತಾಪಿಸಲಾಗಿತ್ತು. ಈ ಕೇಂದ್ರಗಳು ಸಮಾಗಮದ ಸ್ಥಳಗಳಾಗಿಯೂ, ಪ್ರತಿಭೆಗಳನ್ನು ಒಗ್ಗೂಡಿಸಿ, ಶಿಕ್ಷಕರು ತಮ್ಮ ಬೋಧನೆಯ ಅನುಭವಗಳನ್ನು ಹಂಚಿಕೊಳ್ಳುವ ವೇದಿಕೆಗಳಾಗಿಯೂ ಪಾತ್ರ ನಿರ್ವಹಿಸಬೇಕು, ಶಿಕ್ಷಕರು ಅಧ್ಯಯನ ರಜೆಯನ್ನು ಬಳಸಿಕೊಂಡು ಈ ಕಲಿಕಾ ಕೇಂದ್ರಗಳಿಗೆ ಭೇಟಿ ನೀಡಬಹುದು ಎಂದೂ ವರದಿಯಲ್ಲಿ ಸಲಹೆ ನೀಡಲಾಗಿತ್ತು. ಎನ್.ಪಿ.ಇ (1986) ಸೇವಾ ನಿರತ ಮತ್ತು ಸೇವಾಪೂರ್ವ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳು ನಿರಂತರವಾಗಿರಬೇಕು, ಜಿಲ್ಲಾ ಶಿಕ್ಷಣ ಮತ್ತು ತರಬೇತಿ ಸಂಸ್ಥೆಗಳ (ಡಯಟ್) ಸ್ಥಾಪನೆ, ತರಬೇತಿ ಕಾಲೇಜುಗಳನ್ನು ಶಿಕ್ಷಕರ ತರಬೇತಿ ಕಾಲೇಜುಗಳು (ಸಿಟಿಇಗಳು) ಎಂದು ಮೇಲ್ದರ್ಜೆಗೇರಿಸುವುದು ಮತ್ತು 50 ಮುಂದುವರಿದ ಶಿಕ್ಷಣ ಅಧ್ಯಯನ ಸಂಸ್ಥೆಗಳ (ಐಎಎಸ್ಇ) ಸ್ಥಾಪನೆ ಹಾಗೂ ರಾಜ್ಯ ಶೈಕ್ಷಣಿಕ ಸಂಶೋಧನೆ ಮತ್ತು ತರಬೇತಿ ಮಂಡಳಿಗಳನ್ನು (ಎಸ್‌ಸಿಇಆರ್‌ಟಿ) ಬಲವರ್ಧನೆಗೊಳಿಸುವ ಅವಶ್ಯಕತೆಯ ಬಗ್ಗೆಯೂ ಎನ್‌ಪಿಇ ತಿಳಿಸಿತ್ತು. ಆಚಾರ್ಯ ರಾಮಮೂರ್ತಿ ಪರಿಶೀಲನಾ ಸಮಿತಿ (1990) ಕೂಡಾ, ಸೇವಾ ನಿರತ ಕಾರ್ಯಕ್ರಮಗಳು ಮತ್ತು ಪುನಶ್ಚೇತನಾ ಕಾರ್ಯಕ್ರಮಗಳು ಶಿಕ್ಷಕರ ನಿರ್ದಿಷ್ಟ ಅವಶ್ಯಕತೆಗಳಿಗೆ ಸಂಬಂಧಿಸಿದಂತಿರಬೇಕು ಹಾಗೂ ಇವುಗಳ ಮೌಲ್ಯಮಾಪನ ಮತ್ತು ಮರುಪರಿಶೀಲನಾ ಕಾರ್ಯಕ್ರಮಗಳೂ ಈ ಯೋಜನೆಯ ಭಾಗವಾಗಿರಬೇಕು ಎಂದು ಶಿಫಾರಸು ಮಾಡಿತ್ತು. ಶಾಲೆಯಲ್ಲಿ ಮಕ್ಕಳ ಸಮಸ್ಯೆಗಳು ವಿಶೇಷ ಅಗತ್ಯಗಳು, ಭಾಷೆ, ಕುಟುಂಬದ ಆದಾಯ, ಸಾಂಸ್ಕೃತಿಕ ಹಿನ್ನೆಲೆ, ಲಿಂಗ ಅಥವಾ ಜನಾಂಗೀಯ ಮೂಲ ಮುಂತಾದ ನಾನಾ ಕಾರಣಗಳಿಗೆ ಸಂಬಂಧಿಸಿದ್ದಾಗಿರಬಹುದು. ಸಮನ್ವಯ ತರಗತಿಗಳನ್ನು ನಿರ್ವಹಿಸಲು ಶಿಕ್ಷಕರಿಗೆ ತರಬೇತಿಯ ಅವಶ್ಯಕತೆ ಇದ್ದು, ಬಹು ದರ್ಜೆಯ ಮತ್ತು ಬಹು ಹಂತದ ವರ್ಗಗಳನ್ನು ನಿರ್ವಹಿಸಿ ಮತ್ತು ಸಮನ್ವಯ ತರಗತಿಗಳನ್ನು ಆಯೋಜಿಸಿ ಅನುಭವವಿರುವವರೇ ನಡೆಸಿಕೊಡಬೇಕು. ಸೇವಾ ನಿರತ ಕಾರ್ಯಕ್ರಮಗಳು, ವಿಶೇಷವಾಗಿ ಕಡಿಮೆ ಅನುಭವವಿರುವ ನಿರ್ದಿಷ್ಟ ಶೈಕ್ಷಣಿಕ ಅವಶ್ಯಕತೆಗಳಿಗೆ ಅನ್ವಯಿಸಬಹುದಾದ ಮಾಹಿತಿಯನ್ನು ಒದಗಿಸುವುದಿಲ್ಲ. ಇದರ ಬದಲಾಗಿ ಇನ್ನಷ್ಟು ಆಳವಾಗಿ ತಿಳಿದುಕೊಳ್ಳಬೇಕು ಎಂದು ಉತ್ತೇಜಿಸುತ್ತದೆ. ಭಾರತೀಯ ಪುನಶ್ಚೇತನಾ ಮಂಡಳಿ (ಆರ್.ಸಿ.ಐ) ದೂರ ಶಿಕ್ಷಣ ಮಾದರಿಯಲ್ಲಿ ಹಮ್ಮಿಕೊಳ್ಳುವ ಅಂಗವೈಕಲ್ಯ ಕುರಿತ ಬುನಾದಿ ಕೋರ್ಸ್ ಇದಕ್ಕೆ ಉತ್ತಮ ನಿದರ್ಶನ. ಹೀಗೆ, ವೈಜ್ಞಾನಿಕ ಮತ್ತು ಶೈಕ್ಷಣಿಕ ಜ್ಞಾನದ ನಡುವೆ ನಂಟು ತಪ್ಪಿಹೋಗಿರುವುದನ್ನು ಸರಿಮಾಡಬೇಕಾದರೆ, ಶಿಕ್ಷಕರು ಶಾಲಾ ಮಟ್ಟದಲ್ಲಿಯೇ ಕೈಗೊಳ್ಳುವ ವಿಚಾರಣೆ ಮತ್ತು ಮಗು ಶಾಲೆಯಲ್ಲಿ ಹೇಗೆ ಕಲಿಯುತ್ತಿದೆ ಎಂಬುದನ್ನು ಖುದ್ದಾಗಿ ತನಿಖೆ ಮಾಡಿದಾಗಲೇ ಈ ಎರಡರ ನಡುವಿನ ನಂಟನ್ನು ಪುನಃ ಸ್ಥಾಪಿಸಲು ಸಾಧ್ಯ. ಹೀಗೆ ಮಾಡಿ ಎಂದು ಸುಮ್ಮನೆ ಹೇಳುವುದಕ್ಕಿಂತ, ಸಮನ್ವಯ ತರಗತಿಗಳಲ್ಲಿನ ಶಿಕ್ಷಕರ ಅನುಭವವನ್ನು ಹೇಳಿಸುವುದು, ಅಂತಹ ಸನ್ನಿವೇಶಗಳನ್ನು ಬಿಂಬಿಸುವ ಚಲನಚಿತ್ರಗಳ ಪ್ರದರ್ಶನವನ್ನು ಶಿಕ್ಷಕರ ಕಲಿಕಾ ಕಾರ್ಯಗಳಲ್ಲಿ ಏರ್ಪಡಿಸುವ ಮೂಲಕ, ಶಿಕ್ಷಕರ ಆತ್ಮವಿಶ್ವಾಸದ ಕೊರತೆಯಿಂದ ಹೊರತರಬಹುದು. ಅಲ್ಲದೆ, ಈಗ ಅಳವಡಿಸಿಕೊಳ್ಳಲಾಗಿರುವ ಶಿಕ್ಷಕರ ತರಬೇತಿ ಕಾರ್ಯಕ್ರಮಗಳು ಬರಿಯ ಉಪನ್ಯಾಸಕ್ಕೆ ಸೀಮಿತವಾಗಿದ್ದು, ತರಬೇತಿ ಪಡೆಯುವವರು

ಕ್ರಿಯಾಶೀಲವಾಗಿ ಪಾಲ್ಗೊಳ್ಳಲು ಕಡಿಮೆ ಅವಕಾಶವಿರುತ್ತದೆ. ಆತ್ಮಾವಲೋಕನವನ್ನು ಇಂತಹ ಕಾರ್ಯಕ್ರಮಗಳ ಪ್ರಮುಖ ಅಂಶವಾಗಿ ಪರಿಗಣಿಸಬೇಕಾಗುತ್ತದೆ.

ಸಾಮಾನ್ಯ ಶಾಲೆಗಳ ಶಿಕ್ಷಕರು ಸಮನ್ವಯ ಶಿಕ್ಷಣದಲ್ಲಿ ಪರಿಣಾಮಕಾರಿಯಾಗಿ ಕೆಲಸ ಮಾಡಬೇಕಾದರೆ ಅವರನ್ನು ಸೇವಾ ನಿರತ ಮತ್ತು ಸೇವಾಪೂರ್ವ ಕಾರ್ಯಕ್ರಮಗಳ ಮೂಲಕ ವೃತ್ತಿಪರವಾಗಿ ತಯಾರು ಮಾಡಬೇಕಾಗುತ್ತದೆ. ದಿ ಹರ್ಬಿನ್ ಸೆಮಿನಾರ್(ಯುನೆಸ್ಕೊ, 1993 The Herbin Seminar 1993)ನಲ್ಲಿ ಈ ಕೆಳಗಿನ ಅಂಶಗಳನ್ನು ಗಮನಿಸಲಾಯಿತು:

- ಸಮನ್ವಯ ಶಾಲೆಗಳಲ್ಲಿ ಬದಲಾವಣೆ ತರುವ ನಿಟ್ಟಿನಲ್ಲಿ ಶಿಕ್ಷಕರ ಶಿಕ್ಷಣವು ಪ್ರಮುಖ ಪಾತ್ರ ವಹಿಸುತ್ತದೆ. ಕಲಿಕಾ ನ್ಯೂನತೆಯುಳ್ಳ ಮಕ್ಕಳ ಬಗೆಗಿನ ನಮ್ಮ ಹೊಸ ಪರಿಕಲ್ಪನೆಯೊಂದಿಗೆ, ಶಿಕ್ಷಕರ ಶಿಕ್ಷಣ ಯೋಜನೆಗಳನ್ನೂ ಮರು ಚಿಂತನೆಗೊಳಪಡಿಸಿ, ಪ್ರಸ್ತುತ ಇರುವ ಮಾದರಿಗಳನ್ನು ಮತ್ತು ಕೋರ್ಸ್‌ನ ವಿಷಯಗಳನ್ನು ಇದೇ ವೇಳೆ ಪರಿಷ್ಕರಿಸಬೇಕಾಗಿದೆ.
- ವಿಶೇಷ ಶೈಕ್ಷಣಿಕ ಅಗತ್ಯತೆಯುಳ್ಳ (ಸ್ಪೆಷಲ್ ಎಜ್ಯುಕೇಷನಲ್ ನೀಡ್ಸ್- ಎಸ್.ಇ.ಎನ್.) ಮಕ್ಕಳ ಬೋಧನೆಯ ಕೆಲವು ಅಂಶಗಳಿಗೆ ವಿಶೇಷ ತರಬೇತಿ ಬೇಕಾಗುತ್ತದೆ. ಆದರೆ ಇದು ತೀರಾ 'ವಿಶೇಷ' ಆಗಿರುವುದಿಲ್ಲ; ಬಹುತೇಕ ಅವರಿಗೆ ಬೇಕಾಗಿರುವುದು ಉತ್ತಮ ಬೋಧನೆ ಅಷ್ಟೇ. ಅಂತಹ ಮಕ್ಕಳ ಬೋಧನೆಯ ಬೇಡಿಕೆಯಲ್ಲಿ ಶಿಕ್ಷಕರಲ್ಲೇ ಕೆಲವು ತಪ್ಪು ಮಾಹಿತಿಗಳಿರುತ್ತವೆ.
- ವಿಶೇಷ ಶೈಕ್ಷಣಿಕ ಅವಶ್ಯಕತೆಯುಳ್ಳ ಮಕ್ಕಳೊಂದಿಗೆ ಕೆಲಸ ಮಾಡಲು ಶಿಕ್ಷಕರ ಕೌಶಲ, ಧೋರಣೆ ಮತ್ತು ಸಾಮರ್ಥ್ಯಗಳನ್ನು ವ್ಯಾಖ್ಯಾನಿಸುವುದು ಮುಖ್ಯವಾಗಿದ್ದು, ಅವುಗಳನ್ನು ಅಳವಡಿಸಿಕೊಳ್ಳುವಂತೆ ಶಿಕ್ಷಕರ ಶಿಕ್ಷಣ ಕಾರ್ಯಕ್ರಮದ ಮೂಲಕ ಉತ್ತೇಜಿಸಬೇಕು. ಎಲ್ಲಾ ರೀತಿಯ ವಿಶೇಷ ಗುಣಲಕ್ಷಣಗಳಿರುವ ಮತ್ತು ಎಲ್ಲಾ ಬಗೆಯ ಕಲಿಕಾ ಶೈಲಿಗಳನ್ನು ಹೊಂದಿರುವ ವಿದ್ಯಾರ್ಥಿಗಳಿಗೆ ಬೋಧಿಸಲು ಅವಶ್ಯವಿರುವ ಕೌಶಲಗಳನ್ನು ಬೆಳೆಸಿಕೊಳ್ಳುವಂತೆ ಎಲ್ಲಾ ಶಿಕ್ಷಕರಿಗೆ ನೆರವಾಗಬೇಕು. ಮಕ್ಕಳ ವಿವಿಧ ಕಲಿಕಾ ಮಟ್ಟದ ಕಡೆಗೆ ಶಿಕ್ಷಕರು ತೋರುವ ಮಹತ್ವ ಮತ್ತು ಧೋರಣೆಗಳು ಈ ನಿಟ್ಟಿನಲ್ಲಿ ಬಹಳ ಮುಖ್ಯವೆನಿಸುತ್ತವೆ.
- ಸಮನ್ವಯ ಶಾಲೆಗಳು ಎಂಬ ಪರಿಕಲ್ಪನೆಯೊಂದಿಗೆ ಮುಂದೆ ಸಾಗಬೇಕಾದ ಕಾರಣ, ಶಾಲಾ ಪ್ರಾಂಶುಪಾಲರು, ಮುಖ್ಯ ಶಿಕ್ಷಕರು, ಮೇಲ್ವಿಚಾರಕರು ಮತ್ತು ಆಡಳಿತಾಧಿಕಾರಿಗಳು ಅವಶ್ಯ ಬೆಂಬಲ ನೀಡಬೇಕು. ಇದಕ್ಕಾಗಿ ಅವರಿಗೆ ಸೂಕ್ತ ತರಬೇತಿ ನೀಡುವುದಕ್ಕೆ ಆದ್ಯತೆ ಕೊಡಬೇಕು. ಸಮನ್ವಯ ಕಲಿಕಾ ವ್ಯವಸ್ಥೆಯ ಸಮಗ್ರ ತರಬೇತಿ ಇಲ್ಲದೆ ಸಾಮಾನ್ಯ ಶಿಕ್ಷಕರು, ಕಲಿಕಾ ನ್ಯೂನತೆ, ವಿಶೇಷ ಬೋಧನಾ ಅವಶ್ಯಕತೆ ಇರುವಂತಹ ವಿಶೇಷ ಮಕ್ಕಳನ್ನೂ ಒಳಗೊಂಡಂತೆ ಎಲ್ಲಾ ರೀತಿಯ ಮಕ್ಕಳಿಗೆ ಕ್ರಿಯಾಶೀಲರಾಗಿ ಮತ್ತು ಫಲಪ್ರದವಾಗಿ ಬೋಧನೆ ಮಾಡಬೇಕು ಎಂದು ನಿರೀಕ್ಷಿಸುವುದು ಅವಾಸ್ತವವಾಗುತ್ತದೆ ಮತ್ತು ಅದು ಸೂಕ್ತವೂ ಅಲ್ಲ. ಈ ತರಬೇತಿಗಳನ್ನು ಹಲವು ರೀತಿಯಿಂದ ನಡೆಸಬಹುದು ಉದಾಹರಣೆಗೆ, ಮುಖತಃ, ವಿಚಾರ ಸಂಕಿರಣಗಳ ಮೂಲಕ, ಸೇವಾ ನಿರತ ಕಾರ್ಯಕ್ರಮಗಳ ಮೂಲಕ, ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳ ಮೂಲಕ ಇತ್ಯಾದಿ. ಸಾಮಾನ್ಯ ಶಿಕ್ಷಣದ ಶಿಕ್ಷಕರಿಗೆ ಇತರ ಶಿಕ್ಷಕರೊಂದಿಗೆ ಮತ್ತು ವಿಶೇಷವಾಗಿ ಸರ್ಕಾರೇತರ ಸಂಸ್ಥೆಗಳೊಂದಿಗೆ ಸಂಪರ್ಕ ಹಾಗೂ ವಿವಿಧ ಶೈಕ್ಷಣಿಕ ಸಮಸ್ಯೆಗಳ ಬಗ್ಗೆ ತಿಳಿವಳಿಕೆ ಇರುವ ಕಾರಣ ಅವರು ಸಹಯೋಗ ಯೋಜನೆಗಳನ್ನು ತಯಾರಿಸುವ ಅವಕಾಶಗಳಿರುವುದು ಬಹಳ ಮುಖ್ಯ ಅಂಶ. ಅವರು ತಮ್ಮ ನಿರ್ದಿಷ್ಟ ಪ್ರಶ್ನೆಗಳಿಗೆ ಉತ್ತರ/ಪರಿಹಾರ ಕಂಡುಕೊಳ್ಳಲು ಇದು ನೆರವಾಗಬಹುದು. ಶಿಕ್ಷಕರು ತಮ್ಮ ವಿದ್ಯಾರ್ಥಿಗಳ ವಿಭಿನ್ನ ಕಲಿಕಾ ಶೈಲಿಗಳು ಮತ್ತು ದೈಹಿಕ ಹಾಗೂ ಬೌದ್ಧಿಕ ಬೆಳವಣಿಗೆಗಳನ್ನೂ ಅರ್ಥ ಮಾಡಿಕೊಳ್ಳುವ ಸಾಮರ್ಥ್ಯ ಹೊಂದಿರುವುದು ಅವಶ್ಯ. ಹಾಗಾಗಿ, ಉತ್ತೇಜನಕಾರಿ ಮತ್ತು ಪಾಲ್ಗೊಳ್ಳುವಿಕೆಯ ಕಲಿಕಾ ವಾತಾವರಣ ಸೃಷ್ಟಿಸಲು ಅವರು ಪ್ರಯತ್ನಪಡಬೇಕು. ಅಸ್ತಿತ್ವದಲ್ಲಿರುವ ಮತ್ತು ಸೇವಾ ನಿರತ ತರಬೇತಿಗಳನ್ನು ಏರ್ಪಡಿಸುತ್ತಿರುವ ಎಲ್ಲಾ ಶಿಕ್ಷಕರ ತರಬೇತಿ ಸಂಸ್ಥೆಗಳನ್ನು ಬಲಪಡಿಸುವ ಅಗತ್ಯ ಇದೆ ಎಂದು ಜಸ್ಟೀಸ್ ವರ್ಮಾ ವರದಿ (2016)

ಹೇಳಿದೆ. ನಿರ್ದಿಷ್ಟವಾಗಿ, ವಿಕೇಂದ್ರೀಕೃತ ಬ್ಲಾಕ್ ಸಂಪನ್ಮೂಲ ಕೇಂದ್ರಗಳು (ಬಿ.ಆರ್. ಸಿ) ಮತ್ತು ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳನ್ನು (ಸಿ.ಆರ್. ಸಿ.) ಇನ್ನಷ್ಟು ಬಲಗೊಳಿಸಿ, ಅವುಗಳಿಗೆ ಮಾನವ ಮತ್ತು ದೈಹಿಕ ಸಂಪನ್ಮೂಲಗಳನ್ನು ಒದಗಿಸಿ ಅವುಗಳು ಪರಿಣಾಮಕಾರಿಯಾಗಿ ಕಾರ್ಯನಿರ್ವಹಿಸುವಂತೆ ಮಾಡಬೇಕು. ಹಾಗೆಯೇ, ಡಯಟ್ ಮತ್ತು ಎಸ್‌ಸಿಇಆರ್‌ಟಿ ಗಳನ್ನೂ ಬಲಪಡಿಸುವ ಅವಶ್ಯಕತೆ ಇದೆ. ಶಿಕ್ಷಣ ಶಾಸ್ತ್ರೀಯ ಕೌಶಲ ನೀಡುವ ಉದ್ದೇಶದಿಂದ ಶಿಕ್ಷಕರಿಗಾಗಿ ಏರ್ಪಡಿಸಲಾಗುವ ಎಲ್ಲಾ ಬಗೆಯ ಶೈಕ್ಷಣಿಕ ತರಬೇತಿ ಕಾರ್ಯಕ್ರಮಗಳನ್ನು ಸಮನ್ವಯ ತರಗತಿ ಕೋಣೆಗಳ ದೃಷ್ಟಿಕೋನದಿಂದಲೇ ನಡೆಸಬೇಕು ಎಂದು, ನ್ಯಾಷನಲ್ ಫೋಕಸ್ ಗ್ರೂಪ್ ಆನ್ ಎಜ್ಯುಕೇಶನ್ ಆಫ್ ಗ್ರೂಪ್ಸ್ ಆಫ್ ಸ್ಪೆಷಲ್ ನೀಡ್ಸ್ (ಎನ್‌ಸಿಇಆರ್‌ಟಿ 2006) ವರದಿ ಕೂಡಾ ಒತ್ತಿಹೇಳಿದೆ.

ಸರ್ವ ಶಿಕ್ಷಾ ಅಭಿಯಾನ (ಎಸ್.ಎಸ್.ಎ)

ಸರ್ವ ಶಿಕ್ಷಾ ಅಭಿಯಾನದಡಿ ಶಿಕ್ಷಕರ ತರಬೇತಿ ಕಾರ್ಯಕ್ರಮಗಳು ಸಾಮಾನ್ಯವಾಗಿ ಜಿಲ್ಲೆ, ಬ್ಲಾಕ್ ಮತ್ತು ಕ್ಲಸ್ಟರ್ ಮಟ್ಟದಲ್ಲಿ ಆಯೋಜನೆಯಾಗುತ್ತವೆ. ಸಂಬಂಧಿಸಿದ ಕ್ಲಸ್ಟರ್ ಅಥವಾ ಬ್ಲಾಕ್‌ನ ಪ್ರತಿಯೊಬ್ಬ ಶಿಕ್ಷಕರಿಗೂ ಈ ಕಾರ್ಯಕ್ರಮಗಳಲ್ಲಿ ಪಾಲ್ಗೊಳ್ಳಲು ಇದರಿಂದ ಸಾಧ್ಯವಾಗುತ್ತದೆ. ಅಲ್ಲದೆ, ತರಬೇತುದಾರರಿಗೆ ಸ್ಥಳೀಯ ಸಮಸ್ಯೆಗಳನ್ನು ಅರ್ಥ ಮಾಡಿಕೊಂಡು, ಅವುಗಳನ್ನು ಪರಿಹರಿಸಲೂ ಇದು ಸಹಾಯಕವಾಗುತ್ತದೆ. ಕ್ಲಸ್ಟರ್ ವಲಯದ ಸಂಪನ್ಮೂಲ ವ್ಯಕ್ತಿಗಳನ್ನು ನಿಯಮಿತವಾಗಿ ವರ್ಗಾವಣೆ ಮಾಡುವುದರಿಂದ ಬೇರೆ ಬೇರೆ ತರಬೇತುದಾರರ ಪರಿಣತಿಯ ಪ್ರಯೋಜನ ಎಲ್ಲಾ ಕ್ಲಸ್ಟರ್‌ಗಳಿಗೂ ಸಿಕ್ಕಿದಂತಾಗುತ್ತದೆ.

ಎಸ್.ಎಸ್.ಎ. ನೀಡುವ ಶಿಕ್ಷಕರ ತರಬೇತಿ ಮತ್ತು ಅದು ಅನುಸರಿಸುವ ಮಾದರಿಯಿಂದಾಗಿ, ಹಿಂದಿನ, ಬಹಳ ರಚನಾತ್ಮಕವಾಗಿದ್ದ, ವಸ್ತು ಮತ್ತು ರೂಪದಲ್ಲಿ ಕಠಿಣವಾಗಿದ್ದ ಶಿಕ್ಷಕರ ಸಾಂಪ್ರದಾಯಿಕ ತರಬೇತಿ ಕಾರ್ಯಕ್ರಮಗಳನ್ನೇ ಬದಲಾಯಿಸಬೇಕಾಗಿ ಬಂದಿದೆ. ಶಿಕ್ಷಕರು ಮತ್ತು ತರಬೇತುದಾರರ ಜೊತೆಗಿನ ನಿರಂತರ ಮಾತುಕತೆಯ ಫಲವಾಗಿ, ಹೊಸ ತರಬೇತಿ ಪ್ಯಾಕೇಜ್‌ಗಳನ್ನು ಅಭಿವೃದ್ಧಿಪಡಿಸಲು ಸಾಧ್ಯವಾಗಿದೆ. ಇವುಗಳಲ್ಲಿ ತಕ್ಷಣದ ಸ್ಥಳೀಯ ಸಮಸ್ಯೆಗಳನ್ನು ಪರಿಹರಿಸುವುದು ಮತ್ತು ನಿರ್ದಿಷ್ಟ ಕ್ಷೇತ್ರದಲ್ಲಿ ಹೊಸ ಬೆಳವಣಿಗೆಗಳನ್ನು ಸಂಯೋಜಿಸುವ ಮಾದರಿಯಲ್ಲಿ ಪರಿಹಾರ ರೂಪಿಸುವುದು ಸೇರಿದೆ. ಇದು ತರಬೇತಿ ಕಾರ್ಯಕ್ರಮಕ್ಕೆ ತಾಜಾ ಮತ್ತು ಆಧುನಿಕ ದೃಷ್ಟಿಕೋನವನ್ನು ನೀಡಿದೆ. ಹೀಗೆ, ಉದಾಹರಣೆಗೆ, ಕ್ಲಸ್ಟರ್ ಅಥವಾ ಬ್ಲಾಕ್ ಮಟ್ಟದ ಶಿಕ್ಷಕರು ಒಂದು ನಿರ್ದಿಷ್ಟ ತರಗತಿಯ ಅಥವಾ ನ್ಯೂನತೆಯುಳ್ಳ ಮಕ್ಕಳಿಗಾಗಿ ಗಣಿತದ ಬೋಧನೆಗೆ ಗಮನ ಕೊಡಬೇಕು ಅಂದುಕೊಳ್ಳುತ್ತಾರೆ ಎಂದಿಟ್ಟುಕೊಳ್ಳೋಣ. ಆಗ ಅವರೆಲ್ಲರೂ, ಆ ನಿರ್ದಿಷ್ಟ ಸಮಸ್ಯೆಯನ್ನು ಬಗೆಹರಿಸಲು ನೆರವಾಗುವಂತಹ ತರಬೇತಿಯನ್ನು ವಿನ್ಯಾಸಗೊಳಿಸಬಹುದು.

ಇದಕ್ಕೆ ಕಿಂಗಿನಿಕ್ಕೂಟ್ಟೋಮ್ ಎಂಬ ಹೆಸರಿನ ಶಿಕ್ಷಕರ ತರಬೇತಿ ಕಾರ್ಯಕ್ರಮ ಒಂದು ಉದಾಹರಣೆಯಾಗಿದೆ. ಮಕ್ಕಳಿಗಾಗಿ ಹಮ್ಮಿಕೊಳ್ಳಲಾಗಿದ್ದ 16 ದಿನಗಳ ಶಿಬಿರ ಮತ್ತು ಬಿಆರ್‌ಸಿಯಲ್ಲಿ ಸೇವಾ ನಿರತ ಶಿಕ್ಷಕರಿಗಾಗಿ ಏರ್ಪಡಿಸಲಾಗಿದ್ದ ಐದು ದಿನಗಳ ತರಬೇತಿಯನ್ನು ಬೆಸೆಯಲಾಗಿತ್ತು. ಆ ಐದು ದಿನಗಳ ತರಬೇತಿಯು, ಶಿಕ್ಷಕರಿಗೆ ತರಗತಿಗಳಲ್ಲಿ ಎದುರಾಗುವ ಕಷ್ಟಗಳನ್ನು ಪರಿಣಾಮಕಾರಿಯಾಗಿ ಗುರುತಿಸಿದ್ದಲ್ಲದೆ, ತಂಡವಾಗಿ ಬೋಧಿಸುವ, ಮಕ್ಕಳಿಗೆ ತಂಡದ ಚಟುವಟಿಕೆಗಳನ್ನು ಒದಗಿಸುವ, ಬಹು ವರ್ಗ ಮತ್ತು ಬಹು ಹಂತದ ಸನ್ನಿವೇಶಗಳನ್ನು ನಿಭಾಯಿಸಲು ತರಗತಿ ಚಟುವಟಿಕೆಗಳನ್ನು ವಿನ್ಯಾಸ ಮಾಡುವ, ಮಕ್ಕಳಿಗಾಗಿ ಸಣ್ಣ ಸಣ್ಣ ಯೋಜನೆಗಳನ್ನು ರೂಪಿಸುವ, ಕ್ಷೇತ್ರ ಪ್ರವಾಸ ಕೈಗೊಳ್ಳುವಂತಹ ಕಾರ್ಯತಂತ್ರಗಳನ್ನು ಸಾಮೂಹಿಕವಾಗಿ ರೂಪಿಸಿದರು. ಅಲ್ಲದೆ, ಈ ಐದು ದಿನಗಳ ತರಬೇತಿ ಕಾರ್ಯಕ್ರಮದಲ್ಲಿ ಅಭಿವೃದ್ಧಿಪಡಿಸಿದ ಕಾರ್ಯತಂತ್ರಗಳನ್ನು ತರಬೇತುದಾರರು ಮತ್ತು ಶಿಕ್ಷಕರು ಒಟ್ಟಾಗಿ

ಕಾರ್ಯರೂಪಕ್ಕೆ ತಂದರು. ಯಾವುದೋ ಕಾಲ್ಪನಿಕ ಸಮಸ್ಯೆಗಳಿಗಿಂತ, ದಿನನಿತ್ಯ ತಾವು ತರಗತಿಗಳಲ್ಲಿ ಸ್ವತಃ ಎದುರಿಸುತ್ತಿದ್ದ ಸಮಸ್ಯೆಗಳಿಗೆ ಪರಿಹಾರ ಸಿಕ್ಕಿದಂತಾದ ಕಾರಣ ಶಿಕ್ಷಕರಿಗೆ ಈ ಕಾರ್ಯತಂತ್ರಗಳು ಅತ್ಯಂತ ಆಸಕ್ತಿದಾಯಕವಾಗಿ ಕಂಡವು. ಇದರಿಂದ ಮಕ್ಕಳ ಕಲಿಯುವ ಉಪಾಯವನ್ನು ಉತ್ತೇಜಿಸಿತು ಸಾಧ್ಯವಾಯಿತಲ್ಲದೆ, ವಿಷಯಾಧಾರಿತ, ಸೈದ್ಧಾಂತಿಕ ವಿಷಯಗಳಿಂದ ಪ್ರಾಯೋಗಿಕ ಮತ್ತು ಪ್ರಾಯೋಗಿಕ ಅಭ್ಯಾಸಕ್ಕೆ ಪಾದಾರ್ಪಣೆ ಮಾಡಲು ಸಾಧ್ಯವಾಯಿತು.

ಗ್ರಾಸ್‌ರೂಟ್ಸ್‌ನ ಗ್ಲಿಂಪ್ಸಸ್‌ನಲ್ಲಿ ಶಿಕ್ಷಕರೊಬ್ಬರು ಹೇಳಿದಂತೆ,

" ಈ ತರಬೇತಿ ಕೇಂದ್ರ ತಲುಪಿದಾಗ, ಇದು ಇನ್ನೊಂದು ಸೇವಾ ನಿರತ ತರಬೇತಿಯಾಗುವುದರಲ್ಲಿ ಸಂಶಯವಿಲ್ಲ ಎಂದೇ ನಾನು ಭಾವಿಸಿದ್ದೆ. ಆದರೆ ಡಿಪಿಇಪಿ ನಮಗೆ ಕೊಟ್ಟ ಅನುಭವ ಹಿಂದೆಂದಿಗಿಂತಲೂ ಸಂಪೂರ್ಣ ಭಿನ್ನವಾಗಿತ್ತು. ತರಬೇತಿ ಕೇಂದ್ರದ ಒಳಗೆ ಹೋಗುತ್ತಲೇ ನನ್ನ ಗಮನ ಸೆಳೆದ ಮೊದಲ ಸಂಗತಿ ಎಂದರೆ, ವೃತ್ತಾಕಾರವಾಗಿ ಜೋಡಿಸಲಾಗಿದ್ದ ಆಸನ ವ್ಯವಸ್ಥೆ. ಅದನ್ನು ನೋಡುತ್ತಲೇ, ಈ ತರಬೇತಿ ಹಿಂದಿನದ್ದಕ್ಕಿಂತ ಏನೋ ವಿಭಿನ್ನವಾಗಿರುತ್ತದೆ ಎಂಬ ಅಭಿಪ್ರಾಯ ಮೂಡಿತು. ಮೊತ್ತಮೊದಲ ಗುಂಪು ರಚನೆಯೇ ಆಸಕ್ತಿದಾಯಕವಾಗಿತ್ತು. ಆ ಗುಂಪಿನಲ್ಲೇ ನಾವು ಕೊನೆಯವರೆಗೂ ಇರುತ್ತೇವೆ ಎಂದುಕೊಂಡು ಆತುರದಿಂದ ನಾವು ಪರಸ್ಪರ ಪರಿಚಯಿಸಿಕೊಂಡೆವು. ಆದರೆ ಅಂತಹ ಬೇರೆ ಬೇರೆ ಗುಂಪುಗಳಲ್ಲಿ ನಾವು ಚಟುವಟಿಕೆಗಳನ್ನು ಮಾಡಬೇಕಾಗಿದ್ದುದು ಬಹಳ ಆಸಕ್ತಿದಾಯಕ ಮತ್ತು ಪರಿಣಾಮಕಾರಿಯಾಗಿತ್ತು. ಈ ಮೂಲಕ ತರಬೇತಿಯಲ್ಲಿ ಪಾಲ್ಗೊಂಡ ಪ್ರತಿಯೊಬ್ಬ ಶಿಕ್ಷಕರನ್ನೂ ತಿಳಿದುಕೊಳ್ಳಲು ಸಾಧ್ಯವಾಯಿತು. ನಾವು ಪಾಲ್ಗೊಂಡ 'ಎಚ್ಚರಗೊಳ್ಳಿ' ಎಂಬ ಚಟುವಟಿಕೆಯಂತೂ ನಿಜವಾಗಿಯೂ ಮಲಗಿದ್ದ ಮನಸ್ಸುಗಳನ್ನು ಬಡಿದೆಬ್ಬಿಸುವಲ್ಲಿ ಯಶಸ್ವಿಯಾಯಿತು...."

**

ಎನ್.ಸಿ.ಇ.ಆರ್.ಟಿ

ಎನ್.ಸಿ.ಇ.ಆರ್.ಟಿ ಸೇವಾ ನಿರತ ಮತ್ತು ಸೇವಾ ಪೂರ್ವ ದರ್ಜೆಯ ಹಲವಾರು ಪ್ರಸ್ತುತಿಗಳನ್ನು ನಡೆಸಿಕೊಡುತ್ತಿರುತ್ತದೆ. ಅವುಗಳಲ್ಲಿ ಕೆಲವು ಸೇವಾ ನಿರತ ಕಾರ್ಯಕ್ರಮಗಳ ವಿವರಗಳು ಇಂತಿವೆ:

- ಶಿಕ್ಷಕರ ಪ್ರಶಿಕ್ಷಕರಲ್ಲಿ ಬಲತುಂಬುವ ಎಜುಸ್ಯಾಟ್ ಕಾರ್ಯಕ್ರಮ
- ಮಾರ್ಗಸೂಚಿಗಳು, ಕೈಪಿಡಿಗಳು ಮತ್ತು ಘಟಕಗಳ ತಯಾರಿ
- ಶೈಕ್ಷಣಿಕ ಮಧ್ಯಸ್ಥಿಕೆಗಾಗಿ ಕ್ರಿಯಾತ್ಮಕ ಸಂಶೋಧನೆಯಲ್ಲಿ ತರಬೇತಿ
- ಆರ್‌ಐಇಯಲ್ಲಿ ಸಂಪನ್ಮೂಲ ಕೋಶದ ಅಭಿವೃದ್ಧಿ.

ಕಲಿಕಾ ನ್ಯೂನತೆ ವರ್ಸಸ್ ನಿಧಾನ ಕಲಿಕೆ

ಕಲಿಕೆಯಲ್ಲಿ ದೋಷವಿರುವ ಮಗುವನ್ನು ನಿಧಾನ ಕಲಿಕೆಯ ವಿದ್ಯಾರ್ಥಿ ಎಂದು ಇಲ್ಲವೇ ರೋಗಗ್ರಸ್ತ ವಿದ್ಯಾರ್ಥಿ ಎಂದೋ ಉಲ್ಲೇಖಿಸುವುದು ತೀರಾ ಅನಗತ್ಯ ಸಂಗತಿ. ಆ ಮಗು ನಿಧಾನವೂ ಅಲ್ಲ, ರೋಗಗ್ರಸ್ತವೂ ಅಲ್ಲ. ದೃಷ್ಟಿದೋಷವಿರುವ ವ್ಯಕ್ತಿ ಕನ್ನಡಕ ಧರಿಸಿದಷ್ಟೇ ಇದೂ ಸಹಜ. ಆತನ ದೃಷ್ಟಿದೋಷ ಕನ್ನಡಕ ಧರಿಸಿದ ಬಳಿಕ ಸುಧಾರಿಸುತ್ತದೆ. ಮಂದ ದೃಷ್ಟಿ ಎಂಬುದು ಶಾರೀರಿಕ ಸ್ಥಿತಿ. ಆದರೆ ಇಲ್ಲಿ ನಾವು ಮಾತನಾಡುತ್ತಿರುವ ಕಲಿಕಾ ನ್ಯೂನತೆಯು ಶಾರೀರಿಕ ತಪಾಸಣೆಯಲ್ಲಿ ಕಂಡುಬರುವ ಸಮಸ್ಯೆಯಲ್ಲ.

ಕೆಲವೊಮ್ಮೆ ನಿರ್ದಿಷ್ಟ ಸಮಸ್ಯೆಗಳಿರುವ ಮಕ್ಕಳಿಗೆ ನಿಧಾನ ಕಲಿಕೆಯ ಅಥವಾ ಮಂದ ಕಲಿಕೆಯ ವಿದ್ಯಾರ್ಥಿಗಳು ಎಂಬ ಹಣೆಪಟ್ಟಿ ಕಟ್ಟಿಬಿಡುತ್ತೇವೆ. ಈ ರೀತಿಯ ಪದ ಬಳಕೆ ಸರಿಯಲ್ಲ. ಯಾವುದಾದರೂ ನ್ಯೂನತೆ ಇರುವ ಒಂದು ಮಗುವಿಗೆ ಅದರದ್ದೇ ಶೈಲಿಯಲ್ಲಿ ಕಲಿಸಿದರೆ, ಅದರ ಕಲಿಕಾ ಮಟ್ಟವನ್ನು ಇತರರು ಅಂದಾಜಿಸಿದ್ದಕ್ಕಿಂತಲೂ ಬೇಗನೇ ಅದು ಕಲಿಯುವ ಸಾಧ್ಯತೆ

ಇರುತ್ತದೆ. ಯಾಕೆಂದರೆ, ಆ ಮಗುವಿಗೆ ಸೂಕ್ತ ಕಾಲದಲ್ಲಿ ಸೂಕ್ತ ರೀತಿಯಲ್ಲಿ ಅದರ ಅಗತ್ಯಗಳನ್ನು ಪೂರೈಸಿದರೆ ಅದರಿಂದ ಹೊರಬರಲು ಸಾಧ್ಯವಿರುವಂತಹ ಸ್ಥಿತಿ ಅದಾಗಿರುತ್ತದೆ.
**
ಸರ್ವ ಶಿಕ್ಷಾ ಅಭಿಯಾನದ ಅಡಿಯಲ್ಲಿ ಎಲಿಮೆಂಟರಿ ಶಾಲಾ ಶಿಕ್ಷಕರಿಗೆ ಸೇವಾ ನಿರತ ತರಬೇತಿ ನೀಡುವ ಸಂಸ್ಥೆ

ಉದ್ದೇಶಿತ ಗುಂಪುಗಳು

ಸರ್ವ ಶಿಕ್ಷಾ ಅಭಿಯಾನದಡಿ ಸೇವಾನಿರತ ಶಿಕ್ಷಕರಿಗೆ ತರಬೇತಿ ನೀಡುವಾಗ ಈ ಕೆಳಗಿನ ಗುಂಪುಗಳನ್ನು ಗುರಿಯಾಗಿಟ್ಟುಕೊಳ್ಳಬಹುದು. 1. ಪ್ರಾಥಮಿಕ ಶಾಲಾ ಶಿಕ್ಷಕರು 2. ಹಿರಿಯ ಪ್ರಾಥಮಿಕ ಶಾಲಾ ಶಿಕ್ಷಕರು 3. ಕಿರಿಯ ಮತ್ತು ಹಿರಿಯ ಪ್ರಾಥಮಿಕ ಶಾಲೆಗಳ ಮುಖ್ಯಸ್ಥರು 4. ಬ್ಲಾಕ್ ಮತ್ತು ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳಲ್ಲಿ (ಬಿಆರ್‌ಸಿಗಳು ಮತ್ತು ಸಿಆರ್‌ಸಿಗಳು) ಕೆಲಸ ಮಾಡುತ್ತಿರುವ ಶಿಕ್ಷಕರು.
ಈ ಉದ್ದೇಶಿತ ಗುಂಪುಗಳಲ್ಲಿ ಪ್ರತಿಯೊಂದು ಗುಂಪಿಗೂ ತರಬೇತಿಯನ್ನು ಪ್ರತ್ಯೇಕವಾಗಿ ವಿನ್ಯಾಸ ಮಾಡಬೇಕು.

ಅವಧಿ

ಎಲಿಮೆಂಟರಿ ಶಾಲೆಗಳ ಸೇವಾ ನಿರತ ಶಿಕ್ಷಕರಿಗೆ ಒಂದೇ ಬಾರಿಗೆ ತರಬೇತಿ ನೀಡುವುದು ಅಪೇಕ್ಷಣೀಯವೂ, ಪ್ರಾಯೋಗಿಕವೂ ಅಲ್ಲ. ಇದನ್ನು ರಾಜ್ಯ ಅಥವಾ ಕೇಂದ್ರಾಡಳಿತ ಪ್ರದೇಶದ ಪರಿಸ್ಥಿತಿಗೆ ಅನುಗುಣವಾಗಿ ಹಲವು ಹಂತಗಳಲ್ಲಿ ಕೈಗೊಳ್ಳಬಹುದು. ಸೇವಾ ನಿರತ ತರಬೇತಿಗಾಗಿ ವಿಭಜಿತ ಮಾದರಿಯನ್ನು ಅನುಸರಿಸಬಹುದು. ಉದಾಹರಣೆಗೆ, ಮೊದಲ ಹಂತದಲ್ಲಿ 6-8 ದಿನಗಳ ತರಬೇತಿಯನ್ನು ಬ್ಲಾಕ್ ಮಟ್ಟದಲ್ಲಿ ಆಯೋಜಿಸಬಹುದು. ಎರಡನೇ ಹಂತದಲ್ಲಿ, ಇದನ್ನು ಎರಡು ದಿನಗಳ ತರಬೇತಿಯಾಗಿ ನಿಜವಾದ ಶಾಲಾ ಸನ್ನಿವೇಶದಲ್ಲಿ ಹಮ್ಮಿಕೊಳ್ಳಬಹುದು. ತರಬೇತಿಯ ನಂತರ, ಶಿಕ್ಷಕರು ತಮ್ಮ ಕಾರ್ಯಕ್ಷೇತ್ರಕ್ಕೆ ವಾಪಸಾಗಿ ಮುಂದಿನ 2-3 ತಿಂಗಳ ಅವಧಿಯಲ್ಲಿ ತರಬೇತಿಯಲ್ಲಿ ಹೇಳಲಾದ ಪರಿಕಲ್ಪನೆ, ಮಧ್ಯಸ್ಥಿಕೆ/ ಹಸ್ತಕ್ಷೇಪ ಮತ್ತು ತಂತ್ರಗಳನ್ನು ತಮ್ಮ ತರಗತಿಗಳಲ್ಲಿ ಅನುಷ್ಠಾನಕ್ಕೆ ತರಬೇಕು. ಇದು ಮೂರನೇ ಹಂತ. ಇದಾದ ಬಳಿಕ ಅವರನ್ನು ಕ್ಲಸ್ಟರ್ ಸಂಪನ್ಮೂಲ ಕೇಂದ್ರಗಳಿಗೆ ಆಹ್ವಾನಿಸಿ, ಒಂದೆರಡು ದಿನಗಳ ಸಭೆ ನಡೆಸಿ ಅಲ್ಲಿ ಅವರು ತಮ್ಮ ಪ್ರಾಯೋಗಿಕ ಅನುಭವಗಳನ್ನು ಹಂಚಿಕೊಂಡು, ಪರ್ಯಾಲೋಚನಾ ಚರ್ಚೆ ಏರ್ಪಡಿಸಬಹುದು (ನಾಲ್ಕನೇ ಹಂತ). ಎಲ್ಲಾ ಶಿಕ್ಷಕರಿಗೆ ತರಬೇತಿಯ ಪ್ರಯೋಜನ ಸಿಗಬೇಕು ಹಾಗೂ ಶಾಲಾ ಚಟುವಟಿಕೆಗಳಿಗೆ ವ್ಯತ್ಯಯವಾಗದಂತೆ ತರಬೇತಿಗಳು ನಡೆಯಬೇಕು ಎಂಬ ಉದ್ದೇಶದಿಂದ ರಜಾ ದಿನಗಳನ್ನು ತರಬೇತಿಗಾಗಿ ಬಳಸಿಕೊಳ್ಳಲಾಗುತ್ತದೆ ಎಂಬುದನ್ನು ಪ್ರಸ್ತಾಪಿಸುವ ಅಗತ್ಯವೇ ಇಲ್ಲ.

ತರಬೇತಿಯ ಉದ್ದೇಶಗಳನ್ನು ಸಿದ್ಧಪಡಿಸುವುದು

ಈ ಕೆಳಗಿನ ಉದ್ದೇಶಗಳನ್ನು ಗಮನದಲ್ಲಿಟ್ಟುಕೊಂಡು, ರಾಜ್ಯ/ ಕೇಂದ್ರಾಡಳಿತ ಪ್ರದೇಶ ಮತ್ತು ಜಿಲ್ಲೆಗಳು ಸ್ಥಳೀಯ ಅವಶ್ಯಕತೆಗಳಿಗೆ ತಕ್ಕುದಾಗಿ ತರಬೇತಿಯ ಉದ್ದೇಶಗಳನ್ನು ರಚಿಸಬಹುದು. ಯಾರಿಗೆ ಯಾವ ಬಗೆಯ ತರಬೇತಿ ಅವಶ್ಯವಿದೆ ಎಂದು ಈಗಾಗಲೇ ಗುರುತಿಸಲಾಗಿರುವಂತೆ, ಉದ್ದೇಶಿತ ಗುಂಪುಗಳಿಗಾಗಿ ತರಬೇತಿಯ ಉದ್ದೇಶಗಳನ್ನು ಸ್ಥಳೀಯ ತರಬೇತಿ ಸಂಸ್ಥೆಗಳಾದ ಡಯಟ್, ಬಿಆರ್‌ಸಿ ಅಥವಾ ಸಿಆರ್‌ಸಿಗಳು ರಚಿಸಬಹುದು.

ಸೇವಾ ನಿರತ ಎಲಿಮೆಂಟರಿ ಶಾಲೆಯ ಶಿಕ್ಷಕರಿಗೆ ನೀಡುವ ತರಬೇತಿಯ ಸಾಮಾನ್ಯ ಉದ್ದೇಶಗಳು :

- ಶಿಕ್ಷಕರು ಗುರಿ, ತಾತ್ವಿಕತೆ ಮತ್ತು ಕಾರ್ಯತಂತ್ರಗಳ ದೃಷ್ಟಿಕೋನ ಹೊಂದುವುದು (ಎ) ಮಕ್ಕಳ ದಾಖಲಾತಿ ಹೆಚ್ಚಿಸುವುದು (ಬಿ) ನಿಯಮಿತ ಹಾಜರಾತಿ ಮತ್ತು ಶಾಲೆಯಲ್ಲಿ ಎಲ್ಲಾ ಮಕ್ಕಳ ಪುನರಾವರ್ತನೆ (ಸಿ) ಸಾಮಾಜಿಕ ಅಂತರವನ್ನು (ಬಾಲಕಿಯರು, ಪರಿಶಿಷ್ಟ ಜಾತಿ,

ಪರಿಶಿಷ್ಟ ಪಂಗಡ, ಇತರ ಸಾಮಾಜಿಕವಾಗಿ ಅವಕಾಶ ವಂಚಿತ ಗುಂಪುಗಳು) ಕಡಿಮೆ ಮಾಡುವುದು.

- ಒಂದನೇ ಮತ್ತು ಎರಡನೇ ತರಗತಿಗಳು ವಿದ್ಯಾರ್ಥಿಗಳಿಗೆ ಓದುವ ಮತ್ತು ಸಾಂಖ್ಯಿಕ ಸಾಮರ್ಥ್ಯಕ್ಕೆ ಅಡಿಪಾಯ ಹಾಕುವ ನಿರ್ಣಾಯಕ ಹಂತವಾದ ಕಾರಣ ಸೇವಾ ನಿರತ ಶಿಕ್ಷಕರ ತರಬೇತಿಯಲ್ಲಿ ಒಂದನೇ ಮತ್ತು ಎರಡನೇ ತರಗತಿಯ ಶಿಕ್ಷಕರ ತರಬೇತಿಗೆ ಹೆಚ್ಚಿನ ಒತ್ತು ಕೊಡಬೇಕು.
- ಕಲಿಕೆಯಲ್ಲಿ ಗುಣಮಟ್ಟವನ್ನು ಸಾಧಿಸಲು ವಸ್ತು ಹಾಗೂ ಕ್ರಮಾನುಸರಣೆಯ ವಿಧಾನವನ್ನು ಅನುಸರಿಸುವುದು. ಅಂದರೆ, ತಂತ್ರಗಳು, ಓದುವ ಸಾಮಗ್ರಿಗಳು, ಬಹುಮಾಧ್ಯಮ, ಪ್ರಾತ್ಯಕ್ಷಿಕೆ, ಮೋಜಿನ ಕಲಿಕಾ ವಿಧಾನ (ಜನಪದ ಗೀತೆಗಳು, ಜನಪದ ನೃತ್ಯ ಮುಂತಾಗಿ), ಹೊಸತನ/ನಾವೀನ್ಯ, ಪ್ರಯೋಗಾತ್ಮಕತೆ, ಮಾಹಿತಿ ಮತ್ತು ಸಂವಹನ ತಂತ್ರಜ್ಞಾನ, ಸ್ಥಳೀಯ ನಿರ್ದಿಷ್ಟ ಸಂದರ್ಭೋಚಿತ ತಂತ್ರಗಳು, ಶಾಂತಿ ಮತ್ತು ಇತರ ಮೌಲ್ಯಗಳು, ಪರಿಹಾರಾತ್ಮಕ ನಿರ್ದೇಶನಗಳು, ಪರಿಸರ ಸಂಬಂಧಿ ಸಮಸ್ಯೆಗಳು, ನಿರಂತರ ಮತ್ತು ಸಮಗ್ರ ಮೌಲ್ಯಮಾಪನ ಇತ್ಯಾದಿಗಳನ್ನು ಅರ್ಥಪೂರ್ಣವಾಗಿ ಸಂಯೋಜಿಸಲಾಗಿದೆ.
- ಸಮುದಾಯಕ್ಕೆ ಹೊಣೆಗಾರರಾಗುವ ಅಗತ್ಯತೆಯ ಬಗ್ಗೆ ಶಿಕ್ಷಕರನ್ನು ಸಂವೇದನಾಶೀಲರನ್ನಾಗಿಸುವುದು, ಪೋಷಕರೊಂದಿಗೆ ಆತ್ಮೀಯ ಒಡನಾಟದಿಂದ ಕೆಲಸ ಮಾಡುವುದು, ಸಮುದಾಯ ಮತ್ತು ವಿಇಸಿ/ಪಿಟಿಎ ಮತ್ತು ಶಾಲೆಗೆ ಸಮುದಾಯದ ಪ್ರೋತ್ಸಾಹ ಸಿಗುವಂತೆ ಪೋಷಕರನ್ನು ಉತ್ತೇಜಿಸುವುದು.
- ಮಕ್ಕಳಲ್ಲಿ ಹವ್ಯಾಸ, ಧೋರಣೆ, ಮೌಲ್ಯ ಮತ್ತು ಉತ್ತಮ ನಾಗರಿಕರಾಗಲು ಬೇಕಾದ ಜೀವನಕೌಶಲಗಳನ್ನು ಬೆಳೆಸಿಕೊಳ್ಳುವಂತೆ ಶಿಕ್ಷಕರನ್ನು ಪ್ರೇರೇಪಿಸುವುದು
- ಕ್ರಿಯಾ ಸಂಶೋಧನೆಗಳನ್ನು ಕೈಗೊಳ್ಳಲು ಮತ್ತು ಅವಶ್ಯವಿದ್ದಾಗ ಮಧ್ಯಪ್ರವೇಶಿಸಲು ಶಿಕ್ಷಕರಿಗೆ ನೆರವಾಗುವುದು.
- ವಿಭಿನ್ನ ಹಂತ ಮತ್ತು ವಿಭಿನ್ನ ಶ್ರೇಣಿಗಳ ದೊಡ್ಡ ಗಾತ್ರದ ತರಗತಿಗಳು ಮತ್ತು ಬುಡಕಟ್ಟು ಸಂದರ್ಭದಲ್ಲಿ ಬೋಧನೆ-ಕಲಿಕೆಯಲ್ಲಿ ವ್ಯವಹರಿಸಲು ಶಿಕ್ಷಕರನ್ನು ಉತ್ತೇಜಿಸುವುದು.
- ಮಕ್ಕಳನ್ನು ಗಂಭೀರವಾಗಿ ಚಿಂತಿಸುವ, ಸಮಸ್ಯೆ ಬಗೆಹರಿಸುವಂತಹ ಚಟುವಟಿಕೆಗಳಲ್ಲಿ ತೊಡಗಿಸುವ ಪ್ರತಿಫಲನಾತ್ಮಕ ವೃತ್ತಿಪರರಂತೆ ಶಿಕ್ಷಕರು ನಟಿಸುವುದು.
- ಶೈಕ್ಷಣಿಕ, ವೈಯಕ್ತಿಕ-ಸಾಮಾಜಿಕ ಸನ್ನಿವೇಶಗಳಿಗೆ ಸಂಬಂಧಿಸಿದ ದೈನಂದಿನ ಸಮಸ್ಯೆಗಳಿಗೆ ಪರಿಹಾರಗಳನ್ನು ಹುಡುಕುವಲ್ಲಿ ಪರಿಣಾಮಕಾರಿಯಾದ ಮತ್ತು ಅನುಕೂಲಕರ ಪಾತ್ರಗಳನ್ನು ನಿರ್ವಹಿಸುವುದು
- ಶಿಕ್ಷಕರಿಗೆ ತಮ್ಮ ಸ್ವಂತ ಅಭ್ಯಾಸದ ಮೂಲವನ್ನು ಅನ್ವೇಷಿಸಲು, ಆಲೋಚಿಸಲು ಮತ್ತು ಅಭಿವೃದ್ಧಿಪಡಿಸಲು ಅವಕಾಶವನ್ನು ಕಲ್ಪಿಸುವುದು; ದಿ ರಿಫ್ಲೆಕ್ಟೀವ್ ಟೀಚರ್ (2006). ಎನ್‌ಸಿಇಆರ್‌ಟಿ ನವದೆಹಲಿ ಕಾಯ್ದೆ

**

ಶಿಕ್ಷಕರ ಶಿಕ್ಷಣ ವ್ಯವಸ್ಥೆಯಲ್ಲಿ ದೇಶದೆಲ್ಲೆಡೆ ಯೋಜಿತ ಮತ್ತು ಸಂಘಟಿತ ಅಭಿವೃದ್ಧಿಯನ್ನು ಸಾಧಿಸಲು ಮತ್ತು ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿ (ನ್ಯಾಷನಲ್ ಕೌನ್ಸಿಲ್ ಫಾರ್ ಟೀಚರ್ ಎಜುಕೇಶನ್ ಎನ್‌ಸಿಟಿಈ) ಕಾಯ್ದೆ 1993ರ ಪ್ರಕಾರ ಏಕರೂಪವಾದ ನಿಯಮಗಳು ಮತ್ತು ಗುಣಮಟ್ಟವನ್ನು ನಿಯಂತ್ರಿಸುವ ಉದ್ದೇಶದಿಂದ ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಮಂಡಳಿಯನ್ನು (ಎನ್‌ಸಿಟಿಇ) ಸ್ಥಾಪಿಸಲಾಯಿತು. ಶಿಕ್ಷಕರ ಶಿಕ್ಷಣ ತರಬೇತಿ ಸಂಸ್ಥೆಗಳು ಸಮನ್ವಯ ಶಿಕ್ಷಣಕ್ಕಾಗಿ ತಮ್ಮ ದೃಷ್ಟಿಕೋನ, ಪರಿಕಲ್ಪನೆ ಮತ್ತು ಕಾರ್ಯವಿಧಾನಗಳನ್ನು

ಮರುರೂಪಿಸಿಕೊಳ್ಳಬೇಕಾದುದು ಅತ್ಯವಶ್ಯ ಎಂದು ಶಿಕ್ಷಕರ ಶಿಕ್ಷಣಕ್ಕಾಗಿ ರಾಷ್ಟ್ರೀಯ ಪಠ್ಯಕಮ್ರುಮ(ಎನ್‌ಸಿಟಿಇ 2009) ಸ್ಪಷ್ಟವಾಗಿ ಹೇಳಿದೆ.

ಎನ್‌ಸಿಟಿಇ 2009 ಪ್ರಕಾರ ತರಗತಿಯ ವೈವಿಧ್ಯವನ್ನು ನಿಭಾಯಿಸುವಲ್ಲಿ ಶಿಕ್ಷಕರ ಸಿದ್ಧತೆ ಅಸಮರ್ಪಕವಾಗಗಿರುವ ಕಾರಣ ಶಾಲೆಗಳಲ್ಲಿ ಎರಡು ಬಗೆಯ ಹೊರಹಾಕುವಿಕೆ ಅಥವಾ ಬಹಿಷ್ಕಾರವನ್ನು ಕಾಣಬಹುದು. ಮೊದಲನೆಯದು, ಬೇರೆ ಬೇರೆ ರೀತಿಯ ದೈಹಿಕ ನ್ಯೂನತೆ ಇರುವ ಮಕ್ಕಳು ಮತ್ತು ಕಲಿಕಾ ನ್ಯೂನತೆ ಇರುವ ಮಕ್ಕಳು ಹೊರಗೆ ಉಳಿಯುತ್ತಾರೆ. ಅಂತಹ ಮಕ್ಕಳಿಗೆ ಏನು ಬೇಕಾಗಿದೆ ಎಂದು ಶಿಕ್ಷಕರು ಅರ್ಥ ಮಾಡಿಕೊಳ್ಳುವುದೂ ಇಲ್ಲ, ಕಲಿಕೆಯನ್ನು ಸಾಧ್ಯವಾಗಿಸಲು ಅವರು ಏನಾದರೂ ಮಾಡುವುದೂ ಇಲ್ಲ.

ಎರಡನೆಯದು ಮತ್ತು ಶೈಕ್ಷಣಿಕ ದ್ರೋಹ ಎನ್ನಬಹುದಾದ ಮಾದರಿ ಎಂದರೆ, ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಹಿಂದುಳಿದ ಸಮುದಾಯಗಳಾದ ಪರಿಶಿಷ್ಟ ಜಾತಿ (ಎಸ್.ಸಿ.), ಪರಿಶಿಷ್ಟ ಪಂಗಡ (ಎಸ್.ಟಿ), ಅಲ್ಪಸಂಖ್ಯಾತರು ಮತ್ತು ಇತರ ಸಮುದಾಯಗಳು, ಬಾಲಕಿಯರು ಹಾಗೂ ವಿಭಿನ್ನ ಕಲಿಕಾ ಅವಶ್ಯಕತೆ ಇರುವ ಮಕ್ಕಳನ್ನು ಹೊರಗಿರಿಸುವುದು ಅಥವಾ ಬಹಿಷ್ಕರಿಸುವುದು. ಶಿಕ್ಷಕರಲ್ಲಿರುವ ಇಂತಹ ಪೂರ್ವಗ್ರಹಗಳನ್ನು ಹೋಗಲಾಡಿಸಲು ಮತ್ತು ಈ ಸವಾಲುಗಳನ್ನು ಎದುರಿಸಲು ವೃತ್ತಿಪರ ಸಾಮರ್ಥ್ಯ ಬೆಳೆಸಿಕೊಳ್ಳುವಂತೆ ಮಾಡಬೇಕಾದುದು ತುರ್ತು ಅಗತ್ಯ. ಸಾಮಾಜಿಕವಾಗಿ ಮತ್ತು ಆರ್ಥಿಕವಾಗಿ ಅವಕಾಶವಂಚಿತ ಗುಂಪುಗಳ, ವಿಶೇಷವಾಗಿ ಎಸ್.ಸಿ ಮತ್ತು ಎಸ್.ಟಿ ಸಮುದಾಯದ ಮತ್ತು ಅಲ್ಪಸಂಖ್ಯಾತರ ಶಿಕ್ಷಣವು ಅನೇಕ ವರ್ಷಗಳಿಂದ ದೇಶದ ಮೂಲ ಆತಂಕದ ವಿಷಯವಾಗಿ ಉಳಿದಿದೆ. ಎಸ್.ಸಿ ಮತ್ತು ಎಸ್‌ಟಿ ಸಮುದಾಯಗಳ ಸಾಕ್ಷರತಾ ಮಟ್ಟದಲ್ಲಿ ಏರಿಕೆಯಾಗಿದ್ದರೂ, ಸಾಮಾನ್ಯ ಕೆಟಗರಿಯ ವಿದ್ಯಾರ್ಥಿಗಳಿಗಿಂತ ಇನ್ನೂ ಕೆಳಮಟ್ಟದಲ್ಲಿಯೇ ಇದೆ.

ಶಿಕ್ಷಣದ ಮೂಲಕ ಸಾಮಾಜಿಕ ಕೊರತೆಯನ್ನು ನೀಗಿ, ಸಾಮಾಜಿಕ ನ್ಯಾಯ ಒದಗಿಸುವ ಸಾಂವಿಧಾನಿಕ ಗುರಿ ಸಾಧಿಸಬೇಕಾದರೆ ಶಿಕ್ಷಕರಿಗೆ ಅಗತ್ಯ ತರಬೇತಿ ನೀಡಿ ಅವರನ್ನು ಸಜ್ಜುಗೊಳಿಸಬೇಕು. ಸಮನ್ವಯ ಶಿಕ್ಷಣವೆಂಬುದು ಒಂದು ತಾತ್ವಿಕ ನಿಲುವಾಗಿದೆ, ಜೊತೆಗೆ ಸಾಂಸ್ಥಿಕ ಸೌಲಭ್ಯ ಹಾಗು ಪ್ರಕ್ರಿಯೆಗಳ ಒಂದು ವ್ಯವಸ್ಥೆಯೂ ಆಗಿದೆ. ದೈಹಿಕ ಅಥವಾ ಮಾನಸಿಕ ಅಸಾಮರ್ಥ್ಯ ಇಲ್ಲವೇ ಸಾಮಾಜಿಕ ಸ್ಥಿತಿಗತಿಯಂತಹ ಯಾವುದೇ ಕಾರಣದಿಂದಾಗಿ ಕಲಿಕಾ ನ್ಯೂನತೆಯ ಅಂಚಿನಲ್ಲಿರುವ ಮಕ್ಕಳನ್ನೂ ಒಳಗೊಂಡಂತೆ ಎಲ್ಲಾ ಮಕ್ಕಳಿಗೆ ಶಿಕ್ಷಣ ಸಿಗಬೇಕು ಮತ್ತು ಕಲಿಕೆ ಯಶಸ್ವಿಯಾಗಬೇಕು ಎಂಬುದನ್ನು ಖಾತರಿಪಡಿಸುವುದು ಇದರ ಉದ್ದೇಶವಾಗಿದೆ. ವಿಶೇಷ ಸಾಮರ್ಥ್ಯದ ಮಕ್ಕಳಿಗೂ ಇತರರಂತೆ ಸಮಾನ ಅವಕಾಶಗಳನ್ನು ಒದಗಿಸುವುದು, ವಿಭಿನ್ನ ಸಾಮಾಜಿಕ ಹಿನ್ನೆಲೆ ಮತ್ತು ವೈವಿಧ್ಯಮಯ ಕಲಿಕಾ ಅವಶ್ಯಕತೆ ಇರುವ ಮಕ್ಕಳಿಗೂ ಶಾಲಾ ವ್ಯವಸ್ಥೆಯನ್ನು ನಿರ್ಮಿಸುವುದು ಇದರ ಗುರಿಯಾಗಿದೆ.

ಶಿಕ್ಷಕರ ಶಿಕ್ಷಣದ ಕುರಿತ ಜಸ್ಟೀಸ್ ವರ್ಮಾ ಅವರ ವರದಿ (2012)ಯಲ್ಲಿ, ಸೇವಾ ಪೂರ್ವ ಶಿಕ್ಷಕರ ಸಂಸ್ಥೆಗಳಲ್ಲಿ ಶೇಕಡಾ 90ರಷ್ಟು, ಸರ್ಕಾರೇತರ ಕ್ಷೇತ್ರದಲ್ಲಿದ್ದು, ನಮ್ಮ ದೇಶದ ಪೂರ್ವ ಭಾಗದ ಮತ್ತು ಈಶಾನ್ಯ ಪ್ರದೇಶಗಳಲ್ಲಿರುವ ಇಂತಹ ಸಂಸ್ಥೆಗಳಲ್ಲಿ ಶಿಕ್ಷಕರಿಗೆ ಬೇಡಿಕೆಗೆ ಅನುಗುಣವಾಗಿ ತರಬೇತಿ ಕೊಡುವ ಸಾಮರ್ಥ್ಯವೂ ಇರದೆ ಕೊರತೆಯನ್ನು ಎದುರಿಸುತ್ತಿವೆ. ಸರ್ಕಾರವು, ವಿಶೇಷವಾಗಿ ಕೊರತೆ ಎದುರಿಸುತ್ತಿರುವ ರಾಜ್ಯಗಳಲ್ಲಿ, ಶಿಕ್ಷಕರ ಶಿಕ್ಷಣ ಸಂಸ್ಥೆಗಳ ಸ್ಥಾಪನೆಗೆ ಹಣ ವಿನಿಯೋಗಿಸಬೇಕು ಮತ್ತು ಅವುಗಳ ಸಾಂಸ್ಥಿಕ ಸಾಮರ್ಥ್ಯವನ್ನು ಹೆಚ್ಚಿಸಬೇಕು ಎಂದು ಈ ಆಯೋಗವು ಶಿಫಾರಸು ಮಾಡಿದೆ.

ಎನ್‌ಸಿಇಆರ್‌ಟಿಯ ಪ್ರಾದೇಶಿಕ ಶಿಕ್ಷಣ ಸಂಸ್ಥೆಗಳು (ಆರ್‌ಐಇ) ತಮ್ಮ ಬಿ.ಎಡ್ (ಭೋಪಾಲ ಮತ್ತು ಅಜ್ಮೀರ್) ಹಾಗೂ ಮೈಸೂರು, ಭುವನೇಶ್ವರ, ಭೋಪಾಲ ಮತ್ತು ಅಜ್ಮೀರ್‌ನಲ್ಲಿ ಎಂ.ಎಡ್ ಕೋರ್ಸ್‌ಗಳಲ್ಲಿ ಸಮನ್ವಯ ಶಿಕ್ಷಣದ ಅಂಶಗಳನ್ನೂ ಸೇರ್ಪಡೆ ಮಾಡುತ್ತಿವೆ.

ವಿನೂತನ ಅಭ್ಯಾಸಗಳು

ಸರ್ವ ಶಿಕ್ಷಾ ಅಭಿಯಾನದಡಿ ಗುಜರಾತ್‌ನಲ್ಲಿ ದೂರ ಶಿಕ್ಷಣ ಕಾರ್ಯಕ್ರಮಕ್ಕೆ ಟೆಲಿಕಾನ್ಫರೆನ್ಸಿಂಗ್ ಸೌಲಭ್ಯವನ್ನು ರಾಜ್ಯದಾದ್ಯಂತ ಬಳಸಿಕೊಳ್ಳಲಾಗುತ್ತಿದ್ದು, ದೇಶದ ಮೊದಲ ರಾಜ್ಯವೆಂಬ ಹೆಗ್ಗಳಿಕೆಗೆ ಪಾತ್ರವಾಗಿದೆ. ರಾಜ್ಯ, ಜಿಲ್ಲೆ, ಬ್ಲಾಕ್ ಮತ್ತು ಕ್ಲಸ್ಟರ್ ಮಟ್ಟದಲ್ಲಿ ಸಂಪರ್ಕ, ಉತ್ತೇಜನ, ಪರಿವೀಕ್ಷಣೆ ಮತ್ತು ಮೇಲ್ವಿಚಾರಣೆ ದೃಷ್ಟಿಯಿಂದ ಮಧ್ಯಪ್ರವೇಶ ಮಾಡಲು ತಂತ್ರಜ್ಞಾನವನ್ನು ಬಳಸಿಕೊಳ್ಳಲಾಗುತ್ತಿದೆ. ಇದು ನಿರ್ದಿಷ್ಟವಾಗಿ ತರಬೇತಿಗೆ ಸಂಬಂಧಿಸಿದಂತೆ ಪರಿಣಾಮಕಾರಿಯಾಗಿದೆ, ಏಕೆಂದರೆ ಕ್ಯಾಸ್‌ಕೇಡ್ ಮಾದರಿಯ ಮುಖಾಮುಖಿ ತರಬೇತಿಯ ಕೆಲವು ಅನಾನುಕೂಲಗಳು (ಪರಿಹರಿಸಲಾದ ಸಮಸ್ಯೆಗಳು ಸಂಖ್ಯೆ ಮತ್ತು ಅವಧಿ) ನಿವಾರಣೆಯಾಗಿವೆ ಎಂದು ಇದರ ಪ್ರತಿಕ್ರಿಯೆ ಅಥವಾ ಹಿಮ್ಮಾಹಿತಿ ಸೂಚಿಸುತ್ತದೆ.
ಗಮನಹರಿಸಲಾದ ನಾಲ್ಕು ಪ್ರಮುಖ ಅಂಶಗಳು: ಜಾಗೃತಿ ಮೂಡಿಸುವುದು, ಸಾಂದರ್ಭಿಕ ಸಮಸ್ಯೆಗಳು, ಪಠ್ಯಕ್ರಮ ಮತ್ತು ಆಯಾ ರಾಜ್ಯದ ನಿಗದಿತ ಅವಶ್ಯಕತೆಗಳು. ಜಾಗೃತಿ ಮೂಡಿಸುವಿಕೆಯು ಪರ್ಯಾಯ ಶಾಲಾ ವ್ಯವಸ್ಥೆ, ಶಾಲಾ ಅಭಿವೃದ್ಧಿ, ಎಂಟಿಎ ಮತ್ತು ಪಿಟಿಎ ಮೂಲಕ ಪೋಷಕರಿಗೆ ಶಿಕ್ಷಣ, ವಿಇಸಿಗಳು, ಎಂಟಿಎಗಳು, ಪಿಟಿಎಗಳು ಮತ್ತು ವಿಸಿಡಬ್ಲ್ಯೂಸಿಗಳು, ಬಿಆರ್‌ಸಿಸಿಗಳು ಮತ್ತು ಸಿಆರ್‌ಸಿಸಿಗಳಿಗೆ ಅಕಾಡೆಮಿಕ್ ಪ್ರೋತ್ಸಾಹ, ಸರ್ವ ಶಿಕ್ಷಾ ಅಭಿಯಾನದ ಹಣಕಾಸಿನ ಸಂಗತಿಗಳು ಮತ್ತು ಸಮುದಾಯದ ಪಾಲ್ಗೊಳ್ಳುವಿಕೆಗಳನ್ನು ಒಳಗೊಂಡಿದೆ. ಪ್ರಾಸಂಗಿಕ ಸಮಸ್ಯೆಗಳು ವಿಕಲಾಂಗ ಮಕ್ಕಳ ಶಿಕ್ಷಣ, ಲಿಂಗ ಶಿಕ್ಷಣ, ಎನ್‌ಪಿಇಜಿಇಎಲ್ ಮತ್ತು ಕೆಜಿಬಿವಿಗಳು, ಗುಣಮಟ್ಟ ಮತ್ತು ಕ್ರಿಯಾ ಸಂಶೋಧನೆ, ಯೋಜನಾ ನಿರ್ವಾಹಕರಿಗೆ ಉತ್ತೇಜನ, ನಾಗರಿಕ ಕರ್ತವ್ಯಗಳು ಮತ್ತು ಮಾಹಿತಿ ನಿರ್ವಹಣೆ ವ್ಯವಸ್ಥೆ (ಎಂಐಎಸ್)ಗಳನ್ನು ಒಳಗೊಂಡಿದೆ. ಪಠ್ಯಕ್ರಮ ವಲಯವು ಪರಿಸರ ವಿಜ್ಞಾನ, ಕಠಿಣ ವಿಷಯಗಳ ಬೋಧನೆ, ಶಿಕ್ಷಕರಿಗೆ ಭಾಷಾ ತರಬೇತಿ ಮತ್ತು ಇಂಗ್ಲಿಷ್ ಬೋಧನೆ, ಬೋಧನೆ-ಕಲಿಕಾ ಸಾಮಗ್ರಿಗಳ ಬಳಕೆ ಮತ್ತು ಅಭಿವೃದ್ಧಿಯಂತಹ ವಿಷಯಗಳನ್ನು ಒಳಗೊಂಡಿದೆ. ನಿಗದಿತ ರಾಜ್ಯ ಸಂಬಂಧಿ ಕಾರ್ಯಕ್ರಮಗಳು ದಾಖಲಾತಿ ಆಂದೋಲನಗಳು ಮತ್ತು ಬಾಲಕಿಯರಿಗೆ ಜೀವನ ಕೌಶಲ ತರಬೇತಿಗಳನ್ನು ಒಳಗೊಂಡಿವೆ.

ಶಿಕ್ಷಕರಿಗೆ ಶಿಕ್ಷಣಶಾಸ್ತ್ರೀಯ ವಿಧಾನದಲ್ಲಿ ನೀಡಲಾಗುತ್ತಿರುವ ತರಬೇತಿಯಲ್ಲಿ ಬದಲಾವಣೆ ತರುವುದು ಎಜುಸ್ಯಾಟ್‌ನ ಮುಖ್ಯ ಪಾತ್ರ. ಚೆನ್ನೈನ ಅಣ್ಣಾ ವಿಶ್ವವಿದ್ಯಾಲಯದಲ್ಲಿ ಅಪ್ ಲಿಂಕ್ ಸೌಲಭ್ಯವಿದ್ದರೆ, ಎಲ್ಲಾ ಡಯಟ್, ಬಿಆರ್‌ಸಿಗಳು ಮತ್ತು ಸರ್ಕಾರಿ ಶಿಕ್ಷಕರ ತರಬೇತಿ ಸಂಸ್ಥೆಗಳಲ್ಲಿ ಡೌನ್ ಲಿಂಕ್ ಸೌಲಭ್ಯವಿದೆ. ಗ್ರಾಮೀಣ ಪ್ರದೇಶಗಳಲ್ಲಿನ ಶಿಕ್ಷಕರಿಗೆ ಬೋಧನೆ-ಕಲಿಕೆ ಸಂಪನ್ಮೂಲಗಳನ್ನು ಕೈಗೆಟುಕುವಂತೆ ಮಾಡಲು ಈ ತಂತ್ರಜ್ಞಾನದಿಂದ ಸಾಧ್ಯವಾಗಿದೆ. ಉಪಗ್ರಹ ಆಧಾರಿತ ಸ್ಯಾಟಲೈಟ್ ಇಂಟರಾಕ್ಟೀವ್ ಟರ್ಮಿನಲ್‌ಗಳನ್ನು (ಎಸ್‌ಐಟಿಎಸ್) ಒದಗಿಸಲಾಗಿದ್ದು, 385 ಬಿಆರ್‌ಸಿಗಳಿಗೆ 424 ಎಸ್‌ಐಟಿಗಳನ್ನು ಮತ್ತು ರಾಜ್ಯ ಯೋಜನಾ ನಿರ್ದೇಶನಾಲಯಕ್ಕೆ, ಡಿಟಿಇಆರ್‌ಟಿ ಮತ್ತು ಶಾಲಾ ಶಿಕ್ಷಣ ಇಲಾಖೆಗೆ 9 ಟಿಟಿಐಗಳನ್ನು ವಿತರಿಸಲಾಗಿದೆ. ಎಸ್‌ಐಟಿ ಸೌಕರ್ಯ ಹೊಂದಿರುವ ಕಲಿಕಾ ಕೇಂದ್ರಗಳು ದೂರದ ಕುಗ್ರಾಮದಲ್ಲಿರುವ ಎಲಿಮೆಂಟರಿ ಶಾಲೆಗಳ ಶಿಕ್ಷಕರಿಗೆ ಗುಣಮಟ್ಟದ ಶಿಕ್ಷಣಕ್ಕೆ ಬೇಕಾದ ಮಾಹಿತಿಗಳನ್ನು ಒದಗಿಸುವುದಲ್ಲದೆ, ಎಜುಸ್ಯಾಟ್ ಮೂಲಕ ಒಮ್ಮೆ ಶಾಲೆಗಳು ನೆಟ್‌ವರ್ಕ್‌ನೊಳಗೆ ಬಂದವೆಂದರೆ, ಇ-ಆಡಳಿತ, ಆರೋಗ್ಯ ರಕ್ಷಣೆ ಮತ್ತು ಸಮುದಾಯ ಕಲ್ಯಾಣವನ್ನೂ ಸಾಧಿಸಬಹುದು. ತಂತ್ರಜ್ಞಾನದ ಮೂಲಕ ಪ್ರಾದೇಶಿಕ, ಗ್ರಾಮೀಣ ಮತ್ತು ನಗರ ಎಂಬ ತಡೆಗೋಡೆಗಳನ್ನು ತೊಡೆದು, ಅಭಿವೃದ್ಧಿ ಹೊಂದಿದ ಮತ್ತು ಅಭಿವೃದ್ಧಿ ಹೊಂದುತ್ತಿರುವ ಎಂಬ ಡಿಜಿಟಲ್ ಅಂತರವಿಲ್ಲದೆ ಎಲ್ಲಾ ಪ್ರದೇಶಗಳ ವಿದ್ಯಾರ್ಥಿಗಳನ್ನೂ ಬೆಸೆಯಲು ಸಾಧ್ಯ. 2005-06ರಲ್ಲಿ ಬೃಹತ್ ಪ್ರಮಾಣದ ಶಿಕ್ಷಕರ ತರಬೇತಿ ಉಪಕ್ರಮದೊಂದಿಗೆ ಬೆಸೆದು ಅಳವಡಿಸಿಕೊಳ್ಳಲಾದ ಎಜುಸ್ಯಾಟ್ ವ್ಯವಸ್ಥೆಯನ್ನು ಈ ಕೆಳಗಿನಂತೆ ವಿವರಿಸಲಾಗಿದೆ:

412 ಕೇಂದ್ರಗಳಲ್ಲಿ ಶಿಕ್ಷಕರ ತರಬೇತಿಗೆ ಎಜುಸ್ಯಾಟ್ ಸೌಲಭ್ಯವನ್ನು ಬಳಸಲಾಗಿತ್ತು. ಮೊದಲು, ವಿಷಯವಾರು ಹಾಗೂ ಸಾಂಪ್ರದಾಯಿಕವಲ್ಲದ ಕ್ಷೇತ್ರಗಳಲ್ಲಿನ ಸಂಪನ್ಮೂಲ ವ್ಯಕ್ತಿಗಳು ಮತ್ತು ತಜ್ಞರನ್ನು ಗುರುತಿಸಲಾಯಿತು ಹಾಗೂ ಸರಣಿ ಕಾರ್ಯಾಗಾರಗಳ ಮೂಲಕ ಮಾದರಿಗಳನ್ನು ಸಿದ್ಧಪಡಿಸಲಾಯಿತು. ನಂತರ ಅವುಗಳನ್ನು ಪ್ರತಿಯೊಬ್ಬ ಶಿಕ್ಷಕರಿಗೂ ವಿತರಿಸಲಾಯಿತು. ಆರಂಭದಲ್ಲಿ ಮೂರು ಬಗೆಯ ತರಬೇತಿಗಳನ್ನು ನಡೆಸಲಾಯಿತು. ಎ ಮಾದರಿ (ಕ್ಲಸ್ಟರ್ ಮಟ್ಟದ ತರಬೇತಿ)- ಆರು ದಿನಗಳ ಈ ತರಬೇತಿಯಲ್ಲಿ ಚಟುವಟಿಕೆ ಕೇಂದ್ರಿತ ಕಲಿಕಾ ಕಾರ್ಡುಗಳು, ಪ್ರಾಥಮಿಕ ಹಂತದ ಮಕ್ಕಳಿಗಾಗಿ ಸ್ವಯಂ ಕಲಿಕಾ ಸಾಮಗ್ರಿಗಳು, ಹಿರಿಯ ಪ್ರಾಥಮಿಕ ಶಾಲಾ ಹಂತಕ್ಕಾಗಿ ವಿಜ್ಞಾನ, ತಮಿಳು ಮತ್ತು ಇಂಗ್ಲಿಷ್ ವಿಷಯಕ್ಕೆ ಸಂಬಂಧಿಸಿದ ಬೋಧನಾ ವಿಧಾನ; ಹೀಗೆ, 40 ಲಕ್ಷಕ್ಕೂ ಅಧಿಕ ಶಿಕ್ಷಕ-ತರಬೇತಿ ದಿವಸಗಳನ್ನು (ಪ್ರತಿ ಶಿಕ್ಷಕರೂ 18 ದಿನಗಳ ತರಬೇತಿ ಪಡೆದಂತೆ) ಸಾಧಿಸುವುದು ಸಾಧ್ಯವಾಯಿತು. ಚೆನ್ನೈನ ಕಾರ್ಪೊರೇಷನ್ ಶಾಲೆಗಳಲ್ಲಿ ಆರಂಭವಾಧ ಚಟುವಟಿಕೆ ಕೇಂದ್ರಿತ ಕಲಿಕೆ ಈಗ ಆ ರಾಜ್ಯದ 402 ಬ್ಲಾಕ್‌ಗಳಿಗೆ ವಿಸ್ತರಣೆಯಾಗಿದೆ.

ಸಾಲಮಾಂಕಾ ಹೇಳಿಕೆ ಮತ್ತು ಸೂಕ್ತ ಕ್ರಿಯೆಯ ಚೌಕಟ್ಟು

ಎಲ್ಲ ಶೈಕ್ಷಣಿಕ ವ್ಯಕ್ತಿಗಳಿಗೂ ಸೂಕ್ತ ಸಿದ್ಧತೆ ಎಂಬುದು ಸಮನ್ವಯ ಶಿಕ್ಷಣದ ಕಡೆಗೆ ಹೆಜ್ಜೆಯಿಡಲು ಪ್ರಮುಖ ಅಶವಾಗಿದೆ. ಅಲ್ಲದೆ, ಶಿಕ್ಷಕರ ನೇಮಕಾತಿಯಲ್ಲಿ ಅಂಗವಿಕಲರನ್ನು ನೇಮಕ ಮಾಡುವುದರಿಂದ ಅವರು ವಿಕಲಾಂಗ ಮಕ್ಕಳಿಗೆ ಆದರ್ಶಪ್ರಾಯರಾಗುವುದನ್ನು ಗುರುತಿಸಲಾಗಿದೆ. ಈ ಕೆಳಗಿನ ಕ್ರಮಗಳನ್ನು ಕೈಗೊಳ್ಳಬಹುದು.

1. ಪ್ರಾಥಮಿಕ, ಮಾಧ್ಯಮಿಕ ಮುಂತಾದ ಎಲ್ಲಾ ವಿದ್ಯಾರ್ಥಿ ಶಿಕ್ಷಕರಿಗೆ ಸೇವಾಪೂರ್ವ ತರಬೇತಿ ಏಕರೂಪದಲ್ಲಿ ಸಿಗಬೇಕು. ಅಂಗವೈಕಲ್ಯದ ಬಗ್ಗೆ ಧನಾತ್ಮಕ ದೃಷ್ಟಿಕೋನ, ಅದಾದ ಬಳಿಕ ಸ್ಥಳೀಯವಾಗಿ ಸಿಗುವ ನೆರವಿನಿಂದ ಶಾಲೆಗಳಲ್ಲಿ ಏನು ಸಾಧಿಸಬಹುದು ಎಂದು ಅರ್ಥ ಮಾಡಿಸಬೇಕು. ಅತ್ಯಗತ್ಯವಾಗಿ ಬೇಕಾಗಿರುವ ಅರಿವು ಮತ್ತು ಕೌಶಲ್ಯಗಳೆಂದರೆ, ಉತ್ತಮ ಬೋಧನೆ, ವಿಶೇಷ ಅವಶ್ಯಕತೆಗಳನ್ನು ನಿರ್ಣಯಿಸುವುದು, ಪಠ್ಯಕ್ರಮದ ವಸ್ತು.ವಿಷಯಗಳನ್ನು ಅಳವಡಿಸುವುದು, ಸಹಾಯಕ ತಂತ್ರಜ್ಞಾನಗಳ ಸದುಪಯೋಗ, ಹೆಚ್ಚಿನ ಪ್ರಮಾಣದ ಸಾಮರ್ಥ್ಯಗಳಿಗೆ ಸೂಕ್ತವಾದ ವ್ಯಕ್ತಿಗತ ಬೋಧನಾ ವಿಧಾನಗಳು ಇತ್ಯಾದಿ. ಶಿಕ್ಷಕ-ತರಬೇತಿ ಶಾಲೆಗಳಲ್ಲಿ, ಪ್ರತಿಯೊಬ್ಬ ಶಿಕ್ಷಕರು ತಮ್ಮ ಸ್ವಾಯತ್ತತೆಯನ್ನು ಅನ್ವಯಿಸಲು, ಕೌಶಲ್ಯದಿಂದ ವಿದ್ಯಾರ್ಥಿಗಳ ಅವಶ್ಯಕತೆಗೆ ಅನುಗುಣವಾಗಿ ಪಠ್ಯಕ್ರಮವನ್ನು ಅಳವಡಿಸಲು ಹಾಗೂ ತಜ್ಞರು ಮತ್ತು ಪೋಷಕರ ಜತೆ ಸಹಕಾರದಿಂದ ಇರುವಂತೆ ಶಿಕ್ಷಕರನ್ನು ಸಜ್ಜುಗೊಳಿಸುವ ನಿಟ್ಟಿನಲ್ಲಿ ಸೂಕ್ತ ಗಮನ ನೀಡಬೇಕಾಗುತ್ತದೆ.

2. ವಿಶೇಷ ಶೈಕ್ಷಣಿಕ ಅವಶ್ಯಕತೆಗೆ ಸ್ಪಂದಿಸಲು ಬೇಕಾದ ಕೌಶಲಗಳನ್ನು ಕಲಿಕೆಯ ಮೌಲ್ಯಮಾಪನ ಮತ್ತು ಶಿಕ್ಷಕರ ಪ್ರಮಾಣೀಕರಣದ ವೇಳೆ ಗಮನಕ್ಕೆ ತೆಗೆದುಕೊಳ್ಳಬೇಕು.

3.ಆದ್ಯತೆಯ ಮೇರೆಗೆ, ಬರವಣಿಗೆಯ ಸಾಮಗ್ರಿಗಳನ್ನು ಸಿದ್ಧಪಡಿಸಬೇಕು, ಸ್ಥಳೀಯ ಆಡಳಿತಗಾರರು, ಮೇಲ್ವಿಚಾರಕರು, ಮುಖ್ಯ ಶಿಕ್ಷಕರು, ಹಿರಿಯ ಶಿಕ್ಷಕರಿಗಾಗಿ ವಿಚಾರ ಸಂಕಿರಣ ಆಯೋಜಿಸಿ, ಅವರಲ್ಲಿ ಈ ಕ್ಷೇತ್ರದಲ್ಲಿಯೇ ನಾಯಕತ್ವ ತುಂಬಿ, ಕಡಿಮೆ ಅನುಭವವಿರುವ ಶಿಕ್ಷಕರಿಗೆ ಪ್ರೋತ್ಸಾಹ ನೀಡುವುದು.

4. ಸೇವಾ ನಿರತ ಶಿಕ್ಷಕರು ಕರ್ತವ್ಯ ಸಲ್ಲಿಸುವ ವೇಳೆ ಎದುರಿಸುವ ವಿವಿಧ ಮತ್ತು ಕೆಲವೊಮ್ಮೆ ಕಷ್ಟದ ಪರಿಸ್ಥಿತಿಗಳನ್ನು ಗಮನದಲ್ಲಿಟ್ಟುಕೊಂಡು ಎಲ್ಲಾ ಶಿಕ್ಷಕರಿಗೂ ತರಬೇತಿ ನೀಡುವುದು ದೊಡ್ಡ ಸವಾಲು. ಸೇವಾ ನಿರತ ತರಬೇತಿಯನ್ನು ಸಾಧ್ಯವಿರುವಾಗಲೆಲ್ಲಾ ಶಾಲಾ ಮಟ್ಟದಲ್ಲಿಯೇ ತರಬೇತುದಾರರೊಂದಿಗೆ ಪರಸ್ಪರ ಸಂವಾದದ ಮೂಲಕ ಅಭಿವೃದ್ಧಿಪಡಿಸಬೇಕು ದೂರಶಿಕ್ಷಣ ಮತ್ತು ಸ್ವಯಂ- ಸೂಚನಾ ತಂತ್ರಗಳ ಮೂಲಕ ಬೆಂಬಲಿಸಬೇಕು.

5. ಹೆಚ್ಚುವರಿ ಅರ್ಹತೆಗಳಿಗೆ ಎಡೆಮಾಡುವ ವಿಶೇಷ ಅವಶ್ಯಕತೆಗಳ ಶಿಕ್ಷಣದಲ್ಲಿ ಪಡೆದ ವಿಶೇಷ ತರಬೇತಿಯನ್ನು ಸಾಮಾನ್ಯವಾಗಿ ತರಬೇತಿ ಮತ್ತು ಅನುಭವದೊಂದಿಗೆ ಪೂರಕವಾಗಿ ಸಂಯೋಜಿಸಬೇಕು ಅಥವಾ ಪೂರ್ವಭಾವಿಯಾಗಿ ಅನ್ವಯಿಸಬೇಕು.

6. ವಿಶೇಷ ಶಿಕ್ಷಕರು ವಿಭಿನ್ನ ಚೌಕಟ್ಟಿನಲ್ಲಿ ಕೆಲಸ ಮಾಡಬೇಕಾದ ಮತ್ತು ವಿಶೇಷ ಶೈಕ್ಷಣಿಕ ಅವಶ್ಯಕತೆಗಳ ಕಾರ್ಯಕ್ರಮಗಳಲ್ಲಿ ಪ್ರಮುಖ ಪಾತ್ರ ವಹಿಸಬೇಕಾದ ಕಾರಣ ವಿಶೇಷ ಶಿಕ್ಷಕರ ತರಬೇತಿಯನ್ನು ಪುನರ್‌ಪರಿಶೀಲಿಸಬೇಕಾದ ಅಗತ್ಯವಿದೆ. ಒಂದು ಅಥವಾ ಹೆಚ್ಚಿನ ಅಂಗವೈಕಲ್ಯ ಕ್ಷೇತ್ರಗಳಲ್ಲಿ ಹೆಚ್ಚಿನ ಪರಿಣತಿಯನ್ನು ಪಡೆಯುವ ಮೊದಲು, ಎಲ್ಲಾ ರೀತಿಯ ಅಸಾಮರ್ಥ್ಯಗಳನ್ನು ಒಳಗೊಳ್ಳಬಲ್ಲ ಒಂದು ಸಮಗ್ರ ವರ್ಗೀಯ ವಿಧಾನವಿಲ್ಲ ಎಂಬುದನ್ನು ಪ್ರಧಾನ ಆಶಯವಾಗಿ ಅಭಿವೃದ್ಧಿಪಡಿಸಿಕೊಳ್ಳಬೇಕು. ಆಶಯವನ್ನು ಪ್ರಮುಖ ದನ್ನುವನ್ನು ಸಾಮಾನ್ಯ ಕೋರ್ ಆಗಿ ಅಭಿವೃದ್ಧಿಪಡಿಸಬೇಕು.

7.ವಿಶೇಷ ಅವಶ್ಯಕತೆಯ ಶಿಕ್ಷಣವನ್ನು ಅಭಿವೃದ್ಧಿಪಡಿಸುವ ಪ್ರಕ್ರಿಯೆಯಲ್ಲಿ ವಿಶ್ವವಿದ್ಯಾಲಯಗಳು ಸಲಹಾತ್ಮಕವಾದ ಅಂದರೆ, ವಿಶೇಷವಾಗಿ, ಸಂಶೋಧನೆ, ಮೌಲ್ಯಮಾಪನ, ಶಿಕ್ಷಕರ ತರಬೇತುದಾರರನ್ನು ಸಜ್ಜುಗೊಳಿಸುವುದು, ತರಬೇತಿ ಕಾರ್ಯಕ್ರಮಗಳು ಮತ್ತು ಸಾಮಗ್ರಿಗಳ ವಿನ್ಯಾಸ ಮುಂತಾಗಿ ಪ್ರಮುಖ ಪಾತ್ರ ವಹಿಸಬೇಕಾಗಿದೆ. ಮುಂದುವರಿದ ಮತ್ತು ಮುಂದುವರಿಯುತ್ತಿರುವ ದೇಶಗಳ ವಿಶ್ವವಿದ್ಯಾಲಯಗಳು ಮತ್ತು ಸಂಸ್ಥೆಗಳ ಜಾಲ ನಿರ್ಮಿಸುವುದನ್ನು ಉತ್ತೇಜಿಸಬೇಕು. ಈ ರೀತಿ ಸಂಶೋಧನೆ ಮತ್ತು ತರಬೇತಿಯನ್ನು ಬೆಸೆಯುವುದು ಮಹತ್ವದ ಹಾದಿಯಾಗಿದೆ. ಸಂಶೋಧನೆ ಮತ್ತು ತರಬೇತಿ ಪ್ರಕ್ರಿಯೆಯಲ್ಲಿ ದೈಹಿಕ ನ್ಯೂನತೆಯುಳ್ಳ ವ್ಯಕ್ತಿಗಳೂ ಮಹತ್ವದ ಪಾತ್ರ ವಹಿಸಿದ್ದು, ಅವರ ದೃಷ್ಟಿಕೋನಗಳನ್ನೂ ಸಂಪೂರ್ಣವಾಗಿ ಪರಿಗಣಿಸಿ ಅಳವಡಿಸಿಕೊಳ್ಳಲಾಗಿದೆ ಎಂಬುದನ್ನು ಖಾತರಿಪಡಿಸಿಕೊಳ್ಳಬೇಕು.

8. ಶಿಕ್ಷಣದ ವ್ಯವಸ್ಥೆಯಲ್ಲಿ -ಅಸಾಮರ್ಥ್ಯವಿರುವ ವಿದ್ಯಾರ್ಥಿಗಳಿಗೂ ಅದ್ಭುತವಾದ ಶೈಕ್ಷಣಿಕ ಸೇವೆಗಳನ್ನು ಒದಗಿಸುವ ಸಂಸ್ಥೆಗಳಲ್ಲಿಯೂ- ಮರುಕಳಿಸುವ ಸಮಸ್ಯೆಯೆಂದರೆ ಆ ವಿದ್ಯಾರ್ಥಿಗಳಿಗೆ ಮಾದರಿ ವ್ಯಕ್ತಿಗಳ ಕೊರತೆ ಇರುವುದು. ಆ ವಿದ್ಯಾರ್ಥಿಗಳು ದೈಹಿಕ ನ್ಯೂನತೆ ಇರುವ ಸಾಧಕರೊಂದಿಗೆ ಸಂವಾದ ಮಾಡಲು ಬಯಸುತ್ತಾರೆ. ಆ ಮೂಲಕ ಅವರು ತಮ್ಮ ಜೀವನಶೈಲಿಗಳನ್ನು ಮತ್ತು ಆಕಾಂಕ್ಷೆಗಳ ಬಗ್ಗೆ ವಾಸ್ತವದ ನಿರೀಕ್ಷೆಗಳನ್ನು ಇಟ್ಟುಕೊಳ್ಳಲು ಪ್ರೇರಣೆ ಸಿಕ್ಕಿದಂತಾಗುತ್ತದೆ. ಇದಕ್ಕೆ ಪೂರಕವಾಗಿ, ದೈಹಿಕ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಅಂಗವೈಕಲ್ಯ ಸಬಲೀಕರಣ ಮತ್ತು ನಾಯಕತ್ವ ತರಬೇತಿ ನೀಡಿದರೆ, ಅವರ ಬದುಕಿನ ಮೇಲೆ ಪರಿಣಾಮ ಬೀರಬಲ್ಲ ನೀತಿ ನಿರೂಪಣೆ ಮಾಡುವ ನಿಟ್ಟಿನಲ್ಲಿ ಅವರೂ ನೆರವಾಗಬಲ್ಲರು. ಆದ್ದರಿಂದ, ಶಿಕ್ಷಣ ವ್ಯವಸ್ಥೆಗಳಲ್ಲಿ ವಿಕಲಾಂಗ ಶಿಕ್ಷಕರು ಮತ್ತು ಶೈಕ್ಷಣಿಕ ಸಿಬ್ಬಂದಿಯ ನೇಮಕಾತಿಗೆ ಆದ್ಯತೆ ನೀಡಬೇಕು ಹಾಗೂ ವಿಶೇಷ ಅವಶ್ಯಕತೆಯುಳ್ಳ ಮಕ್ಕಳ ಶಿಕ್ಷಣಕ್ಕೆ, ಅದೇ ವಲಯದ ಅಂಗವಿಕಲ ಸಾಧಕರ ಪಾಲ್ಗೊಳ್ಳುವಿಕೆ ಅಗತ್ಯ.

ಎಜುಸ್ಯಾಟ್ ಎನ್‌ಸಿಇಆರ್‌ಟಿ ಮೂಲಕ ಆಗಸ್ಟ 2008ರಲ್ಲಿ ಎನ್‌ಸಿಇಆರ್‌ಟಿ ಉಪಕ್ರಮವಾಗಿ, ಹಿಂದಿ ಮಾತನಾಡುವ ಬಿಹಾರ, ಉತ್ತರ ಪ್ರದೇಶ, ಮಧ್ಯಪ್ರದೇಶ, ರಾಜಸ್ಥಾನ, ಗುಜರಾತ್, ಹಿಮಾಚಲಪ್ರದೇಶ, ಜಮ್ಮು-ಕಾಶ್ಮೀರ, ದೆಹಲಿ ಹಾಗೂ ಹರಿಯಾಣ ರಾಜ್ಯಗಳ ಶಿಕ್ಷಕರಿಗಾಗಿ ಎರಡು ದಿನಗಳ ಟೆಲಿಕಾನ್ಫರೆನ್ಸ್ ಕಾರ್ಯಕ್ರಮವನ್ನು ಆಯೋಜಿಸಲಾಯಿತು. ಬೇರೆ ಬೇರೆ ಎಜುಸ್ಯಾಟ್ ಕಲಿಕಾ ಕೇಂದ್ರಗಳಿಂದ ಈ ಕಾರ್ಯಕ್ರಮ ನಡೆಯಿತು. ಸಮನ್ವಯ ಮತ್ತು ಸಮಕಾಲೀನ ಭಾರತೀಯ ಶಾಲಾ ಶಿಕ್ಷಣದಲ್ಲಿ ಅದರ ಪ್ರಸ್ತುತತೆ, ಪರಿಶಿಷ್ಟ ಜಾತಿ, ಪರಿಶಿಷ್ಟ ಪಂಗಡ, ಅಲ್ಪಸಂಖ್ಯಾತ ಹಾಗೂ ದೈಹಿಕ ನ್ಯೂನತೆ ಇರುವ ಮಕ್ಕಳನ್ನು ಯಶಸ್ವಿಯಾಗಿ ಇದರಲ್ಲಿ ಒಳಗೊಳ್ಳುವಂತೆ ಮಾಡಲು ಕೈಗೊಳ್ಳಬೇಕಾದ ಕಾರ್ಯವಿಧಾನಗಳು ಎಂಬ

ವಿಷಯಗಳು ಇದರಲ್ಲಿ ಒಳಗೊಂಡಿದ್ದವು. ಕಾರ್ಯಕ್ರಮದಲ್ಲಿ ಒಳಗೊಂಡಿದ್ದ ನಿರ್ದಿಷ್ಟ ವಿಷಯಗಳೆಂದರೆ:

ಸಮನ್ವಯ, ಕೌಶಲಗಳು ಮತ್ತು ಸಾಮರ್ಥ್ಯಗಳು

ತರಗತಿಯಲ್ಲಿ ಏಕೀಕರಣ, ವೈವಿಧ್ಯತೆ ಹೇಗೆ ವಿಭಿನ್ನ, ವಿಶೇಷ ಅವಶ್ಯಕತೆಗಳನ್ನು ಮೌಲ್ಯಮಾಪನ ಮಾಡುವ ಬಗ್ಗೆ ಶಿಕ್ಷಕರಿಗೆ ಕಲಿಸುವುದು, ಸಮನ್ವಯದಲ್ಲಿ ಪ್ರುಶಿಕ್ಷಕರ ಪಾತ್ರ, ಮೌಲ್ಯಮಾಪನಕ್ಕೆ ಮಗುವನ್ನು ಕಳುಹಿಸುವ ಮುನ್ನ ವಹಿಸಬೇಕಾದ ಎಚ್ಚರಿಕೆ, ಮೌಲ್ಯಮಾಪನಕ್ಕೆ ಕಳುಹಿಸುವ ಮುನ್ನ ಸಾಮಾನ್ಯ ಶಿಕ್ಷಕರು ಏನು ಮಾಡಬೇಕು, ಶಿಕ್ಷಕರ ಸಮಸ್ಯೆಗಳು ಮತ್ತು ಸಮನ್ವಯಕ್ಕೆ ಪೂರ್ವಸಿದ್ಧತೆ, ಶಾಲೆಯ ಸಿದ್ಧತೆ.

ಪಠ್ಯಕ್ರಮವನ್ನು ಸಂದರ್ಭೋಚಿತಗೊಳಿಸುವುದು- ಪರಿಶಿಷ್ಟ ಜಾತಿ, ಪಂಗಡ ಮತ್ತು ಅಲ್ಪಸಂಖ್ಯಾತರಿಗೆ ಪಠ್ಯವನ್ನು ಅಳವಡಿಸಿ ಸಂದರ್ಭೋಚಿತಗೊಳಿಸುವ ಅಗತ್ಯ: ಪಠ್ಯದ ಅಳವಡಿಕೆಯ ವಿವಿಧ ಮಾದರಿಗಳು, ಪಾಠಗಳ ಅಳವಡಿಕೆ ಏರ್ಪಾಡಿನ ಮಾದರಿ, ಪಾಠಗಳ ಏರ್ಪಾಡು.

ಕಟ್ಟುಕತೆ, ಧೋರಣೆ ಮತ್ತು ವಾಸ್ತವ: ಪರಿಶಿಷ್ಟ ಜಾತಿ ಮತ್ತು ಪಂಗಡದ ಕುರಿತು ಶಿಕ್ಷಕರಿಗೆ ತಮ್ಮದೇ ದೃಷ್ಟಿಕೋನವನ್ನು ಗುರುತಿಸಲು ಕಲಿಸುವುದು, ಸರ್ಕಾರದ ನಿಬಂಧನೆಗಳು ಮತ್ತು ಅವುಗಳ ಅಳವಡಿಕೆಯಲ್ಲಿ ಎದುರಾದ ಸಮಸ್ಯೆಗಳು ಹಾಗೂ ಸಂಭವನೀಯ ಪರಿಹಾರಗಳು.

ಸಮಾನ ಮನಸ್ಕ ಮಕ್ಕಳಿಗೆ ಪಾಠ ಮತ್ತು ಸಹಕಾರಿ ಕಲಿಕಾ ಕಾರ್ಯವಿಧಾನಗಳು: ಬಗೆಗಳು, ಉಪಯೋಗಗಳು, ಯೋಜನೆ ಮತ್ತು ಸಹಕಾರಿ ಕಲಿಕೆಯ ನಿರ್ವಹಣೆ ಹಾಗೂ ಮುನ್ನೆಚ್ಚರಿಕೆ.

ಸಹಭಾಗಿ ಕಲಿಕೆ:

ಸಮನ್ವಯಕ್ಕಾಗಿ ವ್ಯವಸ್ಥೆಯಲ್ಲಿ ಸುಧಾರಣೆ:

ಸಮನ್ವಯ ಮೌಲ್ಯಮಾಪನ ಪ್ರುಕ್ರಿಯೆಯಲ್ಲಿ ವಿಶೇಷ ಶಿಕ್ಷಣದ ಅವಶ್ಯಕತೆ (ಎಸ್.ಇ.ಎನ್.) ಇರುವ ಮಕ್ಕಳು, ಎಸ್‌ಸಿ, ಎಸ್.ಟಿ ಮತ್ತು ಅಲ್ಪಸಂಖ್ಯಾತರ ಸಮಸ್ಯೆಗಳು ಮತ್ತು ಸಂಪ್ರದಾಯದಾಚೆ ಚಿಂತಿಸುವುದು.

**

ಸಮನ್ವಯ ಶಿಕ್ಷಣಕ್ಕೆ ಉತ್ತೇಜನ ನೀಡಲು ರಾಷ್ಟ್ರೀಯ ಮತ್ತು ಅಂತರರಾಷ್ಟ್ರೀಯ ಮಟ್ಟದಲ್ಲಿ ನೀತಿ ಜಾರಿಗೊಳಿಸುವುದರಿಂದ, ವಿಶೇಷ ಶಿಕ್ಷಣದ ಅವಶ್ಯಕತೆ ಇರುವ ಕಲಿಕಾರ್ಥಿಗಳನ್ನು ದೊಡ್ಡ ಪ್ರಮಾಣದಲ್ಲಿ ಮುಖ್ಯವಾಹಿನಿ ತರಗತಿಗಳಿಗೆ ಕರೆತರಲು ಸಾಧ್ಯವಾಗುತ್ತದೆ. ಆದರೂ, ತರಬೇತಿಗೊಂಡ ಪ್ರುಶಿಕ್ಷಕರು ಮತ್ತು ಸಾಮಾನ್ಯ ಶಿಕ್ಷಕರು ಇನ್ನೂ ಪರಿಣಾಮಕಾರಿ ಸಮನ್ವಯ ಶಿಕ್ಷಣವನ್ನು ಬೆಂಬಲಿಸಲು ಬೇಕಾದ ಕೌಶಲವನ್ನು ಗಳಿಸಿಕೊಂಡಿಲ್ಲ. ಇದರ ಪರಿಣಾಮವಾಗಿ, ಬೇರೆ ಬೇರೆ ಹಿನ್ನೆಲೆಗಳು ಮತ್ತು ಪರಿಸ್ಥಿತಿಗಳುಳ್ಳ ಕಲಿಕಾರ್ಥಿಗಳನ್ನು ಒಂದು ತರಗತಿಯಲ್ಲಿ ಒಟ್ಟಿಗೇ ಹಾಕಿದಾಗ, ಅವರು ಪರಿಣಾಮಕಾರಿಯಾಗಿ ಕಲಿಯಲು ಸಮರ್ಥರಾಗುವುದಿಲ್ಲ, ಅಂತಿಮವಾಗಿ ಅವರು ಅನುತ್ತೀರ್ಣರಾಗಬೇಕಾದ ದುಃಸ್ಥಿತಿ ಇದೆ. ಸಮನ್ವಯ ತರಗತಿಯಲ್ಲಿ ಕೌಶಲಪೂರ್ಣವಾಗಿ ಕಲಿಸುವ ಕೊರತೆ ಎದುರಾದಾಗ, ಇತ್ತ ಪ್ರುಶಿಕ್ಷಕರಿಗೂ ಸಮನ್ವಯ ಶಿಕ್ಷಣ ಅರ್ಥವಾಗಿಲ್ಲ, ಅತ್ತ  ಪಠ್ಯಕ್ರಮದಲ್ಲೂ ಇದಕ್ಕೆ ಸಂಬಂಧಿಸಿದ ಗಮನಾರ್ಹ ಅಂಶಗಳು ಒಳಗೊಂಡಿಲ್ಲ ಎಂಬುದು ಸ್ಪಷ್ಟವಾಗಿ ಗೊತ್ತಾಗುತ್ತದೆ. ಸೇವಾಪೂರ್ವ ಮತ್ತು ಸೇವಾನಿರತ ಎಂಬ ಎರಡೂ ಹಂತದಲ್ಲಿ ನಡೆಯುವ ತರಬೇತಿಗಳು ಬಹುತೇಕ ವಿಶೇಷ ಶಿಕ್ಷಣದ ಬಗ್ಗೆಯೇ ಕೇಂದ್ರೀಕೃತವಾಗಿರುತ್ತವೆ. ವಿಶೇಷ ಶಿಕ್ಷಣದ ಅವಶ್ಯಕತೆಯುಳ್ಳ (ಎಸ್‌ಇಎನ್) ಮಕ್ಕಳೂ ಸೇರಿದಂತೆ ಪ್ರತಿಯೊಬ್ಬ ಕಲಿಕಾರ್ಥಿಯ ಅವಶ್ಯಕತೆಯನ್ನು ಪೂರೈಸುವುದು ಸಾಮಾನ್ಯ ಶಾಲೆಯಲ್ಲಿ ಕಲಿಸುತ್ತಿರುವ ಶಿಕ್ಷಕರ ಆದ್ಯ ಕರ್ತವ್ಯ. ಸೇವಾ ಪೂರ್ವ ಮತ್ತು ಸೇವಾ ನಿರತ ಈ ಎರಡೂ ಹಂತದ ಶಿಕ್ಷಕರ ಶಿಕ್ಷಣದಲ್ಲಿ ಬದಲಾವಣೆಗಾಗಿ ವಹಿಸಬೇಕಾದ ಪ್ರಮುಖ ಪಾತ್ರ ಇದ್ದೇ ಇದೆ. ಆದ್ದರಿಂದ ಈ ಶಿಕ್ಷಕರು ತಮ್ಮ ಜ್ಞಾನ, ಕೌಶಲ ಮತ್ತು ಅನುಭವಗಳನ್ನು ಕಾಲಕಾಲಕ್ಕೆ

ನವೀಕರಿಸಿಕೊಳ್ಳುವುದು ಅತ್ಯಗತ್ಯ. ಪ್ರಸ್ತುತ ಇರುವ ಶಿಕ್ಷಕರ ಶಿಕ್ಷಣ ಕಾರ್ಯಕ್ರಮಗಳಲ್ಲಿ, ಅಂತಹ ಅವಕಾಶಗಳಿಗೆ ಒತ್ತು ನೀಡುವ ಬದಲು ಅಲಕ್ಷಿಸಲಾಗಿದೆ. ಅಲ್ಲದೆ, ಲಭ್ಯವಿರುವ ಅಂತಹ ತರಬೇತಿಗಳೂ ತಾತ್ಕಾಲಿಕವಾಗಿದ್ದು, ಅಲ್ಪಾವಧಿಯವು ಇಲ್ಲವೇ ತರಬೇತುದಾರರ ಕೊರತೆಯಿಂದ ಬಳಲುತ್ತಿದೆ. ಇನ್ನೊಂದು ರೀತಿಯಿಂದ ಹೇಳುವುದಾದರೆ, ದೇಶದ ಶಿಕ್ಷಕರು ಮತ್ತು ಪ್ರಶಿಕ್ಷಕರು ಬಳಸುವ 'ಸಮನ್ವಯ' ಎಂಬ ಪದದ ಅರ್ಥಕ್ಕೆ ಪರಿಪೂರ್ಣತೆ ಇಲ್ಲದಾಗಿದೆ. ಸಮನ್ವಯ (ಇನ್‌ಕ್ಲೂಷನ್) ಎಂಬ ಪದವನ್ನು ಏಕೀಕರಣ ಅಥವಾ ಸೇರ್ಪಡೆ (ಇಂಟಿಗ್ರೇಷನ್) ಎಂಬುದಕ್ಕೆ ಸಮಾನಾರ್ಥಕವಾಗಿ ಬಳಕೆಯಾಗುತ್ತಿದ್ದು, ಒಂದು ಮಗು ಶಾಲೆಗೆ ದಾಖಲಾದರೆ ಅದನ್ನು ಸಮನ್ವಯ ಎಂದು ಅರ್ಥೈಸಿಕೊಳ್ಳಲಾಗುತ್ತಿದೆ.

ಶಿಕ್ಷಕರಿಗೆ ಸೂಚಕಗಳು

ಟೇಬಲ್

| ಕ್ರಮಸಂಖ್ಯೆ | ದಿಕ್ಸೂಚಿ | ಪ್ರತಿಕ್ರಿಯೆ |
|---|---|---|
| ತತ್ವ ಮತ್ತು ಧೋರಣೆ | | |
| 1. | ಶಿಕ್ಷಕರು ಸಮನ್ವಯ ಶಿಕ್ಷಣದ ಪರಿಕಲ್ಪನೆಯನ್ನು ಮತ್ತು ಅದು ಸಮಗ್ರ ಶಿಕ್ಷಣದಿಂದ ಹೇಗೆ ಭಿನ್ನವಾಗಿದೆ ಎಂಬುದನ್ನು ಅರ್ಥ ಮಾಡಿಕೊಳ್ಳುತ್ತಾರೆ; ತರಗತಿಯಲ್ಲಿ ವೈವಿಧ್ಯವನ್ನು ತರುವ ನಿಟ್ಟಿನಲ್ಲಿ ಅವರು ವ್ಯವಸ್ಥೆಯಲ್ಲಿ ಬದಲಾವಣೆ ತರಲು ಯತ್ನಿಸುತ್ತಾರೆ. | 3 2 1 |
| 2. | ಶಿಕ್ಷಕರು ತಮ್ಮ ತರಗತಿಯಲ್ಲಿ ಎಲ್ಲಾ ಮಕ್ಕಳನ್ನೂ ಸೇರಿಸಿಕೊಳ್ಳುತ್ತಾರೆ, ತರಗತಿಗೆ ಹಾಜರಾಗುವುದು ಅವರ ಹಕ್ಕಾಗಿದ್ದು ತರಗತಿಯಲ್ಲಿ ಪಾಲ್ಗೊಳ್ಳಲು ಎಲ್ಲರಿಗೂ ಸಮಾನ ಅವಕಾಶವಿದೆ ಎಂದು ಭಾವಿಸುತ್ತಾರೆ. | 3 2 1 |
| 3. | ಶಿಕ್ಷಕರು ತರಗತಿಯಲ್ಲಿ ಪ್ರತಿ ಮಗುವಿಗೂ ಸಾಧಿಸಲು ಮತ್ತು ಸ್ವೀಕಾರಾರ್ಹ ಮಟ್ಟದ ಕಲಿಕೆಯನ್ನು ಗಳಿಸಲು ಸಮಾನ ಅವಕಾಶ ನೀಡುತ್ತಾರೆ. ಎಲ್ಲಾ ಮಕ್ಕಳಿಗೂ ಶಿಕ್ಷಣ ವ್ಯವಸ್ಥೆಯಲ್ಲಿ ಭಾಗವಹಿಸುವಿಕೆಗೆ ಸಮಾನ ಅವಕಾಶ ನೀಡುವುದು ಪ್ರಮುಖ ಮೌಲ್ಯ ಎಂದು ಶಿಕ್ಷಕರು ಪರಿಗಣಿಸುತ್ತಾರೆ. | 3 2 1 |
| 4. | ಮಕ್ಕಳು ಧನಾತ್ಮಕ ಚರ್ಚೆ ನಡೆಸಲು ಶಿಕ್ಷಕಿ ಪ್ರೋತ್ಸಾಹ ನೀಡುತ್ತಾರೆ ಮತ್ತು ತರಗತಿಯಲ್ಲಿ ಯಾವುದೇ ರೀತಿಯ ಭೇದಭಾವವನ್ನು ಪ್ರೋತ್ಸಾಹಿಸುವುದಿಲ್ಲ | 3 2 1 |
| 5. | ಪಾಠ ಮಾಡುವಾಗ ಪ್ರತಿ ಮಗುವಿನ ವಿಶಿಷ್ಟ ಗುಣಸ್ವಭಾವಗಳು, ಆಸಕ್ತಿಗಳು, ಸಾಮರ್ಥ್ಯಗಳು ಮತ್ತು ಕಲಿಕೆಯ ಅಗತ್ಯವನ್ನು ಶಿಕ್ಷಕರು ಗಣನೆಗೆ ತೆಗೆದುಕೊಳ್ಳುತ್ತಾರೆ. | 3 2 1 |
| 6. | ಮಕ್ಕಳ ಗೆಲುವು ಅಥವಾ ಸೋಲಿನಲ್ಲಿ ತಮ್ಮ ಪಾತ್ರವನ್ನು ಶಿಕ್ಷಕರು ಗುರುತಿಸಿ ಸ್ವೀಕರಿಸುತ್ತಾರೆ. | 3 2 1 |
| 7. | ತರಗತಿಯಲ್ಲಿ ಮಕ್ಕಳ ವಿಭಿನ್ನ ಬೇಕುಬೇಡಗಳನ್ನು ಶಿಕ್ಷಕಿ ಉತ್ತೇಜಿಸುತ್ತಾರೆ ಹಾಗೂ ಮಕ್ಕಳಿಗೆ ಕುರುಡ, ಮೂಗ ಇತ್ಯಾದಿ ಹಣೆಪಟ್ಟಿ ಬಳಸುವುದಿಲ್ಲ. | |
| 8. | ಶಾಲೆಯಿಂದ ಹೊರಗುಳಿದಿರುವ ಮಕ್ಕಳನ್ನು ಮತ್ತೆ ಶಾಲೆಗೆ ಕಳುಹಿಸುವಂತೆ ಅವರ ಪೋಷಕರನ್ನು ಶಿಕ್ಷಕರು ಹುರಿದುಂಬಿಸುತ್ತಾರೆ. | 3 2 1 |
| 9. | ಮಕ್ಕಳು ಸಕಾರಣವಾಗಿ ವ್ಯಕ್ತಪಡಿಸುವ ಹೊಸ ಆಲೋಚನೆಗಳನ್ನು ಮತ್ತು ಆಶಯಗಳನ್ನು ಶಿಕ್ಷಕರು ಗೌರವಿಸಿ ಶ್ಲಾಘಿಸುತ್ತಾರೆ. | 3 2 1 |
| 10. | ಅಕಾಡೆಮಿಕ್ ಕೌಶಲಗಳನ್ನಷ್ಟೇ ಅಲ್ಲದೇ, ಮಕ್ಕಳು ತೋರುವ ಇತರ ಎಲ್ಲಾ ಬಗೆಯ ಕೌಶಲಗಳನ್ನೂ ಶಿಕ್ಷಕರು ಪ್ರೋತ್ಸಾಹಿಸುತ್ತಾರೆ. | 3 2 1 |

11. ದೈನಂದಿನವಾಗಿ ಒಂದೇ ತಂಡದ ಮಕ್ಕಳನ್ನು ಶಾಲೆ ಶುಚಿಗೊಳಿಸಲು ಮತ್ತು ನೀರು ತರಲು ನಿಯೋಜಿಸದೆ, ಪ್ರತಿಯೊಂದು ಮಗುವಿಗೂ ಆ ಕೆಲಸಗಳಿಗೆ ನಿಯೋಜಿಸುತ್ತಾರೆ. 3 2 1

12. ಶಿಕ್ಷಕರು ಪರಸ್ಪರ ಮತ್ತು ಎಲ್ಲಾ ಮಕ್ಕಳೊಂದಿಗೆ ಮುಕ್ತ ಚರ್ಚೆಯಲ್ಲಿ ಪಾಲ್ಗೊಳ್ಳುತ್ತಾರೆ. 3 2 1

13. ಶಿಕ್ಷಕರು ನಿಗದಿತ ಮಕ್ಕಳಿಗಷ್ಟೇ ಸಿಗದೆ, ತರಗತಿಯ ಎಲ್ಲಾ ಮಕ್ಕಳಿಗೂ ಲಭ್ಯವಾಗುತ್ತಾರೆ. 3 2 1

14. ಅಕಾಡೆಮಿಕ್ ಆಗಿ ಮತ್ತು ನಡವಳಿಕೆಯಿಂದ ಎಲ್ಲಾ ಮಕ್ಕಳಿಂದಲೂ ಶಿಕ್ಷಕರು ಹೆಚ್ಚು ಹೆಚ್ಚು ನಿರೀಕ್ಷಿಸುತ್ತಾರೆ ಹಾಗೂ ಇದು ಅವರ ಕಲಿಕಾ ತರಗತಿಯಲ್ಲಿ ವ್ಯಕ್ತಗೊಳ್ಳುತ್ತದೆ.

15. ದೈಹಿಕ ಮತ್ತು ಮಾನಸಿಕ ಮಿತಿಗಳುಳ್ಳ ಹಾಗೂ ಬಡ ಕೌಟುಂಬಿಕ ಹಿನ್ನೆಲೆಯುಳ್ಳ ಮಕ್ಕಳು ಇತರ ಮಕ್ಕಳಿಗಿಂತ ಯಾವ ರೀತಿಯಲ್ಲೂ ಕೀಳಲ್ಲ ಎಂದು ಶಿಕ್ಷಕರು ಕಂಡುಕೊಳ್ಳುತ್ತಾರೆ. 3 2 1

16. ಶಿಕ್ಷಕರು ವಿಶೇಷ ಅವಶ್ಯಕತೆ ಇರುವ ಮಕ್ಕಳನ್ನು (ಸಿಡಬ್ಲ್ಯೂಎಸ್‌ಎನ್) ಯಾವುದೇ ಹೊರೆ ಅಂದುಕೊಳ್ಳದೆ ತರಗತಿಗೆ ಬರಮಾಡಿಕೊಳ್ಳುತ್ತಾರೆ. ಅಲ್ಲದೆ, ಇತರ ಮಕ್ಕಳು ಅಂತಹ ಮಕ್ಕಳ ಶಕ್ತಿ ಮತ್ತು ವಿಶೇಷ ಅಗತ್ಯಗಳನ್ನು ಅರ್ಥ ಮಾಡಿಕೊಳ್ಳುವಂತೆ ಮಾಡುತ್ತಾರೆ. 3 2 1

17. ಶಿಕ್ಷಕರು ವಿದ್ಯಾರ್ಥಿಗಳ ಬಗ್ಗೆ ಋಣಾತ್ಮಕ ಆಕ್ಷೇಪಗಳನ್ನು ವ್ಯಕ್ತಪಡಿಸುವುದಿಲ್ಲ ಮತ್ತು ಸಿಡಬ್ಲ್ಯೂಎಸ್‌ಎನ್ ಕುರಿತು
ಬೇರೆ ಮಕ್ಕಳು ವ್ಯಂಗ್ಯವಾಡದೇ, ಬೆದರಿಸದೇ ಇರುವ ಹಾಗೆ ಕಾಳಜಿ ವಹಿಸುತ್ತಾರೆ. 3 2 1

18. ವಿಭಿನ್ನ ಪಠ್ಯಕ್ರಮ ಮತ್ತು ಚಟುವಟಿಕೆಗಳ ಮೂಲಕ ಶಿಕ್ಷಕರು ತರಗತಿಯ ಎಲ್ಲಾ ವಿದ್ಯಾರ್ಥಿಗಳು ಸಮಾನವಾಗಿ ಪಾಲ್ಗೊಳ್ಳಲು ಅವಕಾಶ ನೀಡುತ್ತಾರೆ. 3 2 1

19. ತರಗತಿಯಲ್ಲಿನ ಮಕ್ಕಳನ್ನು ನೋಡುತ್ತಲೇ ಬೋಧನಾ ಕೌಶಲಗಳನ್ನು ಕಲಿಯುತ್ತಾರೆ, ಕಲಿಕೆಗೆ ಇದೊಂದು ಅವಕಾಶವೆಂದು ಭಾವಿಸುತ್ತಾರೆಯೇ ವಿನಾ, ಇದೊಂದು ನಿಭಾಯಿಸಬೇಕಾದ ಸಮಸ್ಯೆ ಎಂದಾಗಲಿ ಅಥವಾ ಮತ್ತೊಬ್ಬರು ಸರಿಪಡಿಸಬೇಕಾದ ಸಮಸ್ಯೆ ಎಂದಾಗಲಿ ಬೇಸರಿಸಿಕೊಳ್ಳುವುದಿಲ್ಲ.

20. ತರಗತಿಯಲ್ಲಿನ ಎಲ್ಲಾ ವಿದ್ಯಾರ್ಥಿಗಳ ಜವಾಬ್ದಾರಿ ತಮ್ಮದು ಎಂದು ಶಿಕ್ಷಕರು ಭಾವಿಸುತ್ತಾರೆ; ಯಾವುದೇ ವಿದ್ಯಾರ್ಥಿಯನ್ನು ಅಲಕ್ಷಿಸುವುದಿಲ್ಲ. 3 2 1

21. ಬಾಲಕಿಯರು ಎದುರಿಸುವ ನಿರ್ದಿಷ್ಟ ಸಮಸ್ಯೆಗಳಾದ ಭದ್ರತೆ, ರಕ್ಷಣೆ, ಖಾಸಗಿತನತದ ಕೊರತೆ ಮತ್ತು ಮನೆಗೆಲಸಗಳ ಬಗ್ಗೆ ಶಿಕ್ಷಕರು ಅರ್ಥ ಮಾಡಿಕೊಳ್ಳುತ್ತಾರೆ.

ಸಹಯೋಗ

22. ಶಿಕ್ಷಕರು ಸಮನ್ವಯ ಶಿಕ್ಷಣವನ್ನು ಪರಿಣಾಮಕಾರಿಯಾಗಿ ಅನುಷ್ಠಾನಕ್ಕೆ ತರಲು ಸಹಯೋಗದ ಯೋಜನೆ ಮತ್ತು ಬೋಧನೆಯನ್ನು ಏರ್ಪಾಡು ಮಾಡುತ್ತಾರೆ. 3 2 1

23. ತರಗತಿಗಳಲ್ಲಿ ಬೋಧನೆ-ಕಲಿಕೆಯನ್ನು ಬಲಗೊಳಿಸಲು ಶಿಕ್ಷಕರು ತಮ್ಮ ಸಹೋದ್ಯೋಗಿ ಶಿಕ್ಷಕರ ಜೊತೆ ತಮ್ಮ ಅನುಭವಗಳನ್ನು/ ಪರಿಣತಿಯನ್ನು ಹಂಚಿಕೊಳ್ಳುತ್ತಾರೆ. 3 2 1

24. ಶಿಕ್ಷಕರು ಇತರ ಶಿಕ್ಷಕರ ವಿಭಿನ್ನ ಕಲಿಕಾ ಗುಂಪುಗಳ ಅನುಭವದಿಂದ ಹೊಸ ಅಂಶಗಳನ್ನು ಕಲಿಯುವ ಆಸಕ್ತಿ ತೋರುತ್ತಾರೆ. 3 2 1

25. ಶಿಕ್ಷಕರು ಪೋಷಕರೊಂದಿಗೆ ನಿಯಮಿತವಾಗಿ ಸಂಪರ್ಕದಲ್ಲಿದ್ದು, ಅವರ ಮಕ್ಕಳ ಕಲಿಕೆಯಲ್ಲಿನ ಪ್ರಗತಿಯ ಬಗ್ಗೆ ಚರ್ಚಿಸುತ್ತಾರೆ. 3 2 1

26. ತಮ್ಮ ಮಕ್ಕಳ ಕುರಿತಾದ ನಿರ್ಧಾರದಲ್ಲಿ ಪೋಷಕರೂ ಭಾಗಿಯಾಗುವಂತೆ ಶಿಕ್ಷಕರು ಉತ್ತೇಜನ ನೀಡುತ್ತಾರೆ. 3 2 1

27. ಪೋಷಕರು ತಮ್ಮ ಮಕ್ಕಳ ಬಗ್ಗೆ ನೀಡುವ ಮಾಹಿತಿಗಳ ವಿಷಯದಲಿ ಗರಿಷ್ಠ ಮಟ್ಟದ ಗೌಪ್ಯತೆ ಕಾಯ್ದುಕೊಳ್ಳುತ್ತಾರೆ. 3 2 1

1

28. ಅಧ್ಯಯನ ಮತ್ತು ಇತರ ಚಟುವಟಿಕೆಗಳಲ್ಲಿ ವಿದ್ಯಾರ್ಥಿಗಳು ಪರಸ್ಪರ ಬೆಂಬಲ ನೀಡುವಂತೆ ಶಿಕ್ಷಕರು ಉತ್ತೇಜನ ನೀಡುತ್ತಾರೆ. 3 2 1

29. ವಿದ್ಯಾರ್ಥಿಗಳೊಂದಿಗೆ ಧನಾತ್ಮಕ ಸಂಬಂಧ ಬೆಳೆಸಲು ಶಿಕ್ಷಕರು ಯತ್ನಿಸುತ್ತಾರೆ. 3 2 1

30. ಶಿಕ್ಷಕರು ವಿದ್ಯಾರ್ಥಿಗಳ ಪ್ರತಿಭೆ ಮತ್ತು ಅಗತ್ಯಗಳನ್ನು ಗುರುತಿಸಲು ಇತರ ಶಿಕ್ಷಕರೊಂದಿಗೆ ಕೈಜೋಡಿಸುತ್ತಾರೆ. 3 2 1

31. ಶಿಕ್ಷಕರು ಸಮುದಾಯ ಬೆಂಬಲಿತ ಸೇವೆ-ಸಂಪನ್ಮೂಲಗಳ ವ್ಯಾಪ್ತಿ ಹಾಗೂ ಕಾರ್ಯಚಟುವಟಿಕೆಗಳನ್ನು ಪಡೆದುಕೊಳ್ಳಲು ಪ್ರಯತ್ನಿಸುತ್ತಾರೆ.

32. ಶಿಕ್ಷಕರು ತಮ್ಮ ಅರಿವು ಮತ್ತು ದೃಷ್ಟಿಕೋನಗಳನ್ನು ಪರಸ್ಪರ ಹಂಚಿಕೊಳ್ಳುವ ಮೂಲಕ ಕಲಿಕಾ ಪ್ರಕ್ರಿಯೆಯನ್ನು ವ್ಯಕ್ತಿನಿಷ್ಠ ಅಥವಾ ವ್ಯಕ್ತಿಕೇಂದ್ರಿತಗೊಳಿಸುವ ವಿಧಾನಗಳನ್ನು ಕಂಡುಕೊಳ್ಳುತ್ತಾರೆ. 3 2 1

33. ಸಹೋದ್ಯೋಗಿಗಳು ಮತ್ತು ವಿದ್ಯಾರ್ಥಿಗಳ ಸಾಮಾಜಿಕ, ಭಾವನಾತ್ಮಕ ಮತ್ತು ವೃತ್ತಿ ಸಂಬಂಧೀ ಅವಶ್ಯಕತೆಗಳಿಗೆ ಶಿಕ್ಷಕರು ಪರಸ್ಪರ ಸ್ಪಂದಿಸುತ್ತಾರೆ. 3 2 1

34. ಶಿಕ್ಷಕರು ಮಕ್ಕಳನ್ನು ಆಟವಾಡುವಂತೆ, ಒಟ್ಟಿಗೆ ಕಲಿಯುವಂತೆ ಹಾಗೂ ಜವಾಬ್ದಾರಿಗಳನ್ನು ಹಂಚಿಕೊಳ್ಳುವಂತೆ ಉತ್ತೇಜಿಸುತ್ತಾರೆ. 3 2 1

ತರಬೇತಿ ಮತ್ತು ಬೋಧನೆ

35. ಕಲಿಕಾರ್ಥಿಗಳ ಬದಲಾಗುವ ಅವಶ್ಯಕತೆಗಳಿಗೆ ಅನುಗುಣವಾಗಿ ಸಾಧ್ಯವಾದಷ್ಟೂ ಹೊಸ ಕೌಶಲಗಳನ್ನು ಬೆಳೆಸಿಕೊಳ್ಳಲು ಶಿಕ್ಷಕರು ಸದಾ ಸಿದ್ಧರಿರುತ್ತಾರೆ. 3 2 1

36. ಶಿಕ್ಷಕರು ಶಾಲೆಯ ಹೊರಗಿನ ಚಟುವಟಿಕೆಗಳಿಗಿಂತ ತರಗತಿ ಮತ್ತು ವಿದ್ಯಾರ್ಥಿಗಳೊಂದಿಗೆ ಹೆಚ್ಚಿನ ಸಮಯ ಕಳೆಯುತ್ತಾರೆ. 3 2 1

37. ವಿವಿಧ ಕಲಿಕಾ ವಿಧಾನಗಳಿಗೆ, ಕಲಿಕಾ ಪದ್ಧತಿಗಳಿಗೆ ಅನುಕೂಲವಾಗಲೆಂದು ಶಿಕ್ಷಕರು ವಿದ್ಯಾರ್ಥಿ ಸಮೂಹದ ಬದಲಾಗುವ ವಿಭಿನ್ನ ಅವಶ್ಯಕತೆಗಳಿಗೆ ಅನುಗುಣವಾಗಿ ನಿರಂತರವಾಗಿ ಬೋಧನಾ ಕಾರ್ಯತಂತ್ರಗಳು ಮತ್ತು ಚಟುವಟಿಕೆಗಳನ್ನು ಪರಿಣಾಮಕಾರಿಯಾಗಿ ಬಳಸುತ್ತಾರೆ. ಆ ಮೂಲಕ 3 2 1

38. ಶಿಕ್ಷಕರು ಕೈಗೆತ್ತಿಕೊಂಡಿರುವ ಬೋಧನಾ ಕಾರ್ಯತಂತ್ರಗಳು ಮತ್ತು ಕಲಿಕಾ ಚಟುವಟಿಕೆಗಳು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನೊಂದಿಗೆ (ನ್ಯಾಷನಲ್ ಕರಿಕ್ಯುಲಮ್ ಫ್ರೇಮ್‌ವರ್ಕ್) ಅನುರೂಪವಾಗಿರುತ್ತವೆ. 3 2 1

39. ವಿದ್ಯಾರ್ಥಿಗಳ ಸೋಲು ಅಥವಾ ದೌರ್ಬಲ್ಯಗಳ ಬಗ್ಗೆ ಒತ್ತು ನೀಡುವುದಕ್ಕಿಂತ ಅವರಲ್ಲಿ ಆತ್ಮಗೌರವ ಬೆಳೆಸುವ ಮತ್ತು ಉತ್ತೇಜಿಸುವ ನಿಟ್ಟಿನಲ್ಲಿ ಶಿಕ್ಷಕರು ಅವರ ಸಾಮರ್ಥ್ಯಗಳ ಕಡೆಗೆ ಹೆಚ್ಚು ಗಮನ ವಹಿಸಲು ಪ್ರಯತ್ನಿಸುತ್ತಾರೆ. 3 2 1

40. ವಿದ್ಯಾರ್ಥಿಗಳು ತಮ್ಮ ಒಳನೋಟ, ಚಿಂತನೆಗಳು ಮತ್ತು ಅಭಿಪ್ರಾಯಗಳನ್ನು ಮುಕ್ತವಾಗಿ ವ್ಯಕ್ತಪಡಿಸುವ ಅವಕಾಶವನ್ನು ಶಿಕ್ಷಕರು ನೀಡುತ್ತಾರೆ. 3 2 1

41. ಅವಶ್ಯವಿರುವ ಮಕ್ಕಳಿಗೆ ನಿಯಮಿತವಾದ ವಿರಾಮಗಳನ್ನು ಶಿಕ್ಷಕರು ಒದಗಿಸುತ್ತಾರೆ. 3 2 1

42. ವಿದ್ಯಾರ್ಥಿಗಳ ನಡುವೆ ಸಕ್ರಿಯ ಚರ್ಚೆಗಳನ್ನು ಶಿಕ್ಷಕರು ಉತ್ತೇಜಿಸುತ್ತಾರೆ. 3 2 1

43. ಶಿಕ್ಷಕರು ವಿದ್ಯಾರ್ಥಿಗಳ ಅನುಭವ ಮತ್ತು ಸಮಸ್ಯೆಗಳನ್ನು ಆಲಿಸಲು ಆಸಕ್ತಿ ತೋರುತ್ತಾರೆ. 3 2 1

44. ವಿದ್ಯಾರ್ಥಿಗಳಲ್ಲಿ ಸಾಮಾಜಿಕ ಮತ್ತು ಲಿಂಗಾಧಾರಿತ ತಾರತಮ್ಯಗಳನ್ನು ಶಿಕ್ಷಕರು ಉತ್ತೇಜಿಸುವುದಿಲ್ಲ 3 2 1

45. ಮಕ್ಕಳು ಮತ್ತು ಅವರ ಕುಟುಂಬಗಳ ನಿತ್ಯಜೀವನಕ್ಕೆ ಪ್ರಸ್ತುತವಾದ ಯಾವುದನ್ನು ಕಲಿಸಲಾಗುತ್ತದೆ ಎಂದು ಅರ್ಥೈಸಲು ಶಿಕ್ಷಕರು ಯತ್ನಿಸುತ್ತಾರೆ. 3 2 1

46. ವಿದ್ಯಾರ್ಥಿಗಳು ಉನ್ನತ ಮಟ್ಟದ ಕಲಿಕೆಯ ಸವಾಲು ಸ್ವೀಕರಿಸುವಂತೆ ಪ್ರೇರೇಪಿಸಲು ಅಗತ್ಯವಾದ ವಿಷಯ ಜ್ಞಾನವನ್ನು ಶಿಕ್ಷಕರು ಪ್ರದರ್ಶಿಸುತ್ತಾರೆ. 3 2 1

47. ಪಾಠದ ವಿಷಯವು ಕಲಿಕಾರ್ಥಿಗಳ ಹಿನ್ನೆಲೆ ಮತ್ತು ಆಸಕ್ತಿಗಳಿಗೆ ಪೂರಕವಾಗಿದೆ ಎಂದು ಖಚಿತಪಡಿಸಿಕೊಳ್ಳಲು ಶಿಕ್ಷಕರು ಯತ್ನಿಸುತ್ತಾರೆ.3 2 1

48. ಸಿಡಬ್ಲ್ಯೂಎಸ್ಎನ್ ಕುರಿತು ಮಕ್ಕಳು ತೋರುವ ವರ್ತನೆ ಮತ್ತು ನಡವಳಿಕೆಗೆ ಶಿಕ್ಷಕರೇ ಸಮರ್ಪಕ ಮಾದರಿಯಾಗಿರುತ್ತಾರೆ. ಹಾಗಾಗಿ, ಈ ಮಕ್ಕಳ ಆತ್ಮವಿಶ್ವಾಸವನ್ನು ಹೆಚ್ಚಿಸುವ ದನಿಯಾಗುತ್ತಾರೆ. 3 2 1

49. ಶಾಲೆಗಳಲ್ಲಿ ನಿರ್ದಿಷ್ಟ ಮಕ್ಕಳಿಗೆ ಕಲಿಸುವ ಸಂದರ್ಭದಲ್ಲಿ ನಿರ್ಮಿಸಲಾಗುವ ಸ್ಥಳೀಯ ಜ್ಞಾನವನ್ನು ವ್ಯವಸ್ಥಿತವಾಗಿ ಕಟ್ಟುವ ಕೆಲಸವನ್ನು ಶಿಕ್ಷಕರು ಮಾಡುತ್ತಾರೆ. 3 2 1

50. ವಿದ್ಯಾರ್ಥಿಗಳ ವ್ಯಕ್ತಿಗತ ಅವಶ್ಯಕತೆಗಳನ್ನು ವಿಸ್ತೃತ ತಿಳಿವಳಿಕೆಯ ರೂಪದಲ್ಲಿ ಪೂರೈಸುವ ದೃಷ್ಟಿಯಿಂದ ಶಿಕ್ಷಕರು ಶಾಲಾ ಆಧಾರಿತ ಕ್ರಿಯಾ ಸಂಶೋಧನೆಯನ್ನು ಕೈಗೊಳ್ಳಲು ಶಿಕ್ಷಕರು ಪ್ರಯತ್ನಿಸುತ್ತಾರೆ. 3 2 1

51. ಶಿಕ್ಷಕರು ತಂತ್ರಜ್ಞಾನದ ಬಳಕೆಗೆ ಕೌಶಲಗಳನ್ನು ಪ್ರದರ್ಶಿಸುತ್ತಾ, ತರಗತಿಗಳಲ್ಲಿಯೂ ಅದರ ಬಳಕೆಯನ್ನು ಮಾಡುತ್ತಾರೆ. 3 2 1

52. ಕ್ರಿಯಾಶೀಲ ಚಿಂತನೆಯನ್ನು ಬೆಳೆಸಿಕೊಳ್ಳುವಂತೆ ಶಿಕ್ಷಕರು ಕಲಿಕಾರ್ಥಿಗಳಿಗೆ ಅವಕಾಶಗಳನ್ನು ನಿರ್ಮಿಸಿಕೊಡುತ್ತಾರೆ. 3 2 1

53. ಶಿಕ್ಷಕರು ಸಿಡಬ್ಲ್ಯೂಎಸ್ಎನ್ ಅವಕಾಶ ಮಾಡಿಕೊಡುವ ನಿಟ್ಟಿನಲ್ಲಿ ತರಗತಿಯಲ್ಲಿ ಆಸನ ವ್ಯವಸ್ಥೆ, ಸಮರ್ಪಕ ಬೆಳಕಿನ ವ್ಯವಸ್ಥೆ, ಶಬ್ದನಿಯಂತ್ರಣ, ಪೀಠೋಪಕರಣಗಳು ಮುಂತಾದ ಭೌತಿಕ ವಾತಾವರಣವನ್ನು ಕಲ್ಪಿಸುತ್ತಾರೆ. 3 2 1

54. ಇಡೀ ತರಗತಿ, ತಂಡ ಮತ್ತು ವೈಯಕ್ತಿಕ ಚಟುವಟಿಕೆಗಳ ಮಿಶ್ರಣವನ್ನು ಶಿಕ್ಷಕರು ತರಗತಿಯಲ್ಲಿ ಪ್ರಯೋಗಿಸುತ್ತಾರೆ. 3 2 1

55. ಸಿಡಬ್ಲ್ಯೂಎಸ್ಎನ್, ಬಾಲಕರು, ಬಾಲಕಿಯರನ್ನು ಒಳಗೊಂಡು ಎಲ್ಲಾ ಮಕ್ಕಳಿಗೂ ಕ್ರೀಡೆ ಮತ್ತು ದೈಹಿಕ ಶಿಕ್ಷಣಕ್ಕೆ ಶಿಕ್ಷಕರು ಒತ್ತು ನೀಡುತ್ತಾರೆ. 3 2 1

56. ನೀತಿ ನಿಯಮಗಳ ಅನುಷ್ಠಾನದಲ್ಲಿ ಮುಖ್ಯ ಶಿಕ್ಷಕರು ಅಥವಾ ಪ್ರಾಂಶುಪಾಲರಿಗೆ ಶಿಕ್ಷಕರು ಸಹಕಾರ ನೀಡುತ್ತಾರೆ. 3 2 1

57. ಶಿಕ್ಷಕರು ಯಾವುದಾದರೂ ವಿದ್ಯಾರ್ಥಿಗೆ ಅವಶ್ಯವಾದ ಕೌಶಲವನ್ನು ಅನೌಪಚಾರಿಕವಾಗಿ ಅಳವಡಿಸಿಕೊಳ್ಳಲು ಸಮರ್ಥರಿರುತ್ತಾರೆ. (ಪ್ರಮಾಣೀಕೃತ ಪಠ್ಯವನ್ನೇ ಅವಲಂಬಿಸುವ ಬದಲು). 3 2 1

58. ವಿದ್ಯಾರ್ಥಿಗಳಿಗೆ ಹೊಂದುವಂತಹ ಪರ್ಯಾಯ ಮೌಲ್ಯಮಾಪನಗಳನ್ನು ಬೆಳೆಸುವ ಮೂಲಕ ಶಿಕ್ಷಕರು ವಿದ್ಯಾರ್ಥಿಗಳಲ್ಲಿ ಉನ್ನತವಾದ, ಆದರೆ ಪರ್ಯಾಯವಾದ ನಿರೀಕ್ಷೆಗಳನ್ನು ಹೊಂದಿರುತ್ತಾರೆ. 3 2 1

59. ಶಿಕ್ಷಕರು ಆಗಿಂದಾಗ್ಗೆ ವಿದ್ಯಾರ್ಥಿಗಳ ಕಲಿಕೆ, ಕಾರ್ಯನಿರ್ವಹಣೆ ಮತ್ತು ಕೆಲಸವನ್ನು ಪರಿಶೀಲಿಸುತ್ತಾರೆ. 3 2 1

60. ಶಿಕ್ಷಕರು ವಿದ್ಯಾರ್ಥಿಗಳಿಗೆ ಅವರ ಅಕಾಡೆಮಿಕ್ ಕಾರ್ಯಗಳ ಬಗ್ಗೆ ನಿರಂತರ ಮಾಹಿತಿ ಕೊಡುತ್ತಿರುತ್ತಾರೆ. 3 2 1

61. ಒಂದು ವಾರ ಅಥವಾ ಅದಕ್ಕಿಂತಲೂ ಹೆಚ್ಚು ದಿನ ಗೈರುಹಾಜರಾದ ವಿದ್ಯಾರ್ಥಿ ಶಾಲೆಗೆ ಮರಳಿ ಬಂದಾಗ ಅಂತಹ ವಿದ್ಯಾರ್ಥಿಗೆ ಶಿಕ್ಷಕರು ಪಾಠಗಳನ್ನು ಶ್ರಮವಹಿಸಿ ಹೇಳಿಕೊಡುತ್ತಾರೆ. 3 2 1

62. ತರಗತಿಯಲ್ಲಿ ಶಿಕ್ಷಕರು ವಿದ್ಯಾರ್ಥಿಯ ಕಲಿಕಾ ವಿಧಾನ ಮತ್ತು ಅಗತ್ಯಗಳಿಗೆ ಹೊಂದುವಂತಹ ವಿದ್ಯಾರ್ಥಿಕೇಂದ್ರಿತ ಕಲಿಕಾ ಶೈಲಿಯಲ್ಲಿ ಬೋಧಿಸುತ್ತಾರೆ. 3 2 1

63. ಶಿಕ್ಷಕರು, ಪಠ್ಯಕ್ರಮ ಮತ್ತು ಬೋಧನಾ ಕ್ರಮಗಳಿಗೆ ಸಂಬಂಧಿಸಿದ ತೀರ್ಮಾನಗಳನ್ನು ತಿಳಿಸಲು ವಿದ್ಯಾರ್ಥಿಗಳ ಪ್ರಗತಿಯ ವಿಶ್ಲೇಷಣೆಯನ್ನು ನಿಯಮಿತವಾಗಿ ಮಾಡುತ್ತಾರೆ. 3 2 1

64. ವಿದ್ಯಾರ್ಥಿಗಳು ಉನ್ನತ ಮಟ್ಟದ ಕಲಿಕೆಗೆ ಸಜ್ಜಾಗುವಂತೆ ಪ್ರೇರೇಪಿಸಲು ಶಿಕ್ಷಕರು ಅವಶ್ಯ ವಿಷಯಗಳೊಂದಿಗೆ ಸಿದ್ಧತೆ ಮಾಡಿಕೊಂಡಿರುತ್ತಾರೆ. 3 2 1

65. ವಿದ್ಯಾರ್ಥಿಗಳಿಗೆ ನೀಡುವ ಮನೆಗೆಲಸ (ಹೋಂ ವರ್ಕ್) ತರಗತಿಯಲ್ಲಿ ಕೊಟ್ಟಿರುವ ಟಿಪ್ಪಣಿಗಳೊಂದಿಗೆ (ನೋಟ್ಸ್) ಸಂಬಂಧ ಹೊಂದಿದ್ದು ಅದುವಿದ್ಯಾರ್ಥಿಗಳ ಜ್ಞಾನಾರ್ಜನೆಗೆ ಮತ್ತು ಕೌಶಲ ವೃದ್ಧಿಗೆ ಸಹಾಯಕವಾಗಿರುತ್ತದೆ. 3 2 1

***

ಎಲ್ಲರಿಗೂ ಶಾಲೆ/ ಸರ್ವರಿಗೂ ಶಾಲೆ

ಸಾರ್ವಜನಿಕ ಸ್ಥಳಗಳಾದ ಶಾಲೆಗಳಲ್ಲಿ ಸಮಾನತೆಯ ಮೌಲ್ಯ, ಸಾಮಾಜಿಕ ನ್ಯಾಯ, ವೈವಿಧ್ಯತೆಯನ್ನು ಗೌರವಿಸುವುದು ಹಾಗೆಯೇ ಮಕ್ಕಳ ಘನತೆ ಮತ್ತು ಹಕ್ಕುಗಳನ್ನು ಕಾಪಾಡುವಂತಾಗಬೇಕು. ಇವುಗಳು ಶಾಲೆಗಳಲ್ಲಿ ಪ್ರಜ್ಞಾಪೂರ್ವಕವಾದ ದೃಷ್ಟಿಕೋನಗಳಾಗಬೇಕು ಹಾಗೂ ಶಾಲಾ ಅಭ್ಯಾಸದ ತಳಹದಿಯಾಗಬೇಕು. ಕಲಿಕಾ ವಾತಾವರಣವನ್ನು ಸಾಧ್ಯವಾಗಿಸಬೇಕಾದರೆ, ಮಕ್ಕಳಿಗೆ ಸುರಕ್ಷಿತ ಭಾವನೆ ಮೂಡಬೇಕು. ಅಂದರೆ, ಭಯವಿಲ್ಲದ ಮತ್ತು ಸಮಾನತೆ ಹಾಗೂ ನೀತಿಗಳೆಂಬ ಸಂಬಂಧಗಳಿಂದ ಅಳೆಯುವಂತಹ ವಾತಾವರಣ ಇರಬೇಕು.

- ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005

ಶಾಲೆಯು, ಮಕ್ಕಳು ಪರಸ್ಪರ ಔಪಚಾರಿಕವಾಗಿ ಮತ್ತು ಅನೌಪಚಾರಿಕವಾಗಿ ಮಾತನಾಡುವ ಸ್ಥಳ. ಮಕ್ಕಳು ದಿನಾಲೂ ಹೆಚ್ಚು ಸಮಯವನ್ನು ಕಳೆಯುವ ಸ್ಥಳವೂ, ಮನೆಗೆ ಮರಳುವಾಗ ಆಹ್ಲಾದಕರವಾದ ಮತ್ತು ಆಹ್ಲಾದಕರವಲ್ಲದ ನೆನಪುಗಳನ್ನು ಹೊತ್ತೊಯ್ಯುವ ಸ್ಥಳವೂ ಹೌದು. ಮಕ್ಕಳು ತಮ್ಮ ಸ್ನೇಹಿತರೊಂದಿಗೆ ಆಟವಾಡುವ ಮತ್ತು ಜಗಳವನ್ನೂ ಮಾಡುವ, ಒಟ್ಟಿಗೇ ಬೆಂಚಿನಲ್ಲೋ, ಮರದ ಕೆಳಗಡೆಯೋ ಕುಳಿತು ಒಬ್ಬರಿಗೊಬ್ಬರು ಚರ್ಚೆ ನಡೆಸುವ ಸ್ಥಳ. ಹಾಗಾಗಿ ಶಾಲೆ ಎಂಬ ಈ ಸ್ಥಳದಲ್ಲಿ ಮಕ್ಕಳು ಸುರಕ್ಷಿತ, ಆನಂದವಾಗಿರಬೇಕು ಮತ್ತು ಶಾಲೆ ತಮಗೆ ಬೇಕು, ದಿನಾಲೂ ಶಾಲೆಗೆ ಹೋಗಬೇಕು ಎಂದು ಅವರಿಗೆ ಅನಿಸಬೇಕು. ಆದರೆ ಎಷ್ಟೋ ಬಾರಿ, ಇತ್ತ ಮಕ್ಕಳೂ ಖುಷಿಯಾಗಿ ಕಲಿಯುವಂತೆ ಇರುವುದಿಲ್ಲ, ಅತ್ತ ಶಿಕ್ಷಕರಿಗೂ ಖುಷಿಯಾಗಿ ಪಾಠ ಮಾಡುವಂತೆ ಇರುವುದಿಲ್ಲ ಎಂಬಂತಹ ಸ್ಥಳಗಳಾಗಿ ಶಾಲೆಗಳು ಮಾರ್ಪಾಡಾಗಿರುವುದುಂಟು. ಹಳ್ಳಿಗಳಲ್ಲಿ ಶಾಲೆಗಳನ್ನು 'ಶಿಕ್ಷೆ ನೀಡುವ ಸಂಸ್ಥೆಗಳು' ಎಂಬಂತೆ ಕೆಲವೊಮ್ಮೆ ಪೋಷಕರು ಉಲ್ಲೇಖಿಸುವುದುಂಟು. ಅಂತಹ ಶಾಲೆಗಳಿಗೆ ಹೋಗಲು ಮಕ್ಕಳು ಸುತರಾಂ ಇಷ್ಟಪಡುವುದಿಲ್ಲ. ಹಾಗಿರುವಾಗ, ಶಾಲೆಗಳನ್ನು ಸಮುದಾಯ ಸಂಸ್ಥೆಗಳಾಗಿ ಅಭಿವೃದ್ಧಿಪಡಿಸಿ, ಚರ್ಚೆಗಳಿಗೆ ಪ್ರೋತ್ಸಾಹ ಕೊಡುವಂತಹ, ಬೋಧನೆ ಮತ್ತು ಕಲಿಕೆ ಎರಡನ್ನೂ ಬಲವರ್ಧನೆ ಮಾಡುವಂತಹ

ಹಾಗೂ ಪ್ರತಿಯೊಬ್ಬ ವಿದ್ಯಾರ್ಥಿಯೂ ಖುಷಿಯಾಗಿ ಇರುವಂತಹ ವಾತಾವರಣವನ್ನು ಆಯೋಜಿಸಬೇಕು.
ಶಾಲೆಗಳೆಂದರೆ, ಮಕ್ಕಳ ಗುಂಪುಗಳು ಜೊತೆಯಾಗಿ ಕಲಿಯಲು ಪ್ರಯತ್ನಿಸುವ ಕಲಿಕಾ ಸಮುದಾಯಗಳು. ಸೈದ್ಧಾಂತಿಕವಾಗಿ, ಈ ಎಲ್ಲಾ ಮಕ್ಕಳಿಗೂ ನೇರ ಕಲಿಕೆಗೆ ಮತ್ತು ಈಗಿನ ಅಭ್ಯಾಸಗಳನ್ನು ಸುಧಾರಿಸಿಕೊಳ್ಳಲು ಸಮಾನ ಅಧಿಕಾರ ಇರಬೇಕು. ಆದರೆ ವಾಸ್ತವದಲ್ಲಿ ಹಾಗೆ ಇಲ್ಲ. ಕೆಲವು ಮಕ್ಕಳಿಗೆ ಇತರ ಮಕ್ಕಳಿಗಿಂತ ಗಟ್ಟಿ ದನಿ ಇರುತ್ತದೆ. ಇದು ಕೆಲವು ಮಕ್ಕಳಲ್ಲಿ ಕೀಳರಿಮೆ ಹುಟ್ಟಿಸಿ, ತಮಗೆ ಅನಿಸಿದ್ದನ್ನು ಮುಕ್ತವಾಗಿ ಹೇಳಿಕೊಳ್ಳದೆ ಹೊರಗೆ ಉಳಿಯುವಂತೆ ಮಾಡುತ್ತದೆ.
ಹರ್‌ಗ್ರೀವ್ಸ್ (1994) ಅವರು ಹೇಳುವಂತೆ, ಕಲಿಕಾ ಸಮುದಾಯವು ವಿಶ್ವಾಸದ ಸಂಸ್ಕೃತಿಯನ್ನು ಒಳಗೊಂಡಿರುತ್ತದೆ, ಇಂಥದೊಂದು ಸಾಂಸ್ಕೃತಿಕ ವಾತಾವರಣವು ಶಿಕ್ಷಕರಿಗೆ, ಸಹಾಯಕ ಸಿಬ್ಬಂದಿ ಮತ್ತು ವಿದ್ಯಾರ್ಥಿಗಳಿಗೆ ಸಂಕೀರ್ಣ ಸಮಸ್ಯೆಗಳನ್ನು ಹಾಲಿ ಇರುವ ಪರಿಣತಿಯ ಮೂಲಕವೇ ನಿಭಾಯಿಸಲು ಬೆಂಬಲ ನೀಡಿ, ಸಂಪನ್ಮೂಲಗಳನ್ನು ಕ್ರೋಢೀಕರಿಸಿ, ಪರಸ್ಪರರಿಗೆ ನೈತಿಕ ಬೆಂಬಲ ನೀಡುವುದನ್ನು ಕಲಿಸುತ್ತದೆ. 'ಎಲ್ಲರಿಗೂ ಶಾಲೆ' ಎಂಬುದು, ವೈವಿಧ್ಯಮಯ ವಿದ್ಯಾರ್ಥಿ ಸಮುದಾಯವನ್ನು ಪೋಷಿಸುವ ಮತ್ತು ಅವರನ್ನು ಹೆಚ್ಚು ಸಂವೇದನಾಶೀಲರಾಗಿಸುವ ಹಾಗೂ ಇನ್ನಷ್ಟು ಮಾನವೀಯತೆ ತುಂಬುವ ಶಾಲೆಯಾಗಿದೆ. ಇಂಥದೊಂದು ಶಾಲೆಯಲ್ಲಿ ವೈವಿಧ್ಯಮಯ ವಿದ್ಯಾರ್ಥಿ ಸಮುದಾಯದಿಂದಾಗಿ ಮಕ್ಕಳು ಹೆಚ್ಚು ಹೆಚ್ಚು ಸಹನಶೀಲರಾಗುತ್ತಾರೆ ಹಾಗೂ ವಿಭಿನ್ನವಾದುದನ್ನು ಒಪ್ಪಿಕೊಳ್ಳುವಂತಾಗುತ್ತಾರೆ.
ಒಂದು ಶಾಲೆಯನ್ನು ಎಲ್ಲಾ ಮಕ್ಕಳ ಅಗತ್ಯಗಳನ್ನು ಗಮನದಲ್ಲಿಟ್ಟುಕೊಂಡ ಕಲಿಕಾ ಸಮುದಾಯಗಳಾಗಿ ಅಭಿವೃದ್ಧಿಪಡಿಸಲು ಹಲವಾರು ಮಾನದಂಡಗಳನ್ನು ಪರಿಗಣಿಸಬೇಕಾಗುತ್ತದೆ. ಇವು, ಮಗುವಿನ ಕಲಿಕೆಯ ಮೇಲೆ ಗಮನಾರ್ಹ ರೀತಿಯಲ್ಲಿ ಪರಿಣಾಮ ಬೀರಬಲ್ಲ ಮತ್ತು ಆಂತರಿಕವಾದ, ಶಾಲಾ ವಾತಾವರಣದಲ್ಲಿರುವ ಭೌತಿಕ ಅಥವಾ ಮಾನಸಿಕ ಆಯಾಮಗಳದ್ದಾಗಿರಬಹುದು.

ಒಂದು ಸಾಮಾನ್ಯ ಶಾಲೆಯನ್ನು, ಭಾರತ ಸಂವಿಧಾನದ ಸಿದ್ಧಾಂತ ಮತ್ತು ಮೌಲ್ಯಗಳ ತಳಹದಿಯಲ್ಲಿ ಕಟ್ಟಲಾದ ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆ ಎಂದು ವಿವರಿಸಬಹುದು. ಮಕ್ಕಳ ಜಾತಿ, ನಂಬಿಕೆ, ಲಿಂಗ, ತರಗತಿ ಅಥವಾ ಸ್ಥಳವನ್ನು ಲಕ್ಷಿಸದೆ, ಎಲ್ಲಾ ಮಕ್ಕಳಿಗೆ ತುಲನಾತ್ಮಕ ಗುಣಮಟ್ಟದ, ನ್ಯಾಯಸಮ್ಮತ ಶಿಕ್ಷಣ ಕೊಡುವ ಸಾಮರ್ಥ್ಯವನ್ನು ಅದು ಹೊಂದಿದೆ. ಅಂತಹ ವ್ಯವಸ್ಥೆಯಲ್ಲಿ ಪ್ರಸ್ತುತ ಕಾರ್ಯನಿರ್ವಹಿಸುತ್ತಿರುವ ಎಲ್ಲಾ ವರ್ಗದ ಶಾಲೆಗಳ ಮೇಲೆ (ಸರ್ಕಾರಿ, ಸ್ಥಳೀಯಾಡಳಿತ ಅಥವಾ ಖಾಸಗಿ) ಮೂಲಭೂತವಾದ ಮತ್ತು ಶಿಕ್ಷಣಶಾಸ್ತ್ರೀಯ ಶಿಸ್ತನ್ನು ಒದಗಿಸುವ ಮತ್ತು ಶಾಲೆಯ ಪರಿಸರದಲ್ಲಿ ನೆಲೆಸಿರುವ ಎಲ್ಲಾ ಮಕ್ಕಳಿಗೆ ಉಚಿತ ಶಿಕ್ಷಣವನ್ನು ಖಾತರಿಪಡಿಸಬೇಕು.
-ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು, 2005
**

ಭೌತಿಕ ಪರಿಸರ

ಮಕ್ಕಳು ಶಾಲೆಯಲ್ಲಿ ಭೌತಿಕ ಪರಿಸರದಲ್ಲಿ ತಮ್ಮನ್ನು ತೊಡಗಿಸಿಕೊಂಡಿರುತ್ತಾರೆ. ಆದರೂ, ತರಗತಿಗಳು ಅಧಿಕ ಸಂಖ್ಯೆಯ ಮಕ್ಕಳಿಂದ ತುಂಬಿಕೊಂಡಿದ್ದು, ಮಕ್ಕಳ ಅವಶ್ಯಕತೆಗೆ ತಕ್ಕುದಾಗಿ ಸಂವೇದನಾಶೀಲವಾಗಿಲ್ಲದಿರುವುದನ್ನು ನಾವು ಬಹುತೇಕ ಸ್ಥಳಗಳಲ್ಲಿ ಗಮನಿಸಿದ್ದೇವೆ. ಇದು ಶಿಕ್ಷಕರಿಗೆ ತರಗತಿಯಲ್ಲಿ ಚಟುವಟಿಕೆಗಳನ್ನು ಹಮ್ಮಿಕೊಳ್ಳುವಾಗ ನಿರ್ಬಂಧ ಹೇರುತ್ತದೆ. ಮಕ್ಕಳನ್ನು ತರಗತಿಗೆ ಸೆಳೆಯಲು ಮತ್ತು ಉಳಿಸಲು, ಪರಿಸರವೂ ಆಕರ್ಷಣೀಯವಾಗಿರಬೇಕು, ಸಾಕಷ್ಟು ಸ್ಥಳಾವಕಾಶದೊಂದಿಗೆ ಶಾಂತವಾಗಿಯೂ, ಬರಮಾಡಿಕೊಳ್ಳುವಂತೆಯೂ ಇರಬೇಕು.

ತರಗತಿಗಳ ಒಳಗೆ ಸಹಜ ಬೆಳಕು ಬೀರುವಂತಿರಬೇಕು. ಇದಕ್ಕೆ ಪೂರಕವಾಗಿ, ಮಕ್ಕಳೇ ಬಿಡಿಸಿದ ಚಿತ್ರಗಳನ್ನು ತರಗತಿ ಗೋಡೆಯ ವಿವಿಧ ಭಾಗಗಳಲ್ಲಿ ಪ್ರದರ್ಶಿಸಬಹುದು. ಚಿತ್ರಕಲೆ, ಕಲೆ ಮತ್ತು ಕರಕುಶಲ ವಸ್ತುಗಳನ್ನು ಗೋಡೆ ಹಾಗೂಕಪಾಟಿನಲ್ಲಿ ಇರಿಸಿದರೆ, ಮಕ್ಕಳಿಗೆ ಬಲವಾದ ಸಂದೇಶ ರವಾನಿಸಿದಂತೆಯೂ ಆಗುತ್ತದೆ, ಅವರ ಪೋಷಕರೂ ತಮ್ಮ ಮಕ್ಕಳ ಕೌಶಲವನ್ನು ಕಂಡು ಮೆಚ್ಚಿಕೊಳ್ಳಲು ಅವಕಾಶವಾಗುತ್ತದೆ. ವಿವಿಧ ವಯೋಮಾನದ ಮಕ್ಕಳಿಗೆ ದೈಹಿಕವಾಗಿ, ನೋಡಲು ಮತ್ತು ಆರಾಮವಾಗಿ ಕೈಗೆಟಕುವಷ್ಟು ಎತ್ತರದಲ್ಲಿ ಅವುಗಳನ್ನು ಪ್ರದರ್ಶಿಸವೇಕು.

ಗೋಡೆಯ ಹೆಚ್ಚಿನ ಭಾಗಗಳನ್ನು ಮಕ್ಕಳ ಚಟುವಟಿಕೆಗಳು ಮತ್ತು ಶಿಕ್ಷಕರು ಮಾಡಿದ ಚಾರ್ಟ್‌ಗಳ ಪ್ರದರ್ಶನಕ್ಕೆ ಮೀಸಲಿಡಬೇಕು ಹಾಗೂ ತಿಂಗಳಿಗೊಮ್ಮೆ ಅವುಗಳನ್ನು ಬದಲಾಯಿಸಬೇಕು. ಭಿತ್ತಿ ಬರಹಗಳನ್ನು ಸಿದ್ಧಪಡಿಸವುದು ಮತ್ತು ಅವುಗಳ ಪ್ರದರ್ಶನದಲ್ಲಿ ಪಾಲ್ಗೊಳ್ಳುವುದು ಮಕ್ಕಳಿಗೆ ಮೌಲ್ಯಯುತ ಕಲಿಕೆಯಾಗಿ ಪರಿಣಮಿಸಬಹುದು. ತರಗತಿಯ ಭೌತಿಕ ವಿನ್ಯಾಸವನ್ನು ಬದಲಾಯಿಸಬಹುದು. ಮಕ್ಕಳು ಸಣ್ಣ ಸಣ್ಣ ಗುಂಪುಗಳಲ್ಲಿ ಕುಳಿತುಕೊಳ್ಳಬಹುದು ಅಥವಾ ದೊಡ್ಡ ವೃತ್ತಾಕಾರದಲ್ಲಿ ಗುಂಪು ಸೇರಿ ಕತೆ ಹೇಳುವುದು ಅಥವಾ ತಮ್ಮ ಪಾಡಿಗೆ ಕುಳಿತುಕೊಂಡು ಒಬ್ಬರೇ ಓದುವ, ಬರೆಯುವ ಕೆಲಸಗಳಲ್ಲಿ ತೊಡಗಿಸಿಕೊಳ್ಳಬಹುದು ಇಲ್ಲವೇ ರೇಡಿಯೊ ಅಥವಾ ಟಿವಿ ಬಳಿ ಗುಂಪಾಗಿ ಸೇರಬಹುದು.

ಶಾಲೆ ಮತ್ತು ತರಗತಿಗಳಲ್ಲಿ ಲಭ್ಯವಿರುವ ಸ್ಥಳಾವಕಾಶವನ್ನು ಶಿಕ್ಷಣಶಾಸ್ತ್ರೀಯ ನೆಲೆಯಲ್ಲಿ ಗರಿಷ್ಠ ಪ್ರಮಾಣದಲ್ಲಿ ಬಳಸಿಕೊಳ್ಳಬಹುದು. ಕೆಲವು ಸ್ಥಳಗಳಲ್ಲಿ, ಪ್ರಾಥಮಿಕ ಶಾಲೆಯ ಗೋಡೆಗಳಿಗೆ ಸುಮಾರು ನಾಲ್ಕು ಅಡಿಗಳಷ್ಟು ಎತ್ತರಕ್ಕೆ ಕಪ್ಪು ಬಣ್ಣ ಬಳಿಯಲಾಗಿದ್ದು, ಅವುಗಳನ್ನು ಎಲ್ಲರೂ ಸ್ಲೇಟಿನಂತೆಯೂ, ಚಿತ್ರ ಬರೆಯುವ ಹಲಗೆಯಂತೆಯೂ ಬಳಸಲಾಗುತ್ತಿದೆ. ಕೆಲವು ಶಾಲೆಗಳ ನೆಲದಲ್ಲಿ ರೇಖಾಗಣಿತದ ಜ್ಯಾಮಿತಿಗಳನ್ನು ಬಣ್ಣದ ಮೂಲಕ ಬಿಡಿಸಬಹುದು. ಒಂದು ಮೂಲೆಯನ್ನು ಕಲಿಕಾ ಸಾಮಗ್ರಿಗಳನ್ನು ಇರಿಸಲು, ಪದಬಂಧ ಅಥವಾ ಒಗಟುಗಳ ಕಾರ್ಡ್‌ಗಳನ್ನು ಹಾಗೂ ಇತರ ಸ್ವಯಂ ಕಲಿಕಾ ಸಾಮಗ್ರಿಗಳನ್ನು ಇರಿಸಲು ಉಪಯೋಗಿಸಬಹುದು. ಶಿಕ್ಷಕರು ನೀಡಿದ ಕೆಲಸವನ್ನು ನಿಗದಿತ ಸಮಯಕ್ಕೆ ಮುಂಚಿತವಾಗಿ ಮುಗಿಸಿದ ಮಕ್ಕಳು ಸ್ವಯಂಸ್ಫೂರ್ತಿಯಿಂದ ಆ ಮೂಲೆಗೆ ಹೋಗಿ ತಮಗೆ ಬೇಕಾದ ಕಲಿಕಾ ಸಾಮಗ್ರಿಯನ್ನು ಎತ್ತಿಕೊಂಡು ಸಮಯ ಕಳೆಯುವಂತಹ ಮುಕ್ತ ವಾತಾವರಣ ಇರಬೇಕು. (ಎನ್‌ಸಿಎಫ್ 2005).

ಶಾಲೆಯ ಪ್ರಮುಖ ಜಾಗಗಳು ದೈಹಿಕ ಊನವಿರುವ ಮಕ್ಕಳಿಗೂ ಸುಲಭವಾಗಿ ಸಿಗುವಂತಿರಬೇಕಾದುದು ಮುಖ್ಯ. ಅಂದರೆ, ಅಂತಹ ಮಕ್ಕಳ ಓಡಾಟ ಮತ್ತು ಬಳಕೆಗೆ ಅನುಕೂಲವಾಗುವಂತಹ ಜಾರುದಾರಿ (ರಾಂಪ್), ವಿಶೇಷ ಶೌಚಾಲಯಗಳು ಮತ್ತು ಕಂಬಿಗಳು ಇರಬೇಕು. ದೈಹಿಕ ಊನವಿರುವ ಮಕ್ಕಳಿಗೆ ಬೇಕಾದ ಮೂಲಭೂತ ಅವಶ್ಯಕತೆಗಳನ್ನು ಕೆಳಗೆ ಪಟ್ಟಿ ಮಾಡಲಾಗಿದೆ:

ಪೀಪಲ್ ವಿತ್ ಇಂಪೇರ್ಡ್ ಮೊಬಿಲಿಟಿ- (ವಿಕಲ ಚಲನೆಯುಳ್ಳ ಜನ) (ವಿಕಲಾಂಗರ ಮುಖ್ಯ ಆಯುಕ್ತರ ಕಚೇರಿ, ತಡೆ ಇಲ್ಲದ ಪರಿಸರದ ಯೋಜನೆ - ನವದೆಹಲಿ).

ಕಟ್ಟಡಗಳಲ್ಲಿ ಗಾಲಿ ಕುರ್ಚಿಗಳ ಓಡಾಟಕ್ಕೆ ಸ್ಥಳಾವಕಾಶವನ್ನು ಯೋಜಿಸುವಾಗ ಸಾಕಷ್ಟು ವಿಶಾಲವಾದ ಜಾಗ ಇರಬೇಕು. ನೆಲ ಗಡುಸಾಗಿದ್ದರೂ, ನುಣುಪಾಗಿದ್ದರೂ ಅಥವಾ ಸಮತಟ್ಟು

ಇಲ್ಲದಿದ್ದರೂ ಗಾಲಿಕುರ್ಚಿಗಳನ್ನು ಜಾರುದಾರಿಯಲ್ಲಿ ಕೈಯಲ್ಲಿ ತಳ್ಳಬೇಕಾದರೆ ನಿರ್ದಿಷ್ಟವಾದ ಶಕ್ತಿ ಚಲಾಯಿಸಬೇಕಾಗುತ್ತದೆ. ಅಡೆತಡೆಗಳು ಮತ್ತು ಸಮತಟ್ಟಿನಲ್ಲಿ ಬದಲಾವಣೆ ಮಾಡಿಕೊಳ್ಳಬೇಕು. ನೆಲ ಮತ್ತು ಮಹಡಿಯ ಮೇಲ್ಮೈ ಗಟ್ಟಿಯಾಗಿಯೂ, ಒಂದೇ ರೀತಿಯಾಗಿಯೂ ಇರಬೇಕಾಗುತ್ತದೆ. ಗಾಲಿ ಕುರ್ಚಿ ಬಳಸುವವರಿಗೆ, ಬೆಂಚು, ಕೈತೊಳೆಯುವ ಪಾತ್ರೆ ಅಥವಾ ಮೇಜು, ಮಂಡಿ ಮತ್ತು ಪಾದಗಳನ್ನು ಸರಿಯಾಗಿ ಇರಿಸುವಷ್ಟು ಜಾಗ ಇರಬೇಕಾಗುತ್ತದೆ. ಇದು 800 ಮಿಲಿಮೀಟರ್ ಅಗಲವೂ, 480 ಮಿಲಿಮೀಟರ್ ಆಳವೂ, 750 ಮಿಲಿಮೀಟರ್ ಎತ್ತರವೂ ಇರಬೇಕು.

////ಚಿತ್ರ/// - ಕ್ಯಾಪ್ಷನ್- ಇಂತಹ ಮೆಟ್ಟಿಲುಗಳು ಎಲ್ಲಾ ಮಕ್ಕಳಿಗೆ, ವಿಶೇಷವಾಗಿ ದೈಹಿಕ ಊನವಿರುವ ಮಕ್ಕಳಿಗೆ ಓಡಾಟಕ್ಕೆ ಯೋಗ್ಯವಾಗಿದೆಯೇ?
**

ಓಡಾಡಲು ಅಸಮರ್ಥರಿರುವ ಜನರು

ಓಡಾಡಲು ಅಸಮರ್ಥರಿರುವ ಜನರು ಸುರಕ್ಷಿತವಾಗಿ ಓಡಾಡಲು ಅನುಕೂಲವಾಗುವಂತೆ ನೆಲ ಜಾರದಂತೆ ಇರಬೇಕು ಮತ್ತು ಸಮತಟ್ಟಾಗಿರಬೇಕು. ಕೈಗೆ ಆಸರೆಯಾಗಬಲ್ಲ ಹ್ಯಾಂಡ್ ರೈಲ್‌ಗಳನ್ನು ಮೆಟ್ಟಿಲು ಮತ್ತು ಜಾರುದಾರಿಯಲ್ಲಿ ಅಳವಡಿಸಿರಬೇಕು.

//// ಚಿತ್ರ/// ಕ್ಯಾಪ್ಷನ್/// ಜಾರು ದಾರಿಯ ಎತ್ತರ ಮತ್ತು ಇಳಿಜಾರು ಗಾಲಿಕುರ್ಚಿಯವರಿಗಷ್ಟೇ ಅಲ್ಲದೆ, ಯಾವುದೇ ಮಕ್ಕಳಿಗೂ ಓಡಾಟಕ್ಕೆ ಕಷ್ಟಕರ.

/// ಚಿತ್ರ/// ಒಂದು ಸರ್ಕಾರಿ ಶಾಲೆಯಲ್ಲಿ ಇರುವ ಶೌಚಾಲಯಕ್ಕೆ ಬಾಗಿಲುಗಳೇ ಇಲ್ಲ
**

ನೆಲ ಮತ್ತು ಮೇಲ್ಮೈಯಲ್ಲಿ ಬದಲಾವಣೆ ಆಗುವಲ್ಲಿ ಮುಗ್ಗರಿಸುವ ಅಪಾಯವನ್ನು ತಗ್ಗಿಸಬೇಕು. ಬೆಂಚುಗಳು ಮತ್ತು ಕುರ್ಚಿಗಳ ಎತ್ತರವು ಅಂದಾಜು 450 ಮಿಲಿಮೀಟರ್ ಇರಬೇಕು. ಕೈಗಳ ಆರ್ಮ್‌ರೆಸ್ಟ್‌ಗಳು ಅಂದಾಜು 700 ಮಿಲಿಮೀಟರ್‌ನಷ್ಟು ನೆಲದಿಂದ ಮೇಲಿರಬೇಕು.

ದೃಷ್ಟಿದೋಷವಿರುವ ಜನರು

ದೃಷ್ಟಿದೋಷ ಇರುವ ಜನರ ಉಪಯೋಗಕ್ಕಾಗಿ ಬಣ್ಣ, ಪ್ರಕಾಶ, ನಿಗದಿತ ಪ್ರಕರಣಗಳಲ್ಲಿ ಸಾಮಗ್ರಿಗಳ ರಚನೆಯಲ್ಲಿ ಗುರುತು ಹಾಕಬಹುದು. ವ್ಯತಿರಿಕ್ತ ಬಣ್ಣಗಳು ಮತ್ತು ಎಚ್ಚರಿಕೆ ಫಲಕಗಳನ್ನು ಬಾಗಿಲು, ಮೆಟ್ಟಿಲು, ಜಾರುದಾರಿ, ಕಾಲು ದಾರಿಯಂತಹ ಜಾಗಗಳಲ್ಲಿ ಅಳವಡಿಸಬಹುದು. ನೆಲದ ಮೇಲ್ಮೈಯನ್ನು ನಡೆದಾಡುವ ಮಾರ್ಗ, ಮಾರ್ಗದ ಬದಲಾವಣೆ ಮುಂತಾದವುಗಳನ್ನು ಸೂಚಿಸಲು ಬಳಸಬಹುದು. ಓರಿಯೆಂಟೇಶನ್ ಸೂಚನೆಗಳು ಪ್ರಕಾಶಮಾನವಾಗಿರಬೇಕು. ಹ್ಯಾಂಡ್ ರೈಲ್‌ಗಳನ್ನು ಜಾಗಗಳ ಗುರುತುಗಳಾಗಿಸಿಕೊಳ್ಳಬಹುದು. ಗೋಡೆಗಳ ಪ್ರೊಜೆಕ್ಷನ್‌ಗಳನ್ನು ಸಾಧ್ಯವಾದಷ್ಟೂ ತಪ್ಪಿಸಬೇಕು. ತಪ್ಪಿಸಲಾಗದ ಅನಿವಾರ್ಯತೆ ಇದ್ದರೆ ಅವುಗಳನ್ನು ನೆಲಮಟ್ಟದಿಂದ 2000 ಮಿಲಿಮೀಟರ್ ಎತ್ತರದಲ್ಲಿ ಇರಿಸಬೇಕು.

ದೃಷ್ಟಿದೋಷವಿರುವವರು ಕೆಲವೊಮ್ಮೆ ಪ್ರಖರ ಬೆಳಕನ್ನು ತಡೆದುಕೊಳ್ಳಲಾರರು. ಅನಗತ್ಯವಾದ ಕನ್ನಡಿ ಮತ್ತು ಪ್ರತಿಫಲನಗಳನ್ನು, ಅಂತಹ ಜಾಗಗಳ ಗುರುತು ಮಾಡುವ ಮೂಲಕ, ನೆಲ ಮತ್ತು ಗೋಡೆಯ ಮೇಲ್ಮೈನ ಆಯ್ಕೆ ಮಾಡುವ ಮೂಲಕ ತಪ್ಪಿಸಬಹುದು. ಅಲ್ಲದೆ, ಅಂಧರು ಸ್ಪರ್ಶಿಸಿ ಓದುವುದರಿಂದ (ಕೆಲವರು ಬ್ರೈಲ್ ಲಿಪಿಯ ನೆರವಿನಿಂದ ಓದುತ್ತಾರೆ) ಅವರು ಅವರಿಗೆ ಮುದ್ರಿತ ಸಾಮಗ್ರಿಗಳು ಮತ್ತು ಮಾಹಿತಿಗಳನ್ನು ಓದಲು ಕಷ್ಟವಾಗುವುದುಂಟು.

ಶ್ರವಣ ದೋಷವಿರುವವರು

ಪರಿಸರದಲ್ಲಿನ ಶಬ್ದ ಮತ್ತು ಪದಗಳನ್ನು ಗ್ರಹಿಸಲು ಶ್ರವಣ ದೋಷವಿರುವವರಿರು ಕಷ್ಟಪಡುವುದನ್ನು ನಾವು ನೋಡುತ್ತೇವೆ. ಕೊಠಡಿಗಳಿಗೆ ಧ್ವನಿತರಂಗಗಳ ಕವಚಗಳನ್ನು ಅಳವಡಿಸಿರಬೇಕು. ಈ ಮಕ್ಕಳು ತುಟಿ ಚಲನೆಯನ್ನು ಓದುವ ಅಭ್ಯಾಸಕ್ಕೆ (ಲಿಪ್ ರೀಡಿಂಗ್) ಅವಲಂಬಿತರಾಗಿರುವುದರಿಂದ ಪ್ರತಿಫಲನವಿಲ್ಲದ ಉತ್ತಮ ಬೆಳಕು ಎಲ್ಲಾ ಕಡೆ ಇರುವುದು ಅವಶ್ಯ.

ಕಲಿಕಾ ನ್ಯೂನತೆ ಇರುವವರು ಮತ್ತು ಬೌದ್ಧಿಕ ಸವಾಲುಗಳು

ಈ ಗುಂಪಿನ ಜನರಿಗೆ ಚಿಹ್ನೆ ಅಥವಾ ಗುರುತುಗಳನ್ನು ಅರ್ಥ ಮಾಡಿಕೊಳ್ಳಲು, ಗ್ರಹಿಸಲು ಮತ್ತು ಮಾಹಿತಿ ಪಡೆಯಲು ಕಷ್ಟವಾಗುವ ಕಾರಣ ಒಂದು ಸಣ್ಣ ದಿಣ್ಣೆಯನ್ನೂ ಎಡವಿ ಜೋರಾಗಿ ಬೀಳುವ ಅಪಾಯವಿರುತ್ತದೆ. ಅಲ್ಲದೆ, ಅವರಿಗೆ ಸ್ಥಳವನ್ನು ಗುರುತಿಸಲು ಕಷ್ಟವಾಗಬಹುದು; ಕೆಲವು ಪ್ರಕರಣಗಳಲ್ಲಿ ಬಣ್ಣಗಳನ್ನು ಗುರುತಿಸಲು, ಎಡ ಮತ್ತು ಬಲಗಳನ್ನು ಪ್ರತ್ಯೇಕಿಸಲೂ ಸಾಧ್ಯವಾಗದಿರಬಹುದು.

**

ಪೋಷಕರು ಮತ್ತು ಸಮುದಾಯದ ಪಾಲ್ಗೊಳ್ಳುವಿಕೆ

ಸಹಭಾಗಿತ್ವದ ಪಾಲ್ಗೊಳ್ಳುವಿಕೆ ಮತ್ತು ಪಾಲುದಾರಿಕೆಯ ಮೇಲೆ ಸಮನ್ವಯ ಶಿಕ್ಷಣದ ಉದ್ದೇಶವು ಅವಲಂಬಿತವಾಗಿದೆ. ಗುರಿ ಸಾಧಿಸಲು ಸಮುದಾಯಗಳ ಸಹಕಾರದ ಸಹಭಾಗಿತ್ವದ ನೆಲೆಯಲ್ಲಿ ಒಟ್ಟಾಗಿ ಕೆಲಸ ಮಾಡಬೇಕು. ಶಾಲೆಗಳು ಸಮುದಾಯಗಳನ್ನು ಶಾಲಾ ಆವರಣಕ್ಕೆ ಆಹ್ವಾನಿಸಿ, ಪಠ್ಯಕ್ರಮದ ಪ್ರಕ್ರಿಯೆಯಲ್ಲಿ ಕೈಜೋಡಿಸುವಂತೆ ಉತ್ತೇಜನ ನೀಡಬಹುದು. ಪೋಷಕರು ಮತ್ತು ಸಮುದಾಯದ ಸದಸ್ಯರು ಶಾಲೆಗೆ ಸಂಪನ್ಮೂಲ ವ್ಯಕ್ತಿಗಳಾಗಿ ಆಗಮಿಸಿ ತಮ್ಮ ತಿಳಿವಳಿಕೆ ಮತ್ತು ಜ್ಞಾನವನ್ನು ನಿರ್ದಿಷ್ಟ ವಿಷಯಕ್ಕೆ ಅನ್ವಯಿಸಿ ಮಕ್ಕಳೊಂದಿಗೆ ಹಂಚಿಕೊಳ್ಳಬಹುದು (ಎನ್‌ಸಿಎಫ್, 2005). ವಿಶೇಷವಾಗಿ, ದೈಹಿಕ ಅಸಾಮರ್ಥ್ಯವುಳ್ಳ ಮಕ್ಕಳಿಗೆ ಪೋಷಕರ ಪಾತ್ರ ಅತ್ಯವಶ್ಯವಾಗಿದ್ದು, ಅವರು ಅರಿವು, ವಿಶಿಷ್ಟ ಸಾಮರ್ಥ್ಯ ಮತ್ತು ಕೌಶಲಗಳನ್ನು ಹೆಚ್ಚಿಸಿಕೊಳ್ಳಲು ವೈಯಕ್ತಿಕ ಪ್ರಯತ್ನಕ್ಕಿಂತ ಸಂಘಟಿತ ಪ್ರಯತ್ನದಿಂದ ಬಹಳ ಸಹಾಯವಾಗುತ್ತದೆ.

ಎಲ್ಲಾ ಶಾಲೆಗಳು ಪೋಷಕರ ಸಹಕಾರ ಮತ್ತು ನಿರಂತರ ಸಹಭಾಗಿತ್ವವನ್ನು ಪಡೆಯಲು ಬೇರೆ ಬೇರೆ ಉಪಾಯಗಳನ್ನು ಕಂಡುಕೊಳ್ಳಬಹುದು. ಶಾಲಾ ಚಟುವಟಿಕೆಗಳ ಕುರಿತು ಪೋಷಕರು ಪ್ರಶ್ನೆ ಕೇಳುವುದನ್ನು ಮತ್ತು ಕಾಳಜಿ ವಹಿಸುವುದನ್ನು ಎಷ್ಟೋ ಶಾಲೆಗಳು ಇಷ್ಟಪಡುವುದಿಲ್ಲ. ಅನೇಕ ಬಾರಿ, ಪೋಷಕರನ್ನು ಬಳಕೆದಾರರಂತೆ ನಡೆಸಿಕೊಳ್ಳುವ ಖಾಸಗಿ ಶಾಲೆಗಳು,ಶಾಲಾ ಚಟುವಟಿಕೆಗಳನ್ನು ಪ್ರಶ್ನಿಸುವ ಪೋಷಕರಿಗೆ ತಮ್ಮ ಮಕ್ಕಳನ್ನು ಶಾಲೆ ಬಿಡಿಸಿ ಕರೆದುಕೊಂಡು ಹೋಗುವಂತೆ ಒತ್ತಾಯಿಸುವುದುಂಟು. ಬಡ ಪೋಷಕರು ತಮ್ಮ ಮಕ್ಕಳ ಕಲಿಕಾ ಪ್ರಗತಿಯ ಬಗ್ಗೆ ವಿಚಾರಿಸಿದಾಗ, ಅದು ನ್ಯಾಯಸಮ್ಮತವಲ್ಲದ ನಡೆ ಎಂದು ಕೆಲವು ಶಾಲೆಗಳು ಅವಮಾನಿಸುವುದೂ ಉಂಟು. ಈ ಎರಡೂ ಬಗೆಯ ವರ್ತನೆಗಳು ಪೋಷಕರನ್ನು ಮತ್ತು ತಮ್ಮ ಮಕ್ಕಳ ಬಗ್ಗೆ ಅವರು ತೋರುವ ಕಾಳಜಿಯನ್ನು ಅವಮಾನಿಸುವಂತಹುದಾಗಿದೆ.

ಸಮುದಾಯದ ಭಾಗವಹಿಸುವಿಕೆಯು ದೈಹಿಕ ಅಸಾಮರ್ಥ್ಯದ ಬಗ್ಗೆ ಇರುವ ಋಣಾತ್ಮಕ ಧೋರಣೆಯಿಂದ ಹೊರಬರಲಷ್ಟೇ ಅಲ್ಲದೆ, ವಿಶೇಷವಾಗಿ, ಅಲ್ಪಸಂಖ್ಯಾತ ಸಮುದಾಯದವರಲ್ಲಿ ಇರುವ ಪರಕೀಯ ಭಾವನೆಯನ್ನು ಹೋಗಲಾಡಿಸಲೂ ಮುಖ್ಯವಾಗುತ್ತದೆ. ಎಲ್ಲಾ ಮಕ್ಕಳನ್ನು ಶಾಲೆಯಲ್ಲಿ ಸಮನ್ವಯಗೊಳಿಸುವ ನಿಟ್ಟಿನಲ್ಲಿ ಕುಟುಂಬಗಳು ಮತ್ತು ಸಮುದಾಯಗಳನ್ನು ಶಾಲಾ ಚಟುವಟಿಕೆಗಳ ಅಥವಾ ಅಭಿವೃದ್ಧಿಯ

ಕಾರ್ಯತಂತ್ರ ಮತ್ತು ಯೋಜನೆಗಳಿಗೆ ಸೆಳೆಯುವ ಕೆಲಸವನ್ನು ಶಾಲೆಗಳು ಮಾಡಬೇಕು. ಪೋಷಕರ ಸಹಕಾರಕ್ಕೆ, ಪರಸ್ಪರ ಸಮಸ್ಯೆಗಳನ್ನು ಹಂಚಿಕೊಳ್ಳಲು ಶಾಲೆಗಳು ಅವಕಾಶ ನೀಡಬೇಕು.

**

ನಾಗಾಲ್ಯಾಂಡ್‌ನ ಎಲಿಮೆಂಟರಿ ಶಾಲೆಗಳ ಸಮುದಾಯೀಕರಣ/ಸಾಮುದಾಯೀಕರಣ

ಶಾಲೆಗಳ ಕಾರ್ಯನಿರ್ವಹಣೆಯಲ್ಲಿ ಸಮುದಾಯದ ಪಾಲ್ಗೊಳ್ಳುವಿಕೆಯ ಮಹತ್ವವನ್ನು ಮನಗಂಡು ಒಪ್ಪಿಕೊಂಡ ನಾಗಾಲ್ಯಾಂಡ್ ಸರ್ಕಾರ, 'ನಾಗಾಲ್ಯಾಂಡ್ ಕಮ್ಯುನಿಟೈಸೇಷನ್ ಆಫ್ ಪಬ್ಲಿಕ್ ಇನ್‌ಸ್ಟಿಟ್ಯೂಷನ್ಸ್ ಅಂಡ್ ಸರ್ವಿಸಸ್' ಕಾಯ್ದೆಯಡಿ 'ನಾಗಾಲ್ಯಾಂಡ್ ಎಲಿಮೆಂಟರಿ ಶಿಕ್ಷಣ ಸಂಸ್ಥೆಗಳು ಮತ್ತು ಸೇವೆಗಳ ಸಮುದಾಯೀಕರಣ ನಿಯಮ 2002' ಎಂಬ ನಿಯಮಗಳನ್ನು ಕಲ್ಪಿಸಿದೆ. ಸಮುದಾಯಗಳನ್ನು ಶಾಲೆಯ ಅಕಾಡೆಮಿಕ್, ಆಡಳಿತಾತ್ಮಕ ಮತ್ತು ಹಣಕಾಸಿನ ವ್ಯವಹಾರಗಳಲ್ಲಿ ಸಮುದಾಯವೂ ಭಾಗಿಯಾಗುವ ಅವಕಾಶವನ್ನು ಈ ನಿಯಮ ಕಲ್ಪಿಸುತ್ತದೆ 'ಗುಣಮಟ್ಟದ ಶಿಕ್ಷಣ ಒದಗಿಸಿ ಮತ್ತು ಮಕ್ಕಳ ಮಾನವೀಯ ಸಾಮರ್ಥ್ಯಗಳನ್ನು ಹೆಚ್ಚಿಸುವುದು, ಒಂದು ಅರ್ಥದಲ್ಲಿ, ಸಮುದಾಯದ ಸದಸ್ಯರ ನಡುವೆ ಸೇರುವಿಕೆ ಮತ್ತು ಹಂಚಿಕೆ ಮಾಡುವ ಮೂಲಕ ಶಾಲೆಗಳ ಸುಧಾರಣೆಗೆ ಸಾಮಗ್ರಿ ಮತ್ತು ಮಾನವ ಸಂಪನ್ಮೂಲಗಳನ್ನು ಬಳಸಿಕೊಳ್ಳುವುದು ಎಂಬುದು ಈ ಕಾಯ್ದೆಯ ಧ್ಯೇಯವಾಗಿದೆ. ಸರ್ಕಾರಿ ಶಾಲೆಗಳ ಸಮುದಾಯೀಕರಣ ಪ್ರಕ್ರಿಯೆಯ ಮೇಲುಸ್ತುವಾರಿಗೆ ಗ್ರಾಮೀಣ ಮತ್ತು ನಗರ ಪ್ರದೇಶಗಳಲ್ಲಿ ಗ್ರಾಮ ಶಿಕ್ಷಣ ಸಮಿತಿ ಮತ್ತು ವಾರ್ಡ್ ಶಿಕ್ಷಣ ಸಮಿತಿಗಳನ್ನು ರಚಿಸಲಾಗಿದೆ. ಶಿಕ್ಷಣ ಸಮಿತಿಗಳ ಸದಸ್ಯರಲ್ಲಿ ಆ ಶಾಲೆಗಳ ಮುಖ್ಯ ಶಿಕ್ಷಕರು, ಶಾಲಾ ವ್ಯಾಪ್ತಿಯಲ್ಲಿ ಬರುವ ಸಬ್ ಇನ್‌ಸ್ಪೆಕ್ಟರ್, ಶಿಕ್ಷಕರ ಪ್ರತಿನಿಧಿಗಳು, ಪೋಷಕರು, ಧಾರ್ಮಿಕ ಸಂಘಟನೆಗಳು, ಶಿಕ್ಷಣ ತಜ್ಞರು, ಗ್ರಾಮ ಸಮಿತಿ ಮತ್ತು ಮಂಡಳಿ ಅಥವಾ ವಾರ್ಡ್ ಸಮಿತಿ ಮುಂತಾದವರು ಒಳಗೊಂಡಿರುತ್ತಾರೆ. ಇತರ ಜವಾಬ್ದಾರಿಗಳ ಜತೆಗೆ ಈ ಕೆಳಗಿನ ಜವಾಬ್ದಾರಿಗಳೂ ಶಿಕ್ಷಣ ಸಮಿತಿಗಳ ಮೇಲಿರುತ್ತವೆ.

- ಶಾಲೆಗಳಿಗೆ ಸಾಕಷ್ಟು ಭೂಮಿ ಇರುವಂತೆ ಮತ್ತು ಅವುಗಳ ವಿಸ್ತರಣೆಗೆ ಅವಕಾಶವಿರುವುದನ್ನು ಖಚಿತಪಡಿಸಿಕೊಳ್ಳುವುದು
- ಶಾಲಾ ಕಟ್ಟಡಗಳ ನಿರ್ಮಾಣ ಮತ್ತು ನಿರ್ವಹಣೆ
- ನಿಯಮಿತ ಮತ್ತು ಪರಿಣಾಮಕಾರಿಯಾಗಿ ಶಾಲೆಗಳು ಕಾರ್ಯನಿರ್ವಹಿಸುವಂತೆ ನೋಡಿಕೊಳ್ಳುವುದು.
- ಪೀಠೋಪಕರಣ, ಸಲಕರಣೆಗಳು, ಕಲಿಕಾ ಸಾಮಗ್ರಿ, ಪುಸ್ತಕಗಳು, ಬೋಧನಾ ಸಲಕರಣೆಗಳು ಮತ್ತು ಇತರ ಅವಶ್ಯಕತೆಗಳ ಕ್ರೋಢೀಕರಣ
- ತರಗತಿಗಳ ದೈನಂದಿನ ನಿರ್ವಹಣೆ, ವಾರ್ಷಿಕ ಯೋಜನೆಯ ಅನುಷ್ಠಾನ ಮತ್ತು ಗುಣಮಟ್ಟ ಹೆಚ್ಚಿಸಲು ಕಾರ್ಯಕ್ರಮಗಳ ಅನುಷ್ಠಾನವನ್ನು ಖಚಿತಪಡಿಸಿಕೊಳ್ಳುವುದು.
- ಶಾಲಾ ಸಂಕೀರ್ಣದಲ್ಲಿಯೇ ಶಿಕ್ಷಕರಿಗಾಗಿ ಅಲ್ಪಾವಧಿ ತರಬೇತಿಗಳ ಆಯೋಜನೆ
- ಸಮವಸ್ತ್ರಗಳು, ಪಠ್ಯಪುಸ್ತಕಗಳು ಮತ್ತು ಇತರ ಕಲಿಕಾ ಸಾಮಗ್ರಿಗಳು ಉಚಿತವಾಗಿ, ಸಿಗುತ್ತಿರುವದನ್ನು ಖಚಿತಪಡಿಸಿಕೊಳ್ಳುವುದು ಸರ್ಕಾರಿ ನಿಯಮಗಳ ಅನ್ವಯ ವಿದ್ಯಾರ್ಥಿಗಳಿಗೆ ಮಧ್ಯಾಹ್ನ ಉಚಿತ ಬಿಸಿಯೂಟ ಪೂರೈಕೆಯಾಗುತ್ತಿರುವುದನ್ನು ಖಚಿತಪಡಿಸಿಕೊಳ್ಳುವುದು.
- ಸಾರ್ವತ್ರಿಕ ದಾಖಲಾತಿ ಮತ್ತು ಮಕ್ಕಳನ್ನು 14ನೇ ವಯಸ್ಸಿನವರೆಗೆ ಅಥವಾ ಎಂಟನೇ ತರಗತಿಯವರೆಗೆ ಶಾಲೆಯಲ್ಲಿ ಉಳಿಸಿಕೊಳ್ಳುವುದನ್ನು ಖಚಿತಪಡಿಸಿಕೊಳ್ಳುವುದು.
- ಸರ್ಕಾರದಿಂದ ಅನುದಾನ ಪಡೆಯುವುದು, ಸಮುದಾಯದಿಂದ ಸಂಪನ್ಮೂಲ ಕ್ರೋಢೀಕರಿಸುವುದು ಮತ್ತು ಒಂದೇ ಶಿಕ್ಷಣ ನಿಧಿಯನ್ನು ಜಾರಿಗೆ ತರುವುದು.

- ಶಿಕ್ಷಕರು ಮತ್ತು ಸಿಬ್ಬಂದಿಗೆ ಮಾಸಿಕ ವೇತನ ವಿತರಣೆ ಹಾಗೂ ಶಿಕ್ಷಣ ನಿಧಿಯ ನಿರ್ವಹಣೆ. ವೇತನದಲ್ಲಿ ಕಡಿತ, 'ಕೆಲಸ ಮಾಡದಿದ್ದರೆ ವೇತನ ಇಲ್ಲ' ಎಂಬ ನೀತಿಗೆ ಬದ್ಧರಾಗಿರುವುದು.

- ಖರ್ಚುವೆಚ್ಚಗಳ ಸರಿಯಾದ ಲೆಕ್ಕಪತ್ರಗಳನ್ನು ನಿರ್ವಹಿಸುವುದು, ಶಾಲೆಯ ಆಸ್ತಿಯ ಲೆಕ್ಕ, ಲೆಕ್ಕಪತ್ರಗಳ ವಾರ್ಷಿಕ ಪರಿಶೀಲನೆ ಮತ್ತು ಅದರ ವಿವರಗಳನ್ನು ಸಮುದಾಯಕ್ಕೆ ಹಾಗೂ ಮೇಲಾಧಿಕಾರಿಗಳಿಗೆ ಸಲ್ಲಿಸುವುದು.

**

ನಾಗಾಲ್ಯಾಂಡ್‌ನಲ್ಲಿ ಶಾಲೆಗಳ ಕಾರ್ಯನಿರ್ವಹಣೆ ಮತ್ತು ಕಲ್ಯಾಣಗಳಲ್ಲಿ ಸಮುದಾಯವೂ ಹೆಚ್ಚು ಹೆಚ್ಚು ತೊಡಗಿಸಿಕೊಳ್ಳುವ ಮೂಲಕ ಸಮುದಾಯೀಕರಣ ಮಾಡಿರುವುದರಿಂದ ಸಮುದಾಯದ ಪಾಲ್ಗೊಳ್ಳುವಿಕೆಯಷ್ಟೇ ಖಾತರಿಗೊಂಡಿಲ್ಲ, ಜೊತೆಗೆ ಜನರಲ್ಲಿ ಶಾಲೆ ತಮಗೆ ಸೇರಿದ್ದು ಎಂಬ ಭಾವನೆಯನ್ನೂ ಹುಟ್ಟುಹಾಕುತ್ತದೆ. ಇದೇ ವೇಳೆಗೆ, ಸಮುದಾಯೀಕರಣದ ಪರಿಣಾಮವಾಗಿ, ಶಾಲೆಯಲ್ಲಿ ಮಕ್ಕಳ ಹಾಜರಾತಿಯಲ್ಲಿ ಗಣನೀಯ ಪ್ರಗತಿ ಕಂಡುಬಂದಿದ್ದು, ಶಾಲೆಯಿಂದ ಹೊರಗುಳಿಯುವ ಮಕ್ಕಳ ಸಂಖ್ಯೆ ಬಹಳ ಕಡಿಮೆಯಾಗಿದೆ. ಅಷ್ಟೇ ಅಲ್ಲ, ವಿದ್ಯಾರ್ಥಿಗಳಿಗೆ ಶಿಕ್ಷಣ ನೀಡುವಲ್ಲಿ ಶಿಕ್ಷಕರು ಹಿಂದೆಂದಿಗಿಂತಲೂ ಹೆಚ್ಚಿನ ಆಸಕ್ತಿ ತೋರುತ್ತಿದ್ದಾರೆ.

ಮೂಲ: ಎಲಿಮೆಂಟರಿ ಶಿಕ್ಷಣದ ಸಮುದಾಯೀಕರಣದ ಕೈಪಿಡಿ (2004). ಶಾಲಾ ಶಿಕ್ಷಣ ನಿರ್ದೇಶನಾಲಯ, ನಾಗಾಲ್ಯಾಂಡ್

**

ಒಟ್ಟಾರೆಯಾಗಿ, ಶಾಲಾ ಪರಿಸರವನ್ನು ಮಕ್ಕಳಿಗೆ ಉತ್ತೇಜನಕಾರಿಯಾಗಿಸುವ ಮತ್ತು ಪೋಷಕರು ಹಾಗೂ ಸ್ಥಳೀಯ ಸಮುದಾಯಕ್ಕೆ ಶಾಲೆಯೊಂದಿಗಿನ ಸಂಬಂಧವನ್ನು ಗಟ್ಟಿಗೊಳಿಸುವ ನಿಟ್ಟಿನಲ್ಲಿ ಪೋಷಕ-ಶಿಕ್ಷಕ ಸಂಘಗಳು, ಸ್ಥಳೀಯ ಮಟ್ಟದ ಸಮಿತಿಗಳು ಮತ್ತು ಶಾಲೆಯ ಹಳೆ ವಿದ್ಯಾರ್ಥಿಗಳ ಸಂಘಗಳು ಸಾಂಸ್ಥಿಕ ರಚನೆಗಳು ಕೈಜೋಡಿಸಿವೆ. ಶಾಲೆಗಳ ನಿರ್ವಹಣೆ ಹಾಗೂ ಇತರ ಸೌಕರ್ಯಗಳಲ್ಲೂ ಸಮುದಾಯದ ಪಾಲ್ಗೊಳ್ಳುವಿಕೆಯನ್ನು ಬಳಸಿಕೊಳ್ಳಬಹುದು. ಶಾಲೆಗೆ ಆವರಣ ಗೋಡೆ ನಿರ್ಮಾಣ, ಸೌಕರ್ಯಗಳ ಹೆಚ್ಚಳ ಮುಂತಾದ ಕಾರ್ಯಗಳಲ್ಲಿ ಸ್ಥಳೀಯರು ಕೊಡುಗೆ ನೀಡಿದ ಉದಾಹರಣೆಗಳಿವೆ. ಆದರೂ, ಸಮುದಾಯದ ಪಾಲ್ಗೊಳ್ಳುವಿಕೆ ಎಂದರೆ ಬಡ ಕುಟುಂಬಗಳಿಗೆ ಆರ್ಥಿಕ ಹೊರೆ ಬೀಳುವಂತಾಗಬಾರದು. (ಎನ್‌ಸಿಎಫ್ 2005).

ಪೋಷಕರು, ಸಮುದಾಯ ಮತ್ತು ಸರ್ಕಾರೇತರ ಸಂಘ ಸಂಸ್ಥೆಗಳೊಂದಿನ (ಎನ್‌ಜಿಓ) ಸಹಭಾಗಿತ್ವಗಳ ಒಳಗೊಳ್ಳುವಿಕೆ ಸಮನ್ವಯ ಶಾಲೆಯ ಪರಿಕಲ್ಪನೆಯಲ್ಲಿ ಹೆಚ್ಚು ಹೆಚ್ಚು ಸಾಧ್ಯವಾಗಬೇಕು. ಹೇಗೆಂದರೆ, ಯೋಜನೆ ಮತ್ತು ಅಳವಡಿಕೆ, ಮನೆ ಮತ್ತು ಶಾಲೆಯ ನಡುವೆ, ಸಾರ್ವತ್ರಿಕ ಮತ್ತು ಸಾಮಾನ್ಯ ಶಾಲೆಗಳ ನಡುವೆ, ಸಾಮಾನ್ಯ ಶಾಲೆಗಳು ಮತ್ತು ವಿಶೇಷ ಶಾಲೆಗಳ ಶಿಕ್ಷಕರ ನಡುವೆ, ಶಿಕ್ಷಕರು ಮತ್ತು ಆಡಳಿತಾಧಿಕಾರಿಗಳ ನಡುವೆ ಮತ್ತು ಕೊನೆಯದಾಗಿ ಸ್ವತಃ ವಿದ್ಯಾರ್ಥಿಗಳ ನಡುವೆ.

**

ಶಾಲೆಗಳಲ್ಲಿ ಉಚಿತ ಕಿರು ಸಂದೇಶಗಳ ಸೇವೆ (ಉಚಿತ ಎಸ್.ಎಂ.ಎಸ್)

ಮಕ್ಕಳ ಶಿಕ್ಷಣ ಮತ್ತು ಕ್ಷೇಮಾಭಿವೃದ್ಧಿಯಲ್ಲಿ ಶಾಲೆ ಮತ್ತು ಪೋಷಕರ ನಡುವೆ ನಿರಂತರ ಹಾಗೂ ಕ್ಷಿಪ್ತ ಸಂಪರ್ಕ ಅತ್ಯವಶ್ಯ. ಊಹಿಸಲಾಗದ ಅಥವಾ ಕ್ಷಣಕ್ಷಣಕ್ಕೂ ಬದಲಾಗುವ ಸನ್ನಿವೇಶವುಳ್ಳ ಊರುಗಳಲ್ಲಿ ಈ ಪ್ರಕ್ರಿಯೆ ಬಹಳ ಮುಖ್ಯ. ಮಣಿಪುರದ ಚರ್ಚಾಂದ್‌ಪುರ ಜಿಲ್ಲೆಯ ಲಾಲ್‌ಪುಯಿತ್ಲುಯ್ಯೆ ಫೌಂಡೇಶನ್ ಸ್ಕೂಲ್ 'ಫೌಂಡೇಷನ್ ಗಪ್‌ಚುಪ್' ಎಂಬ ಎಸ್‌ಎಂಎಸ್ ಮೂಲಕ ಪೋಷಕರಿಗೆ ಮಹತ್ವದ ಮಾಹಿತಿ ನೀಡುತ್ತದೆ. ಉದಾಹರಣೆಗೆ, ತುರ್ತು ಪರಿಸ್ಥಿತಿಯ ಕಾರಣದಿಂದ ಶಾಲೆ ನಡೆಸಲು ಸಾಧ್ಯವಾಗದಿದ್ದರೆ, ತಕ್ಷಣವೇ ಪೋಷಕರಿಗೆ ಎಸ್‌ಎಂಎಸ್

ಮೂಲಕ ಮಾಹಿತಿ ರವಾನೆಯಾಗುತ್ತದೆ. ಈ ಮೂಲಕ ವಿದ್ಯಾರ್ಥಿಗಳು ಯಾವುದೇ ರೀತಿಯ ಅಪಾಯದ ಸನ್ನಿವೇಶದಲ್ಲಿ ಸಿಕ್ಕಿಹಾಕಿಕೊಳ್ಳದಂತೆ ಮುನ್ನೆಚ್ಚರಿಕೆ ವಹಿಸಿದಂತಾಗುತ್ತದೆ. ಅಂದರೆ, ಶಾಲೆಯ ಮೂಲಕ ನಿರ್ಮಿಸಲಾದ ಒಂದು ಲಿಂಕ್‌ನಿಂದಾಗಿ, ಶಾಲೆಯೊಂದಿಗೆ ಇನ್ನಷ್ಟು ಆಪ್ತವಾಗಿ ತೊಡಗಿಸಿಕೊಳ್ಳುವಂತೆ ಪೋಷಕರಿಗೆ ಪ್ರೇರೇಪಣೇ ಸಿಗುತ್ತದೆ.
**

ಸಂಪನ್ಮೂಲಗಳು

ಶಿಕ್ಷಕರು ಸಂಪನ್ಮೂಲಗಳನ್ನು ಆಯೋಜಿಸುವುದು, ಕ್ರೋಢೀಕರಿಸುವುದು ಅತ್ಯಗತ್ಯ. ಪುಸ್ತಕ, ಆಟಿಕೆಗಳು ಮತ್ತು ಆಟೋಟ ವಸ್ತುಗಳಂತಹ ಕಲಿಕಾ ಸಾಮಗ್ರಿಗಳ ರೂಪದಲ್ಲಷ್ಟೇ ಅಲ್ಲದೆ, ತರಬೇತುಗೊಂಡ ಸಂಪನ್ಮೂಲ ಶಿಕ್ಷಕರ ರೂಪದಲ್ಲಿಯೂ ಸಂಪನ್ಮೂಲಗಳನ್ನು ಕಲೆಹಾಕಬೇಕಾಗುತ್ತದೆ. ಇದರಿಂದ ವಿಶೇಷ ಮಕ್ಕಳ ಅವಶ್ಯಕತೆಗಳನ್ನು ಪೂರೈಸಲು ಸಾಧ್ಯವಾಗುತ್ತದೆ. ಈ ಸಂಪನ್ಮೂಲಗಳನ್ನು ಬೇರೆ ಬೇರೆ ಶಾಲೆಗಳು ನಡುವೆ ಅಥವಾ ವಿಶೇಷ ಶಾಲೆ ಮತ್ತು ಸಾಮಾನ್ಯ ಶಾಲೆಯ ನಡುವೆ ಅಥವಾ ಶಾಲೆ ಮತ್ತು ಎನ್‌ಜಿಒಗಳ ನಡುವೆ ಹಂಚಿಕೊಳ್ಳಬಹುದು. ಎಸ್‌ಎಸ್‌ಎದಂತಹ ನಿಧಿಗಳ ಮೂಲಕವೂ ಈ ಸಂಪನ್ಮೂಲಗಳನ್ನು ಕ್ರೋಢೀಕರಿಸಲು ಅವಕಾಶವಿದೆ.

ಇದಕ್ಕೆ ಪೂರಕವಾಗಿ, ಸ್ಥಳೀಯವಾಗಿ ದೊರಕುವ ಕೆಲವು ವಸ್ತುಗಳು ಕಡಿಮೆ ದರದಲ್ಲಿ ಸಿಕ್ಕಿದರೂ ಬಹಳ ಮೌಲ್ಯವುಳ್ಳದ್ದಾಗಿರುತ್ತವೆ. ತರಗತಿಗಳಲ್ಲಿ, ವಿಶೇಷವಾಗಿ ಪ್ರಾಥಮಿಕ ಶಾಲೆಗಳಲ್ಲಿ ಇರಿಸಿಕೊಳ್ಳಲು ಅವು ಬಹಳ ಉಪಯುಕ್ತವಾಗಿರುತ್ತವೆ. ಶಿಕ್ಷಕರು ಬಗೆ ಬಗೆಯ ಕಚ್ಚಾ ವಸ್ತುಗಳನ್ನು ಬಳಸಿಕೊಂಡು ಕಲಿಕಾ ಸಾಮಗ್ರಿಗಳಾಗಿ ಮಾರ್ಪಡಿಸಿಕೊಳ್ಳಬಹುದು. ಇವುಗಳನ್ನು ಸಿದ್ಧಪಡಿಸಲು ಸಾಕಷ್ಟು ಸಮಯಾವಕಾಶ  ತೆಗೆದುಕೊಂಡರೂ ಅವು ಅನೇಕ ವರ್ಷ ಬಾಳಿಕೆ ಬರುವ ಕಾರಣ, ವಿನಿಯೋಗಿಸಿದ ಸಮಯ ವ್ಯರ್ಥವಾಗುವುದಿಲ್ಲ. (ಎನ್‌ಸಿಎಫ್, 2005).

ಪರಿಣಾಮಕಾರಿ ಕಲಿಕೆಯ ದೃಷ್ಟಿಯಿಂದ ಐಸಿಟಿ ಮತ್ತು ಇತರ ತಂತ್ರಜ್ಞಾನಗಳ ಬಳಕೆಯ ಕುರಿತು ವ್ಯಾಪಕ ಚರ್ಚೆ ನಡೆಯುತ್ತಿದೆ. ಮಕ್ಕಳಿಗೆ ಅರ್ಥಪೂರ್ಣ ಅನುಭವ ಸಿಗಬೇಕಾದರೆ ಶಾಲೆಗಳಲ್ಲಿ ಕಂಪ್ಯೂಟರ್, ಟೇಪ್ ರೆಕಾರ್ಡರ್ ಮತ್ತು ರೇಡಿಯೊಗಳು ಲಭ್ಯವಿರಬೇಕು.

/// ಚಿತ್ರ./// ಸೆರೆಬ್ರಲ್ ಪಾಲ್ಸಿಯಿಂದ ಬಳಲುತ್ತಿರುವ ಮಕ್ಕಳಿಗಾಗಿ ಸ್ಥಳೀಯವಾಗಿ ತಯಾರಿಸಿದ ಕುರ್ಚಿ///
///

ಯುನೆಸ್ಕೊದ 'ದಿ ಒಪನ್ ಫೈಲ್ ಆನ್ ಇನ್‌ಕ್ಲೂಸಿವ್ ಎಜುಕೇಶನ್' ಸಲಹೆ ನೀಡಿರುವಂತೆ, ಸಮನ್ವಯ ಶಿಕ್ಷಣಕ್ಕೆ ಬೆಂಬಲ ಪಡೆಯಲು ಶಾಲೆಯಲ್ಲಿ ಮತ್ತು ಸುತ್ತಮುತ್ತ ಅದಾಗಲೇ ಲಭ್ಯವಿರುವ ಸಂಪನ್ಮೂಲಗಳನ್ನೇ ಕ್ರೋಢೀಕರಿಸಿ ಕಾರ್ಯತಂತ್ರಗಳನ್ನು ರೂಪಿಸಬೇಕು. ಅವುಗಳೆಂದರೆ,

- ಮಕ್ಕಳಿಂದ ಮಕ್ಕಳಿಗೆ ಬೆಂಬಲ. ಇದರಲ್ಲಿ ವಿದ್ಯಾರ್ಥಿಗಳು ತಮ್ಮ ತರಗತಿಗಳಲ್ಲೇ ಸಹಭಾಗಿತ್ವದಲ್ಲಿ ಕೆಲಸ ಮಾಡುವ ಮೂಲಕ ಪರಸ್ಪರರಿಗೆ ನೆರವಾಗುವ ಸಾಮರ್ಥ್ಯ ಗಳಿಸುತ್ತಾರೆ.
- ಶಿಕ್ಷಕರಿಂದ ಶಿಕ್ಷಕರಿಗೆ ಬೆಂಬಲ; ಇದರಲ್ಲಿ ಒಂದು ಶಾಲೆಯ ಸಿಬ್ಬಂದಿ ಸಹಭಾಗಿತ್ವದಲ್ಲಿ ಕೆಲಸ ಮಾಡುತ್ತಾ, ವಿದ್ಯಾರ್ಥಿಗಳ ವಿಭಿನ್ನ ಅವಶ್ಯಕತೆಗಳಿಗೆ ಅನುಗುಣವಾಗಿ ಹೇಗೆ ಕೆಲಸ ಮಾಡಬಹುದು ಎಂಬುದನ್ನು ತೀರ್ಮಾನಿಸುವುದು.
- ತರಗತಿಯಲ್ಲಿ ತಾರತಮ್ಯ ಮಾಡುವುದು. ಇದರಲ್ಲಿ, ತರಗತಿಗಳಲ್ಲಿ ವಿದ್ಯಾರ್ಥಿಗಳ ಮಟ್ಟಕ್ಕೆ ತಕ್ಕುದಾದ ಬೇರೆ ಬೇರೆ ರೀತಿಯ ಮತ್ತು ಹಂತದ ಚಟುವಟಿಕೆಗಳನ್ನು ನಿಭಾಯಿಸಲು ಬೇಕಾದ ಸಾಮರ್ಥ್ಯ ಮತ್ತು ಸಂಪನ್ಮೂಲಗಳನ್ನು ಶಿಕ್ಷಕರು ಅಭಿವೃದ್ಧಿಪಡಿಸುತ್ತಾರೆ.

• ಸಂಪನ್ಮೂಲ ಕೊಠಡಿ. ಇದರಲ್ಲಿ ವಿಶೇಷ ಸಂಪನ್ಮೂಲಗಳನ್ನು ನಿರ್ಮಿಸಬಹುದು. ತಜ್ಞ ಶಿಕ್ಷಕರು (ಲಭ್ಯವಿದ್ದರೆ) ಕೆಲಸ ಮಾಡಬಹುದು ಹಾಗೂ ಅವಶ್ಯವಿದ್ದಾಗ ಪಾಠ ಮಾಡುವ ಅವಕಾಶವನ್ನು ವಿದ್ಯಾರ್ಥಿಗಳಿಗೇ ಕೊಡಬಹುದು.

ಲೇಹ್‌ನ ಚುಚೋತ್ ಯೋಕ್ಮಾ ಮಾಧ್ಯಮಿಕ ಶಾಲೆಯಲ್ಲಿ ಅಂಗವಿಕಲ ಮಕ್ಕಳ ಶಿಕ್ಷಣವನ್ನು ಸಾಧ್ಯವಾಗಿಸಿದ್ದು

ಅಂಗವಿಕಲ ಮಕ್ಕಳಿಗೆ ಮನೆಯಲ್ಲೇ ಸಮನ್ವಯ ಶಿಕ್ಷಣ ನೀಡುವ ಸಂಬಂಧ, ಆ ಮಕ್ಕಳ ಜೊತೆ ಹಾಗೂ ಅವರ ಕುಟುಂಬಗಳ ಜೊತೆಗಷ್ಟೇ ಅಲ್ಲದೆ, ಸಂಬಂಧಪಟ್ಟವರಾದ ಹಿಲ್ ಕೌನ್ಸಿಲ್, ಆಡಳಿತವರ್ಗ ಮತ್ತು ಎನ್‌ಜಿಓಗಳ ಜೊತೆ ಚರ್ಚೆ ನಡೆಸಿದ ಬಳಿಕವೇ ಈ ಯೋಚನೆಗೆ ಒಂದು ಸ್ಪಷ್ಟ ರೂಪ ನೀಡಲು ಸಾಧ್ಯವಾಗಿದೆ. ಮಾದರಿ ಯೋಜನೆಯಾಗಿ, ಲೇಹ್‌ನ ಚುಚೋತ್ ಯೋಕ್ಮಾ ಎಂಬ ಹಳ್ಳಿಯನ್ನು ಗುರುತಿಸಲಾಯಿತು. ಅಲ್ಲಿನ 13 ಮಕ್ಕಳ ಪೈಕಿ 8 ಮಂದಿ ಅಂಗವಿಕಲರೂ, ಐವರು ಸಾಮಾನ್ಯ ಮಕ್ಕಳೂ ಇದ್ದರು. ಅವರು ಒಂದು ಮನೆಯಂತಹ ಪರಿಸರದಲ್ಲಿ ಇದ್ದುಕೊಂಡು ಒಂದು ಸರ್ಕಾರಿ ಶಾಲೆಗೆ ಹಾಜರಾದರು. .ಕಳೆದ ವರ್ಷ ಆ ಶಾಲೆಯಲ್ಲಿ ಸಮನ್ವಯ ಶಾಲೆಯ ಅಭ್ಯಾಸಗಳನ್ನು ಆರಂಭಿಸಲಾಗಿತ್ತು. ಅಲ್ಲಿ ಈ ಮಕ್ಕಳು ಮತ್ತು ಅವರ ಸಹಪಾಠಿಗಳ ಗುಂಪು ಸಶಕ್ತ ಪರಿಸರ ನಿರ್ಮಾಣಕ್ಕೆ ಶ್ರಮಿಸಿದರು. ಹೀಗೆ ಒಂದು ವರ್ಷದವರೆಗೂ ಪ್ರಯೋಗಾತ್ಮಕವಾಗಿ ಶಾಲೆ ನಡೆಸಿದ ಬಳಿಕ ಜಿಲ್ಲಾ ಆಡಳಿತ, ಹಿಲ್ ಕೌನ್ಸಿಲ್ ಮತ್ತು ನಂಗ್ಯಾಲ್ ಅಂಗವಿಕಲರ ಸಂಸ್ಥೆ (ನಂಗ್ಯಾಲ್ ಇನ್‌ಸ್ಟಿಟ್ಯೂಟ್ ಫಾರ್ ಪೀಪಲ್ ಅಂಡ್ ರಿಸೆಬಿಲಿಟಿ ಎನ್‌ಐಪಿಡಬ್ಲ್ಯೂಡಿ) ಅವರಿಗೆ, ಲಡಾಕ್‌ನ ಅಂಗವಿಕಲ ಮಕ್ಕಳನ್ನು ಮುಖ್ಯವಾಹಿನಿಗೆ ಕರೆತರಲು ಇದು ಅತ್ಯಂತ ಪರಿಣಾಮಕಾರಿ ಮಾದರಿಯಾಗಿದೆ ಎಂಬುದು ಮನವರಿಕೆಯಾಗಿದೆ.

ನಿಜ ಹೇಳಬೇಕೆಂದರೆ, ಕಳೆದ ವರ್ಷದ ವಾರ್ಷಿಕ ಪರೀಕ್ಷೆಯಲ್ಲಿ ಚುಚೋತ್‌ನ ಶಾಲೆಯಲ್ಲಿ ಅತ್ಯಧಿಕ ಅಂಕ ಗಳಿಸಿದವರು ಅಂಗವಿಕಲ ವಿದ್ಯಾರ್ಥಿಗಳಾಗಿದ್ದು, ಸಮನ್ವಯ ವಿದ್ಯಾರ್ಥಿ ನಿಲಯದಲ್ಲಿ ಪಡೆದ ಕಲಿಕೆಯಿಂದಾಗಿ ಇದು ಸಾಧ್ಯವಾಗಿದೆ. ವಾಸ್ತವವಾಗಿ, ಗ್ರಾಮದ ಆರು ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢ ಶಾಲೆಗಳ ಪೈಕಿ ಮೊದಲ ಸ್ಥಾನ ಗಳಿಸಿರುವುದು ಒಬ್ಬ ಅಂಗವಿಕಲ ವಿದ್ಯಾರ್ಥಿನಿ. ಈಕೆ ಹಿಂದೆಂದೂ ಶಾಲೆಗೇ ದಾಖಲಾದವಳಲ್ಲ! ಈ ಪ್ರಯೋಗಗಳ ಪರಿಣಾಮವಾಗಿ, ತಮ್ಮ ಜಿಲ್ಲೆ ಈಗ ಸಮನ್ವಯ ಶಿಕ್ಷಣ ಕಾರ್ಯಕ್ರಮಕ್ಕೆ ದೀರ್ಘಕಾಲದ ಸುಸ್ಥಿರ ವಿದ್ಯಮಾನವಾಗಿ ಸ್ಪಷ್ಟ ರೂಪು ಕೊಡಲು ಕಾಲ ಕೂಡಿಬಂದಿದೆ ಹಾಗೂ, ಗ್ರಾಮೀಣ ಭಾರತಕ್ಕೆ ಇದೊಂದು ಮಾದರಿ ಯೋಜನೆಯಾಗಲಿದೆ ಎಂದು, ಎಲ್ಲಾ ಭಾಗೀದಾರರು ಭಾವಿಸಿದ್ದಾರೆ. ಒಂದು ಗ್ರಾಮದ ಮೂರು ಬೇರೆ ಬೇರೆ ಶಾಲೆಗಳ ವಿದ್ಯಾರ್ಥಿಗಳು ಒಂದೇ ವಿದ್ಯಾರ್ಥಿ ನಿಲಯಕ್ಕೆ ಹಾಜರಾಗುವಂತಹ, ಸಮನ್ವಯ ಶಿಕ್ಷಣ ಕಾರ್ಯಕ್ರಮದ ಮುಂದಿನ ವಿಸ್ತರಿತ ರೂಪ ಪ್ರಸ್ತಾವನೆಯ ಹಂತದಲ್ಲಿದೆ. ಸಿಪಿಡಬ್ಲ್ಯೂಡಿ- ಕೇಂದ್ರ ಲೋಕೋಪಯೋಗಿ ಇಲಾಖೆಯ ಸೂಚನೆಗಳಂತೆ, ಈ ವಿದ್ಯಾರ್ಥಿ ನಿಲಯವು ದೈಹಿಕ ನ್ಯೂನತೆಯುಳ್ಳ ವಿದ್ಯಾರ್ಥಿಗಳನ್ನು ಉದ್ದೇಶಿಸಿದ್ದಾಗಿರುತ್ತದೆ. ಈ ಜಿಲ್ಲೆಯಲ್ಲಿ ಸುಮಾರು 400 ಪ್ರಾಥಮಿಕ, ಮಾಧ್ಯಮಿಕ ಮತ್ತು ಪ್ರೌಢಶಾಲೆಗಳಿವೆ. ಪ್ರಸ್ತುತ, ಕುಶೋತ್ ಶಾಲೆಯ ಯೋಜನೆಯು ಸಮನ್ವಯ ಶಿಕ್ಷಣಕ್ಕೆ ಪ್ರಾಯೋಗಿಕವಾಗಿ ಇದೆ. ವಸತಿಯುಕ್ತ ಶಾಲಾ ವಾತಾವರಣದಲ್ಲಿ ಪರಿಪೂರ್ಣ, ಉನ್ನತ ಗುಣಮಟ್ಟದ ಶೈಕ್ಷಣಿಕ ಮಾರ್ಗದರ್ಶನಗಳು ಸಿಗುವ ಖಾತರಿ ಇದೆ. ಸಮನ್ವಯಗೊಂಡ ವಸತಿನಿಲಯವು ದೈಹಿಕ ಅಸಾಮರ್ಥ್ಯವುಳ್ಳ ಮಕ್ಕಳ ಜೊತೆಗೆ ಆರ್ಥಿಕವಾಗಿ ಹಿಂದುಳಿದ ಕುಟುಂಬಗಳ ಹಾಗೂ ಹಿಂದುಳಿದ ಜಾತಿಗಳ ಮಕ್ಕಳನ್ನೂ ಒಳಗೊಂಡಿರುತ್ತದೆ.

ಈ ಪ್ರಾಯೋಗಿಕ ಮಾದರಿಯು ಇದುವರೆಗೂ ಯಶಸ್ಸು ಕಂಡಿರುವ ಹಿನ್ನೆಲೆಯಲ್ಲಿ, ಈ ಕಾರ್ಯಕ್ರಮವನ್ನು ದೈಹಿಕ ಅಸಾಮರ್ಥ್ಯದ ಕಾರಣದಿಂದ ಶೈಕ್ಷಣಿಕವಾಗಿ ಮುಖ್ಯವಾಹಿನಿಯಿಂದ ಹೊರಗುಳಿದಿರುವ, ಜಿಲ್ಲೆಯ ಎಲ್ಲಾ ಮಕ್ಕಳಿಗೂ ಲಭ್ಯವಾಗುವಂತೆ ಮಾಡಬೇಕು ಎಂದು ಸರ್ಕಾರವೂ ಸೇರಿದಂತೆ ಎಲ್ಲಾ ಭಾಗೀದಾರರೂ ಯೋಚಿಸುತ್ತಿದ್ದಾರೆ. ಹಾಲಿ ಯೋಜನೆಯು ಪ್ರಾಥಮಿಕ ಹಂತದ 50 ಮಕ್ಕಳೊಂದಿಗೆ ಆರಂಭವಾಗಿದ್ದು, ಮುಂದಿನ ಎರಡು ವರ್ಷಗಳಲ್ಲಿ 150 ಮಕ್ಕಳನ್ನು ತಲುಪುವ ಗುರಿ ಹೊಂದಿದೆ. ಶೈಕ್ಷಣಿಕವಾಗಿ ಹಿಂದುಳಿದ, ಆದರೆ ಕಲಿಕಾ ಸಾಮರ್ಥ್ಯವುಳ್ಳ ಮಕ್ಕಳನ್ನು ಈ ಯೋಜನೆಗೆ ಆದ್ಯತೆಯಲ್ಲಿ ಆಯ್ಕೆ ಮಾಡಲಾಗುವುದು. ಅಕಾಡೆಮಿಕ್ ಶಿಕ್ಷಣದ ಜೊತೆಗೆ, ಈ ಯೋಜನೆಯು ಮಕ್ಕಳ ವೈಯಕ್ತಿಕ ಮತ್ತು ಸಾಮಾಜಿಕ ಬೆಳವಣಿಗೆಯನ್ನೂ ಬಲವರ್ಧನೆಗೊಳಿಸುವ ಅಂಶಗಳನ್ನು ಒಳಗೊಂಡಿದೆ. ಮುಖ್ಯವಾಗಿ, ಈ ಅಂಶಗಳು ವಸತಿ ನಿಲಯದ ಮಕ್ಕಳಿಗಷ್ಟೇ ಅಲ್ಲದೆ ಗ್ರಾಮದ ಎಲ್ಲಾ ವಿದ್ಯಾರ್ಥಿಗಳನ್ನೂ ಒಳಗೊಳ್ಳಲಿವೆ. ಉದಾಹರಣೆಗೆ, ಮಕ್ಕಳ ಸಲಹಾ ಸಮಿತಿಯನ್ನು ಯೋಜಿಸಲಾಗಿದ್ದು, ಮಕ್ಕಳು ತಮ್ಮ ಸಮಸ್ಯೆಗಳನ್ನು ತಾವೇ ಚರ್ಚಿಸಿ, ತಮ್ಮ ಹಕ್ಕುಗಳಿಗಾಗಿ ಸ್ವತಃ ಸಲಹೆ ನೀಡಬೇಕು. ಇದನ್ನು ರಂಗ ಚಟುವಟಿಕೆ ಮತ್ತು ಇತರ ಚಟುವಟಿಕೆಗಳ ಮುಖಾಂತರ ರೂಪಿಸಲಾಗುತ್ತದೆ. ಇದು ಸರ್ಕಾರದ ಸಹಭಾಗಿತ್ವದಲ್ಲಿ ನಡೆಯುವ ಕಾರ್ಯಕ್ರಮವಾದ್ದರಿಂದ ಇಡೀ ಕಾರ್ಯಕ್ರಮವು ಸಮರ್ಥನೀಯವಾಗುವುದರಲ್ಲಿ ಸಂಶಯವಿಲ್ಲ. ಅಲ್ಲದೆ, ಒಂದು ಸಮನ್ವಯ ಸಮಿತಿಯನ್ನೂ ರಚಿಸಿ, ಕಾರ್ಯಕ್ರಮವು ಉತ್ತಮ ಗುಣಮಟ್ಟವನ್ನು ಕಾಯ್ದುಕೊಳ್ಳುತ್ತಿರುವ ಬಗ್ಗೆ ನಿಗಾ ವಹಿಸಲಿದೆ ಎನ್ನಲಾಗಿದೆ.

ಗುಡ್ಡಗಾಡು ಪ್ರದೇಶದ ಸಮನ್ವಯ ಶಿಕ್ಷಣ

ಗುಡ್ಡಗಾಡು ರಾಜ್ಯಗಳ, ಅಂಧ ಮಕ್ಕಳ ಶಿಕ್ಷಣ ನಿಜಕ್ಕೂ ಹಲವಾರು ಸವಾಲುಗಳಿಂದ ಕೂಡಿದೆ ಎಂದು ರಾಷ್ಟ್ರೀಯ ದೃಷ್ಟಿಮಾಂದ್ಯರ ಶಿಕ್ಷಣ ಸಂಸ್ಥೆ ಹೇಳುತ್ತದೆ. ಕ್ಲಿಷ್ಟಕರವಾದ ಭೂಪ್ರದೇಶವೇ ಎಲ್ಲ ಸಮಸ್ಯೆಗಳಿಗಿಂತಲೂ ಮಹತ್ವದ್ದಾಗಿದ್ದು, ಕಳಪೆ ಸಂಪರ್ಕ ಸಾಧನಗಳು ಮತ್ತು ಕುಟುಂಬಗಳ ದುರ್ಬಲ ಆರ್ಥಿಕ ಸ್ಥಿತಿಗತಿಯಿಂದಾಗಿ ಸಮಸ್ಯೆಗಳು ಇನ್ನಷ್ಟು ಸಂಕೀರ್ಣಗೊಳ್ಳುತ್ತವೆ.

ಅಂಗವಿಕಲ ಗಂಡು ಮಕ್ಕಳನ್ನು ಹೆಚ್ಚಾಗಿ ವಸತಿ ನಿಲಯಗಳಿಗೆ ಕಳುಹಿಸಿದರೆ, ಅಂಗವಿಕಲ ಹೆಣ್ಣು ಮಕ್ಕಳು ಮನೆಯ ನಾಲ್ಕು ಗೋಡೆಗಳಿಗೇ ಸೀಮಿತವಾಗುತ್ತಾರೆ. ಗುಡ್ಡಗಾಡು ಪ್ರದೇಶಗಳಲ್ಲಿ ನೆಲೆಸಿರುವ, ದೃಷ್ಟಿದೋಷವಿರುವ ಮಕ್ಕಳಿಗೆ ಸಮನ್ವಯ ಶಿಕ್ಷಣ ನೀಡಲು ಸುಸ್ಥಿರ ಮಾದರಿಯೊಂದನ್ನು ಗುರುತಿಸುವ ಉದ್ದೇಶದಿಂದ ಕ್ರಿಯಾ ಸಂಶೋಧನಾ ಯೋಜನೆ ಕೈಗೆತ್ತಿಕೊಳ್ಳಲು ಈ ಸಂಸ್ಥೆ ತೀರ್ಮಾನಿಸಿತು. ಈ ಯೋಜನೆಯ ಮಾದರಿಯನ್ನು, ಉತ್ತರಕಾಶಿಯ ತುನಲ್ಕಾ ಎಂಬ ಹಳ್ಳಿಯ ವಿಜಯಾ ಪಬ್ಲಿಕ್ ಶಾಲೆಯಲ್ಲಿ ಪ್ರಾಯೋಗಿಕವಾಗಿ ಅನುಷ್ಠಾನಗೊಳಿಸುವುದು ಎಂದು ತೀರ್ಮಾನಿಸಲಾಯಿತು. ಅಲ್ಲದೆ, ಶಾಲೆಯನ್ನು ಈ ಕ್ರಿಯಾ ಯೋಜನೆಯ ಪಾಲುದಾರ ಸಂಸ್ಥೆಯಾಗಿ ಆಯ್ಕೆ ಮಾಡಲಾಯಿತು.

ಈ ಮಾದರಿ ಯೋಜನೆಗೆ ಇದ್ದ ಷರತ್ತುಗಳು:

1. ಹಳ್ಳಿಯಲ್ಲಿರುವ ಶಾಲೆಗೆ ಸ್ವಂತ ಕಟ್ಟಡ ಹಾಗೂ ವಸತಿ ನಿಲಯ ಇರಬೇಕು ಅಥವಾ ಸಣ್ಣ ವಸತಿ ನಿರ್ಮಿಸುವಷ್ಟು ವಿಶಾಲವಾದ ಸ್ಥಳಾವಕಾಶ ಇರಬೇಕು. ವಸತಿ ನಿಲಯ ಇರಬೇಕು ಎಂಬ ಅಂಶಕ್ಕೆ ಹೆಚ್ಚು ಒತ್ತು ನೀಡಲಾಯಿತು. ಯಾಕೆಂದರೆ ಗುಡ್ಡಗಾಡು ಪ್ರದೇಶಗಳ ಹಳ್ಳಿಗಳಲ್ಲಿ ಕಾಂಕ್ರೀಟು ರಸ್ತೆಗಳಿರುವುದಿಲ್ಲ. ಅಲ್ಲದೆ, ಇರುವ ಕಚ್ಚಾ ರಸ್ತೆಗಳು ತೀರಾ ಒರಟಾಗಿರುತ್ತವೆ. ದಾರಿಯಲ್ಲಿ ಸಣ್ಣ ಸಣ್ಣ ಝರಿಗಳೂ ಇರುತ್ತವೆ.
2. ಗುಡ್ಡಗಾಡು ಪ್ರದೇಶಗಳ ಜನರ ಆರ್ಥಿಕ ತೀರಾ ಕೆಳಮಟ್ಟದಲ್ಲಿರುವ ಕಾರಣ ಮನೆಯವರಿಗೆ ಮಕ್ಕಳನ್ನು ಶಾಲೆಗೆ ಬಿಟ್ಟು, ವಾಪಾಸು ಕರೆದುಕೊಂಡು ಹೋಗುವಷ್ಟು ಆರ್ಥಿಕ

ಚೈತನ್ಯ ಇರುವುದಿಲ್ಲ ಎಂಬುದನ್ನು ಗಮನದಲ್ಲಿಟ್ಟುಕೊಂಡು ಈ ಮಾದರಿಯನ್ನು ವಿನ್ಯಾಸ ಮಾಡಲಾಯಿತು.

3. ಮತ್ತೊಂದು ಪ್ರಮುಖ ಅಂಶವೆಂದರೆ, ಅಂಗವಿಕಲ ಮಕ್ಕಳನ್ನು ತಮ್ಮ ಶಾಲೆಗೆ ಸೇರ್ಪಡೆ ಮಾಡುವ ಬಗ್ಗೆ ಶಾಲಾ ಆಡಳಿತಕ್ಕೆ ಸಂಬಂಧಪಟ್ಟವರು ಮತ್ತು ಶಿಕ್ಷಕರು ಆಸಕ್ತಿ ಹೊಂದಿರುವುದು. ಯಾಕೆಂದರೆ, ವಿಶೇಷ ಮಕ್ಕಳನ್ನು ನಿರ್ವಹಿಸುವ ಕುರಿತು ಶಾಲಾ ರಜಾ ದಿನಗಳಲ್ಲಿ ಅಲ್ಪಾವಧಿ ತರಬೇತಿ ಕಾರ್ಯಕ್ರಮ ನಡೆಸಲು ಮತ್ತು ಪಾಲ್ಗೊಳ್ಳಲು ಅವರ ಸಮ್ಮತಿ ಅತ್ಯವಶ್ಯವಾಗಿತ್ತು.

ಈ ಪ್ರಕ್ರಿಯೆ ಹೇಗಿತ್ತೆಂದರೆ:

ದೃಷ್ಟಿದೋಷವಿರುವ ಮಕ್ಕಳನ್ನು ಗುರುತಿಸುವುದು: ಉತ್ತರಕಾಶಿ ಜಿಲ್ಲೆಯ ಹಳ್ಳಿಗಳಲ್ಲಿ ದೃಷ್ಟಿದೋಷವಿರುವ ಮಕ್ಕಳನ್ನು ಗುರುತಿಸುವ ಉದ್ದೇಶದ ಒಂದು ಸಮೀಕ್ಷೆ ನಡೆಸುವ ಮೂಲಕ ಈ ಯೋಜನೆಗೆ ಶುಭಾರಂಭವಾಯಿತು. ಸಮೀಕ್ಷೆ ಎರಡು ಹಂತಗಳಲ್ಲಿ ಮುಕ್ತಾಯವಾಯಿತು. ಮೊದಲ ಹಂತದಲ್ಲಿ, 3-16ರ ಹರೆಯದ ಸುಮಾರು 68 ಮಕ್ಕಳನ್ನು ಗುರುತಿಸಲಾಯಿತು. 3-18 ವರ್ಷದೊಳಗಿನ ಸುಮಾರು 90 ಮಕ್ಕಳನ್ನು ಎರಡನೇ ಹಂತದಲ್ಲಿ ಗುರುತಿಸಲಾಯಿತು.

ಮೌಲ್ಯಮಾಪನ

• ಸಮೀಕ್ಷೆಯ ವೇಳೆ ಗುರುತಿಸಲಾದ ಮಕ್ಕಳನ್ನು ಪೋಷಕರೊಂದಿಗೆ ಶಾಲೆಗೆ ಬರಮಾಡಿಕೊಂಡು, ಒಬ್ಬ ಸಾಮಾನ್ಯ ಶಿಕ್ಷಕರು, ಒಬ್ಬ ವಿಶೇಷ ಶಿಕ್ಷಕರು ಮತ್ತು ರಾಷ್ಟ್ರೀಯ ದೃಷ್ಟಿಮಾಂದ್ಯರ ಸಂಸ್ಥೆ- ಎನ್‌ಐವಿಎಚ್‌ನ ಒಬ್ಬರು ಮನಃಶಾಸ್ತ್ರಜ್ಞರನ್ನು ಒಳಗೊಂಡ ತಂಡವು ಅವರೊಂದಿಗೆ ಮೌಲ್ಯಮಾಪನ ನಡೆಸಿತು. ಈ ಪ್ರಕ್ರಿಯೆಯಲ್ಲಿ ಮಕ್ಕಳ ಭಾಷಾ ಬೆಳವಣಿಗೆ, ಅರಿವಿನ ಬೆಳವಣಿಗೆ, ಓಡಾಟ ಮತ್ತು ಕೌಟುಂಬಿಕವಾಗಿ ಅವರ ಬಗೆಗಿನ ಸ್ವೀಕಾರ ಮನೋಭಾವದ ಬಗ್ಗೆ ತಿಳಿದುಕೊಳ್ಳಲಾಯಿತು.

• ಈ ಮೌಲ್ಯಮಾಪನ ವರದಿಗಳು, ಎಲ್ಲಾ ಮಕ್ಕಳಿಗೆ ವೈಯಕ್ತಿಕ ಶಿಕ್ಷಣ ಯೋಜನೆಯನ್ನು ಸಿದ್ಧಪಡಿಸುವ ಅಡಿಪಾಯ ಹಾಕಿತು ಎನ್ನಬಹುದು. ಮೌಲ್ಯಮಾಪನ ಮತ್ತು ಅದರ ವರದಿಗಳನ್ನು ವಿಜಯಾ ಪಬ್ಲಿಕ್ ಶಾಲೆಯ ಮೂವರು ಶಿಕ್ಷಕರೊಂದಿಗೆ ಸಿದ್ಧಪಡಿಸಿದ ಕಾರಣ, ದೃಷ್ಟಿದೋಷವಿರುವ ಮಕ್ಕಳು ಹಾಗೂ ಪೋಷಕರ ಅವಶ್ಯಕತೆಗಳನ್ನು ತಿಳಿದುಕೊಳ್ಳಲು ಶಾಲೆಗೆ ಅವಕಾಶ ಸಿಕ್ಕಿದಂತಾಯಿತು.

ಸಾಮರ್ಥ್ಯ ನಿರ್ಮಾಣ: ದೃಷ್ಟಿದೋಷವಿರುವ ಮಕ್ಕಳೊಂದಿಗೆ ಒಡನಾಟ ಮತ್ತು ಇತರ ಮೂಲಭೂತ ಅವಶ್ಯಕತೆಗಳನ್ನು ಪೂರೈಸಲು ಶಾಲೆ ಎಷ್ಟು ಸಮರ್ಥವಾಗುತ್ತದೆ ಎಂಬುದು ಈ ಯೋಜನೆಯ ಪ್ರಮುಖ ಅಂಶವಾಗಿತ್ತು. ಆ ದಿಸೆಯಲ್ಲಿ ಮೊದಲಿಗೆ, ಭೋಜನಾಲಯವನ್ನು ಒಳಗೊಂಡ ಅಡುಗೆಮನೆ ಮತ್ತು ಟಿವಿ ಕೋಣೆಯನ್ನೊಳಗೊಂಡ ಒಂದು ಸಣ್ಣ ವಸತಿ ನಿಲಯವನ್ನು ನಿರ್ಮಿಸಲಾಯಿತು. ಅಲ್ಲದೆ, ಆರಂಭದಲ್ಲಿ ಮಕ್ಕಳು ಶಾಲೆಯ ವಿವಿಧೆಡೆ ಉಳಿದುಕೊಂಡರು. ಈಗ ಅವರು ಶಾಲೆಯ ಆವರಣದಲ್ಲಿಯೇ ನಿರ್ಮಿಸಲಾಗಿರುವ ವಸತಿ ನಿಲಯದಲ್ಲಿಯೇ ಉಳಿದುಕೊಳ್ಳುತ್ತಾರೆ. 2007-08ರಲ್ಲಿ 12 ಮಕ್ಕಳೊಂದಿಗೆ ಈ ಯೋಜನೆ ಅನುಷ್ಠಾನಗೊಂಡಿತು. ಮರುವರ್ಷ ಇನ್ನೂ 8 ಮಕ್ಕಳು ಪ್ರವೇಶ ಪಡೆದರು. ಹೀಗೆ, 20 ಮಂದಿ ದೃಷ್ಟಿದೋಷವಿರುವ ಮಕ್ಕಳೂ ಸೇರಿ ಒಟ್ಟು 64 ಮಕ್ಕಳು ಈ ಶಾಲೆಯಲ್ಲಿದ್ದಾರೆ.

ತರಬೇತಿ

ಬೇಸಿಗೆಯಲ್ಲಿ, ಶರದೃತು ಮತ್ತು ಚಳಿಗಾಲದ ರಜೆಯಲ್ಲಿ ವಿಜಯಾ ಪಬ್ಲಿಕ್ ಶಾಲೆಯ ಶಿಕ್ಷಕರು ಭಾರತಿ ಬ್ರೈಲ್‌ನಲ್ಲಿ ತರಬೇತಿ ಪಡೆದರು. ಟೇಯ್ಲರ್ ಫ್ರೇಮ್ ಬಳಸಿ ಅಂಕಗಣಿತ ಬೋಧನೆ ಮತ್ತು ಓಡಾಟವೂ ಸೇರಿದಂತೆ ಸ್ವತಂತ್ರವಾಗಿ ಬದುಕುವ ಕೌಶಲಗಳ ಬೋಧನೆಯನ್ನು ಈ ತರಬೇತಿಯಲ್ಲಿ ಹೇಳಿಕೊಡಲಾಯಿತು. ತರಬೇತಿ ಅವಧಿಯಲ್ಲಿ, ಎನ್‌ಐವಿಎಚ್‌ನ ನುರಿತ

ಶಿಕ್ಷಕರು ಶಾಲೆಗೆ ಮೂರು ಬಾರಿ ಭೇಟಿ ನೀಡಿದರು. ಸಾಮಾನ್ಯ ಶಿಕ್ಷಕರು ಬಳಸಬಹುದಾದ ಬ್ರೈಲ್ ಸಿದ್ಧತಾ ಸಾಮಗ್ರಿಗಳು ಮತ್ತು ಇತರ ಬೋಧನೆ-ಕಲಿಕೆ ಸಾಮಗ್ರಿಗಳನ್ನು ಮೊದಲ ಭೇಟಿಯಲ್ಲಿ ಸಿದ್ಧಪಡಿಸಲಾಯಿತು. ನಾಲ್ಕು ತಿಂಗಳ ಒಂದು ಯೋಜನೆಯನ್ನೂ ಸಿದ್ಧಪಡಿಸಲಾಯಿತು. ಶಾಲೆಗೆ ನಿಯಮಿತ ಬೆಂಬಲದ ಅವಶ್ಯಕತೆ ಇದ್ದುದರಿಂದ, ವಾರ್ಡನ್ ಆಗಿಯೂ ಕಾರ್ಯ ನಿರ್ವಹಿಸಬಲ್ಲ ವಿಶೇಷ ಶಿಕ್ಷಕರೊಬ್ಬರನ್ನು ಎನ್‌ಐವಿಎಚ್ ಪ್ರಾಯೋಜಿಸಿತು. ಈ ಪ್ರಶಿಕ್ಷಕರು, ಶಿಕ್ಷಕರಿಗೆ ನಿಯಮಿತವಾಗಿ ಮಾರ್ಗದರ್ಶನ ನೀಡುವುದರ ಜೊತೆಗೆ, ಬ್ರೈಲ್ ಲಿಪಿಯ ಬಳಕೆ, ದೈನಂದಿನ ಬದುಕಿನ ಚಟುವಟಿಕೆಗಳನ್ನು ಶಾಲಾ ಅವಧಿಯ ನಂತರ ಹೇಳಿಕೊಡುತ್ತಿದ್ದರು. ವಿಜಯಾ ಪಬ್ಲಿಕ್ ಶಾಲೆಯಲ್ಲಿ ಈ ವಿಶೇಷ ಶಿಕ್ಷಕರು ಬಹುಬಗೆಯ ಪಾತ್ರಗಳನ್ನು ನಿರ್ವಹಿಸಬೇಕಾಗಿತ್ತು. ವಿಶೇಷ ಶಿಕ್ಷಕರಾಗಿ, ಕನ್ಸಲ್ಟೆಂಟ್ ಆಗಿ, ವಾರ್ಡನ್ ಆಗಿ, ಪೋಷಕರಾಗಿ, ಆಪ್ತ ಸಮಾಲೋಚಕರಾಗಿ ಹಾಗೂ ವಿದ್ಯಾರ್ಥಿಗಳಿಗೆ ಸ್ನೇಹಿತರಾಗಿ! 2008-09ರಲ್ಲಿ ಶಾಲಾ ಸಿಬ್ಬಂದಿಗೆ ಯಾವುದೇ ರೀತಿಯ ತರಬೇತಿಯನ್ನು ಎನ್‌ಐವಿಎಚ್ ವತಿಯಿಂದ ಕೊಡಲಿಲ್ಲ. ಅದರ ಬದಲು, ಉತ್ತರ ಕಾಶಿ ಜಿಲ್ಲೆಯ ಸಾಮಾನ್ಯ ಶಾಲೆಗಳ ಶಿಕ್ಷಕರಿಗೆ ಬ್ರೈಲ್ ಬಳಕೆ ಬಗ್ಗೆ ಅಲ್ಪಾವಧಿ ತರಬೇತಿ ಹಾಗೂ ದೃಷ್ಟಿದೋಷವಿರುವ ಮಕ್ಕಳ ನಿರ್ವಹಣೆ ಕುರಿತು ಅವರ ಹೆತ್ತವರಿಗೆ ತರಬೇತಿ ನೀಡುವಂತೆ ವಿಜಯಾ ಪಬ್ಲಿಕ್ ಶಾಲೆಯನ್ನು ಪ್ರೋತ್ಸಾಹಿಸಲಾಯಿತು.
ಈ ಬಗ್ಗೆ ಶಾಲೆಯಿಂದ ಉತ್ತೇಜನಕಾರಿ ಎನಿಸುವ ಪ್ರತಿಕ್ರಿಯೆ ವ್ಯಕ್ತವಾಗಿದ್ದು, ಅದನ್ನು ಹೀಗೆ ದಾಖಲೀಕರಿಸಲಾಗಿದೆ-

1. ಮಕ್ಕಳು ಬ್ರೈಲ್ ಲಿಪಿಯನ್ನು ಬಹಳ ವೇಗವಾಗಿ ಕಲಿತರು ಮತ್ತು ಬ್ರೈಲ್ ಗ್ರೇಡ್ 1ರಲ್ಲಿ ಇಂಗ್ಲಿಷ್ ಮತ್ತು . ಹಿಂದಿಯಲ್ಲಿ ಓದಲು, ಬರೆಯಲು ಶಕ್ತರಾದರು.

2. ಶಾಲೆ ಮತ್ತು ಸುತ್ತಮುತ್ತಲಿನ ಪ್ರದೇಶದಲ್ಲಿ ಸ್ವತಂತ್ರವಾಗಿ ಓಡಾಡಲು ಅವರು ಶಕ್ತರಾಗಿದ್ದಾರೆ.
3. ಶಾಲೆಯ ಸಿಬ್ಬಂದಿಯೂ ಬ್ರೈಲ್ ಲಿಪಿಯನ್ನು ಹಾಗೂ ಇತರ ವಿಶೇಷ ಪರಿಕರಗಳ ಬಳಕೆಯನ್ನೂ ಕಲಿತಿದ್ದು, ದೃಷ್ಟಿದೋಷವಿರುವ ಮಕ್ಕಳ ಮೂಲಭೂತ ಅವಶ್ಯಕತೆಗಳ ಬಗ್ಗೆ ಈಗ ಅವರಿಗೆ ತಿಳಿದಿದೆ. ಈ ಮಕ್ಕಳಿಗೆ ಇತರ ಮಕ್ಕಳಂತೆ ಯೋಗ ಮತ್ತು ದೈಹಿಕ ಶಿಕ್ಷಣವನ್ನೂ ನೀಡಲಾಗಿದೆ.
4. ದೃಷ್ಟಿದೋಷವಿಲ್ಲದ ಸಾಮಾನ್ಯ ಮಕ್ಕಳು, ದೃಷ್ಟಿದೋಷವಿರುವ ತಮ್ಮ ಸಹಪಾಠಿಗಳನ್ನು ಯಾವುದೇ ಚಟುವಟಿಕೆಯಲ್ಲೂ ಏಕಾಂಗಿಯಾಗಿ ಬಿಟ್ಟುಬಿಡುವುದಿಲ್ಲ.
5. ದೃಷ್ಟಿದೋಷವಿರುವ ಮಕ್ಕಳನ್ನೂ ಎಲ್ಲಾ ರೀತಿಯ ಸಾಂಸ್ಕೃತಿಕ ಚಟುವಟಿಕೆಗಳಲ್ಲಿ ಸೇರಿಸಿಕೊಳ್ಳಲು ಶಾಲಾ ಆಡಳಿತ ಮಂಡಳಿಗಳು ಅತೀವ ಉತ್ಸಾಹ ತೋರುತ್ತಿವೆ.
6. ಈ ಮಕ್ಕಳನ್ನು ಅಡುಗೆ ಕೋಣೆಯ ಚಟುವಟಿಕೆಗಳು ಮತ್ತು ಊಟೋಪಹಾರ ಪೂರೈಸುವ ಕೆಲಸದಲ್ಲಿಯೂ ಸೇರಿಸಿಕೊಳ್ಳಲಾಯಿತು. ಈ ಮಾದರಿ ಯೋಜನೆಯ ಯಶಸ್ಸಿನ ಬಳಿಕ, ದೃಷ್ಟಿಮಾಂದ್ಯವಿರುವ ಮಕ್ಕಳನ್ನು ಈ ಶಾಲೆಗೆ ದಾಖಲಾತಿ ಮಾಡಲು ದೃಷ್ಟಿಮಾಂದ್ಯ ಮಕ್ಕಳ ಪೋಷಕರು ವಿಶೇಷ ಆಸಕ್ತಿ ವಹಿಸಲಾರಂಭಿಸಿದರು. ಉತ್ತರಾಖಂಡ ಸರ್ಕಾರವೂ ಈ ಮಾದರಿ ಪ್ರಯೋಗದಲ್ಲಿ ಆಸಕ್ತಿ ತೋರಿದೆ. ಪೈಲಟ್ ಯೋಜನೆಯ ಅಂಗವಾಗಿ, ರಾಜ್ಯದ ಎಲ್ಲಾ ಸರ್ಕಾರಿ ಮತ್ತು ಖಾಸಗಿ ಶಾಲೆಗಳಲ್ಲಿ ಈ ಮಾದರಿಯನ್ನು ಅನುಷ್ಠಾನಕ್ಕೆ ತರುವ ಬಗ್ಗೆ ಸರ್ಕಾರ ಚಿಂತನೆ ನಡೆಸುತ್ತಿದೆ.

ಪಠ್ಯಕ್ರಮ

ಭಾರತದಲ್ಲಿ ಪಠ್ಯಕ್ರಮವು, ರಾಷ್ಟ್ರೀಯ ಶಿಕ್ಷಣ ವ್ಯವಸ್ಥೆಯ ವಿಕಸನದ ನಿಮಿತ್ತವಾಗಿ, ಭೌಗೋಳಿಕ ಮತ್ತು ಸಾಂಸ್ಕೃತಿಕ ವೈವಿಧ್ಯಮಯ ಸನ್ನಿವೇಶಗಳಿಗೆ ಸ್ಪಂದಿಸುತ್ತಾ, ಶೈಕ್ಷಣಿಕ ಅಂಶಗಳೊಂದಿಗೆ

ಸಾಮಾಜಿಕ ತಿರುಳನ್ನೂ ಖಾತರಿಪಡಿಸುವಂತಿರಬೇಕು ಎಂದು ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟು ಸಲಹೆ ನೀಡುತ್ತದೆ. ಅದು ಏಕರೂಪದ ಸಾಧನವಲ್ಲ ಹಾಗೂ ಯಾವುದೇ ರೀತಿಯ ವಿಧಾಯಕವೂ ಅಲ್ಲ. ಅದು, ಈ ದೇಶದ ಬಹುತ್ವ ಸಂಸ್ಕೃತಿಯನ್ನು ಗಣನೆಗೆ ತೆಗೆದುಕೊಳ್ಳುತ್ತದೆ. ರಾಷ್ಟ್ರೀಯ ಪಠ್ಯಕ್ರಮವು (2005) ತಮ್ಮ ವೈಯಕ್ತಿಕ ಮತ್ತು ಸಾಮೂಹಿಕ ಪ್ರಯತ್ನಗಳ ಮೂಲಕ ಜ್ಞಾನವನ್ನು ಪಡೆಯುವುದಕ್ಕಿಂತ ಹೆಚ್ಚಾಗಿ ಕಟ್ಟುವಲ್ಲಿ ಸಕ್ರಿಯವಾಗಿ ತೊಡಗಿಸಿಕೊಂಡಿರುವ ಕಲಿಕಾರ್ಥಿಗಳ ಮೇಲೆ ಕೇಂದ್ರೀಕೃತವಾಗಿರುತ್ತದೆ. ಎನ್‌ಸಿಎಫ್ 2005 ಅನ್ನು ಈ ಕೆಳಗಿನ ಅಂಶಗಳು ಸಮನ್ವಯ ಪಠ್ಯಕ್ರಮವನ್ನಾಗಿ ಮಾರ್ಪಡಿಸುತ್ತವೆ:

/// ಟೇಬಲ್///
ಪ್ರಮುಖ ಮಾರ್ಪಾಡುಗಳು
ಇಲ್ಲಿಂದ
1. ಶಿಕ್ಷಕ ಕೇಂದ್ರಿತ, ಸ್ಥಿರವಾದ ವಿನ್ಯಾಸಗಳು
2. ಶಿಕ್ಷಕರ ನಿರ್ದೇಶನ ಮತ್ತು ತೀರ್ಮಾನ
3. ಶಿಕ್ಷಕರ ಮಾರ್ಗದರ್ಶನ ಮತ್ತು ಪರಿವೀಕ್ಷಣೆ
4. ಕಲಿಕೆಯಲ್ಲಿ ನಿಷ್ಕ್ರಿಯತೆ
5. ತರಗತಿಯ ನಾಲ್ಕು ಗೋಡೆಗಳ ಮಧ್ಯೆ ಕಲಿಕೆ
6. ನೀಡಲಾದ ಮತ್ತು ಸ್ಥಿರವಾದ ಜ್ಞಾನ
7. ಶಿಸ್ತಿನ ಕಡೆಗೆ ಗಮನ
8. ಒಂದೇ ದಿಕ್ಕಿಗೆ ಕೇಂದ್ರೀಕೃತವಾದ ಗಮನ
9. ಮೌಲ್ಯಮಾಪನ, ಸಂಕ್ಷಿಪ್ತ, ಕೆಲವು

ಇಲ್ಲಿಗೆ
1. ಕಲಿಕಾರ್ಥಿ ಕೇಂದ್ರಿತ, ಬದಲಾವಣೆಗೆ ಒಗ್ಗುವ ಪ್ರಕ್ರಿಯೆ
2. ಕಲಿಕಾರ್ಥಿ ಸ್ವಾಯತ್ತತೆ
3. ಸೌಕರ್ಯಗಳು, ಕಲಿಕೆಗೆ ಬೆಂಬಲ ಮತ್ತು ಪ್ರೋತ್ಸಾಹ
4. ಕಲಿಕೆಯಲ್ಲಿ ಕ್ರಿಯಾಶೀಲ ತೊಡಗುವಿಕೆ
5. ವಿಶಾಲವಾದ ಸಾಮಾಜಿಕ ಸನ್ನಿವೇಶಗಳಲ್ಲಿ ಕಲಿಕೆ
6. ವಿಕಸನಕ್ಕೆ ಪೂರಕವಾದ ಕಲಿಕೆ ಮತ್ತು ಸೃಷ್ಟಿ
7. ಬಹುಶಿಸ್ತೀಯ, ಶೈಕ್ಷಣಿಕ ಗಮನ
8. ಬಹುಬಗೆಯ ಮತ್ತು ವೈವಿಧ್ಯಮಯ ಗಮನ
9. ಬಹು ಲಕ್ಷಣದ, ನಿರಂತರ

**

ಸಮನ್ವಯವನ್ನು ಸಾಧಿಸಬೇಕಾದರೆ, ಕೆಲವು ವಿದ್ಯಾರ್ಥಿಗಳು ಸಂಪೂರ್ಣವಾಗಿ ತೊಡಗಿಸಿಕೊಂಡು ಅವರ ವಿಶೇಷ ಅವಶ್ಯಕತೆಗಳನ್ನು ಪೂರೈಸಬೇಕಾದರೆ ಸಾರ್ವತ್ರಿಕ ಶಿಕ್ಷಣ ಪಠ್ಯಕ್ರಮವನ್ನು ಅಳವಡಿಸಿಕೊಳ್ಳಬೇಕಾದುದು ಅತ್ಯಗತ್ಯ. ಯಾವುದೇ ವಿದ್ಯಾರ್ಥಿ/ವಿದ್ಯಾರ್ಥಿನಿಯು ಎಲ್ಲಾ ಬಗೆಯ ಕೌಶಲಗಳನ್ನು ತಿಳಿದಿಲ್ಲ ಎಂಬ ಕಾರಣಕ್ಕೆ ಚಟುವಟಿಕೆಗಳಿಂದ ಹೊರಗುಳಿಯುವಂತಾಗಬಾರದು. ಪಠ್ಯಕ್ರಮದ ಅಳವಡಿಕೆಗೆ ಸಾಮಗ್ರಿ ಮತ್ತು ಉಪಕರಣಗಳು, ಕೌಶಲದ ಸನ್ನಿವೇಶಗಳ ಅಳವಡಿಕೆ, ಸಂಪನ್ಮೂಲದ ಬೆಂಬಲ ಒದಗಿಸುವುದು, ಬೋಧನಾ ಕಾರ್ಯತಂತ್ರಗಳ ಅಳವಡಿಕೆ ಮತ್ತು ಪರಿಸರವನ್ನು ಅವಲಂಬಿಸಬೇಕಾದೀತು.

ಶಾಲೆಗಳಲ್ಲಿ ಪಠ್ಯಕ್ರಮ ಅಳವಡಿಕೆಗೆ ಈ ಕೆಳಗಿನ ಅಂಶಗಳನ್ನು ಗಣನೆಗೆ ತೆಗೆದುಕೊಳ್ಳಬೇಕು ಎಂದು ಸಾಲಮಂಕಾ ಹೇಳಿಕೆ (1994) ತಿಳಿಸಿದೆ.

ಪಠ್ಯಕ್ರಮ ಹೊಂದಿಸಿಕೊಳ್ಳುವಿಕೆ

1. ಪಠ್ಯಕ್ರಮವು ಮಕ್ಕಳ ಅವಶ್ಯಕತೆಗೆ ಅನುಗುಣವಾಗಿರಬೇಕೇ ವಿನಾ ವಿರುದ್ಧವಾಗಿರಬಾರದು. ಹಾಗಾಗಿ, ಬೇರೆ ಬೇರೆ ರೀತಿಯ ಸಾಮರ್ಥ್ಯ ಮತ್ತು ಆಸಕ್ತಿ ಇರುವ ಮಕ್ಕಳಿಗೆ ಹೊಂದುವಂತಹ ಪಠ್ಯಕ್ರಮದ ಅವಕಾಶಗಳನ್ನು ಶಾಲೆಗಳು ಒದಗಿಸಬೇಕು.
2. ಸಾಮಾನ್ಯ ಪಠ್ಯಕ್ರಮದ ಸನ್ನಿವೇಶಗಳಲ್ಲಿ, ವಿಶೇಷ ಮಕ್ಕಳು ಹೆಚ್ಚುವರಿ ಮಾರ್ಗದರ್ಶನದ ಬೆಂಬಲ ಪಡೆಯುವಂತಿರಬೇಕೇ ವಿನಾ ಅವರಿಗೆ ಪ್ರತ್ಯೇಕ ಪಠ್ಯವಿರಬಾರದು. ಎಲ್ಲಾ ಮಕ್ಕಳಿಗೂ ಒಂದೇ ಬಗೆಯ ಶಿಕ್ಷಣ ನೀಡುವಂತೆ ನಿರ್ದೇಶನ ನೀಡಬೇಕು. ಆದರೆ ವಿಶೇಷ ಮತ್ತು ಅವಶ್ಯವಿರುವ ಮಕ್ಕಳಿಗೆ ಹೆಚ್ಚಿನ ಮಾರ್ಗದರ್ಶನ ನೀಡಬೇಕು.
3. ಜ್ಞಾನಾರ್ಜನೆಯು ಕೇವಲ ಔಪಚಾರಿಕ ಮತ್ತು ಸೈದ್ಧಾಂತಿಕ ಸೂಚನೆಗಳಲ್ಲ. ಶಿಕ್ಷಣದ ಪರಿಕಲ್ಪನೆಯ ಉನ್ನತ ಮಟ್ಟಕ್ಕೆ ಕೊಂಡೊಯ್ಯುವಂತಿರಬೇಕು ಮತ್ತು ಪ್ರತಿಯೊಬ್ಬರ ಏಳ್ಗೆಗೆ ಸಂಪೂರ್ಣವಾಗಿ ತಮ್ಮನ್ನು ತೊಡಗಿಸಿಕೊಳ್ಳುವಂತೆ ಪ್ರೇರೇಪಿಸುವಂತಿರಬೇಕು. ಬೋಧನೆಯು, ವಿದ್ಯಾರ್ಥಿಗಳ ಸ್ವಂತ ಅನುಭವ ಮತ್ತು ಅವರ ಕಾರ್ಯರೂಪದ ಕಾಳಜಿಗಳಿಗೆ ಉತ್ತೇಜನಕಾರಿಯಾಗಿರಬೇಕು.
4. ಪ್ರತಿಯೊಂದು ಮಗುವಿನ ಪ್ರಗತಿಯನ್ನು ಗಮನಿಸುವ ದೃಷ್ಟಿಯಿಂದ, ಮೌಲ್ಯಮಾಪನ ಪ್ರಕ್ರಿಯೆಗಳನ್ನು ಪರಿಷ್ಕರಿಸಬೇಕು. ಕಲಿಕೆಯಲ್ಲಿ ಸಾಧಿಸಿದ ಪರಿಣತಿಯ ಬಗ್ಗೆ ವಿದ್ಯಾರ್ಥಿಗಳಿಗೆ ಮತ್ತು ಶಿಕ್ಷಕರಿಗೆ ತಿಳಿಸಿ, ವಿದ್ಯಾರ್ಥಿಗಳ ಸಮಸ್ಯೆಗಳನ್ನು ಗುರುತಿಸಿ, ಪರಿಹರಿಸುವ ನಿಟ್ಟಿನಲ್ಲಿಯೂ ರಚನಾತ್ಮಕ ಮೌಲ್ಯಮಾಪನವನ್ನು ಸಾಮಾನ್ಯ ಶೈಕ್ಷಣಿಕ ಪ್ರಕ್ರಿಯೆಯಾಗಿಸಬೇಕು.
5. ವಿಶೇಷ ನೆರವಿನ ಅವಶ್ಯಕತೆ ಇರುವ ವಿದ್ಯಾರ್ಥಿಗಳಿಗೆ, ತರಗತಿಗಳಲ್ಲಿ ಕನಿಷ್ಠ ಸಹಾಯದಿಂದ ಹೆಚ್ಚುವರಿ ಕಲಿಕಾ ನೆರವು ಕಾರ್ಯಕ್ರಮಗಳವರೆಗೆ ಶಾಲಾ ಅವಧಿಯಲ್ಲಿ ಮತ್ತು ನಂತರವೂ ನಿರಂತರ ಬೆಂಬಲ ಒದಗಿಸಬೇಕು. ಅಗತ್ಯ ಇರುವ ಸಂದರ್ಭಗಳಲ್ಲಿ ವಿಶೇಷ ಶಿಕ್ಷಕರು ಮತ್ತು ಬಾಹ್ಯ ಸಿಬ್ಬಂದಿಯ ಬೆಂಬಲವನ್ನೂ ಒದಗಿಸಬೇಕು.
6. ಶಾಲಾ ಪಠ್ಯದ ಯಶಸ್ಸಿನ ದೃಷ್ಟಿಯಿಂದ ಅಗತ್ಯವಿರುವ ಸಂದರ್ಭಗಳಲ್ಲಿ ಸಂಪರ್ಕ ಸಾಧನ, ಓಡಾಟ ಮತ್ತು ಕಲಿಕೆಗೆ ಸಹಾಯವಾಗುವಂತಹ ಸೂಕ್ತ ಮತ್ತು ಕೈಗೆಟಕುವ ತಂತ್ರಜ್ಞಾನಗಳನ್ನು, ಒದಗಿಸಬೇಕು. ಪ್ರತಿಯೊಂದು ಪ್ರದೇಶದಲ್ಲಿ ಕೇಂದ್ರ ನಿಧಿಯಿಂದ ತಂತ್ರಜ್ಞಾನದ ನೆರವು ಒದಗಿಸಿದ್ದರೆ, ಹೆಚ್ಚಿನ ಆರ್ಥಿಕ ಮತ್ತು ಪರಿಣಾಮಕಾರಿ ಮಾರ್ಗವನ್ನು ಆಯ್ಕೆ ಮಾಡಿಕೊಳ್ಳಬಹುದು.
7. ವಿಶೇಷ ಅವಶ್ಯಕತೆಯ ಶಿಕ್ಷಣಕ್ಕಾಗಿ ಸೂಕ್ತ ತಂತ್ರಜ್ಞಾನದ ನೆರವಿನ ವ್ಯವಸ್ಥೆಯನ್ನು ಅಭಿವೃದ್ಧಿಪಡಿಸಲು, ಪ್ರಾದೇಶಿಕ ಮತ್ತು ರಾಷ್ಟ್ರೀಯ ಮಟ್ಟದಲ್ಲಿ ಬಲವರ್ಧನೆಯಾಗಬೇಕು ಮತ್ತು ಸಂಶೋಧನೆಗಳನ್ನು ಕೈಗೊಳ್ಳಬೇಕು.

ಯಾವುದೇ ಹಂತದ ಶಾಲಾ ಶಿಕ್ಷಣದಲ್ಲಿ 1:30ಕ್ಕಿಂತ ಹೆಚ್ಚಿನ ಅನುಪಾತ ಅಪೇಕ್ಷಣೀಯವಲ್ಲ ಎಂದು ರಾಷ್ಟ್ರೀಯ ಮತ್ತು ಅಂತಾರಾಷ್ಟ್ರೀಯ ಅನುಭವಗಳಿಂದ ತಿಳಿದು ಬಂದಿದೆ. ದೊಡ್ಡ ತರಗತಿಗಳು 'ಗುಣಮಟ್ಟದ ಬೋಧನೆಗೆ ಗಂಭೀರವಾಗಿ ಹಾನಿ ಮಾಡುತ್ತದೆ' ಮತ್ತು 'ಹೆಚ್ಚಿನ ಸಂಖ್ಯೆಯ ಮಕ್ಕಳಿರುವ ತರಗತಿಗಳಲ್ಲಿ ಸೃಜನಾತ್ಮಕ ಬೋಧನೆಯ ಕುರಿತ ನಮ್ಮ ಎಲ್ಲ ಮಾತು-ಚರ್ಚೆಗಳೂ ಅಪ್ರಸ್ತುತವಾಗುತ್ತವೆ' ಎಂದು 1966ರಲ್ಲಿ ಕೋಠಾರಿ ಆಯೋಗದ ವರದಿ (1966: ಪು.413 ಮತ್ತು 415) ಎಚ್ಚರಿಸಿದೆ.

ತಮಿಳುನಾಡಿನಲ್ಲಿ ಚಟುವಟಿಕೆ ಆಧಾರಿತ ಕಲಿಕೆ

ಸರ್ವ ಶಿಕ್ಷಾ ಅಭಿಯಾನದಲ್ಲಿ, ಮಗು ಕೇಂದ್ರಿತವಾದ ಮಾರ್ಗವೇ ಸಮನ್ವಯ ಶಿಕ್ಷಣ. ಚಟುವಟಿಕೆ ಆಧಾರಿತ ಕಲಿಕೆ (ಎಬಿಎಲ್) ವಿಧಾನವನ್ನು ತಮಿಳುನಾಡಿನ 37486 (2007ರ ಅಂಕಿಅಂಶ) ಸರ್ಕಾರಿ ಶಾಲೆಗಳಲ್ಲಿ ಪರಿಚಯಿಸಿತು. ಇದು ಶಿಶು ಕೇಂದ್ರಿತ ವಿಧಾನದ ದೃಷ್ಟಿಕೋನವನ್ನು ಹೊಂದಿದೆ. ಐದನೇ ಮತ್ತು ಆರನೇ ತರಗತಿಯ ಮಕ್ಕಳೂ ಕೂಡಾ ಕೆಲವು ಮೂಲಭೂತ ಪರಿಕಲ್ಪನೆಯ ಕಲಿಕೆಯಲ್ಲಿ ಹಿಂದುಳಿದಿರುವ ಸಂಗತಿ, 2003ರಲ್ಲಿ ಚೆನ್ನೈ ಕಾರ್ಪೊರೇಷನ್ ಕೈಗೊಂಡ ಸಮೀಕ್ಷೆಯಲ್ಲಿ ಬೆಳಕಿಗೆ ಬಂದ ಹಿನ್ನೆಲೆಯಲ್ಲಿ ಚಟುವಟಿಕೆ ಆಧಾರಿತ ಕಲಿಕೆಯನ್ನು(ಎಬಿಎಲ್) ಕೈಗೆತ್ತಿಕೊಳ್ಳಲಾಯಿತು. ಎಬಿಎಲ್‌ನಲ್ಲಿ ಒಂದನೇ ತರಗತಿಯಿಂದ ನಾಲ್ಕನೇ ತರಗತಿಯವರೆಗಿನ ಎಲ್ಲಾ ಮಕ್ಕಳನ್ನು ತರಗತಿಯಲ್ಲಿ ಅಧ್ಯಯನ ಮಾಡುವಂತೆ ಹೇಳಲಾಯಿತು. ಎಲ್ಲಾ ಮಕ್ಕಳು ಮತ್ತು ಶಿಕ್ಷಕರು ನೆಲದ ಮೇಲೆ ಕುಳಿತುಕೊಳ್ಳಬೇಕು. ತರಗತಿಗಳಲ್ಲಿ ಬೆಂಚುಗಳೂ, ಡೆಸ್ಕ್‌ಗಳೂ ಇರುವುದಿಲ್ಲ. ಎಬಿಎಲ್‌ಗೆ ಸ್ಥಳಾವಕಾಶ ಒದಗಿಸಲು ಈ ಕ್ರಮ. ಗೋಡೆಗಳಲ್ಲಿ ಮಕ್ಕಳಿಗೆ ಎಟಕುವಷ್ಟು ಎತ್ತರದಲ್ಲಿ ಸ್ಲೇಟುಗಳನ್ನು ಅಳವಡಿಸಲಾಗಿರುತ್ತದೆ. ಎಬಿಎಲ್, ಮೂಲ ಪರಿಕಲ್ಪನೆಗಳನ್ನು ಮತ್ತೆ ಮತ್ತೆ ಹೇಳಿ ಪ್ರಾಯೋಗಿಕವಾಗಿ ಅರ್ಥ ಮಾಡಿಸುತ್ತದೆ ಮತ್ತು ಸ್ಪಷ್ಟಪಡಿಸುತ್ತದೆ. ಗಣಿತದಂತಹ ವಿಷಯದ ಲೆಕ್ಕ ಮಾಡುವುದಕ್ಕೂ ಮೊದಲು ಅವರಿಗೆ ಮಣಿಗಳು, ಅಂಕಿ ಇರುವ ಕಂಬಿ, ಅಬಾಕಸ್ ಮತ್ತು ದಾರ ಸುತ್ತುವ ಸ್ಪಿನ್ ಹಲಗೆಗಳ ಸಹಾಯದಿಂದ ಹೇಳಿಕೊಡಲಾಯಿತು. ಶಾಲೆಯ ಟಿವಿಯಲ್ಲಿ ಪ್ರದರ್ಶಿಸುವ ಅನಿಮೇಟೆಡ್ ಡಿವಿಡಿಯ ನೆರವಿನಿಂದ ಇಂಗ್ಲಿಷ್ ಮಾತನಾಡುವ ಮತ್ತು ಜ್ಞಾನ ಹೆಚ್ಚಿಸಿಕೊಳ್ಳುವ ಕಲೆ ಕಲಿತರು.

ಬಹುವರ್ಗದ ಎಬಿಎಲ್ ತರಗತಿಯಲ್ಲಿ ಮಕ್ಕಳನ್ನು ಆರು ಗುಂಪುಗಳಾಗಿ ವಿಂಗಡಿಸಲಾಯಿತು. ಒಂದನೇ ಮತ್ತು ಎರಡನೇ ಗುಂಪಿನ ಮಕ್ಕಳು ಎಬಿಎಲ್‌ನಲ್ಲಿರುವ ಶಿಕ್ಷಕಿಯ ಸಂಪೂರ್ಣ ಸಹಾಯ ಪಡೆದರು. ಪೂರ್ವಪ್ರಾಥಮಿಕ ತರಗತಿ ಇರದೇ, ಮಕ್ಕಳು ನೇರವಾಗಿ ಒಂದನೇ ತರಗತಿಯಿಂದಲೇ ಆರಂಭಿಸಿದರು. ಮೂರನೇ ಗುಂಪಿಗೆ ಶಿಕ್ಷಕಿ ಅಲ್ಪಸ್ವಲ್ಪ ಸಹಾಯ ಮಾಡಿದರೆ, ನಾಲ್ಕನೇ ಗುಂಪಿನವರು ಸಮಾನ ವಯಸ್ಕರು ನೆರವಾದರು ಹಾಗೂ ಆರನೇ ಗುಂಪಿನವರು ತಮಗೆ ತಾವೇ ನೆರವಾದರು.

ಪ್ರತಿ ಗುಂಪಿನವರು ವೃತ್ತಾಕಾರವಾಗಿ ನಿಂತು ತಂಡದ ಕೋಷ್ಟಕದ ಅನ್ವಯ ತಮ್ಮ ಚಟುವಟಿಕೆಗಳನ್ನು ಮಾಡಿದರು. ವಿವಿಧ ಹಂತಗಳನ್ನು ಮುಗಿಸುವ ಮೂಲಕ ಲ್ಯಾಡರ್ ಚಾರ್ಟ್ ಹತ್ತಿದರೆ ಅವರಿಗೆ ಬಡ್ತಿ. ಪ್ರತಿ ಹಂತವನ್ನೂ ಬೇರೆ ಬೇರೆ ವಿಭಾಗದವರು ವಿನ್ಯಾಸ ಮಾಡಿದ್ದು, ಲೋಗೊಗಳನ್ನು ಹಚ್ಚಿ ಆಕರ್ಷಣೀಯವಾಗಿಸಲಾರಿತು. ಆ ಲೋಗೊ ಕೂಡಾ ನಿರ್ದಿಷ್ಟ ಕಲಿಕೆಗೆ ಸಂಬಂಧಿಸಿದ್ದೇ ಆಗಿತ್ತು. ಎಬಿಎಲ್‌ನಲ್ಲಿ, ಕೋರ್ಸ್‌ನ್ನು ನಿಗದಿತ ಅವಧಿಯೊಳಗೆ ಮುಗಿಸಬೇಕು ಎಂಬ ಪಠ್ಯಕ್ರಮದ ಆದೇಶ ಇಲ್ಲ. ಬದಲಾಗಿ, ಮಕ್ಕಳು ಸ್ವಯಂಪ್ರೇರಣೆಯಿಂದ ಅದನ್ನು ಪೂರ್ತಿಗೊಳಿಸಲು ಹವಣಿಸುತ್ತಾರೆ. ಎಲ್ಲಾ ಕಲಿಕಾ ಸಾಮಗ್ರಿಗಳು ಮತ್ತು ಕಲಿಕಾ ಕೋಷ್ಟಕಗಳನ್ನು ಗುರುತಿಸಿ ನಿರ್ದಿಷ್ಟಗೊಳಿಸಿ ತರಗತಿಯಲ್ಲಿ ಆಯಾ ಹಂತಕ್ಕೆ ಅನುಗುಣವಾಗಿ ಜೋಡಿಸಿಡಲಾಗಿದೆ. ಇದರಿಂದ, ಶಿಕ್ಷಕರಿಲ್ಲದೆಯೂ ತಾವು ಏನು ಮಾಡಬೇಕು ಎಂದು ಮಕ್ಕಳಿಗೆ ನಿಖರವಾಗಿ ತಿಳಿದಿರುತ್ತದೆ. ತರಗತಿಯಲ್ಲಿ ನಿರ್ವಹಿಸಲಾಗಿರುವ ಪ್ರಗತಿ ಕೋಷ್ಟಕದಲ್ಲಿ ಪ್ರತಿ ಮಗುವಿನ ಪ್ರಗತಿಯನ್ನು (ಪ್ರತಿ ಹಂತದ ವಿವರಗಳೊಂದಿಗೆ) ದಾಖಲಿಸಿ, ಪ್ರದರ್ಶಿಸಲಾಗಿದೆ.

ಹೀಗೆ, ಎಬಿಎಲ್‌ನಲ್ಲಿ, ಮಕ್ಕಳ ಬಗೆ ಬಗೆಯ ಬೇಡಿಕೆ/ಅವಶ್ಯಕತೆಗಳನ್ನು ಸಮಾನವಾಗಿ ಪರಿಗಣಿಸಲಾಗಿದೆ. ಮಕ್ಕಳಿಗೆ ತಮ್ಮದೇ ಆದ ಕಲಿಕಾ ಶೈಲಿಯನ್ನು ಬೆಳೆಸಿಕೊಳ್ಳುವುದಕ್ಕೂ ಅವಕಾಶವಿದ್ದು, ವೈಯಕ್ತಿಕ ಹಿರಿಮೆಯನ್ನೂ ಪ್ರೋತ್ಸಾಹಿಸಲಾಗುತ್ತದೆ.

ಮಕ್ಕಳಿಗೆ ಶಿಕ್ಷಕರಿಂದ ಮತ್ತು ಸಮಾನ ವಯಸ್ಕ ಗುಂಪಿನಿಂದ ಸಮರ್ಪಕ ಬೆಂಬಲ ಸಿಗುವುದನ್ನೂ ಎಬಿಎಲ್ ಖಾತರಿಪಡಿಸುತ್ತದೆ. ಎಬಿಎಲ್ ತರಗತಿಯಲ್ಲಿ ವಿಶೇಷವಾದ ಜೀವಂತಿಕೆ

ಹಾಗೂ ಕ್ರಿಯಾಶೀಲ ವಾತಾವರಣ ಇರುತ್ತದೆ. ಅಲ್ಲದೆ, ಎಬಿಎಲ್ ತರಗತಿಯಲ್ಲಿ ಮಕ್ಕಳ ಆತ್ಮವಿಶ್ವಾಸವನ್ನು ಹಾಗೂ ಕಲಿಯುವ ಹವಣಿಕೆಯನ್ನು ಯಾರೂ ಕಡಿಮೆ ಮಾಡಲಾರರು.

**

ಇಂಡಿಯಾ ಸ್ಕೂಲ್ ಫಂಡ್ (ಐಎಸ್‌ಎಫ್)

ಇಂಡಿಯಾ ಸ್ಕೂಲ್ ಫಂಡ್ ಎಂಬುದು, ಉತ್ತರ ಪ್ರದೇಶದ ಕುಗ್ರಾಮವೊಂದರಲ್ಲಿ ಇರುವ, ಭಾರತೀಯ ಸರ್ಕಾರೇತರ ಸ್ವಯಂಸೇವಾ ಸಂಸ್ಥೆ. ಗಜರಾಜ ವಿದ್ಯಾ ಪೀಠ (ಜಿವಿಪಿ) ಇಂಡಿಯಾ ಸ್ಕೂಲ್ ಫಂಡ್‌ನ ಪ್ರಮುಖ ಪಾಲುದಾರ ಸಂಸ್ಥೆಯಾಗಿದೆ. ಅವಕಾಶ ವಂಚಿತ ಸಮುದಾಯಗಳ ಸಾಂಸ್ಕೃತಿಕ ವೈವಿಧ್ಯದ ಮೇಲೆ ಬೆಳಕು ಚೆಲ್ಲುವ ಕೆಲಸವನ್ನು ಜಿವಿಪಿ ಅನೇಕ ವರ್ಷಗಳಿಂದ ಮಾಡುತ್ತಿದೆ. ಅದೇ ವೇಳೆ, ಅವರಿಗೆ ಗುಣಮಟ್ಟದ ಆಧುನಿಕ ಶಿಕ್ಷಣವನ್ನೂ ನೀಡುತ್ತಿದೆ.

ಗ್ರಾಮೀಣ ಭಾಗದಲ್ಲಿ ಶಾಲಾ ವ್ಯವಸ್ಥೆಯನ್ನು ಬೃಹತ್ ವ್ಯವಸ್ಥೆಯಿಂದ ಮೂಲೆಗುಂಪು ಮಾಡುತ್ತಿರುವುದಕ್ಕೆ ಪರಿಹಾರರೂಪವಾಗಿ, ಈ ಶಾಲೆಗಳನ್ನು ಸ್ಥಳೀಯ ಸಂಪನ್ಮೂಲ ಕೇಂದ್ರಗಳಾಗಿ ಬೆಳೆಸುವುದು. ಇದು ಆರೋಪವೇ ಆದರೂ, ಶಿಕ್ಷಕ ಕೇಂದ್ರಿತ ಏಕ ತರಗತಿ ವಿಧಾನದಿಂದ ಮಕ್ಕಳನ್ನು ಸಮುದಾಯದ ಸದಸ್ಯರಂತೆ ನೋಡುವ ಬಹು ಆಯ್ಕೆಯ ಕಲಿಕಾ ವಿಧಾನದ ಅಗತ್ಯಗಳು ಮತ್ತು ಬುದ್ಧಿವಂತಿಕೆಯನ್ನು ಪೂರೈಸುವ ವಿಧಾನವನ್ನಾಗಿ ಮಾರ್ಪಡಿಸುವುದು ಎಂದು ಇದರ ಅರ್ಥ.

ಗ್ರಾಮೀಣ ಭಾರತದ ಶೈಕ್ಷಣಿಕ ಅವಶ್ಯಕತೆಗಳನ್ನು ಪೂರೈಸಲು ಜಿವಿಪಿ ವಿಶೇಷ ಕಾರ್ಯಕ್ರಮವನ್ನು ರೂಪಿಸಿತು. ಅದು, ಮುಖ್ಯ ಶಿಕ್ಷಣ ಕೇಂದ್ರವೊಂದರ ಆರು ಕೊಠಡಿಗಳುಳ್ಳ ಶಾಲೆಯಲ್ಲಿ ಪಠ್ಯಕ್ರಮ ಅಭಿವೃದ್ಧಿ ಕೋಶದಲ್ಲಿ ಶಿಕ್ಷಕರ ತರಬೇತಿ ಕಾರ್ಯಕ್ರಮದೊಂದಿಗೆ ತನ್ನ ಹೆಜ್ಜೆ ಇರಿಸಿತು. ಹಳ್ಳಿಯ ಮಕ್ಕಳು ಮತ್ತು ಶಾಲೆಯ ನಡುವಿನ ಪರಸ್ಪರ ಸಂವಾದದಿಂದ ಶೈಕ್ಷಣಿಕ ಸಾಮಗ್ರಿಗಳು ಹೊರಹೊಮ್ಮಲು ಮತ್ತು ಪ್ರಾಯೋಗಿಕ ಕಲ್ಪನೆಗಳನ್ನು ಪರೀಕ್ಷಿಸಲು ಈ ಸಣ್ಣ ಮಟ್ಟದ ಬೆಳವಣಿಗೆಯು ಸ್ವಾತಂತ್ರ್ಯ ನೀಡಿತು. ಇಲ್ಲಿ ಪಡೆದ ಅನುಭವದಿಂದಾಗಿ ಮುಂದಿನ ಬೆಳವಣಿಗೆಯ ಪ್ರಕ್ರಿಯೆಗೆ ಮಾರ್ಗದರ್ಶನ ಸಿಕ್ಕಿದಂತಾಯಿತು. ಗ್ರಾಮೀಣ ಪ್ರದೇಶದಿಂದ ಬರುವ ಸಿಬ್ಬಂದಿಗೆ ಸವಾಲುಗಳ ಅರಿವು ಹಾಗೂ ಪರಿಹಾರವೇನು ಎಂಬ ಸೂಕ್ತ ಅರಿವು ಇತ್ತು.

ಪ್ರತಿಯೊಂದು ತರಗತಿಯಲ್ಲಿ  ಬೇರೆ ಬೇರೆ ವಯಸ್ಸು ಮತ್ತು ಸಾಮರ್ಥ್ಯದ 40 ವಿದ್ಯಾರ್ಥಿಗಳಿದ್ದು, ಜೊತೆಯಾಗಿ ಕುಳಿತು ಒಂದು ಅಥವಾ ಬೇರೆ ಬೇರೆ ವಿಷಯಗಳನ್ನು ತಮ್ಮ ಪಾಡಿಗೆ ಇಲ್ಲವೇ ಸಹಕಾರ ಕಲಿಕಾ ಗುಂಪುಗಳಾಗಿ ಕಲಿಯುತ್ತಾರೆ. ಈ ಬಹುವರ್ಗದ ತರಗತಿಯಲ್ಲಿ ಮಕ್ಕಳು ಕಲಿಕಾ ಕಾರ್ಡ್‌ಗಳ ಮೂಲಕ ಕಲಿಯುತ್ತಾರೆ. ಇಲ್ಲಿ ಶಿಕ್ಷಕರು ಅನುಕೂಲ ಮಾಡಿಕೊಡುವ ಅಂದರೆ ಅಗತ್ಯವಿದ್ದಲ್ಲಿ ವಿದ್ಯಾರ್ಥಿಗಳಿಗೆ ಕಲಿಕಾ ಸಾಮಗ್ರಿಗಳ ಮೂಲಕ ಸಹಾಯ ಮಾಡುವ, ಪಾತ್ರ ವಹಿಸುತ್ತಾರೆ.

ವಿದ್ಯಾರ್ಥಿಗಳು ಒಬ್ಬರ ಹಿಂದೆ ಒಬ್ಬರಂತೆ ಮೌನವಾಗಿ ಸರದಿಯಲ್ಲಿ, ಹುಡುಗರು ಬೇರೆ ಹುಡುಗಿಯರು ಬೇರೆಯಾಗಿ, ಎಸ್.ಸಿ/ಎಸ್.ಟಿ ಮಕ್ಕಳು ಪ್ರತ್ಯೇಕವಾಗಿ ಅಥವಾ ಹೊರಗೆ ಕುಳಿತುಕೊಳ್ಳುವ ಮೂಲಕ ಎಲ್ಲರಿಂದ ಪ್ರತ್ಯೇಕಗೊಳ್ಳುವ, ತರಗತಿಯ ಸಾಂಪ್ರದಾಯಿಕ ಚಿತ್ರಣವನ್ನು ಅಳಿಸಿಹಾಕಿ, ಮಕ್ಕಳು ಒಟ್ಟೊಟ್ಟಾಗಿ ಕುಳಿತು ಪರಸ್ಪರ ಮಾತನಾಡಿಕೊಳ್ಳುತ್ತಾ, ಒಬ್ಬರಿಂದೊಬ್ಬರು ಕಲಿಯುತ್ತಾ ಇರುವ ಹೊಸ ಚಿತ್ರಣ ಈಗ ಹೊರಹೊಮ್ಮಿದೆ. ಮಕ್ಕಳು ಮತ್ತು ಅವರ ಕಲಿಕಾ ಶೈಲಿಯ ಬಗೆಗಿನ ಕಲ್ಪನೆಗಳು ಸ್ಪಷ್ಟವಾಗಿ ಗೋಚರವಾಗುತ್ತಿದ್ದವು. ಇಲ್ಲಿ ಒತ್ತಿಹೇಳಬೇಕಾದ ಅಂಶ ಏನೆಂದರೆ, ಯಾವುದೇ ಜಾತಿ, ಲಿಂಗ ಮತ್ತು ಸಾಮಾಜಿಕ ಹಿನ್ನೆಲೆಯ ಪ್ರತಿಯೊಬ್ಬ ಮಗುವೂ ಹೆಚ್ಚಿನ ಜ್ಞಾನ ಮತ್ತು ಕಲಿಯುವ ಸಾಮರ್ಥ್ಯದೊಂದಿಗೇ ಶಾಲೆಗೆ ಬರುತ್ತದೆ. ಪೋಷಕರು ಅಥವಾ ಶಿಕ್ಷಕರಿಗಿಂತ ಚಾಕ್ ಮತ್ತು ಮಾತೇ ಅವರ ಆಸ್ತಿಯಾಗಿರುತ್ತದೆ.

**

ಪರಿಣಾಮಕಾರಿಯಾದ ಬಹುವರ್ಗ ತರಗತಿ ವಿಧಾನದ ಎಲ್ಲಾ ಅಂಶಗಳನ್ನು ಅರ್ಥೈಸಿಕೊಳ್ಳುವ ನಿಟ್ಟಿನಲ್ಲಿ, ಒಂದು ಮಲ್ಟಿಗ್ರೇಡ್ ತರಗತಿ ನಿರ್ವಹಣೆ ಚೌಕಟ್ಟನ್ನು ಐಎಸ್‌ಎಫ್ ರೂಪಿಸಿದೆ.

ಎ) ಬೋಧನೆಯ ಸಾರ: ತರಗತಿಯಲ್ಲಿ ನಡೆಯುವ ಬೋಧನೆ ಮತ್ತು ಕಲಿಕೆಯ ಕ್ಲಿಷ್ಟಕರ ಕೆಲಸವನ್ನು ಕುರಿತಾಗಿರುತ್ತದೆ. ಅದರಲ್ಲಿ ಮೂರು ಮುಖ್ಯ ಅಂಶಗಳು ಒಳಗೊಂಡಿವೆ- 1. ಶಿಕ್ಷಕರ ಜ್ಞಾನ ಮತ್ತು ಕೌಶಲಗಳು 2. ವಿದ್ಯಾರ್ಥಿಗಳು ಕಲಿಕೆಯಲ್ಲಿ ಸ್ವತಃ ತೊಡಗಿಸಿಕೊಳ್ಳುವುದು 3. ಅಕಾಡೆಮಿಕ್ ಆಗಿ ಸವಾಲೊಡ್ಡುವ ಪಠ್ಯ ಭಾಗ.

ಬಿ) ಕಾರ್ಯತಂತ್ರ: ಯೋಜನೆ ಕಾರ್ಯಗತಗೊಳ್ಳಲು ಕೈಗೊಳ್ಳಬೇಕಾದ ಆರಂಭದ ಕೆಲವು ನಡೆಗಳು, ವಿವರಗಳು ಮತ್ತು ಮೈಲಿಗಲ್ಲುಗಳು (ಮಹತ್ವದ ಸಾಧನೆಗಳು). ಕೆಲವು ನಡೆಗಳು ಮತ್ತು ಇಚ್ಛೆಗಳ ನಡುವಿನ ಸಾಂದರ್ಭಿಕ ಸಂಬಂಧಗಳ ಬಗ್ಗೆ ಸಂಸ್ಥೆಯ ಸಾಮೂಹಿಕ ನಂಬಿಕೆಯನ್ನು ಪ್ರತಿನಿಧಿಸುವ ನಡೆಗಳ ಸಿದ್ಧಾಂತದಿಂದ ಕಾರ್ಯತಂತ್ರವನ್ನು ಬದಲಾಯಿಸಬೇಕು.

1. ಪ್ರಕ್ರಿಯೆ: ಪರಿಣಾಮಕಾರಿಯಾಗಿರುವುದು ಮತ್ತು ದಕ್ಷತೆಯನ್ನು ಖಚಿತಪಡಿಸಿಕೊಳ್ಳಲು ಕೆಲಸ ಮಾಡುವ ವಿಧಾನಗಳ ವ್ಯವಸ್ಥೆ.
2. ರಚನೆ: ಜನರು ಹೇಗೆ ಪರಸ್ಪರ ಸಂಘಟಿತರಾಗಿದ್ದಾರೆ ಮತ್ತು ಸಂಪರ್ಕ ಹೊಂದಿದ್ದಾರೆ ಎಂಬುದನ್ನು ಸೂಚಿಸುತ್ತದೆ. ಪಾತ್ರ ಮತ್ತು ಜವಾಬ್ದಾರಿಗಳು, ಸಂಪನ್ಮೂಲ ಮಂಜೂರಾತಿ, ಸಂಬಂಧಗಳ ಬದ್ಧತೆಯನ್ನು ವರದಿ ಮಾಡುವುದು, ಸಂಘಟಿತ ಕಲಿಕಾ ಪ್ರಕ್ರಿಯೆ ಮತ್ತು ತರಬೇತಿ.
3. ಸಂಪನ್ಮೂಲಗಳು: ತಂತ್ರ ಹೆಣೆಯಲು ಮತ್ತು ಕೆಲಸದ ಪ್ರಕ್ರಿಯೆಗೆ ಬೇಕಾದ ಹಣಕಾಸು, ಜನ, ತಂತ್ರಜ್ಞಾನ ಮತ್ತು ಸಾಧನಗಳು.
4. ಸಂಸ್ಕೃತಿ: ವಿಷಯಗಳು ಹೇಗೆ ಕೆಲಸ ಮಾಡುತ್ತವೆ ಮತ್ತು ಯಾಕೆ ಎಂಬ ಬಗ್ಗೆ ಪ್ರತಿಯೊಬ್ಬರೂ ಹಂಚಿಕೊಂಡ ತಿಳಿವಳಿಕೆಯನ್ನು ವಿವರಿಸುವ ರೂಢಿಗಳು ಮತ್ತು ವರ್ತನೆಗಳು.

**

ವಿಧಾನಶಾಸ್ತ್ರ

ಬಹು ವರ್ಗ- ಬಹು ಹಂತದ (ಎಂಜಿಎಂಎಲ್) ವಿಧಾನದ ಯಶಸ್ಸು, ಸರಿಯಾಗಿ ವಿನ್ಯಾಸಗೊಂಡ ಕಲಿಕಾ ಸಾಮಗ್ರಿಗಳ ಪರಿಣಾಮಕಾರಿ ಬಳಕೆ ಹಾಗೂ ಅವುಗಳ ಬಳಕೆಯ ತರಬೇತಿ ಪಡೆದ ಶಿಕ್ಷಕರನ್ನು ಅವಲಂಬಿಸಿರುತ್ತದೆ. ಎಂಜಿಎಂಎಲ್ ಮಾದರಿಯ ತರಗತಿಗಳಿಗಾಗಿಯೇ ಎಲಿಮೆಂಟರಿ ಶಿಕ್ಷಣ ಕಾರ್ಯಕ್ರಮವನ್ನು ಜಿವಿಪಿ ಅಭಿವೃದ್ಧಿಪಡಿಸಿತು. ಆದರೂ, ಸಮಗ್ರ, ಕೈಗೆಟಕುವ ಮತ್ತು ಅಕಾಡೆಮಿಕ್ ಆಗಿ ಉತ್ತಮವಾದ ಕಾರ್ಯಕ್ರಮವಾಗಿದ್ದರೂ, ಸಾಂಪ್ರದಾಯಿಕದ ವಿಧಾನದಿಂದ ಇದು ಭಿನ್ನವಾಗಿರುವುದು ಗಮನಾರ್ಹ. ನಿರ್ದಿಷ್ಟವಾಗಿ ಹೇಳುವುದಾದರೆ, ಶಿಕ್ಷಕರು ಉಪನ್ಯಾಸ ನೀಡುವ ಬದಲು ಕಲಿಕೆಗೆ ಅನುಕೂಲ ಮಾಡಿಕೊಡುತ್ತಾರೆ. ವಿದ್ಯಾರ್ಥಿಗಳು ಕಲಿಕಾ (ಸ್ಟಡಿ) ಕಾರ್ಡ್‌ಗಳಿಂದ ಕಲಿಯುತ್ತಾರೆ ಹಾಗೂ ವರ್ಕ್ ಕಾರ್ಡ್‌ಗಳಲ್ಲಿ ಅಭ್ಯಾಸ/ ಕೆಲಸ ಮಾಡುತ್ತಾರೆ. ಒಬ್ಬ ವಿದ್ಯಾರ್ಥಿ ಸ್ಟಡಿ ಕಾರ್ಡ್ ಪೂರ್ತಿಗೊಳಿಸಿದರೆ, ಸಚಿತ್ರ ಕೋಷ್ಟಕದಲ್ಲಿ ಕೊಟ್ಟಿರುವಂತೆ, ಅದರ ನಂತರದ ಕಾರ್ಡನ್ನು ಆಕೆ/ಆತ ತೆಗೆದುಕೊಳ್ಳುತ್ತಾರೆ. ಈ ರೀತಿಯಲ್ಲಿ ವಿದ್ಯಾರ್ಥಿಗಳು ಸ್ವತಃ ಕಲಿತು, ಸ್ವತಃ ಪರೀಕ್ಷೆ ಮಾಡಿಕೊಳ್ಳುತ್ತಾರೆ.

ಭಾರತದ ಪ್ರಾಥಮಿಕ ಶಿಕ್ಷಣ ವ್ಯವಸ್ಥೆಯಲ್ಲಿರುವ ಪ್ರಮುಖ ಸಮಸ್ಯೆಗಳನ್ನು ಗಮನದಲ್ಲಿಟ್ಟುಕೊಂಡು ಈ ವಿಧಾನವನ್ನು ವಿನ್ಯಾಸಗೊಳಿಸಲಾಗಿದೆ. ಕಳಪೆ ಗುಣಮಟ್ಟದ ತರಬೇತಿ ಹೊಂದಿದ ಮತ್ತು ನಿರುತ್ಸಾಹೀ ಶಿಕ್ಷಕರಿಂದಾಗಿ ಶಾಲೆಗಳು ದೀರ್ಘಕಾಲದಿಂದಲೂ ಸೊರಗಿವೆ. ವ್ಯಕ್ತಿಗತ ಕಲಿಕೆಗೆ ಸೂಕ್ತವಾಗಿರದ ಪಠ್ಯಪುಸ್ತಕಗಳು, ಅಲ್ಲದೆ, ಅನಿರೀಕ್ಷಿತವಾಗಿ ಶಾಲೆಗೆ ಗೈರುಹಾಜರಾಗಬಹುದಾದ ಕೃಷಿಕ ಕುಟುಂಬದ ಮಕ್ಕಳಿಗೆ ಹೊಂದಾಣಿಕೆ ಮಾಡಿಕೊಳ್ಳಲಾಗದ ವೇಳಾಪಟ್ಟಿ ಹಾಗೂ ಇದೇ ಕಾರಣದಿಂದ ಮಕ್ಕಳು ಶಾಲೆಯಿಂದ ಹೊರಗುಳಿಯಬಹುದಾದ

ಸನ್ನಿವೇಶ- ಇಂತಹ ಸಮಸ್ಯೆಗಳಿಂದಾಗಿ ಶಾಲೆಗಳು ಈಗಾಗಲೇ ಸೊರಗಿವೆ. ಯಾಕೆಂದರೆ, ಪ್ರತಿಯೊಬ್ಬ ಮಗುವೂ ತನ್ನದೇ ಆದ ರೀತಿಯಲ್ಲಿ ಪ್ರಗತಿಯ ಏಣಿಯನ್ನು ಏರಬಲ್ಲದು. ಆದರೆ, ವಿದ್ಯಾರ್ಥಿಗಳ ಕಲಿಕಾ ಅವಶ್ಯಕತೆಗಳನ್ನು ಅರ್ಥ ಮಾಡಿಕೊಂಡು ಶಿಕ್ಷಕರು ತಮ್ಮ ಸಾಮರ್ಥ್ಯವನ್ನು ವಿದ್ಯಾರ್ಥಿಗಳತ್ತ ಹರಿಸಿದರೆ, ಶಾಲೆಯಿಂದ ಹೊರಗುಳಿಯುವವರ ಪ್ರಮಾಣ ಕ್ರಮೇಣ ಕಡಿಮೆಯಾಗುತ್ತದೆ.

ಪ್ರಸ್ತುತತೆ

ಭಾಷೆ ಮತ್ತು ಗಣಿತದ ಕಿಟ್‌ಅನ್ನು ಭಾರತೀಯ ಪರಿಕಲ್ಪನೆಯಲ್ಲಿ ವಿಸ್ತೃತ ಅಳವಡಿಕೆಯ ದೃಷ್ಟಿಕೋನವನ್ನಿಟ್ಟುಕೊಂಡು ವಿನ್ಯಾಸ ಮಾಡಲಾಗಿದೆ. ಒಂದು ವೇಳೆ ಅರ್ಹ ಮತ್ತು ಅನುಭವಸ್ಥ ಶಿಕ್ಷಕರು ಇಲ್ಲದಿದ್ದರೂ ವಿದ್ಯಾರ್ಥಿಗಳು ಸಮರ್ಥವಾಗಿ ಬಳಸುವಂತಿವೆ. ಅವುಗಳನ್ನು 'ಬರಿಗಾಲ ಶಿಕ್ಷಕರೂ' ಹಾಗೆಯೇ ಹೆಚ್ಚಿನ ಅನುಭವ ಹೊಂದಿರುವ ಪ್ರಶಿಕ್ಷಕರೂ ಬಳಸಬಹುದಾಗಿದೆ. ಪಾಠಗಳು ಸಕಾಲಿಕವಾಗಿದ್ದು, ಸ್ಥಳೀಯ ಸನ್ನಿವೇಶಗಳಿಗೆ ತಕ್ಕುದಾಗಿ ಗಮನ ಕೊಡಲಾಗಿದೆ ಮತ್ತು ಸ್ಥಳೀಯ ಕಲಾವಿದರೇ ಅವುಗಳನ್ನು ವಿವರಿಸಿದ್ದಾರೆ. ಆಕರ್ಷಕ ಸಾಮಗ್ರಿಗಳು ವಿದ್ಯಾರ್ಥಿಗಳ ಆಸಕ್ತಿಯನ್ನು ಕೆರಳಿಸುವಂತಿದ್ದು, ಕಲಿಕೆ ಮತ್ತ್ ಅಭ್ಯಾಸದತ್ತ ಉತ್ತೇಜಿಸುವಂತಿವೆ.

ಅಗ್ಗದ ದರ

ದೊಡ್ಡ ಪ್ರಮಾಣದ ಸ್ಟಡಿ ಕಾರ್ಡ್‌ಗಳು ಮತ್ತು ವರ್ಕ್ ಕಾರ್ಡ್‌ಗಳು (ಕೈಯಿಂದ ತಯಾರಿಸಿದ್ದು) ಕೈಗೆಟುಕುವ ಬೆಲೆಯದ್ದಾಗಿವೆ. ಪ್ರತಿಯೊಂದು ಕಿಟ್‌ನಲ್ಲಿಯೂ ದೊಡ್ಡ ಪ್ರಮಾಣದ ಕಾರ್ಡ್‌ಗಳಿದ್ದು, ಹಲವಾರು ಮಕ್ಕಳು ಹಂಚಿಕೊಳ್ಳುತ್ತಾರೆ. ಈ ಕಿಟ್‌ಗಳು ಶಾಲೆಯ ಸ್ವತ್ತು. ಪ್ರತಿಯೊಬ್ಬ ವಿದ್ಯಾರ್ಥಿಯ ವ್ಯಕ್ತಿಗತ ಅವಶ್ಯಕತೆಯನ್ನು ಗಮನದಲ್ಲಿಟ್ಟುಕೊಂಡು ಈ ಕಾರ್ಡ್‌ಗಳನ್ನು ವಿನ್ಯಾಸ ಮಾಡಲಾಗಿದೆ. ಐದು ವಿವಿಧ ವರ್ಗದ ಸುಮಾರು 40 ವಿದ್ಯಾರ್ಥಿಗಳಿಗೆ ಅದು ಸಾಕಾಗುತ್ತದೆ. ಆದ್ದರಿಂದ, ಇತರ ಪಠ್ಯಪುಸ್ತಕಗಳಿಗೆ ಹೋಲಿಸಿದರೆ ಇತರ ಶೈಕ್ಷಣಿಕ ಸಾಮಗ್ರಿಗಳ ಆರ್ಥಿಕ ಹೊರೆಯನ್ನು ಇವು ತಗ್ಗಿಸುತ್ತವೆ.

ಅಲ್ಲದೆ, ಈ ಕಾರ್ಡುಗಳು ಕಿತ್ತುಹೋದರೆ ಹೊಸ ಹೊಸ ಒಂಟಿ ಕಾರ್ಡು ಹೊಸದಾಗಿ ಸೇರಿಸಬಹುದು. ಎಲ್ಲಾ ಶಿಕ್ಷಕರಿಗೂ ಹೊಸ ಸಾಮಗ್ರಿಗಳನ್ನು ವಿನ್ಯಾಸ ಮಾಡಲು ಮತ್ತು ತಯಾರಿಸಲು ಬೇಕಾದ ಪರಿಕರಗಳನ್ನು ಒದಗಿಸಲಾಗಿದೆ. ನಿರಂತರವಾಗಿ ಕಾರ್ಡುಗಳನ್ನು ಅದಲು ಬದಲು ಮಾಡುವುದರಿಂದ ವಿದ್ಯಾರ್ಥಿಗಳಲ್ಲಿ ಭಾಗವಹಿಸುವಿಕೆಯ ಪ್ರಜ್ಞೆ, ಹೊಸ ಕಾರ್ಡುಗಳ ಸೇರ್ಪಡೆ, ಶೈಕ್ಷಣಿಕ ಸಾಮಗ್ರಿಗಳನ್ನು ಕಾಲಕಾಲಕ್ಕೆ ಹೊಂದಿಸುವುದು ಮತ್ತು ನವೀಕರಿಸುವ ಪ್ರಜ್ಞೆ ಜಾಗೃತವಾಗಿರುತ್ತದೆ.

ಸರಳತೆ

ಕಲಿಕೆಯ ಪ್ರತಿಯೊಂದು ಹಂತವನ್ನೂ ಸ್ಪಷ್ಟವಾಗಿ ಅನುಕರಿಸುವ ಕಾರಣ ಶಿಕ್ಷಕರಿಗೆ ಈ ಕಿಟ್ ಬಳಕೆ ಸುಲಭ. ಶಿಕ್ಷಕರಿಗೂ, ವಿದ್ಯಾರ್ಥಿಗಳಿಗೂ ಇದೊಂದು ಕೈಗೆಟಕುವ ಚಟುವಟಿಕೆಯಾಗುತ್ತದೆ. ಇದು ಸಮರ್ಥ/ದಕ್ಷ ಶಿಕ್ಷಕರ ತರಬೇತಿಯೂ, ಕಡಿಮೆ ದರದಲ್ಲಿಯೂ ಸಾಧ್ಯವಾಗುತ್ತದೆ. ಮೌಲ್ಯಮಾಪನ ಕ್ರಮವನ್ನು ಶಿಕ್ಷಕರು ಕಲಿಕಾ ಅಂತರವನ್ನು ಗುರುತಿಸಲು ಮತ್ತು ಪರಿಹಾರ ಕಂಡುಕೊಳ್ಳಲು ಸಾಧ್ಯವಾಗುವಂತೆ ಒದಗಿಸಲಾಗಿದೆ. ವಿದ್ಯಾರ್ಥಿಗಳು ಮತ್ತು ಶಿಕ್ಷಕರಿಗೆ ಇದರಿಂದ ಸಾಧನೆಯ ಭಾವನೆಯನ್ನು ಮೂಡಿಸಿ, ಗ್ರಾಮೀಣ ಮಕ್ಕಳನ್ನು ನಿರುತ್ಸಾಹಗೊಳಿಸಿದ ಸೋಲಿನ ಅನುಭವವನ್ನು ಮರೆಸುವಂತೆ ಮಾಡಿದೆ. ಈ ಕಿಟ್ ವಿದ್ಯಾರ್ಥಿಗಳಿಗೆ ಆಕರ್ಷಕ ವಿನ್ಯಾಸ ಮತ್ತು

ವಿಸ್ತರಿತ ಸ್ಥಳೀಯ ಕತೆಗಳು, ಜನಪದ ಮತ್ತು ಪ್ರಾಣಿಗಳು, ಅನುಕರಣೆ ಮತ್ತು ಮಿಮಿಕ್ರಿ, ಒಗಟುಗಳು ಮುಂತಾದವುಗಳ ನೆರವಿನೊಂದಿಗೆ, ಧನಾತ್ಮಕ ಕಲಿಕಾ ಅನುಭವವನ್ನು ನೀಡುತ್ತದೆ.

ಪರಿಣಾಮಕಾರಿತ್ವ

ಆರು ಮೈಕ್ರೊ ಶಾಲೆಗಳಲ್ಲಿ ಮೊದಲನೇ ಮತ್ತು ಎರಡನೇ ತಲೆಮಾರಿನ ಕಲಿಕಾರ್ಥಿಗಳಿಗೆ ಈ ಕಿಟ್‌ನ ಅಭ್ಯಾಸ ಮಾಡಿಸಲಾಗಿದೆ. ಅಲ್ಲಿ ವಿದ್ಯಾರ್ಥಿಗಳು ಕಲಿಕೆಯ ಕನಿಷ್ಠ ಹಂತ (ಮಿನಿಮಮ್ ಲೆವೆಲ್ಸ್ ಆಫ್ ಲರ್ನಿಂಗ್ಸ್) ಆಧಾರದಲ್ಲಿ ತರಗತಿಯಲ್ಲಿ ಉತ್ತೀರ್ಣರಾಗಿದ್ದಾರೆ. ಸಮೀಪದ ಹಳ್ಳಿಯ ಪಬ್ಲಿಕ್ ಶಾಲೆಯೊಂದರಲ್ಲಿ ಪ್ರಥಮ್ ಹಮ್ಮಿಕೊಂಡ ಸ್ವತಂತ್ರ ಮೌಲ್ಯಮಾಪನವು ಅತ್ಯುತ್ತಮ ಫಲಿತಾಂಶವನ್ನು ಬೆಳಕಿಗೆ ತಂದಿದೆ.

ಪ್ರದರ್ಶನ: ಶಾಲೆಯಲ್ಲಿಯೇ ತರಬೇತುಗೊಂಡ ಶಿಕ್ಷಕರು ತಮ್ಮ ವಿದ್ಯಾರ್ಥಿಗಳನ್ನು ಅದೇ ಮತ್ತು ಮೇಲಿನ ಮಟ್ಟದ ಓದಲು ಮತ್ತು ಬರೆಯಲು ಸಮರ್ಥರಾಗುವಂತೆ ಮಾಡಿದ್ದಾರೆ. ಈ ಮಕ್ಕಳು ಕಂಟ್ರೋಲ್ ಗ್ರೂಪ್‌ನಲ್ಲಿದ್ದರು.

ತರಬೇತಿ ಕಾರ್ಯಕ್ರಮ

ಶಾಲೆಯ ಹೊಸ ಶಿಕ್ಷಕರಿಗಾಗಿ ಈ ತರಬೇತಿ ಕಾರ್ಯಕ್ರಮವನ್ನು ಕೋರ್ಸ್ ರೂಪದಲ್ಲಿ ಆರಂಭಿಸಲಾಯಿತು. ವರ್ಟಿಕಲ್ ಗುಂಪಿನ ಮೈಕ್ರೊ ಶಾಲಾ ಕೊಠಡಿಯಲ್ಲಿ ಬೇರೆ ಬೇರೆ ವಯಸ್ಸಿನ ಹಾಗೂ ವಿವಿಧ ಬಗೆಯ ಸಾಮರ್ಥ್ಯ ಹೊಂದಿರುವ ಮಕ್ಕಳನ್ನು ನಿಭಾಯಿಸುವ ಬಗೆಯನ್ನು, ಕಡಿಮೆ ಶಿಕ್ಷಣ ಪಡೆದ ಸ್ಥಳೀಯ ಯುವಕರು ಕಲಿತರು. ಬಹುವರ್ಗದ ಬೋಧನಾ ಕಲೆಯನ್ನು ಕಲಿಸುವ ಮೂಲ ಸಾಧನವಾಗಿ ಈ ಕಿಟ್ ಪರಿಣಮಿಸಿತು. ಈ ಕೋರ್ಸ್‌ನ ಆರಂಭದ ಹಂತಗಳಲ್ಲಿ, ಬಹುವರ್ಗದ ತರಗತಿ ಕೊಠಡಿಯನ್ನು ನಿಭಾಯಿಸುವ ಕಲೆಯನ್ನು ಕಲಿಯುವ ವೇಳೆ ಶಿಕ್ಷಕರು, ಈ ಕಿಟ್ ಉಪಯೋಗದ ವ್ಯಕ್ತಿಗತ ಅನುಭವವನ್ನು ಪಡೆದರು. ಎಂಜಿಎಂಎಲ್ ವಿಧಾನಶಾಸ್ತ್ರಕ್ಕೆ ಸಂಬಂಧಿಸಿದ ಜ್ಞಾನ ವರ್ಗಾವಣೆಯಲ್ಲಿ ಪ್ರಾಂಶುಪಾಲರು ಮತ್ತು ಸಂಪನ್ಮೂಲ ಮುಖ್ಯಸ್ಥರು ನಿರ್ಣಾಯಕ ಪಾತ್ರ ವಹಿಸುತ್ತಾರೆ.

ಆರೋಹ್ಯತೆ (ಸ್ಕೇಲೆಬಿಲಿಟಿ)

ಎಂಜಿಎಂಎಲ್ ವಿಧಾನವು ಗ್ರಾಮೀಣ ಪ್ರದೇಶಗಳಲ್ಲಿ ತನ್ನ ಪರಿಣಾಮಕಾರಿತನವನ್ನು ಕಳೆದುಕೊಳ್ಳದೆ ಸ್ಕೇಲಬಲ್ ಆಗಿದೆ. ಅದಕ್ಕೆ ಬೇಕಾಗಿರುವುದೇನೆಂದರೆ, ಹಳ್ಳಿಯ ಶಾಲೆಯನ್ನು, ಮುಖ್ಯವಾಗಿ ಶಿಕ್ಷಕರಿಗೆ ಆರಂಭಿಕ ತರಬೇತಿ ಕೊಡುವ ಮುಖ್ಯ ಶಿಕ್ಷಣ ಕೇಂದ್ರಕ್ಕೆ ಸಂಪರ್ಕಿಸುವುದು, ಮಾರ್ಗದರ್ಶನ ಒದಗಿಸುವ ನಿಯಮಿತ (ಪ್ರತಿ ತಿಂಗಳು) ಸಭೆಗಳು, ನಡೆಯುತ್ತಿರುವ ಸಾಧನಾ ಕಾರ್ಡುಗಳಲ್ಲಿನ ಪ್ರಗತಿಗೆ ಸಂಬಂಧಿಸಿದಂತೆ ಮತ್ತು ತರಗತಿಗಳ ನಿರ್ವಹಣೆಗೆ ಸಂಬಂಧಿಸಿದಂತೆ ತಮ್ಮ ಅನುಭವಗಳನ್ನು ಪರಸ್ಪರ ಹಂಚಿಕೊಳ್ಳಲು ಶಿಕ್ಷಕರ ಸಮುದಾಯವನ್ನು ನಿರ್ಮಿಸುವ ಅವಕಾಶ ಸಿಗುತ್ತದೆ ಎಂಬುದು ಇದರ ಆಶಯ. ಎಂಜಿಎಂಎಲ್ ನಿರ್ವಹಣಾ ಚೌಕಟ್ಟಿನ ಸಾರಾಂಶವನ್ನು ಅನುಬಂಧದಲ್ಲಿ ನೀಡಲಾಗಿದೆ.

**

ಬಹುವರ್ಗೀಯ ತರಗತಿಯ ನಿರ್ವಹಣಾ ಚೌಕಟ್ಟು (ಎಂಜಿಎಂಎಲ್)

ಬೋಧನೆಯ ಸಾರ

ವಿದ್ಯಾರ್ಥಿ

- ಕಲಿಕೆಯ ಪ್ರಕ್ರಿಯೆಯಲ್ಲಿ ಸಕ್ರಿಯ ತೊಡಗಿಸಿಕೊಳ್ಳುವಿಕೆ- ಸ್ವಯಂ ಕಲಿಕೆ ಮತ್ತು ವಿಶ್ಲೇಷಣಾತ್ಮಕ ಹೆಚ್ಚುವರಿ ಕಲಿಕೆಯ ಅವಶ್ಯಕತೆ
- ಸಮಾನ ವಯಸ್ಕರ ಕಲಿಕೆಗೆ ಹೊಣೆಗಾರರು- ಟ್ಯೂಷನ್

- ಶಾಲೆಯ ಕಾರ್ಯ ಚಟುವಟಿಕೆಗಳು ಸರಿಯಾಗಿ ನಡೆಯುವಂತೆ ಜವಾಬ್ದಾರಿ
- ತರಗತಿಯ ಒಳಗೆ ಮತ್ತು ಹೊರಗೆ ಸಕ್ರಿಯ ಪಾಲ್ಗೊಳ್ಳುವಿಕೆ

ಶಿಕ್ಷಕ

- ತರಗತಿಯ ಮುಂದೆ ನಿಂತು ಸಾಂಪ್ರದಾಯಿಕವಾಗಿ ಪಾಠ ಮಾಡುವುದಕ್ಕಿಂತ ಕಲಿಕೆಗೆ ಅನುಕೂಲ ಮಾಡಿಕೊಡುವವರು.
- ಹಿರಿಯ ವಿದ್ಯಾರ್ಥಿಗಳು ಕಿರಿಯ ವಿದ್ಯಾರ್ಥಿಗಳಿಗೆ ನೆರವಾಗುತ್ತಿದ್ದಾರೆಯೇ ಎಂಬ ಬಗ್ಗೆ ಹೆಚ್ಚು ಗಮನ ನೀಡುವುದು.
- ವಿಶ್ಲೇಷಣೆಯ ಮೂಲಕ ವಿದ್ಯಾರ್ಥಿಗಳ ಆವಶ್ಯಕತೆಯ ಆಧಾರದಲ್ಲಿ ಟಾರ್ಗೆಟ್ ಗ್ರೂಪ್‌ಗಳನ್ನು ರಚಿಸುವುದು.
- ಜ್ಞಾನ ಮತ್ತು ಅನುಭವ ಹಂಚಿಕೊಳ್ಳಲು (ಮಾಸಿಕ ಸಭೆಗಳು) ಇತರ ಶಿಕ್ಷಕರೊಂದಿಗೆ ಸಂಪರ್ಕ ಹೊಂದುವುದು
- ಒಂದು ವಾರದ ಮೂರು ತರಬೇತಿಗಳು-ಗುರಿ ಮತ್ತು ವಿಧಾನಶಾಸ್ತ್ರ; ವಿದ್ಯಾರ್ಥಿ ಕಲಿಕಾ ಮಾರ್ಗದರ್ಶನಗಳು; ವರ್ಗದಿಂದ ಬಡ್ತಿ ನೀಡಲು ಸೂಚನಾ ಸಾಮಗ್ರಿ ಮತ್ತು ಸೂಚನೆಗಳು
- ಶಾಲಾ ಗ್ರಂಥಾಲಯದ ಬಳಕೆ

ವಿಷಯ

- ರಾಷ್ಟ್ರೀಯ ಪಠ್ಯಕ್ರಮಕ್ಕೆ ಜೋಡಣೆಯಾಗಿರುವ ಕಲಿಕಾ ಗುರಿ ಇರುವ ಸಂಘಟನಾತ್ಮಕ ಮತ್ತು ಸಮುದಾಯ ಆಧಾರಿತ ಪಠ್ಯಕ್ರಮ
- ಕೇಂದ್ರ ಸರ್ಕಾರ ವಿನ್ಯಾಸ ಮಾಡಿದ್ದಕ್ಕಿಂತ ಶಿಕ್ಷಕರೇ ವಿನ್ಯಾಸ ಮಾಡಿದ,
- ಸಮುದಾಯ ನೀಡುವ ಪೂರಕ ಅಂಶಗಳನ್ನು ಒಳಗೊಂಡ ಕಂಟೆಂಟ್
- ವಿದ್ಯಾರ್ಥಿಗಳಿಗೆ ಪ್ರಸ್ತುತ ಮತ್ತು ಅರ್ಥಪೂರ್ಣವಾದುದು
- ಕಲಿಕಾ ಮಾರ್ಗದರ್ಶಿಗಳ ನೆರವಿನೊಂದಿಗೆ ಸ್ವಯಂ ವಿವರಣಾತ್ಮಕ

ಕಾರ್ಯತಂತ್ರ

- ಪ್ರಕ್ರಿಯೆ
- ರಚನೆ
- ಸಂಪನ್ಮೂಲಗಳು
- ಸಂಸ್ಕೃತಿ

- ಸ್ವಯಂ ಬೋಧನೆಯ ಕಾರ್ಡುಗಳು
- ವೈಯಕ್ತಿಕ ಕಲಿಕೆಯ ನೆಲೆಯಲ್ಲಿ ಹೊಂದಿಕೊಳ್ಳಬಲ್ಲ ಪ್ರಚಾರ
- ಸ್ಥಳೀಯ ಸಂಸ್ಕೃತಿಗೆ ಸಂಬಂಧಪಡುವ ಅಕಾಡೆಮಿಕ್ ಕ್ಯಾಲೆಂಡರ್
- ಸ್ಪಷ್ಟವಾದ ನಿಯಮಗಳು ಮತ್ತು ದೈನಂದಿನ ಚಟುವಟಿಕೆಗಳು
- ವಿದ್ಯಾರ್ಥಿಗಳು ತಮ್ಮ ಸಾಧನೆಯನ್ನು ತಾವೇ ಪತ್ತೆ ಹಚ್ಚುವುದು
- ಶಿಕ್ಷಕರಿಗೆ ಬೋಧನಾ ಮಾರ್ಗದರ್ಶಿ
- ವಿದ್ಯಾರ್ಥಿಗಳಿಗೆ ಕಲಿಕಾ ಮಾರ್ಗದರ್ಶಿ
- 100ಕ್ಕೂ ಹೆಚ್ಚು ಪುಸ್ತಕಗಳು ಇರುವ ಗ್ರಂಥಾಲಯ
- ವಿದ್ಯಾರ್ಥಿಗಳೇ ಅಭಿವೃದ್ಧಿಪಡಿಸಿದ ಸಮುದಾಯ ಸಂಪನ್ಮೂಲ
- ಕಲಿಕೆಯ ಜವಾಬ್ದಾರಿಯ ಹಂಚುವಿಕೆ
- ಉನ್ನತ ನಿರೀಕ್ಷೆಗಳು
- ಉನ್ನತ ಮಟ್ಟದ ಸ್ವಾಯತ್ತತೆ: ಒಗ್ಗಟ್ಟು ಮತ್ತು ಸಹಕಾರ
- ಹೊಣೆಗಾರಿಕೆ

- ಸಮಾನತೆ ಮತ್ತು ಗೌರವ
- ತರಬೇತಿ ಮತ್ತು ನಿರಂತರ ಪ್ರೋತ್ಸಾಹಕ್ಕೆ ಮೈಕ್ರೊ ಕೇಂದ್ರ
- ಮೈಕ್ರೊ ಕೇಂದ್ರಕ್ಕೆ ಶಿಕ್ಷಣಶಾಸ್ತ್ರೀಯ ಬೆಂಬಲ ಮತ್ತು ಹೊಣೆಗಾರಿಕೆಗಾಗಿ-ಮೇಲ್ವಿಚಾರಕ
- ಶಿಕ್ಷಕರು ಮತ್ತು ವಿದ್ಯಾರ್ಥಿಗಳೇ ಶಾಲೆಯನ್ನು ನಡೆಸುವುದು
- ಭಾಗೀದಾರರ (ಸಮುದಾಯ, ಶಿಕ್ಷಕರು, ವಿದ್ಯಾರ್ಥಿಗಳು ಮತ್ತು ಸರ್ಕಾರ) ನಡುವೆ ಶಿಕ್ಷಣ ಸುಧಾರಣೆಯ ಮಾಲೀಕತ್ವ ಹಂಚಿಕೆ

**

ಧೋರಣೆ

ದೈಹಿಕ ಅಸಾಮರ್ಥ್ಯದ ಬಗ್ಗೆ ಇರುವ ಋಣಾತ್ಮಕ ಧೋರಣೆಗಳ ವಾಡಿಕೆ ಮತ್ತು ಭಿನ್ನತೆಯ ಬಗೆಗಿನ ಅಸಹನೆ ದೊಡ್ಡ ಪ್ರಮಾಣದಲ್ಲಿ ಮಕ್ಕಳು ಶಾಲೆಯಿಂದ ಹೊರಗುಳಿಯಲು ಕಾರಣವಾದ ಅಂಶಗಳಲ್ಲೊಂದು. ಜಡ್ಡುಗಟ್ಟಿದ ಇಂತಹ ಯೋಚನೆಗಳು ಶಾಲೆಗಳು ಮತ್ತು ತರಗತಿಗಳಿಗೂ ಹರಡಿ, ಅಂತಹ ಮಕ್ಕಳನ್ನು ಶಾಲೆಗೆ ಮರಳಿ ಕರೆತರುವ ಪ್ರಯತ್ನಕ್ಕೆ ಹಿನ್ನಡೆಯಾಗುತ್ತವೆ. ವಾಸ್ತವವಾಗಿ, ಎಷ್ಟೋ ಸಲ ದೈಹಿಕ ಅಸಾಮರ್ಥ್ಯವಿರುವ ಮಕ್ಕಳನ್ನು ಶಾಲೆಗೆ ಬಲವಂತವಾಗಿ ಕಳುಹಿಸುತ್ತಾರೆ ಇಲ್ಲವೇ ಶಾಲೆಗೆ ಕಳುಹಿಸುವುದೇ ಇಲ್ಲ.

ಸಮನ್ವಯ ಶಿಕ್ಷಣ ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬರುವುದು ಶಿಕ್ಷಕರು ಮತ್ತು ಸಿಬ್ಬಂದಿಯ ಗ್ರಹಿಕೆ ಮತ್ತು ಬದ್ಧತೆಯನ್ನು ಅವಲಂಬಿಸಿದೆ. ಈ ನಿಟ್ಟಿನಲ್ಲಿ, ಸಮನ್ವಯ ಶಿಕ್ಷಣವನ್ನು ಪ್ರಚುರಪಡಿಸುವ ಜವಾಬ್ದಾರಿಯನ್ನು ಶಿಕ್ಷಕರಲ್ಲಿ ತುಂಬುವುದು ಅತ್ಯಂತ ಪ್ರಮುಖ ಕೆಲಸ. ಸಮನ್ವಯ ಶಿಕ್ಷಣದ ಬಗ್ಗೆ ಶಿಕ್ಷಕರಲ್ಲಿ ಧನಾತ್ಮಕ ಧೋರಣೆ ಬಹಳ ಮುಖ್ಯ. ಯಾಕೆಂದರೆ, ಒಳಗೊಳ್ಳುವಿಕೆಯ ಮೌಲ್ಯವನ್ನು ಬೆಳೆಸಿಕೊಂಡಾಗಲೇ ಶಿಕ್ಷಕರು ಅದನ್ನು ವಿದ್ಯಾರ್ಥಿಗಳಿಗೆ/ ಮಕ್ಕಳಿಗೆ ಸಂವಹನ ಮಾಡಬಲ್ಲರು ಹಾಗೂ ಅದರಂತೆ ತರಗತಿ ನಡೆಸಬಲ್ಲರು. ಇದರೊಂದಿಗೆ, ಶಿಕ್ಷಕರನ್ನು ಮತ್ತು ಸಿಬ್ಬಂದಿಯನ್ನು ಶಾಲಾ ಆಡಳಿತವೂ ಸಮಾನತೆಯಿಂದ ಕಾಣುವುದೂ ಬಹಳ ಮುಖ್ಯ. ಶಾಲೆಗೆ ಸಂಬಂಧಿಸಿದ ನಿರ್ಣಯ ಕೈಗೊಳ್ಳುವ ವೇಳೆ ಅವರನ್ನು ವಿಶ್ವಾಸಕ್ಕೆ ತೆಗೆದುಕೊಳ್ಳಬೇಕು. ಹೀಗೆ ಮಾಡಿದಾಗ, ಶಿಕ್ಷಕರು ಮತ್ತು ಸಿಬ್ಬಂದಿ ಶಾಲೆಗೆ ಇನ್ನೂ ಹೆಚ್ಚಿನ ಕೊಡುಗೆ ಕೊಡುವಂತೆ ಪ್ರೇರೇಪಣೆ ಸಿಗುತ್ತದೆ. ಸಿಬ್ಬಂದಿ ಜತೆ ಪರಸ್ಪರ ಗೌರವದಿಂದ ನಡೆದುಕೊಳ್ಳುವುದು ವಿದ್ಯಾರ್ಥಿಗಳಿಗೂ ಅನುಕರಣೀಯವಾಗುತ್ತದೆ.

ಮೀರಾ, ಮಧ್ಯಪ್ರದೇಶದ ಒಂದು ಸಣ್ಣ ಪಟ್ಟಣದಲ್ಲಿ ಜನಿಸಿದಾಗಲೇ ದೃಷ್ಟಿ ಕಳೆದುಕೊಂಡಿದ್ದಳು. ಅವಳ ಹೆತ್ತವರು ಪವಾಡದ ರೀತಿಯಲ್ಲಿ ಮಗಳ ಅಂಧತ್ವ ನಿವಾರಣೆಯಾದೀತು ಎಂದು ತೋಚಿದ ಎಲ್ಲಾ ಪ್ರಯತ್ನಗಳನ್ನು ಮಾಡಿದರು. ತಮ್ಮ ಪಟ್ಟಣದಲ್ಲಷ್ಟೇ ಅಲ್ಲದೆ ಹೊರಗಿನ ಪಟ್ಟಣದಲ್ಲಿಯೂ ಹಲವಾರು ವೈದ್ಯರನ್ನು ಭೇಟಿ ಮಾಡಿದರು. ಬೇರೆ ಬೇರೆ ಧರ್ಮಗಳ ಗುರುಗಳನ್ನು ಕಂಡರು, ತೀರ್ಥಕ್ಷೇತ್ರಗಳಿಗೆ ಮಗಳನ್ನು ಕರೆದುಕೊಂಡು ಹೋಗಿಬಂದರು. ಪವಾಡಸದೃಶವಾಗಿ ಮಗಳಿಗೆ ದೃಷ್ಟಿ ಬರಲಿ ಎಂದು ಕಂಡಕಂಡ ದೇವರಲ್ಲಿ ಪ್ರಾರ್ಥಿಸಿದರು. ಎಲ್ಲಾ ಪ್ರಯತ್ನಗಳು ವಿಫಲವಾದಾಗ, ತಮ್ಮ ಮಗಳಿಗೆ ಇನ್ನೆಂದೂ ದೃಷ್ಟಿ ಬರುವುದಿಲ್ಲ ಎಂಬ ವಾಸ್ತವವನ್ನು ಅರಗಿಸಿಕೊಂಡರು. ತಮ್ಮ ಮಗಳಿಗೆ ಇನ್ನೆಂದೂ ಕಣ್ಣು ಕಾಣಿಸುವುದಿಲ್ಲ ಎಂಬುದು ಖಾತರಿಯಾದಾಗ, ಅವಳು ಎಷ್ಟು ಕಲಿಯಲು ಸಾಧ್ಯವೋ ಅಷ್ಟು ಅತ್ಯುತ್ತಮ ಶಿಕ್ಷಣವನ್ನು ಕೊಡಿಸುವ ಸಂಕಲ್ಪ ತೊಟ್ಟರು. ಅಲ್ಲಿಂದಾಚೆ, ತಮ್ಮ ಸುತ್ತಮುತ್ತಲಿನ ಪ್ರದೇಶಗಳಲ್ಲಿ ಅವಳಿಗಾಗಿ ಶಾಲೆಯ ಹುಡುಕಾಟ ಆರಂಭಿಸಿದ ಪೋಷಕರಿಗೆ ನಿರಾಸೆ ಕಾದಿತ್ತು. ಅವರು ಸಂಪರ್ಕಿಸಿದ ಶಾಲೆಗಳಲ್ಲಿ ಅರ್ಧದಷ್ಟು ಶಾಲೆಗಳು ಅವಳಿಗೆ ಪ್ರವೇಶ ನಿರಾಕರಿಸಿದರೆ, ಇನ್ನರ್ಧ ಪಾಲು ಶಾಲೆಗಳು, ಅಂಧ ಮಕ್ಕಳಿಗೆ ಶಿಕ್ಷಣ ನೀಡಲು

ತರಬೇತಿ ಹೊಂದಿದ ಶಿಕ್ಷಕರು ತಮ್ಮ ಶಾಲೆಯಲ್ಲಿ ಇಲ್ಲ ಎಂದು ಅಸಹಾಯಕತೆ ವ್ಯಕ್ತಪಡಿಸಿದರು. ಶಾಲಾ ಆಡಳಿತದವರು ವ್ಯಕ್ತಪಡಿಸಿದ ಕೆಲವು ಸಮಸ್ಯೆಗಳು ಹೀಗಿದ್ದವು:

- ಅವಳಿಗೆ ಹೇಗೆ ಪಾಠ ಮಾಡಬೇಕು ಎಂದು ನಮಗೆ ಗೊತ್ತಿಲ್ಲ
- ಅವಳಿಂದಾಗಿ ಇಡೀ ತರಗತಿಯೇ ಕಲಿಕೆಯಲ್ಲಿ ಹಿಂದೆ ಬೀಳುತ್ತದೆ
- ಹೊಂದಿಕೊಳ್ಳಲು ಅವಳಿಗೆ ಕಷ್ಟವಾದೀತು
- ಇತರ ಮಕ್ಕಳ ಪೋಷಕರು ಆಕ್ಷೇಪ ವ್ಯಕ್ತಪಡಿಸಬಹುದು.
- ಅವಳಿಗೆ ಬೇಕಾದ ಸಾಧನಗಳ ಬಗ್ಗೆ ನಮಗೆ ಅರಿವಿಲ್ಲ.
- ಅವಳಿಗೆ ನೀವೇ ಮನೆಯಲ್ಲಿ ಹೇಳಿಕೊಡುವ ಖಾತರಿ ಕೊಡುವುದಾದರೆ ಮಾತ್ರ ಅವಳನ್ನು ಶಾಲೆಗೆ ಸೇರಿಸಿಕೊಳ್ಳುತ್ತೇವೆ

ಅಂತಿಮವಾಗಿ, ಮೀರಾಳ ಪೋಷಕರು ಅವಳನ್ನು ದೆಹಲಿಗೆ ಕರೆತಂದರು. ಅಲ್ಲಿಯೂ ಬೇರೆ ಬೇರೆ ಸಂಸ್ಥೆಗಳಿಗೆ ಕರೆದೊಯ್ದ ಬಳಿಕ ದೃಷ್ಟಿದೋಷವಿರುವ ಮಕ್ಕಳಿಗಾಗಿಯೇ ಮೀಸಲಾದ ಶಾಲೆಯೊಂದರಲ್ಲಿ ಪ್ರವೇಶ ಪಡೆಯುವಲ್ಲಿ ಯಶಸ್ವಿಯಾದರು.

**

ಈ ಘಟನೆಯಿಂದ ನಾವು ಶಾಲಾ ಆಡಳಿತದ, ಶಿಕ್ಷಕರ ಮತ್ತು ಇತರ ವಿದ್ಯಾರ್ಥಿಗಳ ಪೋಷಕರ ಧೋರಣೆಯ ಬಗ್ಗೆ ಸ್ಪಷ್ಟವಾಗಿ ತಿಳಿದುಕೊಂಡಂತಾಯ್ತು. ಇಂತಹ ಮಕ್ಕಳು ಸಾಮಾನ್ಯ ಶಾಲೆಗೆ ಸೇರಲು ಯೋಗ್ಯರಲ್ಲ. ಅವರು ಒಂದೋ ಮನೆಯಲ್ಲಿರಬೇಕು ಇಲ್ಲವೇ ಅವರಿಗಾಗಿ ಮೀಸಲಿರುವ ವಿಶೇಷ ಶಾಲೆಗೇ ಸೇರಬೇಕು ಎಂದು ಅವರು ಯೋಚಿಸುತ್ತಾರೆ. ಬೇರೆ ಬೇರೆ ಹಿನ್ನೆಲೆಯುಳ್ಳ ಮತ್ತು ಬೇರೆ ಬೇರೆ ಸಾಮರ್ಥ್ಯದ ಮಕ್ಕಳೂ ತರಗತಿಯಲ್ಲಿದ್ದಾಗ ಸಾಮಾನ್ಯ ಮಕ್ಕಳು ಎಲ್ಲಾ ಬಗೆಯ ಸಹಪಾಠಿಗಳೊಂದಿಗೆ ಕಲೆತು ಕಲಿಯುವ ಸ್ವೀಕಾರ ಮನೋಭಾವವನ್ನು ಬೆಳೆಸಿಕೊಳ್ಳುತ್ತಾರೆ. ವಿಭಿನ್ನವಾಗಿರುವ ಮಗುವನ್ನೂ ತರಗತಿಯಲ್ಲಿ ಸಹಜವಾಗಿ ಒಪ್ಪಿಕೊಳ್ಳುವ ಸ್ವೀಕಾರ ಮನೋಭಾವವೇ ಸಮನ್ವಯ ಶಿಕ್ಷಣದತ್ತ ನಾವು ಇರಿಸುವ ಪ್ರಮುಖ ಹೆಜ್ಜೆ. ಒಂದು ಮಗುವಿಗೆ ಅವಶ್ಯವಿರುವ ಹೆಚ್ಚುವರಿ ಗಮನ ಕೊಡದೇ, ಎಲ್ಲರಿಗೂ ಒಂದೇ ಬಗೆಯ ಬೋಧನಾ ಕ್ರಮವನ್ನು ಪಾಲಿಸಿದರೆ, ಮಕ್ಕಳ ವೈವಿಧ್ಯಮಯ ವರ್ತನೆಗಳು, ಆಸಕ್ತಿಗಳು ಮತ್ತು ಸಾಮರ್ಥ್ಯಗಳನ್ನು ಶಿಕ್ಷಕರು ಅರ್ಥ ಮಾಡಿಕೊಳ್ಳದೇ ಇದ್ದರೆ ಆ ಮಗು ಇತರರಿಗಿಂತ ಹಿಂದುಳಿಯುವುದು ಸಹಜ. ಕಲಿಕೆಯಲ್ಲಿ ಸಮಸ್ಯೆ ಇದ್ದರೆ, ಅದು ಶಿಕ್ಷಣಶಾಸ್ತ್ರೀಯ ಸಮಸ್ಯೆಗಳು, ಶಾರೀರಿಕ ರಚನೆ ಮತ್ತು ವಿಸ್ತೃತ ಪಠ್ಯದ ಸಮಸ್ಯೆಯ ಗುಣಲಕ್ಷಣಗಳನ್ನು ತೋರಿಸುತ್ತದೆ. ನಾವು ಯಾರಿಗೆ ಹೇಳಿಕೊಡುತ್ತಿದ್ದೇವೆ ಹಾಗೂ ಬೋಧನೆ-ಕಲಿಕೆಯ ಸನ್ನಿವೇಶದಲ್ಲಿ ಬೋಧನೆ ಹೇಗಿರಬೇಕು ಎಂಬಂತಹ ರೂಢಿಗಳನ್ನು ಮಾಡಿಕೊಳ್ಳುವುದು ಮತ್ತು ಗಡಿಗಳನ್ನು ನಿರ್ಮಿಸಿಕೊಳ್ಳುವುದರಿಂದ, ಎಲ್ಲರಿಗೂ ಸಮಾನ ಅವಕಾಶ ಒದಗಿಸುವ ನಡೆಗೆ ದೊಡ್ಡ ಹಿನ್ನಡೆ ಉಂಟಾಗುತ್ತದೆ.

ಸಮನ್ವಯ ಶಿಕ್ಷಣ ಎಂಬುದು ದೊಡ್ಡ ಗುರಿ ಎಂಬುದನ್ನು ನಾವು ಅರ್ಥ ಮಾಡಿಕೊಳ್ಳಬೇಕು. ಅದೇ ವೇಳೆ, ಅದರ ಹಾದಿಯುದ್ದಕ್ಕೂ ಹಲವಾರು ಅಡೆತಡೆಗಳು ಮತ್ತು ಇತಿಮಿತಿಗಳಿವೆ. ಹಾಗಾಗಿ, ನೀತಿ ಅನುಷ್ಠಾನಕ್ಕೆ ತರುವಲ್ಲಿಯೇ ಸಮಸ್ಯೆ ಇದೆ. ಬಹುತೇಕ ಸಂದರ್ಭಗಳಲ್ಲಿ, ಸಮನ್ವಯದ ಅನುಷ್ಠಾನಕ್ಕಾಗಿ ರೂಪಿಸಲಾದ ನೀತಿ, ಕಾರ್ಯಕ್ರಮಗಳು ಪರಿಣಾಮಕಾರಿಯಾಗಿ ಕಾರ್ಯರೂಪಕ್ಕೆ ಬಂದಿರುವುದಿಲ್ಲ. ಯಾಕೆಂದರೆ, ನಿಜವಾದ ಧ್ಯೇಯೋದ್ದೇಶಗಳು ಕೇವಲ ಕಾಗದದಲ್ಲಷ್ಟೇ ಉಳಿದಿರುತ್ತವೆ. ಸಾಂಪ್ರದಾಯಿಕ ಕಲಿಕಾ ಪದ್ಧತಿಯ ಬಗ್ಗೆ ಅಂಟಿಕೊಂಡಿರುವ ಪ್ರವೃತ್ತಿ ಶಾಲೆಗಳು, ಶಿಕ್ಷಕರು ಮತ್ತು ಪೋಷಕರಲ್ಲಿ ಇದೆ. ಇದು, ಹೆಚ್ಚು ಸಮನ್ವಯಕ್ಕೆ ಅವಕಾಶ ನೀಡುವ ಹೊಸ ಮತ್ತು ವಿನೂತನ ಮಾದರಿಯ ಶಿಕ್ಷಣವನ್ನು ಅನುಷ್ಠಾನಕ್ಕೆ ತರುವಲ್ಲಿ ಶಾಲೆಗಳು ಹಿಂಜರಿಯುವಂತೆ ಮಾಡುತ್ತವೆ. ಹಣೆಪಟ್ಟಿಯ ಗುರುತು ಯಾಕೆ?

• ಮಕ್ಕಳ ಋಣಾತ್ಮಕ ಅಂಶಗಳ ಮೇಲೆಯೇ ಹಣೆಪಟ್ಟಿಯ ಗುರುತು ಹಚ್ಚಲಾಗುತ್ತದೆ. ಒಮ್ಮೆ ಒಂದು ಮಗುವಿಗೆ ಗುರುತುಪಟ್ಟಿ ಹಚ್ಚಿದರೆ, ಅವನ/ಅವಳ ಕೊರತೆ ಅಥವಾ ದೌರ್ಬಲ್ಯಗಳ ಬಗ್ಗೆಯೇ ಶಿಕ್ಷಕರು ಗಮನ ಕೊಡುತ್ತಾರೆ. ಉದಾಹರಣೆಗೆ, ಮೂಕ, ಅಂಧ, ಕಿವುಡ ಇತ್ಯಾದಿ
• ಆ ಮಗು ಏನು ಮಾಡಬಲ್ಲದು ಎಂಬುದರ ಬಗ್ಗೆ ಶಿಕ್ಷಕರು ಮತ್ತು ಪೋಷಕರು ಹೆಚ್ಚಿನ ನಿರೀಕ್ಷೆಯನ್ನಿಟ್ಟುಕೊಂಡಿರುವುದಿಲ್ಲ.
• ಮಗು ಕಳಪೆ ಪ್ರದರ್ಶನ ಮಾಡುತ್ತಿದೆ ಎಂಬುದನ್ನು ಶಿಕ್ಷಕರು ಎಸ್‌ಇಎನ್ ರೀತಿಯಲ್ಲಿ ಹೇಳುತ್ತಾರೆ ವಿನಾ ಮಾರ್ಗದರ್ಶನದಲ್ಲಿಯೇ ವಿಫಲರಾಗಿದ್ದೇವೆ ಎಂದು ಹೇಳುವುದಿಲ್ಲ.
• ಇತರ ಸಮಾನ ವಯಸ್ಕರು ಆ ಮಕ್ಕಳನ್ನು ದೂರ ಇರಿಸುವಂತೆ ಮಾಡುತ್ತದೆ.

ಗುರುತುಪಟ್ಟಿ ಕಟ್ಟುವುದರಿಂದ ಆ ಮಕ್ಕಳಲ್ಲಿ ಅಸಹಾಯಕತೆ, ಕೀಳರಿಮೆ ಮತ್ತು ಕಳಂಕಿತ ಭಾವನೆ ಮೂಡುತ್ತದೆ.

**

ಎಲ್ಲಾ ಸೂಚಕಗಳಿಗೆ ಹೊಂದುವ ಶಾಲೆ

ಕ್ರಮಸಂಖ್ಯೆ ತತ್ವ ಪ್ರತಿಕ್ರಿಯೆ

1 ಶಾಲೆ ಒಂದು ದೃಷ್ಟಿಕೋನವನ್ನು ಬೆಳೆಸಿದ್ದು, ಅದನ್ನು ಸಮುದಾಯದ ಜನರೊಂದಿಗೆ ಹಂಚಿಕೊಳ್ಳುತ್ತದೆ 3 2 1

2 ಶಾಲೆಯ ದೃಷ್ಟಿಕೋನ, ನಂಬಿಕೆಗಳು, ಗುರಿ ಮತ್ತು ಉದ್ದೇಶಗಳನ್ನು ಗುಂಪಿನ ಎಲ್ಲಾ ಭಾಗೀದಾರರ ಸಹಭಾಗಿತ್ವದಲ್ಲಿ ಅಭಿವೃದ್ಧಿಪಡಿಸಲಾಗಿದೆ 3 2 1

3 ಶಾಲೆಯ ದೃಷ್ಟಿಕೋನವು ಮೌಲ್ಯ ನೀಡುವುದಕ್ಕೆ ಒತ್ತು ನೀಡುತ್ತದೆ. ಮಕ್ಕಳಲ್ಲಿನ ಭಿನ್ನತೆಗೆ ಅವಕಾಶ ನೀಡಿ, ಈ ಶಾಲೆ ಎಲ್ಲರಿಗೂ ಸೇರಿದ್ದು ಎಂಬ ಕಲ್ಪನೆಯನ್ನು ಪ್ರತಿಬಿಂಬಿಸುತ್ತದೆ. 3 2 1

4 ಎಲ್ಲರನ್ನೂ ಗೌರವಿಸುವ ಸಂದೇಶ ಹಾಗೂ ವಿವಿಧ ಸಂಸ್ಕೃತಿಗಳು ಮತ್ತು ಸಮುದಾಯಗಳನ್ನು ಸಂಭ್ರಮಿಸಬೇಕು ಎಂಬ ಸಂದೇಶವನ್ನು ಶಾಲೆ ನೀಡುತ್ತದೆ. 3 2 1

5 ಮಕ್ಕಳ ಕಲಿಕೆಗೆ ಹೇಗೆ ಪ್ರೋತ್ಸಾಹ ಕೊಡಬೇಕು ಎಂದು ತಿಳಿಸಿಕೊಡುವ ನಿಟ್ಟಿನಲ್ಲಿ ಪೋಷಕರೊಂದಿಗೆ ಶಾಲೆ ಸಂವಾದ ನಡೆಸುತ್ತದೆ. 3 2 1

6 ಶಾಲೆಯು ವಿದ್ಯಾರ್ಥಿಗಳಲ್ಲಿ ಯಾವುದೇ ರೀತಿಯ ತಾರತಮ್ಯ ಮತ್ತು ಹಿಂಸಾಚಾರಕ್ಕೆ ಪ್ರೋತ್ಸಾಹ ಕೊಡುವುದಿಲ್ಲ. 3 2 1

7 ಬಡ ಕುಟುಂಬದ ಮಕ್ಕಳನ್ನು ಬೆಂಬಲಿಸುವ ಉದ್ದೇಶದಿಂದ ಶಾಲೆ ಒಂದು ನೀತಿ/ಕಾರ್ಯಕ್ರಮವನ್ನು ರೂಪಿಸಿದೆ. 3 2 1

8 ಶಾಲೆಯ ಸಮೀಪದಲ್ಲಿರುವ ಎಲ್ಲಾ ಪೋಷಕರಿಗೂ ಶಾಲೆ ಉತ್ತೇಜನಕಾರಿ ಸಂದೇಶ ರವಾನಿಸಿ, ಮಕ್ಕಳನ್ನು ಶಾಲೆಗೆ ಕಳುಹಿಸುವಂತೆ ವಿನಂತಿಸುತ್ತಾರೆ. 3 2 1

9 ಸಿಡಬ್ಲ್ಯೂಎಸ್‌ಎನ್ ಅವಶ್ಯಕತೆಗಳನ್ನು ಗುರುತಿಸಲು ಈ ಹಿಂದೆ ನಡೆಸಿದ ಪ್ರಯತ್ನದಲ್ಲಿ ಒಂದು ಲಿಂಕೇಜ್‌ನ್ನು ಶಾಲೆ ಅಭಿವೃದ್ಧಿಪಡಿಸಿದೆ 3 2 1

10 ಪೋಷಕರಿಗೆ ಆಪ್ತ ಸಮಾಲೋಚನೆ ನಡೆಸಲು ವ್ಯವಸ್ಥೆಯೊಂದನ್ನು ಶಾಲೆ ಅಭಿವೃದ್ಧಿಪಡಿಸಿದೆ 3 2 1

11 ಶಾಲೆಯ ಶಿಕ್ಷಕರು, ಪೋಷಕರು, ಸಮುದಾಯಗಳು ಮತ್ತು ಕಲಿಕಾರ್ಥಿಗಳು ಸಮನ್ವಯ ಶಿಕ್ಷಣದ ತತ್ವದಲ್ಲಿ ನಂಬಿಕೆ ಇಟ್ಟಿದ್ದಾರೆ ಮತ್ತು ಹಂಚಿಕೊಳ್ಳುತ್ತಿದ್ದಾರೆ 3 2 1

12 ಮಕ್ಕಳ ಕಲಿಕಾ ಪ್ರಕ್ರಿಯೆಯಲ್ಲಾಗುವ ಬದಲಾವಣೆಗೆ ಸಂಬಂಧಿಸಿದಂತೆ ಶಾಲೆ ತನ್ನ ನೀತಿಗಳನ್ನು ಮೌಲ್ಯಮಾಪನ ಮಾಡಿ ವಿಮರ್ಶಿಸುತ್ತದೆ 3 2 1

13 ಶಾಲೆ ಎಲ್ಲಾ ಮಕ್ಕಳಿಗೆ ಸೂಕ್ತವಾದ ಕ್ರೀಡಾ ಸೌಕರ್ಯಗಳನ್ನು ಒದಗಿಸುವ ಖಾತರಿ ಕೊಡುತ್ತದೆ 3 2 1
14 ಶಾಲೆಯಿಂದ ಹೊರಗುಳಿದ ಮಕ್ಕಳನ್ನು ಗುರುತಿಸಿ, ಮರಳಿ ಶಾಲೆಗೆ ಕರೆತರಲು ಶಾಲೆ ತನ್ನದೇ ಆದ ನೀತಿಯನ್ನು ಕಲಿಯುವುದೂ ಬಹಳ ಮುಖ್ಯ 3 2 1
16 ಶಾಲಾ ಆಡಳಿತ ಸಮಿತಿಯಲ್ಲಿ ಒಬ್ಬ ಸಿಡಬ್ಲ್ಯೂಎಸ್ಎನ್ ಪೋಷಕರು ಮತ್ತು ಸಾಮಾಜಿಕವಾಗಿ ಹಿಂದುಳಿದ ಗುಂಪುಗಳಿಗೆ ಸೇರಿದ ಮಗುವಿನ ಪೋಷಕರೊಬ್ಬರು ಸದಸ್ಯರಾಗಿದ್ದಾರೆ 3 2 1
17 ಶಾಲೆ ತನ್ನ ಯೋಜನೆಗಳನ್ನು ಮತ್ತು ನಿರ್ವಹಣೆಯನ್ನು ಸುಧಾರಿಸಲು ದತ್ತಾಂಶವನ್ನು ಬಳಸುತ್ತದೆ 3 2 1
18 ಶಾಲೆಯ ತರಗತಿ ಕೊಠಡಿಗಳಲ್ಲಿ ವೈವಿಧ್ಯಮಯ ಸಂಗತಿಗಳಲ್ಲಿ ತೊಡಗಿಸಿಕೊಳ್ಳುವ ಹಲವು ವಿದ್ಯಾರ್ಥಿಗಳಿದ್ದಾರೆ 3 2 1
19 ಕೌಟುಂಬಿಕ ಹಿನ್ನೆಲೆ, ಧರ್ಮ ಅಥವಾ ಸಾಮಾಜಿಕ-ಆರ್ಥಿಕ ಸ್ಥಿತಿಗತಿಗಳನ್ನು ಲಕ್ಷಿಸದೇ ಎಲ್ಲಾ ಪೋಷಕರ ಪಾಲ್ಗೊಳ್ಳುವಿಕೆಗೆ ಶಾಲೆ ಬೆಲೆ ಕೊಡುತ್ತದೆ. 3 2 1
20 ಶಾಲೆಯ ಎಲ್ಲಾ ಮಕ್ಕಳಿಗೂ ಪಠ್ಯಕ್ರಮ ಲಭ್ಯವಿದೆ 3 2 1
21 ನಾವೀನ್ಯವನ್ನು ಉತ್ತೇಜಿಸಿ, ಶಿಕ್ಷಕರು ಒಟ್ಟಾಗಿ ಕೆಲಸ ಮಾಡಲು ಅನುವು ಮಾಡಿಕೊಡುವ ಉದ್ದೇಶದಿಂದ ರಚನೆಗಳ ತಯಾರಿ, ಕಾಲ ಮತ್ತು ಸೂಕ್ತ ವಾತಾವರಣವನ್ನು ಶಾಲಾ ನೀತಿ ಉತ್ತೇಜಿಸುತ್ತದೆ. 3 2 1
22 ಶಾಲೆ ಯಾವುದೇ ರೀತಿಯ ಕಟ್ಟುನಿಟ್ಟಿನ ಪ್ರವೇಶ ಪ್ರಕ್ರಿಯೆಯನ್ನು ಪಾಲಿಸದೆ ತನ್ನ ನೆರೆಕರೆಯ ಪ್ರದೇಶಗಳ ಎಲ್ಲಾ ಮಕ್ಕಳಿಗೂ ಪ್ರವೇಶ ಕಲ್ಪಿಸುತ್ತದೆ 3 2 1
23 ವಿಶೇಷವಾಗಿ ಸಿಡಬ್ಲ್ಯೂಎಸ್ಎನ್ ಇರುವ ತರಗತಿಗಳಲ್ಲಿ ಮಕ್ಕಳ ಸಂಖ್ಯೆಯನ್ನು ಕಡಿಮೆ ಮಾಡಲು ಶಾಲೆ ತನ್ನದೇ ನೀತಿಯನ್ನು ಹೊಂದಿದೆ 3 2 1
24 ತಮ್ಮ ಮಕ್ಕಳಿಗೆ ಶಾಲೆ ಸುರಕ್ಷಿತ ಸ್ಥಳ ಎಂದು ಪೋಷಕರು ಪರಿಗಣಿಸಿದ್ದಾರೆ 3 2 1

ಸಮುದಾಯದ ಪಾಲ್ಗೊಳ್ಳುವಿಕೆ
25 ಸ್ಥಳೀಯ ಸಮಿತಿಯು ಶಾಲೆಯ ಬಗ್ಗೆ ಧನಾತ್ಮಕ ಭಾವನೆ ಹೊಂದಿದ್ದು, ಮಕ್ಕಳನ್ನು ಶಾಲೆಗೆ ಸಂತೋಷದಿಂದ ಕಳುಹಿಸಿಕೊಡುತ್ತದೆ 3 2 1
26 ಶಾಲೆಯ ವಿವಿಧ ಚಟುವಟಿಕೆಗಳಲ್ಲಿ ವಿವಿಧ ಸಮುದಾಯಗಳಿಗೆ ಪ್ರಾತಿನಿಧ್ಯ ಮತ್ತು ಪಾಲ್ಗೊಳ್ಳುವಿಕೆಯಲ್ಲಿ ಸಮಾನ ಅವಕಾಶ ನೀಡಲಾಗಿದೆ 3 2 1
27 ಶಾಲೆಯ ಚಟುವಟಿಕೆಗಳಲ್ಲಿ ಪೋಷಕರು ಮತ್ತು ಸಮುದಾಯಗಳ ಪಾಲ್ಗೊಳ್ಳುವಿಕೆಯ ಪ್ರಾಮುಖ್ಯವನ್ನು ಕುರಿತು ಸಂವೇದನಾಶೀಲರನ್ನಾಗಿಸಲು ಶಾಲೆ ನೆರವಾಗುತ್ತದೆ. 3 2 1
28 ಶಾಲೆಯ ದೃಷ್ಟಿಕೋನ ಮತ್ತು ಸಂಪನ್ಮೂಲದ ಬೆಂಬಲ ಗಳಿಸುವುದಕ್ಕಾಗಿ ಎನ್‌ಜಿಒಗಳು ಮತ್ತು ಅರ್ಹ ಸಂಘಸಂಸ್ಥೆಗಳ ಜೊತೆ ಸಹಭಾಗಿಯಾಗಲು ಸದಾ ಸಿದ್ಧವಿರುತ್ತದೆ 3 2 1
29 ಶಾಲೆಯ ವಾತಾವರಣವನ್ನು ಮಕ್ಕಳಿಗೆ ಸಹಕಾರಿಯಾಗಿಸುವ ನಿಟ್ಟಿನಲ್ಲಿ ಶಾಲೆಯು ಪೋಷಕ-ಶಿಕ್ಷಕ ಸಂಘಗಳು ಮತ್ತು ಸ್ಥಳೀಯ ಮಟ್ಟದ ಸಮಿತಿಗಳನ್ನು ರಚಿಸಿದೆ 3 2 1
30 ಶಾಲೆ ತನ್ನ ಅಭಿವೃದ್ಧಿಗಾಗಿ ಸಮುದಾಯದ ಬೆಂಬಲವನ್ನು ನಿರೀಕ್ಷಿಸುತ್ತದೆ ಮತ್ತು ಅಗತ್ಯವಿದ್ದಾಗ, ಸ್ಥಳೀಯ ಕಾರ್ಯಕ್ರಮಗಳಿಗೆ ಶಾಲೆಯಲ್ಲಿ ಸ್ಥಳಾವಕಾಶ ನೀಡುತ್ತದೆ 3 2 1
31 ಕೌಟುಂಬಿಕ ಉತ್ತೇಜನಾ ಗುಂಪುಗಳ ರಚನೆಗೆ ಶಾಲೆ ವೇದಿಕೆ ನಿರ್ಮಿಸಿಕೊಡುತ್ತದೆ 3 2 1

32 ಶಾಲೆಯು ವಾಕ್ ಚಿಕಿತ್ಸಕರು, ಪ್ರಾಥಮಿಕ ಆರೋಗ್ಯ ಕಾರ್ಯಕರ್ತರು, ಮನಃಶಾಸ್ತ್ರಜ್ಞರು, ಆಪ್ತ ಸಮಾಲೋಚಕರು, ವಿಶೇಷ ಶಿಕ್ಷಕರು ಮುಂತಾದವರ ಜೊತೆ ಅಗತ್ಯವಿದ್ದಾಗ ಕೈಜೋಡಿಸುತ್ತದೆ. 3 2 1

33 ಅಗತ್ಯವಿದ್ದಾಗ ಸಮುದಾಯ ಸಂಪನ್ಮೂಲಗಳನ್ನು ಶಾಲೆ ಕ್ರೋಢೀಕರಿಸುತ್ತದೆ 3 2 1

34 ಸ್ಪಷ್ಟ ಮತ್ತು ಸರಳ ಭಾಷೆಯಲ್ಲಿ ಪೋಷಕರು ಮತ್ತು ಕುಟುಂಬಗಳಿಗೆ ಮಾಹಿತಿ ಒದಗಿಸುತ್ತದೆ 3 2 1

ಪಠ್ಯಕ್ರಮ ಮತ್ತು ಪಠ್ಯಪುಸ್ತಕ

35 ರಾಷ್ಟ್ರೀಯ ಪಠ್ಯಕ್ರಮ ಚೌಕಟ್ಟಿನ ಅನುಸಾರ ಪಠ್ಯಕ್ರಮವನ್ನು ಹೊಂದಿದ್ದು, ಶಾಲೆಯಲ್ಲಿರುವ ಎಲ್ಲಾ ಮಕ್ಕಳ ಅಗತ್ಯಗಳನ್ನು ಮತ್ತು ಅಕಾಡೆಮಿಕ್ ನಿರೀಕ್ಷೆಗಳಿಗೆ ಪೂರಕವಾಗಿದೆ. 3 2 1

36 ಪಠ್ಯಕ್ರಮವು ಉನ್ನತ ಶಿಕ್ಷಣ, ವೃತ್ತಿಪರ ಶಿಕ್ಷಣ ಇತ್ಯಾದಿಗೆ ಮುಖ್ಯವಾದ ನಂಟು ಬೆಸೆಯುವಂತಿದೆ 3 2 1

37 ಅಕಾಡೆಮಿಕ್ ಸಾರವುಳ್ಳ ಪಠ್ಯಕ್ರಮವು ಎಲ್ಲಾ ವಿದ್ಯಾರ್ಥಿಗಳಿಗೂ ಲಭ್ಯವಿದ್ದು, ಬದಲಾಯಿಸುವಂತೆ ಮತ್ತು ಸಾಂಸ್ಕೃತಿಕ ಹಾಗೂ ಸಾಮಾಜಿಕವಾಗಿ ಅಳವಡಿಕೆಗೆ ಹೊಂದುವಂತಿದೆ. ವೈವಿಧ್ಯಮಯ ವಿದ್ಯಾರ್ಥಿಗಳು ಹಾಗೂ ಸ್ಥಳೀಯ ಪರಿಸ್ಥಿತಿಗಳನ್ನು ಪ್ರತಿಬಿಂಬಿಸುವಂತಿದೆ 3 2 1

38 ಶಾಲೆಯು ಪಠ್ಯಕ್ರಮವನ್ನು ರಚಿಸುವಾಗ, ವೈಯಕ್ತಿಕ ಅಗತ್ಯಗಳ ಗುರುತಿಸುವಿಕೆ ಮತ್ತು ಪರಿಪೂರ್ಣ ಪಠ್ಯಕ್ರಮದ ಮಾದರಿಯನ್ನು ಅಭಿವೃದ್ಧಿಪಡಿಸುವ ತುರ್ತನ್ನು ಸಮತೋಲನ ಮಾಡುತ್ತದೆ 3 2 1

39 ಸಾಮಾಜಿಕ ಕೌಶಲ ಬೆಳೆಸಿಕೊಳ್ಳುವುದನ್ನು ಒಂದು ಅಡಕವಾಗಿ ಶಾಲಾ ಪಠ್ಯಕ್ರಮದಲ್ಲಿ ಸೇರಿಸಲಾಗಿದೆ 3 2 1

40 ಅಧಿಕ ಸಮನ್ವಯದ ನಡೆಯು ಶಾಲೆಯಲ್ಲಿ ಪಠ್ಯಕ್ರಮ ವಿನ್ಯಾಸದ ನಾವೀನ್ಯತೆ ಮತ್ತು ಅಳವಡಿಕೆಯತ್ತ ಕೊಂಡೊಯ್ಯುತ್ತದೆ 3 2 1

41 ಮಕ್ಕಳ ಅವಶ್ಯಕತೆ ಮತ್ತು ಸಾಮರ್ಥ್ಯಗಳಿಗೆ ಅನುಗುಣವಾಗಿ, ಶ್ರವಣ ಸಾಧನಗಳಂತಹ ಸಂಪರ್ಕ ಮಾಧ್ಯಮಗಳನ್ನು ಒದಗಿಸುತ್ತದೆ. ಅವುಗಳು ಸಂಜ್ಞಾ ಭಾಷೆ, ವಾಕ್, ಶ್ರಾವ್ಯ, ಲಿಖಿತ ಮತ್ತು ದೃಶ್ಯ ಸಾಧನಗಳನ್ನು ಒಳಗೊಂಡಿರುತ್ತವೆ. 3 2 1

42 ಎಲ್ಲಾ ವಿದ್ಯಾರ್ಥಿಗಳ ಅವಶ್ಯಕತೆ ಹಾಗೂ ಗುಣಲಕ್ಷಣಗಳಿಗೆ ಅನುಗುಣವಾಗಿ ಪಠ್ಯಕ್ರಮದ ಅಳವಡಿಕೆ ಅಥವಾ ಬದಲಾವಣೆ ಮಾಡುವ ನೀತಿಯನ್ನು ಶಾಲೆ ಹೊಂದಿದೆ 3 2 1

43 ಬ್ರೈಲ್ ಓದಲು ಮತ್ತು ಬರೆಯಲು ಶಾಲೆ ತರಬೇತಿ ನೀಡುತ್ತದೆ. ಅಲ್ಲದೆ, ಅಗತ್ಯವಿದ್ದಲ್ಲಿ ಬ್ರೈಲ್ ಪುಸ್ತಕಗಳನ್ನೂ ಒದಗಿಸುತ್ತದೆ 3 2 1

44 ವಿಭಿನ್ನ ಸಾಮಾಜಿಕ-ಆರ್ಥಿಕ ಹಿನ್ನೆಲೆಯನ್ನು ಗಮನದಲ್ಲಿಟ್ಟುಕೊಂಡ ಶ್ರೀಮಂತ ತರಗತಿ ಕೊಠಡಿಗಳಿವೆ 3 2 1

45 ಸಾರ್ವತ್ರಿಕ ಪಠ್ಯಕ್ರಮಕ್ಕೆ ಅವಕಾಶ ಕಲ್ಪಿಸುವ ನಿಟ್ಟಿನಲ್ಲಿ ಶಾಲೆ ಸಹಾಯಕ ತಂತ್ರಜ್ಞಾನವನ್ನು ಶಾಲೆ ಒದಗಿಸುತ್ತದೆ 3 2 1

46 ಶಾಲೆಯು ತನ್ನ ಎಲ್ಲಾ ಮಕ್ಕಳಿಗೆ ನಿರಂತರ ಮತ್ತು ಸಮಗ್ರ ಮೌಲ್ಯಮಾಪನ (ಸಿಸಿಇ) ಕೈಗೊಳ್ಳುತ್ತದೆ 3 2 1

47 ಶಾಲೆಯ ಎಲ್ಲಾ ಮಕ್ಕಳಿಗೆ ಸಿಸಿಇ ಚಟುವಟಿಕೆಗಳನ್ನು ವಿನ್ಯಾಸ ಮಾಡಲು ಶಾಲಾ ಶಿಕ್ಷಕರು ಪರಸ್ಪರ ಸಹಭಾಗಿಯಾಗುತ್ತಾರೆ. 3 2 1
48 ಮಕ್ಕಳು ತಮ್ಮನ್ನು ತಾವೇ ಮೌಲ್ಯಮಾಪನ ಮಾಡುವ ಸಾಮರ್ಥ್ಯ ಹೊಂದಿದ್ದು, ತಮ್ಮ ನಿರ್ವಹಣೆ/ ಪ್ರದರ್ಶನದ ಬಗ್ಗೆ ತಾವೇ ಬೆಳಕು ಚೆಲ್ಲಿ, ಶಿಕ್ಷಕರೊಂದಿಗೆ ಈ ಕುರಿತು ಚರ್ಚೆ ಮಾಡಬಲ್ಲವರಾಗಿದ್ದಾರೆ 3 2 1
49 ಸಿಸಿಇ ಆಧಾರದಲ್ಲಿ ಗಳಿಸಿದ ಪ್ರದರ್ಶನದ ಅಂಕಗಳನ್ನು ಪಠ್ಯಕ್ರಮದಲ್ಲಿನ ಅಂತರವನ್ನು ಗುರುತಿಸಲು ಮತ್ತು ಇತರ ಪ್ರಸ್ತುತ ಉದ್ದೇಶಗಳಿಗೆ ಬಳಸಲಾಗುತ್ತದೆ 3 2 1
50 ತರಗತಿಯಲ್ಲಿನ ವಿದ್ಯಾರ್ಥಿಗಳು ಶಿಕ್ಷಕರಿಂದ, ವಿಶೇಷ/ಸಂಪನ್ಮೂಲ ಶಿಕ್ಷಕರಿಂದ ಮುಂತಾಗಿ ಅರ್ಥಪೂರ್ಣ ಮತ್ತು ನಿರಂತರವಾಗಿ ಮರುಮಾಹಿತಿ (ಫೀಡ್‌ಬ್ಯಾಕ್) ಪಡೆಯುತ್ತಾರೆ 3 2 1
51 ವಿದ್ಯಾರ್ಥಿಗಳ ಉತ್ತಮ ಪ್ರದರ್ಶನದ ಮಾದರಿಗಳನ್ನು ಹಂಚಿಕೊಳ್ಳುವ ಮತ್ತು ಶಿಕ್ಷಕರ ವಿನೂತನ ಮಧ್ಯಸ್ಥಿಕೆಗಳನ್ನು ತರಗತಿಯೆಲ್ಲೆಡೆ ಪ್ರದರ್ಶಿಸಲು ಶಾಲೆ ಅವಕಾಶ ನೀಡುತ್ತದೆ 3 2 1
52 ಪಠ್ಯಕ್ರಮವನ್ನು ಸಮರ್ಥವಾಗಿ ಕಲಿಸಲು ಶಾಲೆಯಲ್ಲಿ ಸಾಕಷ್ಟು ಬ್ರೈಲ್/ವಾಕ್/ಡಿಜಿಟಲ್ ಪುಸ್ತಕಗಳು, ಪೂರಕ ಸಾಮಗ್ರಿ ಮತ್ತು ತಂತ್ರಜ್ಞಾನಗಳಿವೆ 3 2 1
53 ಬೇರೆ ಬೇರೆ ಭಾಷೆಗಳನ್ನು ಮಾತನಾಡುವ, ವಿಭಿನ್ನ ಅರಿವಿನ ವರ್ಗೀಕರಣಕ್ಕೊಳಪಡುವ ವಿದ್ಯಾರ್ಥಿಗಳು ಬಳಸಬುದಾದ ಸಾಮಗ್ರಿಗಳನ್ನು ಒದಗಿಸಿ, ಯಾವುದೇ ಬಗೆಯ ಹಣೆಪಟ್ಟಿ ಅಥವಾ ಕಳಂಕವನ್ನು ನಿವಾರಿಸಲು ಸರಿಸಮಾನವಾದ ಪರ್ಯಾಯ ವ್ಯವಸ್ಥೆಯನ್ನು ಶಾಲೆ ಒದಗಿಸುತ್ತದೆ 3 2 1
54 ಶಾಲೆಯಲ್ಲಿರುವ ಸಾಮಗ್ರಿಗಳು ಪ್ರಾತಿನಿಧಿಧ್ಯ, ಪ್ರಸ್ತುತಿ ಮತ್ತು ಅಭಿವ್ಯಕ್ತಿಯ ವಿವಿಧ ಮಾರ್ಗಗಳನ್ನು ಒದಗಿಸುತ್ತವೆ ಮತ್ತು ಅವು ಸ್ಪಷ್ಟ ಸೂಚನೆಗಳೊಂದಿಗೆ ಸರಳವಾಗಿವೆ 3 2 1
55 ಶಾಲೆಯು ಸಮಯದ ದೃಷ್ಟಿಯಿಂದ ಹೊಂದಾಣಿಕೆಗೆ ಸಿದ್ಧವಾಗಿರುತ್ತದೆ (ಫ್ಲೆಕ್ಸಿಬಲ್). ಪ್ರತಿಕ್ರಿಯಿಸಲು, ಹಿಂದಿನ ಪ್ರತಿಕ್ರಿಯೆಯನ್ನು ತಿದ್ದಲು, ಪ್ರಗತಿ ಪರಿಶೀಲಿಸಲು ಮತ್ತು ಅಭ್ಯಾಸಕ್ಕೆ ಸಾಕಷ್ಟು ಸಮಯಾವಕಾಶ ನೀಡುತ್ತದೆ 3 2 1

ಶಿಕ್ಷಕರು ಮತ್ತು ಬೋಧನೆ

56 ಶಾಲೆಯ ಶಿಕ್ಷಕರು ತಮಗೆ ಸಿಗುವ ಗರಿಷ್ಠ ಸಮಯವನ್ನು ವಿದ್ಯಾರ್ಥಿಗಳ ಕಲಿಕೆಯ ಮಟ್ಟವನ್ನು ಹೆಚ್ಚಿಸಲು ವಿನಿಯೋಗಿಸುತ್ತಾರೆ 3 2 1
57 ಅಗತ್ಯವಿದ್ದಲ್ಲಿ ವಿದ್ಯಾರ್ಥಿಗಳ ವಿಶೇಷ ಅಗತ್ಯದತ್ತ ಗಮನ ಕೊಡಲು ಶಾಲೆಯಲ್ಲಿ ನುರಿತ ಶಿಕ್ಷಕರಿದ್ದಾರೆ 3 2 1
58 ಶಾಲೆಯಲ್ಲಿರುವ ಕಲಿಕಾ ಸಾಮಗ್ರಿಗಳು ಸಾಂಸ್ಕೃತಿಕವಾಗಿ ಸಂವೇದನೆಯಿಂದ ಕೂಡಿದ್ದು, ಸ್ಥಳೀಯವಾಗಿ ಪ್ರಸ್ತುತವಾಗಿವೆ 3 2 1
59 ಮಕ್ಕಳೊಂದಿಗೆ ಅವರ ಮಾತೃಭಾಷೆಯಲ್ಲಿ ಮಾತನಾಡಿ, ಭಾಷೆಯನ್ನು ಕಲಿಸಲು ಮತ್ತು ಸಾಮಗ್ರಿಗಳನ್ನು ರಚಿಸಲು ಶಿಕ್ಷಕರಿಗೆ ನೆರವು ಕೊಡಿಸುವ ಉದ್ದೇಶದಿಂದ ಸ್ಥಳೀಯ ಭಾಷೆ ಮಾತನಾಡುವವರನ್ನು ಶಾಲೆ ಒಳಗೊಂಡಿರುತ್ತದೆ 3 2 1
60 ಬದಲಾಯಿಸಬಹುದಾದ ವೇಳಾಪಟ್ಟಿಯಲ್ಲಿ ಶಾಲೆ ನಂಬಿಕೆ ಇಟ್ಟಿರುವ ಕಾರಣ ಎಲ್ಲಾ ಮಕ್ಕಳೊಂದಿಗೆ ಬೆರೆಯುವ ಅವಕಾಶ ಶಿಕ್ಷಕರಿಗೆ ಇದೆ 3 2 1
61 ಅಸಹಾಯಕ ಪರಿಸ್ಥಿತಿಯಲ್ಲಿ ಇರುವ ಮಕ್ಕಳಿಗಾಗಿ ಯೋಜನೆಗಳನ್ನು ಸಿದ್ಧಪಡಿಸುವ ವೇಳೆ ಶಿಕ್ಷಕರು ಅವಶ್ಯ ತೀರ್ಮಾನ ಕೈಗೊಳ್ಳಲು ಶಾಲೆ ಅವಕಾಶ ನೀಡುತ್ತದೆ 3 2 1
62 ಶಾಲೆಯ ಶಿಕ್ಷಕರಿಗೆ, ಒಂದೇ ತರಗತಿಯಲ್ಲಿರುವ ವಿಭಿನ್ನ ರೀತಿಯ ಎಲ್ಲಾ ವಿದ್ಯಾರ್ಥಿಗಳಿಗೆ ಪಾಠ ಮಾಡುವ ಕೌಶಲವಿದೆ 3 2 1

63 ವೈವಿಧ್ಯಮಯ ವಿದ್ಯಾರ್ಥಿಗಳನ್ನು ಗಮನದಲ್ಲಿಟ್ಟುಕೊಂಡು, ಶಿಕ್ಷಕರು ಪರ್ಯಾಯ ಗುರಿ ಮತ್ತು ನಿರೀಕ್ಷೆಗಳನ್ನು ಹೊಂದಿರುತ್ತಾರೆ 3 2 1
64 ಶಿಕ್ಷಕರು ಅಗತ್ಯವಿರುವ ವಿದ್ಯಾರ್ಥಿಗಳತ್ತ ವಿಶೇಷ ಗಮನ ಹರಿಸಲು ಆಗದಷ್ಟು ಶಾಲೆಯ ಶಿಕ್ಷಕರ ಮೇಲೆ ಕೆಲಸದ ಒತ್ತಡ ಇಲ್ಲ 3 2 1

ವಿದ್ಯಾರ್ಥಿಗಳು
65 ವಿದ್ಯಾರ್ಥಿಗಳ ಕಲಿಕಾ ಅವಶ್ಯಕತೆಗಳನ್ನು ಗುರುತಿಸಿ, ಪೂರೈಸಲು ಶಾಲೆಯಲ್ಲಿ ಯಾಂತ್ರಿಕ ಕೌಶಲದ ವ್ಯವಸ್ಥೆ ಇದೆ. 3 2 1
66 ಸಮಾಜದಲ್ಲಿ ತಳವೂರಿರುವ ವಿವಿಧ ತಾರತಮ್ಯಗಳ ಬಗ್ಗೆ ಶಾಲೆ ಅರಿವು ಮೂಡಿಸಿ, ಸಂವೇದನಾಶೀಲರಾಗಿಸುತ್ತದೆ 3 2 1
67 ವಿದ್ಯಾರ್ಥಿಗಳು ಒಬ್ಬರಿಗೊಬ್ಬರು, ವಿಶೇಷವಾಗಿ ಅವಶ್ಯಕತೆ ಇರುವವರಿಗೆ, ಸಹಾಯ ಮಾಡಲು ಶಾಲಾ ನೀತಿ ಇದೆ 3 2 1
68 ಸಿಡಬ್ಲ್ಯೂಎಸ್‌ಎನ್ ಸೇರಿದಂತೆ ಎಲ್ಲಾ ಮಕ್ಕಳೂ ಶಾಲಾ ಚಟುವಟಿಕೆಗಳಲ್ಲಿ, ಕ್ರೀಡೆಯಲ್ಲಿ, ಆಟೋಟಗಳಲ್ಲಿ ಭಾಗಿಯಾಗುವಂತೆ ಶಾಲೆ ಉತ್ತೇಜನ ನೀಡುತ್ತದೆ 3 2 1
69 ಎಲ್ಲಾ ವಿದ್ಯಾರ್ಥಿಗಳು ಶಾಲಾ ಸೂಚನೆಯ ಭಾಷೆಯನ್ನು ಗ್ರಹಿಸಿಕೊಳ್ಳುತ್ತಾರೆ ಮತ್ತು ಅರ್ಥ ಮಾಡಿಕೊಳ್ಳುತ್ತಾರೆ. 3 2 1
70 ಶಾಲೆಯಲ್ಲಿ ಯಾವುದೇ ಸಮಸ್ಯೆಯಾದರೆ ಯಾರನ್ನು ಸಂಪರ್ಕಿಸಬೇಕು ಎಂಬುದು ವಿದ್ಯಾರ್ಥಿಗಳಿಗೆ ತಿಳಿದಿದೆ 3 2 1
71 ಶಾಲೆಯು ವಿದ್ಯಾರ್ಥಿಗಳ ವೈವಿಧ್ಯಮಯ ಅವಶ್ಯಕತೆಗಳು ಮತ್ತು ವರ್ತನೆಗಳನ್ನು ಗುರುತಿಸಿ, ಪ್ರತಿಸ್ಪಂದಿಸುತ್ತದೆ 3 2 1
72 ವಿದ್ಯಾರ್ಥಿ ಕಲಿಕಾರ್ಥಿಗಳನ್ನು ಅವರ ಕಲಿಕಾ ಪ್ರಕ್ರಿಯೆಯಲ್ಲಿ ಸಹಭಾಗಿ ಪಾಲುದಾರರು ಎಂದು ಗುರುತಿಸಿ ಶಾಲೆ ಒಪ್ಪಿಕೊಂಡಿದೆ 3 2 1
73 ವಿದ್ಯಾರ್ಥಿಗಳನ್ನು ಸಹಕಾರ ಚಟುವಟಿಕೆಗಳಲ್ಲಿ ಮತ್ತು ವ್ಯವಹಾರಗಳಲ್ಲಿ ಪಾಲ್ಗೊಳ್ಳುವಂತೆ ಶಾಲೆ ಅವಕಾಶ ಸೃಷ್ಟಿಸುತ್ತದೆ. 3 2 1
74 ಸ್ಥಳೀಯವಾಗಿ ಲಭ್ಯವಾಗುವ ವಸ್ತುಗಳಿಂದ ಕಲಿಕಾ ಸಾಮಗ್ರಿಗಳನ್ನು ತಯಾರಿಸಲು ವಿದ್ಯಾರ್ಥಿಗಳಿಗೆ ಶಾಲೆಯಲ್ಲಿ ಪ್ರೋತ್ಸಾಹ ನೀಡಲಾಗುತ್ತದೆ 3 2 1
75 ವಿದ್ಯಾರ್ಥಿಗಳ ಆರೋಗ್ಯ ಮತ್ತು ಸಾಮಾಜಿಕ ಸಂಕಷ್ಟಗಳನ್ನು ನಿವಾರಿಸಲು ಅಗತ್ಯ ಸೌಲಭ್ಯಗಳನ್ನು ಶಾಲೆ ಒದಗಿಸುತ್ತದೆ
76 ಸ್ಥಳೀಯ ಎಲ್ಲಾ ಮಕ್ಕಳನ್ನು ಅವರ ಆರ್ಥಿಕ ಹಿನ್ನೆಲೆಯನ್ನು ಲಕ್ಷಿಸದೆ ಶಾಲೆಗೆ ದಾಖಲಾತಿ ಮಾಡಲಾಗಿದೆ 3 2 1
77 ಹಣಕಾಸಿನ ಇಲ್ಲವೇ ಇತರ ಯಾವುದೇ ನೆರವು ಪಡೆಯುವ ಕುಟುಂಬದ ಮಕ್ಕಳ ವೈಯಕ್ತಿಕ ಘನತೆ ಮತ್ತು ಗೌರವವನ್ನು ಕಾಪಾಡುವ ಖಾತರಿಯನ್ನು ಶಾಲೆ ನೀಡುತ್ತದೆ 3 2 1
78 ಶಾಲೆಗಾಗಿ ನಿಯಮಗಳನ್ನು ರೂಪಿಸುವಾಗ ವಿದ್ಯಾರ್ಥಿಗಳನ್ನೂ ಪದೇ ಪದೇ ಸೇರಿಸಿಕೊಳ್ಳಲಾಗುತ್ತದೆ 3 2 1
79 ವಿಶೇಷ ಅವಶ್ಯಕತೆ ಇರುವ ಮಕ್ಕಳನ್ನು (ಸಿಡಬ್ಲ್ಯೂಎಸ್‌ಎಸ್) ನಿರ್ಣಯ ಕೈಗೊಳ್ಳುವಾಗ ದೂರ ನಿಂತು ನೋಡಲು ಅವಕಾಶ ನೀಡದೆ ಪ್ರಕ್ರಿಯೆಯಲ್ಲಿ ಪಾಲ್ಗೊಳ್ಳುವಂತೆ ಶಾಲೆ ಉತ್ತೇಜನ ನೀಡುತ್ತದೆ.3 2 1
80 ಎಸ್‌ಇಎನ್ ಇರುವ ಮತ್ತು ಇರದ ವಿದ್ಯಾರ್ಥಿಗಳು ಆಗಾಗ ಪರಸ್ಪರ ಭೇಟಿಯಾಗುವುದನ್ನು ಶಾಲೆ ಉತ್ತೇಜಿಸುತ್ತದೆ 3 2 1

ಭೌತಿಕ ಪರಿಸರ/ ವಾತಾವರಣ

81 ಸಿಡಬ್ಲ್ಯೂಎಸ್‌ಎಸ್ ಒಳಗೊಂಡು ಎಲ್ಲಾ ಮಕ್ಕಳಿಗೂ ಶಾಲೆ ಸಂಪೂರ್ಣವಾಗಿ ಲಭ್ಯವಿರುತ್ತದೆ 3 2 1

82 ಎಸ್ ಅಂದರೆ ಶಾಲೆಯ ಬಾಗಿಲುಗಳ ಹಿಡಿಗಳನ್ನು ಸೂಕ್ತವಾದ ಮಟ್ಟದಲ್ಲಿ ಅಂದರೆ, ವಿದ್ಯಾರ್ಥಿಗಳಿಗೆ ಎಟಕುವಷ್ಟು ಎತ್ತರದಲ್ಲಿ ಅಳವಡಿಸಲಾಗಿದೆ. 3 2 1

83 ಶಾಲೆಯ ಶೌಚಾಲಯಗಳಲ್ಲಿ ಬಾಗಿಲ ಚಿಲಕಗಳು ಭದ್ರವಾಗಿದ್ದು, ವಿಶೇಷವಾಗಿ ಹೆಣ್ಣುಮಕ್ಕಳ/ಮಕ್ಕಳ ಸುರಕ್ಷೆಯ ಕಾಳಜಿ ವಹಿಸಲಾಗಿದೆ. 3 2 1

84 ಅಂಗವಿಕಲ ವಿದ್ಯಾರ್ಥಿಗಳು ಬಯಸಿದಾಗಲೆಲ್ಲಾ ಮುಕ್ತವಾಗಿ ಓಡಾಡಲು ಇಲ್ಲವೇ ಸ್ನೇಹಿತರ ಜೊತೆ ಕುಳಿತುಕೊಳ್ಳಲು ಅನುಕೂಲವಾಗುವಂತೆ ತರಗತಿಯಲ್ಲಿ ಸ್ಥಳಾವಕಾಶ ಸೃಷ್ಟಿಸಲಾಗಿದೆ 3 2 1

85 ಕರಿಹಲಗೆಯನ್ನು ಒಂದು ನಿರ್ದಿಷ್ಟವಾದ ಎತ್ತರದಲ್ಲಿ ಅಳವಡಿಸಲಾಗಿದ್ದು, ವಿದ್ಯಾರ್ಥಿಗಳಿಗೆ ಎಟಕುವಂತೆ ಹಾಗೂ ಅವಶ್ಯವಿರುವ ವಿದ್ಯಾರ್ಥಿಗಳು ಕರಿಹಲಗೆಯ ಹತ್ತಿರ ಬಂದು ಓದಲು ಸಾಧ್ಯವಾಗುವಷ್ಟು ಎತ್ತರದಲ್ಲಿ ಇರುತ್ತದೆ 3 2 1

86 ತರಗತಿಗಳಲ್ಲಿ ದಿನವಿಡೀ ಸಾಕಷ್ಟು ಬೆಳಕು ಬೀಳುವಂ¬ತಿದ್ದು, ಅಗತ್ಯವಿರುವಾಗ ಹೆಚ್ಚುವರಿ ಲೈಟ್ ಬಳಸಲಾಗುತ್ತದೆ 3 2 1

87 ವಿದ್ಯಾರ್ಥಿಗಳ ಗಮನ ಬೇರೆ ಕಡೆ ಹೋಗುವುದನ್ನು ತಪ್ಪಿಸಲು, ತರಗತಿಯಲ್ಲಿ ಸದ್ದಿನ ಮಟ್ಟ ಅತ್ಯಂತ ಕಡಿಮೆ ಇರುವಂತೆ ಎಚ್ಚರವಹಿಸಲಾಗುತ್ತದೆ 3 2 1

88 ಸಿಡಬ್ಲ್ಯೂಎಸ್‌ಎನ್ ಅನುಕೂಲಕ್ಕಾಗಿ ಶಾಲೆ ಸಾಕಷ್ಟು ವಾಹನ ವ್ಯವಸ್ಥೆಯನ್ನೂ ಮಾಡಿದೆ 3 2 1

89 ಶಾಲೆಯಲ್ಲಿ ಒಂದು ಸಂಪನ್ಮೂಲ ಕೋಣೆ ಅಥವಾ ವಿಶೇಷ ಕೋಣೆ ಇದ್ದು, ಅವಶ್ಯವಿರುವ ಮಕ್ಕಳಿಗೆ ಅಲ್ಲಿ ವಿಶೇಷ ಪಾಠ ಮಾಡಲಾಗುತ್ತದೆ 3 2 1

90 ಶಾಲೆಯಲ್ಲಿ ವಿಜ್ಞಾನ, ಗಣಿತ ಮತ್ತು ಹೊಸದಾಗಿ ಅಳವಡಿಸಿಕೊಳ್ಳಲಾದ ಆವೃತ್ತಿಗಳಿಗೆ ಅತ್ಯುತ್ತಮ ಪ್ರಯೋಗಾಲಯವಿದೆ 3 2 1

91 ಶಾಲೆಯಲ್ಲಿ ಎಲ್ಲಾ ಮಕ್ಕಳಿಗೆ ಸಾಕಷ್ಟು ಕ್ರೀಡಾ ಸೌಲಭ್ಯಗಳಿವೆ 3 2 1

**

ಉಲ್ಲೇಖಗಳು

REFERENCES Chatterjee, J. N. & Austin D' Souza (1956), Training for Teaching in India and England, Bombay: Orient Longman.

Clark et.al. (1995), In The Routledge Falmer Reader, in Inclusive Education by Keith Topping, Sheelagh Maloney. Routledge, 2005. Forest, M & J Pearpoint (1992), "Families, friends, and circles", in J. Nisbet (ed.), Natural Supports in School, at Work, and in the Community for People with Severe Disabilities (pp. 65–86).

Baltimore: Paul H. Brookes.Friere, P (1985), The Politics of Education: Culture Power and Liberation, London: Macmillan.

Hargreaves, A. (1994) Changing teachers, changing times: teachers' work and culture in the post-modern age, London: Cassell.

Justice Verma Committee Report (2013). http://www.prsindia.org/parliamenttrack/reportsummaries/justice-verma-committee-report-summary-2628/

Lall, I.D. & K. P Chowdhary (1952), Principles and Practice of Education, Delhi: Gulab Chand Kapur & Sons.
Ministry of Human Resource Development (1993), Yashpal Committee Report on Learning Without Burden. New Delhi: Department of Education.
NCERT (2005), National Curriculum Framework. New Delhi: National Council of Educational Research and Training.
NCERT (2006), National Curriculum Framework 2005. Position Paper National Focus Group on Education of Children with Special Needs, New Delhi: National Council of Educational Research and Training.
NCERT (2007), The Reflective Teacher, New Delhi: National Council of Educational Research and Training.
NCTE (1988), Curriculum Framework for Quality Teacher Education, New Delhi: NCTE.
NCTE (2005), National Council for Teacher Education Rules and Regulations, New Delhi: NCTE.
NCTE (2009) National Curriculum Framework for Teacher EducationTowards Preparing Professional and Humane Teacher, New Delhi: NCTE.
Pandey, R.S. (2008), Some Issues in Education, Allahabad: Anubhav Publishing House.
Panda, Santosh (2007), Making a Reflective Teacher with ICT, http://www.digitallearning.in/articles/article-details.asp?articleid=1242&typ=COVER %20STORY
Pramila Balasundaram (2005), The Journey Towards Inclusive Education in India, presented at Seisa University, Ashibetsu Shi, Hokkaido, Japan.
Rouse, M & L Florian (1996), "Effective Inclusive Schools: A Study in Two Countries", Cambridge Journal of Education, 26 (1): 71–85.
Ryndak & Alper (1996), Curriculum Content for Students with Moderate and Severe Disabilities in Inclusive Setting, Allyn & Bacon, pp. 5–6.
Singh, L. C & P. C. Sharma (1995), Teacher Education and the Teacher, New Delhi: Vikas Publishing House.
UNESCO (1994), The Salamanca Statement and Framework for Action on Special Needs Education. Paris: UNESCO.
UNESCO (2005) Guidelines for Inclusion: Ensuring Access to Education for All, 2005, Paris: UNESCO, p. 13.
Uditsky, B. (1993), "From Integration to Inclusion: The Canadian Experience", in R Slee (ed.) Is There a Desk With my Name On It: The Politics of Integration, London: The Falmer Press.
Vislie, L. (2003), "From integration to inclusion: focusing global trends and changes in the western European societies", European Journal of Special Needs Education, Vol.18, No.1. Routledge. http://megrti.gov.in/11/04_2.pdf